ಬುಧವಾರ, ಫೆಬ್ರುವರಿ 17, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 48 | ಪುಟ 12 + 2

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಆನ್‌ಲೈನ್ ಖರೀದಿ ಸುರಕ್ಷಿತ ಎಂದುಕೊಳ್ಳಲಾಗದು. ದಿನಕ್ಕೆ ಒಂದಾದರೂ ಆನ್‌ಲೈನ್ ವಂಚನೆ ಪ್ರಕರಣ ವರದಿಯಾಗುತ್ತಲೇ ಇರುತ್ತದೆ.

227 ಹಳ್ಳಿಗಳಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' 4

ಆಳ-ಅಗಲ
'ದೇಶದ್ರೋಹ'ದ ನಾಗಾಲೋಟ

ಅಹಿಂದ ರ‍್ಯಾಲಿ ಕೈಬಿಟ್ಟ ಸಿದ್ದರಾಮಯ್ಯ 10

ಸೆನ್ಸೆಕ್ಸ್	ನಿಫ್ಟಿ	₹/$
52,104	15,313	72.69

ಒನ್ ಅಂಡ್ ಓನ್ಲಿ ಶಕುಂತಲಾ... "ಶರವೇಗದಲ್ಲಿ ತಲೆಯ ಕೂದಲ ಸಮಸ್ಯೆ ನಿವಾರಣೆ"

ಶ್ರೀ ಶ್ರೀ ಡಾ|| ಆನಂದ ಗುರೂಜಿ

ಮಾರುಕಟ್ಟೆಯಲ್ಲಿ ಲಭ್ಯವಿರುವ ಹೆಚ್ಚಿನ ಕೇಶತೈಲಗಳಲ್ಲಿ ಬಣ್ಣ ಮತ್ತು ಪರಿಮಳಗಳಕ್ಕಾಗಿ ಕೆಲವು ಒಂದು ರಾಸಾಯನಿಕಗಳನ್ನು ಉಪಯೋಗಿಸುವರು. ಈ ರಾಸಾಯನಿಕಗಳಿಂದಾಗಿ ತುಂಬಾ ಕ್ಲಿಷ್ಟಕರ ಸಮಸ್ಯೆಗಳು ತಲೆದೂರುವುದು.

ಇದಕ್ಕಾಗಿಯೇ ಬಣ್ಣ ಅಥವಾ ಪರಿಮಳಕ್ಕಾಗಿ ರಾಸಾಯನಿಕ ಉಪಯೋಗಿಸದೇ ಕೇರಳದ ಪರಿಶುದ್ದ ತೆಂಗಿನ ಎಣ್ಣೆಯನ್ನು ಉಪಯೋಗಿಸಿ ತಯಾರಿಸಿದ ಸ್ವಾಭಾವಿಕ ಹರ್ಬಲ್ ತೈಲವೇ ಶಕುಂತಲಾ ಹರ್ಬಲ್ ಹೇರ್ ಟೋನ್, ಒಂದು ಮನಮೋಹಕ ಕಲರ್ ಅಥವಾ ಪರಿಮಳ ಅಥವಾ ರೇಟಿಂಗ್ ಅದರ ಗುಣಮಟ್ಟವನ್ನು ಮೌಲ್ಯಮಾಪನ ಮಾಡುವ ಅಂಶಗಳ ಬದಲಾಗಿ ಯಾವುದೇ ಅಡ್ಡಪರಿಣಾಮವಿಲ್ಲದ ಉತ್ಕೃಷ್ಟ ಗುಣಮಟ್ಟಕ್ಕೆ ಕಾರಣವಾಗಿರುತ್ತದೆ.

ಈ ಕೇಶ ತೈಲದ ಗುಣಮಟ್ಟವನ್ನು ಯಾವುದೇ ಸರಕಾರಿ ಶಿಫಾರಿತ ಲ್ಯಾಬ್‌ಗಳಲ್ಲಿ ಪರೀಕ್ಷಿಸಬಹುದು. ಯಾರೂ ಈ ತರಹದ ಗ್ಯಾರಂಟಿ ನೀಡಲಾರರು. ಗುಣಮಟ್ಟ ಕಾಯ್ದಿರಿಸಿದ ಉತ್ಪನ್ನದ ಶಕುಂತಲಾ ಹರ್ಬಲ್ ಹೇರ್ ಟೋನ್ ಇದಕ್ಕಾಗಿ ಲಕ್ಷಾಂತರ ಜನರು ಇದರ ಮೇಲೆ ವಿಶ್ವಾಸವನ್ನಿಟ್ಟಿರುವರು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 87622 26000

ನಿಮ್ಮ ಕೂದಲಿಗೆ ಪರಿಶುದ್ದ ಗಿಡಮೂಲಿಕೆ ತೈಲ ಅಥವಾ ಕೆಲವು ರಾಸಾಯನಿಕಗಳನ್ನು ಉಪಯೋಗಿಸುತ್ತಿದ್ದೀರಾ?

From the house of A & J Health Care, Bangalore
For a Healthy Society
Ph: 8762226000, 9243112373 E-mail: aj_healthcare@yahoo.co.in Super Stockist: Sri Rama Stores, Yallapur

22ರಿಂದ 6ರಿಂದ 8 ನೇ ತರಗತಿಗಳು ಆರಂಭ • ಹಾಜರಾತಿ ಕಡ್ಡಾಯ ಅಲ್ಲ

ಪ್ರಾಥಮಿಕ ಶಾಲಾರಂಭಕ್ಕೆ ಒತ್ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬೆಂಗಳೂರು ನಗರ ಮತ್ತು ಕೇರಳ ಗಡಿಭಾಗಕ್ಕೆ ಹೊಂದಿಕೊಂಡ ಭಾಗಗಳಲ್ಲಿ ಬಿಟ್ಟು, ಎಲ್ಲ ಕಡೆ ಇದೇ 22ರಿಂದ 6ನೇ ತರಗತಿಯಿಂದಲೇ ಪೂರ್ಣ ಪ್ರಮಾಣದಲ್ಲಿ ಶಾಲೆಗಳನ್ನು ಆರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಆ ಬೆನ್ನಲ್ಲೇ, ಪ್ರಾಥಮಿಕ ಹಂತದಿಂದಲೇ (ಒಂದರಿಂದ 5ರವರೆಗೂ) ತರಗತಿಗಳನ್ನು ಆರಂಭಿಸುವಂತೆ ಒತ್ತಡ ಹೆಚ್ಚಲಾರಂಭಿಸಿದೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರು ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರು, ಆರೋಗ್ಯ ಮತ್ತು ಇತರ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದರು. ಬಳಿಕ ಫೇಸ್‌ಬುಕ್‌ನ ತಮ್ಮ ಪುಟದಲ್ಲಿ ನೇರ ಪ್ರಸಾರದಲ್ಲಿ ಮಾತನಾಡಿದ ಸಚಿವರು, 6ನೇ ತರಗತಿಯಿಂದ ಶಾಲೆಗಳನ್ನು ಆರಂಭಿಸುವ ಬಗ್ಗೆ ಮಾಹಿತಿ ನೀಡಿದರು.

ಈಗಾಗಲೇ ಆರಂಭವಾಗಿರುವ ತರಗತಿಗಳಿಗೆ ವಿದ್ಯಾರ್ಥಿಗಳ ಹಾಜರಾತಿ, ವಿದ್ಯಾರ್ಥಿಗಳ ಸುರಕ್ಷತೆ, ಕೋವಿಡ್ ನಿಯಮಗಳ ಪಾಲನೆ ಗಮನಿಸಿ ಕೋವಿಡ್ ತಾಂತ್ರಿಕ ಸಲಹಾ ಸಮಿತಿ 6ರಿಂದ 8ನೇ ತರಗತಿಗಳ ಆರಂಭಕ್ಕೆ ಹಸಿರು ನಿಶಾನೆ ತೋರಿದೆ ಎಂದು ಅವರು ಸ್ಪಷ್ಟಪಡಿಸಿದರು.

ಕೋವಿಡ್‌ನ ತಾಂತ್ರಿಕ ಸಲಹಾ ಸಮಿತಿಯಿಂದ ವರದಿ ಶೀಘ್ರ ಕೈಸೇರಲಿದೆ. ಇದೇ 24 ಅಥವಾ 25ರಂದು ಮತ್ತೆ ಸಭೆ ಸೇರಿ ಪ್ರಾಥಮಿಕ ತರಗತಿಗಳ ಬಗ್ಗೆ ತೀರ್ಮಾನಿಸಲಾಗುವುದು

ಎಸ್. ಸುರೇಶ್‌ಕುಮಾರ್
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

ಸಚಿವರ ಫೇಸ್‌ಬುಕ್ ಪುಟದಲ್ಲಿ ತಮ್ಮ ಬೇಡಿಕೆ ಮಂಡಿಸಿದ ಪೋಷಕರು, ವೀಕ್ಷಕರು, ಒಂದನೇ ತರಗತಿಯಿಂದಲೇ ಶಾಲೆಗಳನ್ನು ಆರಂಭಿಸುವಂತೆ ಒತ್ತಾಯಿಸಿದರು. ಅಲ್ಲದೆ, ಇತರ ಸಾಮಾಜಿಕ ಜಾಲ ತಾಣಗಳಲ್ಲೂ ಪ್ರಾಥಮಿಕ ಹಂತದಿಂದಲೇ ಶಾಲೆಗಳನ್ನು ಆರಂಭಿಸುವಂತೆ ಬೇಡಿಕೆ ವ್ಯಕ್ತವಾಗಿದೆ. ವಿ.ಪಿ. ನಿರಂಜನಾರಾಧ್ಯ ಸೇರಿದಂತೆ ಹಲವು ಶಿಕ್ಷಣ ತಜ್ಞರು ಈ ಹಿಂದೆಯೇ ಈ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

'ಎಲ್ಲ ತರಗತಿಗಳನ್ನು ಆರಂಭಿಸಬೇಕೆಂಬ ರಾಜ್ಯದ ವಿದ್ಯಾರ್ಥಿ ಮತ್ತು ಪೋಷಕ ವಲಯದ ಬೇಡಿಕೆ ಹಾಗೂ ಹೈಕೋರ್ಟ್ ಆಶಯದಂತೆ ಸುದೀರ್ಘ ಚರ್ಚೆಯ ಬಳಿಕ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ರಾಜ್ಯದ ಕೋವಿಡ್‌ಗೆ ಸಂಬಂಧಿಸಿದ ವಿವರವಾದ ವರದಿಯೊಂದು ತಾಂತ್ರಿಕ ಸಲಹಾ ಸಮಿತಿ ಕೈಸೇರಲಿದ್ದು, ಅದನ್ನು ಗಮನದಲ್ಲಿಟ್ಟುಕೊಂಡು ಒಂದರಿಂದ ಐದನೇ ತರಗತಿಗಳ ಆರಂಭ ಅಥವಾ ವಿದ್ಯಾಗಮ ಕಾರ್ಯಕ್ರಮ ಆರಂಭಿಸುವ ಬಗ್ಗೆ ತೀರ್ಮಾನಿಸಲಾಗುವುದು' ಎಂದು ಸುರೇಶ್‌ಕುಮಾರ್ ಹೇಳಿದರು.

ಹಾಜರಾತಿ ಕಡ್ಡಾಯವಲ್ಲ: ಇನ್ನು ಮುಂದೆ, ಈಗಾಗಲೇ ಶಾಲೆಗೆ ಹಾಜರಾಗುತ್ತಿರುವ ಮಕ್ಕಳ ಕೋವಿಡ್ ಯಾದೃಚ್ಛಿಕ (ರ‍್ಯಾಂಡಮ್ ಟೆಸ್ಟ್) ಪರೀಕ್ಷೆಯನ್ನು ಆರೋಗ್ಯ ಇಲಾಖೆ ಕೈಗೊಳ್ಳಲಿದೆ. ಆದರೆ, ತರಗತಿಗಳಿಗೆ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಲ್ಲ. ಹಾಜರಾಗುವವರು ಪೋಷಕರಿಂದ ಒಪ್ಪಿಗೆ ಪತ್ರ ಕಡ್ಡಾಯವಾಗಿ ತರಬೇಕು. ಆದರೂ, ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಮಾರ್ಗದರ್ಶನದನ್ವಯ ಈಗಾಗಲೇ ನಡೆಯುತ್ತಿರುವ 9ರಿಂದ ಮೇಲಿನ ತರಗತಿಗಳಿಗೆ ಶೇ 70ರಿಂದ 89ರಷ್ಟು ಹಾಜರಾತಿ ಇದೆ' ಎಂದು ಸುರೇಶ್‌ಕುಮಾರ್ ವಿವರಿಸಿದರು.

4ನೇ ಪುಟ ನೋಡಿ

ಬೆಂಗಳೂರು; ಕೇರಳದ ಗಡಿಯಲ್ಲಿ 8ನೇ ತರಗತಿಯಿಂದ ಶಾಲೆ

'ಕೋವಿಡ್ ಸೋಂಕು ಪ್ರಕರಣಗಳು ಮತ್ತೆ ಕಾಣಿಸಿಕೊಂಡ ಕಾರಣಕ್ಕೆ ಬೆಂಗಳೂರು ನಗರ ಮತ್ತು ಕೇರಳ ಗಡಿ ಭಾಗದ ಶಾಲೆಗಳಲ್ಲಿ 22ರಿಂದ ಎಂಟನೇ ತರಗತಿಯಿಂದ ಮಾತ್ರ ಶಾಲೆಗಳು ಆರಂಭವಾಗಲಿದೆ. ಈ ಪ್ರದೇಶಗಳಿಗೆ 6–7ನೇ ತರಗತಿಗಳಿಗೆ 'ವಿದ್ಯಾಗಮ' ಮುಂದುವರಿಯಲಿದೆ. ಕೇರಳ ಭಾಗದಿಂದ ಗಡಿ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಕೋವಿಡ್ ಪರೀಕ್ಷೆಗೆ ಒಳಗಾಗಿ ನೆಗೆಟಿವ್ ಫಲಿತಾಂಶವಿದ್ದರೆ ಮಾತ್ರವೇ ತರಗತಿಗೆ ಹಾಜರಾಗಲು ಅನುಮತಿ ನೀಡಲಾಗುವುದು' ಎಂದು ಸುರೇಶ್ ಕುಮಾರ್ ಸ್ಪಷ್ಟಪಡಿಸಿದರು.

ಮುಂದಿನ ಶೈಕ್ಷಣಿಕ ವರ್ಷ ಜುಲೈ 15ರಿಂದ

2021-22ನೇ ಸಾಲಿನ ಶೈಕ್ಷಣಿಕ ವರ್ಷವನ್ನು 2021ರ ಜುಲೈ 15ರಿಂದ ಆರಂಭಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಆದರೆ, ಸಿಬಿಎಸ್‌ಇ ಪಠ್ಯಕ್ರಮದ ಶಾಲೆಗಳಲ್ಲಿ 2021–22ನೇ ಶೈಕ್ಷಣಿಕ ವರ್ಷ ಏಪ್ರಿಲ್ 1ರಿಂದ ಆರಂಭವಾಗಲಿದೆ ಎಂದು ಕೇಂದ್ರ ಸರ್ಕಾರ ಈಗಾಗಲೇ ಪ್ರಕಟಿಸಿದೆ.

ಕಿರಣ್ ಬೇಡಿ ವಜಾ

ನವದೆಹಲಿ: ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಹುದ್ದೆಯಿಂದ ಕಿರಣ್ ಬೇಡಿ ಅವರನ್ನು ತೆಗೆದುಹಾಕಲಾಗಿದೆ. ತೆಲಂಗಾಣದ ರಾಜ್ಯಪಾಲೆ ತಮಿಳ್‌ಸಾಯಿ ಸೌಂದರ್‌ರಾಜನ್ ಅವರಿಗೆ ಪುದುಚೇರಿಯ ಹೆಚ್ಚುವರಿ ಹೊಣೆ ವಹಿಸಿ ರಾಷ್ಟ್ರಪತಿ ಆದೇಶಿಸಿದ್ದಾರೆ.

7

ಕಾಲುವೆಗೆ ಬಿದ್ದ ಬಸ್: 45 ಪ್ರಯಾಣಿಕರ ಸಾವು

ಸಿಧಿ/ರೇವಾ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದಲ್ಲಿ ಬಸ್ ಕಾಲುವೆಗೆ ಬಿದ್ದು 20 ಮಹಿಳೆಯರು, ಒಂದು ಮಗು ಸೇರಿ 45 ಪ್ರಯಾಣಿಕರು ಮಂಗಳವಾರ ಮೃತಪಟ್ಟಿದ್ದಾರೆ.

ಸಿಧಿ ಜಿಲ್ಲಾ ಕೇಂದ್ರದಿಂದ ಸುಮಾರು 80 ಕಿ.ಮೀ. ದೂರದ ಪಟ್ನಾದಲ್ಲಿ ಈ ದುರಂತ ಬೆಳಿಗ್ಗೆ 8.30ರ ಹೊತ್ತಿಗೆ ಸಂಭವಿಸಿದೆ.

7

ಕ್ರಿಕೆಟ್: ಭಾರತಕ್ಕೆ ಮಣಿದ ಇಂಗ್ಲೆಂಡ್

ಚೆನ್ನೈ (ಪಿಟಿಐ): ರವಿಚಂದ್ರನ್ ಅಶ್ವಿನ್ ಮತ್ತು ಅಕ್ಷರ್ ಪಟೇಲ್ ಸ್ಪಿನ್ ಬೌಲಿಂಗ್ ಬಲದಿಂದ ಭಾರತ ಕ್ರಿಕೆಟ್ ತಂಡವು ಮಂಗಳವಾರ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ವಿರುದ್ಧದ ಎರಡನೇ ಟೆಸ್ಟ್‌ನಲ್ಲಿ 317 ರನ್‌ಗಳಿಂದ ಜಯಿಸಿತು. ನಾಲ್ಕು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

12

VICCO®
—ವಿಶ್ವಾಸಾರ್ಹ ಆಯುರ್ವೇದ—
1952 ರಿಂದ

cruelty free and vegan
Go natural ಆಯುರ್ವೇದದ ಔಷಧ

ಸ್ವದೇಶಿ ಆಯ್ಕೆಮಾಡಿಕೊಳ್ಳಿ 'ವಿಕೋ' ನಿಮ್ಮದಾಗಿಸಿ

ಅರಿಶಿನದ ಸಾರದಿಂದ ಕಾಂತಿಯುತ ಚರ್ಮ ಪಡೆಯಿರಿ

ವೀಕೋ ಟರ್ಮರಿಕ್ ಕ್ರೀಮ್ ಶ್ರೇಷ್ಠ ಗುಣಮಟ್ಟದ ವಿಶ್ವಾಸಪಾತ್ರ ಆಯುರ್ವೇದೀಯ ಪ್ರಾಡಕ್ಟ್ ಆಗಿದೆ. ಅರಿಶಿನ ಮತ್ತು ಗಂಧದ ಎಣ್ಣೆಯ ಸಾರ ನಿಮ್ಮ ಚರ್ಮಕ್ಕೆ ಬಂಗಾರದ ಹೊಳಪು ನೀಡುತ್ತದೆ.
ವೀಕೋ ಟರ್ಮರಿಕ್ ಕ್ರೀಮ್ ಮೊಡವೆಗಳು, ಬೊಕ್ಕೆಗಳು, ಕಪ್ಪುಗುಳ್ಳೆಗಳು ಮತ್ತು ಚರ್ಮದ ಇತರ ಸಾಮಾನ್ಯ ಸಮಸ್ಯೆಗಳನ್ನು ತಡೆಯುವಲ್ಲಿ ಮತ್ತು ಗುಣಪಡಿಸುವಲ್ಲಿ ಉಪಯುಕ್ತವಾದದ್ದು.
ಪ್ರಸ್ತುತಪಡಿಸುತ್ತಿದ್ದೇವೆ ಅಲೋವೆರಾದ ಗುಣಗಳಿಂದ ಭರಿತವಾದ ವೀಕೋ ಟರ್ಮರಿಕ್ ಅಲೋವೆರಾ ಸ್ಕಿನ್ ಕ್ರೀಮನ್ನು; ಇದು ಚರ್ಮವನ್ನು ಮಾಯಿಶ್ಚರೈಸ್ ಮಾಡುತ್ತದೆ ಮತ್ತು ಅದನ್ನು ಕೋಮಲವಾಗಿಯೂ ಇಡುತ್ತದೆ!

ಹಳದಿ ಗುಣಗಳಿಂದ ತ್ವಚೆ ಹೊಳೆಯುವುದಾದರೆ, ವಿದೇಶದ ಕಾಸ್ಮೆಟಿಕ್‌ಗಳನ್ನು ಬಿಟ್ಟುಬಿಡಿ ಮತ್ತು ಸ್ವದೇಶಿ ಆಯುರ್ವೇದದ ಜೊತೆಗೆ ಸದಾ ಹೊಳೆಯುತ್ತಾ ಇರಿ.

ವೀಕೋ ಟರ್ಮರಿಕ್ ಕ್ರೀಮ್
ವೀಕೋ ಟರ್ಮರಿಕ್ WSO ಕ್ರೀಮ್
ವೀಕೋ ಟರ್ಮರಿಕ್ ಅಲೋವೆರಾ ಕ್ರೀಮ್

ಸಂಪೂರ್ಣ ಸ್ವದೇಶಿ
ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿಯೂ ಲಭ್ಯ.
www.viccolabs.com • Like us on /ViccoLabs • Shop online at www.viccoestore.com • Customer Care Cell No. 0712-2420890

ಜ.11ರ ಸಭೆ ಮಾಹಿತಿ ಕೋರಿ ಝೂಮ್‌ಗೆ ಪೊಲೀಸರ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈತ ಹೋರಾಟಕ್ಕೆ ಬೆಂಬಲ ಸೂಚಿಸಲು ಟೂಲ್‌ಕಿಟ್ ರಚಿಸಿದ ಆರೋಪ ಹೊತ್ತಿರುವ ಬೆಂಗಳೂರಿನ ದಿಶಾ ರವಿ, ಮುಂಬೈನ ನಿಕಿತಾ ಜೇಕಬ್ ಮತ್ತು ಪುಣೆಯ ಶಾಂತನು ಮುಲುಕ್ ಅವರು ಜನವರಿ 11ರಂದು ನಡೆಸಿದ್ದಾರೆ ಎನ್ನಲಾದ ವಿಡಿಯೊ ಕಾನ್ಫರೆನ್ಸ್ ಬಗ್ಗೆ ಮಾಹಿತಿ ಕೋರಿ ಝೂಮ್ ವೇದಿಕೆಗೆ ದೆಹಲಿ ಪೊಲೀಸರು ಪತ್ರ ಬರೆದಿದ್ದಾರೆ. ಖಾಲಿಸ್ತಾನಪರ ಹೋರಾಟದ ಸಂಘಟನೆ ಎಂದು ಗುರುತಿಸಲಾಗಿರುವ ಪೋಯೆಟಿಕ್ ಜಸ್ಟಿಸ್ ಫೌಂಡೇಶನ್ (ಪಿಜೆಎಫ್) ಈ ವಿಡಿಯೊ ಕಾನ್ಫರೆನ್ಸ್ ಆಯೋಜಿಸಿತ್ತು ಎಂದು ಪೊಲೀಸರು ಆರೋಪಿಸಿದ್ದಾರೆ.

ಈ ಸಭೆಯಲ್ಲಿ 60–70 ಮಂದಿ ಭಾಗಿಯಾಗಿದ್ದು ಎಲ್ಲರ ವಿವರಗಳನ್ನು ಪೊಲೀಸರು ಕೇಳಿದ್ದಾರೆ.

ಟೂಲ್‌ಕಿಟ್ ರಚನೆಗೆ ಆರೋಪಿಗಳು ಹಣ ಪಡೆದುಕೊಂಡಿದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಯಲಿದೆ. ಹಾಗೆಯೇ, 'ಇಂಟರ್‌ನ್ಯಾಷನಲ್ ಫಾರ್ಮರ್ಸ್ ಸ್ಟ್ರೈಕ್' ಎಂಬ ವಾಟ್ಸ್‌ಆ್ಯಪ್ ಗುಂಪಿನ ಬಗ್ಗೆಯೂ ಪೊಲೀಸರು ಮಾಹಿತಿ ಪಡೆದುಕೊಳ್ಳುವ ಸಾಧ್ಯತೆ ಇದೆ.

ತಮ್ಮ ವಿರುದ್ಧ ಪ್ರಕರಣ ದಾಖಲಾಗುವ ಸಾಧ್ಯತೆ ಇದೆ. ಹಾಗಾಗಿ, ಟೂಲ್ ಕಿಟ್ ಇದ್ದ ಪೋಸ್ಟ್ ಅನ್ನು ಅಳಿಸಿ ಹಾಕುವಂತೆ ನಿಕಿತಾ ಅವರು ಸ್ವೀಡನ್ ಪರಿಸರ ಕಾರ್ಯಕರ್ತೆ ಗ್ರೇಟಾ ಥನ್‌ಬರ್ಗ್ ಅವರನ್ನು ಕೋರಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಶಾಂತನುಗೆ ಜಾಮೀನು

ಟೂಲ್‌ಕಿಟ್ ಪ್ರಕರಣದ ಆರೋಪಿ ಶಾಂತನು ಮುಲುಕ್ ಅವರಿಗೆ ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠವು ಪ್ರಯಾಣಕ್ಕಾಗಿ 10 ದಿನಗಳ ತಾತ್ಕಾಲಿಕ ನಿರೀಕ್ಷಣಾ ಜಾಮೀನು ನೀಡಿದೆ. ಮತ್ತೊಬ್ಬ ಆರೋಪಿ ನಿಕಿತಾ ಜೇಕಬ್ ಅವರು ಬಾಂಬೆ ಹೈಕೋರ್ಟ್‌ನಲ್ಲಿ ಪ್ರಯಾಣ ಜಾಮೀನಿಗೆ ಅರ್ಜಿ ಸಲ್ಲಿಸಿದ್ದು ಅದರ ಬಗ್ಗೆ ಬುಧವಾರ ಆದೇಶ ನೀಡಲಾಗುವುದು ಎಂದು ನ್ಯಾಯಾಲಯವು ಹೇಳಿದೆ.

ದೆಹಲಿಯ ನ್ಯಾಯಾಲಯದಲ್ಲಿ ಜಾಮೀನಿಗಾಗಿ ಅರ್ಜಿ ಸಲ್ಲಿಸಲು ಅಲ್ಲಿಗೆ ಹೋಗಲು ಸಾಧ್ಯವಾಗುವಂತೆ ಜಾಮೀನು ಕೋರಿ ಈ ಇಬ್ಬರೂ ಸೋಮವಾರ ಅರ್ಜಿ ಸಲ್ಲಿಸಿದ್ದರು.

ಮಹಿಳಾ ಆಯೋಗದ ನೋಟಿಸ್

ಟೂಲ್‌ಕಿಟ್ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ದಿಶಾ ಅವರನ್ನು ಬೆಂಗಳೂರಿನ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಏಕೆ ಮತ್ತು ಅವರಿಗೆ ವಕೀಲರ ನೆರವು ಏಕೆ ಒದಗಿಸಿಲ್ಲ ಎಂದು ಪ್ರಶ್ನಿಸಿ ದೆಹಲಿ ಮಹಿಳಾ ಆಯೋಗವು ದೆಹಲಿ ಪೊಲೀಸರಿಗೆ ಮಂಗಳವಾರ ನೋಟಿಸ್ ನೀಡಿದೆ.

10ನೇ ಪುಟ ನೋಡಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3qsHHo2

ನಿವೃತ್ತ ಮುಖ್ಯ ನ್ಯಾಯಮೂರ್ತಿ ರಾಮಾ ಜೋಯಿಸ್ ನಿಧನ

ಬೆಂಗಳೂರು: ಪಂಜಾಬ್–ಹರಿಯಾಣ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ, ಮಾಜಿ ರಾಜ್ಯಪಾಲ ಎಂ.ರಾಮಾ ಜೋಯಿಸ್ (89) ಅವರು ಮಂಗಳವಾರ ನಿಧನರಾದರು.



ಅವರಿಗೆ ಪತ್ನಿ, ಇಬ್ಬರು ಮಕ್ಕಳು ಮತ್ತು ಮೂವರು ಮೊಮ್ಮಕ್ಕಳು ಇದ್ದಾರೆ. ಅವರು ಕೆಲ ದಿನಗಳಿಂದ ವಯೋಸಹಜ ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದರು.

ರಾಜಾಜಿನಗರದಲ್ಲಿರುವ ನಿವಾಸದಲ್ಲಿ ಬೆಳಿಗ್ಗೆ 7.30ಕ್ಕೆ ಕೊನೆಯುಸಿರೆಳೆದರು. ಅವರ ನಿವಾಸದಲ್ಲಿಯೇ ಪಾರ್ಥಿವ ಶರೀರದ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸಂಜೆ 5.30ಕ್ಕೆ ಚಾಮರಾಜಪೇಟೆ ರುದ್ರಭೂಮಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿತು.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆಯಲ್ಲಿ ಜನಿಸಿದ ಅವರು, ಕಾನೂನು ಪದವೀಧರರಾಗಿದ್ದರು. ನ್ಯಾಯಮೂರ್ತಿಯಾಗಿ ನಿವೃತ್ತರಾದ ನಂತರ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದರು.

ನುಡಿ ನಮನ 3

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ,
ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ರಾಜಕೀಯ ರಸಪ್ರಸಂಗ
ಅಂದ್ರಾಗಿನ 35 ಸಾವಿರ
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಪುದುಚೇರಿಯಲ್ಲಿ ಮತ್ತೊಬ್ಬ ಶಾಸಕ ರಾಜೀನಾಮೆ 7

ಚಿನಕುರಳಿ
ಪ್ರಕಾಶ್ ಶೆಟ್ಟಿ

ಫಾಸ್ಟ್ಯಾಗ್: ದುಪ್ಪಟ್ಟು ಶುಲ್ಕ– ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಟೋಲ್ ಗೇಟ್‌ಗಳಲ್ಲಿ ಸೋಮವಾರ ಮಧ್ಯರಾತ್ರಿಯಿಂದಲೇ ಫಾಸ್ಟ್ಯಾಗ್ ಕಡ್ಡಾಯಗೊಳಿಸಲಾಗಿದೆ. ಫಾಸ್ಟ್ಯಾಗ್ ಸ್ಟಿಕರ್ ಇಲ್ಲದ ವಾಹನಗಳಿಂದ ದುಪ್ಪಟ್ಟು ಶುಲ್ಕ ವಸೂಲಿ ಮಾಡುವ ಕ್ರಮಕ್ಕೆ ವಾಹನಗಳ ಮಾಲೀಕರು ಹಾಗೂ ಚಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಡೆರಹಿತ ಸಂಚಾರಕ್ಕೆ ಅನುಕೂಲವಾಗಲೆಂದು ಕಳೆದ ವರ್ಷವೇ ಫಾಸ್ಟ್ಯಾಗ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಆದರೆ, ಶೇ 60ರಷ್ಟು ವಾಹನಗಳು ಮಾತ್ರ ಫಾಸ್ಟ್ಯಾಗ್ ಸ್ಟಿಕರ್ ಹೊಂದಿವೆ. ಉಳಿದ ವಾಹನಗಳು ಇದುವರೆಗೂ ಫಾಸ್ಟ್ಯಾಗ್ ವ್ಯವಸ್ಥೆಯೊಳಗೆ ಬಂದಿಲ್ಲ. ಜ. 1ರಿಂದ ಫಾಸ್ಟ್ಯಾಗ್ ಕಡ್ಡಾಯಗೊಳಿಸುವುದಾಗಿ ಹೇಳಿದ್ದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ), ದಿನಾಂಕ ವಿಸ್ತರಣೆ ಮಾಡಿತ್ತು.

ಫಾಸ್ಟ್ಯಾಗ್ ಕಡ್ಡಾಯದ ಮಾಹಿತಿ ತಿಳಿಯದೇ ರಸ್ತೆಗಳಿಂದ ವಾಹನ ಚಾಲಕರು, ಮಾಲೀಕರು ಟೋಲ್‌ಗೇಟ್‌ಗಳಲ್ಲಿ ದುಪ್ಪಟ್ಟು ಶುಲ್ಕ ವಸೂಲಾತಿಯ ಕ್ರಮಕ್ಕೆ ಸಿಟ್ಟಿಗೆದ್ದರು. ರಾಜ್ಯದ ಎಲ್ಲ ಟೋಲ್‌ಗಳಲ್ಲಿ ಸೋಮವಾರ ಬೆಳಿಗ್ಗೆಯಿಂದಲೇ ಸಿಬ್ಬಂದಿ ಮತ್ತು ವಾಹನ ಮಾಲೀಕರ ಮಧ್ಯೆ ಮಾತಿನ ಚಕಮಕಿ, ಫಾಸ್ಟ್ಯಾಗ್ ಪಡೆಯಲು ಸರದಿ ಸಾಲುಗಳು ಸಾಮಾನ್ಯವಾಗಿತ್ತು. ಇದರಿಂದಾಗಿ ಟೋಲ್‌ನಲ್ಲಿ ದಟ್ಟಣೆ ಉಂಟಾಗಿ, ವಾಹನಗಳು ಸಾಲುಗಟ್ಟಿ ನಿಮಿಷಗಟ್ಟಲೇ ನಿಂತಲೇ ನಿಲ್ಲುವಂತಾಯಿತು.

ಟೋಲ್‌ಗಳಲ್ಲಿ ಫಾಸ್ಟ್ಯಾಗ್ ವಾಹನಗಳ ಸಂಚಾರಕ್ಕೆ ಬಹುತೇಕ ಗೇಟ್‌ಗಳಲ್ಲಿ ಅವಕಾಶ ನೀಡಲಾಗಿದೆ. ತಲಾ ಒಂದು ಗೇಟ್‌ನಲ್ಲಿ ಫಾಸ್ಟ್ಯಾಗ್ ಇಲ್ಲದ ವಾಹನಗಳ ಓಡಾಟಕ್ಕೆ ಮೀಸಲಿರಿಸಲಾಗಿದ್ದು, ಅವುಗಳಿಂದ ನಗದು ಸಂಗ್ರಹಿಸಲಾಗುತ್ತಿದೆ. ನಗದು ಕೌಂಟರ್ ಇರುವ ಗೇಟ್‌ನಲ್ಲೇ ಮಂಗಳವಾರ ಹೆಚ್ಚು ವಾಹನಗಳ ಸಂಚಾರವಿರುವುದು ಕಂಡುಬಂತು.

4ನೇ ಪುಟ ನೋಡಿ

ಭಾರತದ ಅತ್ಯಂತ ವಿಶ್ವಾಸಾರ್ಹ ಸೋಲಾರ್ ಬ್ರಾಂಡ್
30 ವರ್ಷಗಳಿಂದ
20% ಹೆಚ್ಚು ಬಿಸಿ ನೀರು
6 ಪಟ್ಟುಹೆಚ್ಚು ದಪ್ಪವಾದ ಟ್ಯಾಂಕ್
ಟ್ಯಾಂಕ್ ಸ್ವಚ್ಛಗೊಳಿಸುವ ಬಾಗಿಲುಗಳು
ಗಡಸು ನೀರಿಗೆ ಸೂಕ್ತವಾದ ಟ್ಯಾಂಕ್
ಶೂನ್ಯ ನಿರ್ವಹಣೆ
3T ಗೋಲ್ಡ್ ಸ್ಟ್ಯಾಂಡರ್ಡ್ ಟ್ಯೂಬ್
ಕ್ರಿಸ್ಟಲ್ ಬ್ಲ್ಯೂ ಗ್ಲಾಸ್™ ಲೈನಿಂಗ್
ಯಾವುದೇರೀತಿಯ ನೀರಿಗಾಗಿಯೂ ಸೋಲಾರ್ ವಾಟರ್ ಹೀಟರ್‌ನ ದೀರ್ಘ ಬಾಳಿಕೆಯನ್ನು ಖಚಿತಪಡಿಸಿಕೊಳ್ಳಲು ವಿಶಿಷ್ಟ ತಂತ್ರಜ್ಞಾನದೊಂದಿಗೆತಯಾರಿಸಲಾಗಿದೆ.
Awarded as 'India's Highest Selling Company' by the Govt. of India
Awarded for 'Best Service Network' by the Govt. of India
*T&C apply.
ಬುದ್ಧಿವಂತಿಕೆಯ ಆಲೋಚನೆ
10 ವರ್ಷಗಳ ಗ್ಯಾರಂಟಿ*
ಜೀವನಪರ್ಯಂತ ಸರ್ವೀಸ್
ಲಕ್ಷಾಂತರ ಸಂತೃಪ್ತ ಗ್ರಾಹಕರು
ವಿಶಾಲವಾದ ಡೀಲರ ನೆಟ್ವರ್ಕ್
Sudarshan Saur®
satishv@sudarshansaur.com | Call 1800 233 4545 | www.sudarshansaur.com

ಕೋವಿಡ್ ಕ್ಷಿಪ್ರ ಹರಡುವಿಕೆಗೆ ಕಾರಣವಾದ ಕಾರ್ಯಕ್ರಮ • ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಸೂಚನೆ

ಬೊಮ್ಮನಹಳ್ಳಿ: ಕೋವಿಡ್ ಪ್ರಕರಣ ಸಂಖ್ಯೆ 103ಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿ ವಲಯದ ಎಸ್‌ಎನ್‌ಎನ್ ರಾಜ್ ಲೇಕ್ ವ್ಯೂ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ 103ಕ್ಕೆ ಹೆಚ್ಚಳವಾಗಿದೆ. ಸೋಂಕಿತರಲ್ಲಿ ಆರು ಮಂದಿಯನ್ನು ಹೊರತುಪಡಿಸಿ ಉಳಿದವರೆಲ್ಲ 60 ವರ್ಷ ಮೇಲಿನವರು.

ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಇತ್ತೀಚೆಗೆ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಭಾಗವಹಿಸಿದ್ದ 28 ಮಂದಿಗೆ ಕೋವಿಡ್ ದೃಢಪಟ್ಟಿತ್ತು. ಹಾಗಾಗಿ ಕಟ್ಟಡದಲ್ಲಿ ವಾಸವಿದ್ದ 1,052 ನಿವಾಸಿಗಳನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆಗ ಒಟ್ಟು 103 ಕೊರೊನಾ ಸೋಂಕು ಹೊಂದಿರುವುದು ಪತ್ತೆಯಾಗಿದೆ.

'ಕೋವಿಡ್ ದೃಢಪಟ್ಟವರಲ್ಲಿ 96 ಮಂದಿ 60 ವರ್ಷಕ್ಕಿಂತ ಮೇಲ್ಪಟ್ಟವರು. ಸಭೆ ಸಮಾರಂಭಗಳಲ್ಲಿ ವಯಸ್ಸಾದವರು ಭಾಗವಹಿಸುವುದನ್ನು ಆದಷ್ಟು ಕಡಿಮೆ ಮಾಡುವುದು ಒಳ್ಳೆಯದು. ಕಾರ್ಯಕ್ರಮಗಳಲ್ಲಿ ಕೋವಿಡ್ ನಿಯಮಗಳನ್ನು ಚಾಚೂತಪ್ಪದೆ ಪಾಲನೆ ಮಾಡಬೇಕು' ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥಪ್ರಸಾದ್ ತಿಳಿಸಿದರು.

ಆರ್‌ಡಬ್ಲ್ಯುಎ ಜೊತೆ ವಿಡಿಯೊ ಸಂವಾದ: ಒಂದೇ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 100ಕ್ಕೂ ಅಧಿಕ ಮಂದಿಗೆ ಕೋವಿಡ್ ಹರಡಿದ ಪ್ರಕರಣವನ್ನು ಬಿಬಿಎಂಪಿ ಗಂಭೀರವಾಗಿ ಪರಿಗಣಿಸಿದೆ. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ (ಆರ್‌ಡಬ್ಲ್ಯುಎ) ಪ್ರಮುಖರ ಜೊತೆ ಪಾಲಿಕೆ ಆಯುಕ್ತರು ಮಂಗಳವಾರ ವಿಡಿಯೊ ಸಂವಾದ ನಡೆಸಿದರು. ಕೋವಿಡ್ ಹರಡುವಿಕೆಯನ್ನು ತಡೆಯಲು ಪಾಲಿಕೆ ಹೊರಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ ಭಾರಿ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವಂತೆ ಸಲಹೆ ನೀಡಿದರು.

'ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ, ಕಿರು ಸಭಾಂಗಣಗಳಲ್ಲಿ ಸಭೆ, ಸಮಾರಂಭಗಳನ್ನು ಆಯೋಜಿಸುವಾಗ ಅಲ್ಲಿ ಸೇರುವ ಜನರ ಸಂಖ್ಯೆಗೆ ಅನುಗುಣವಾಗಿ ಗಾಳಿಯಾಡುವ ವ್ಯವಸ್ಥೆ ಮಾಡಿಕೊಂಡಿರುವುದಿಲ್ಲ. ಕೋವಿಡ್ ಇರುವ ಒಬ್ಬ ವ್ಯಕ್ತಿ ಬಂದರೂ ಅವರಿಂದ ಇತರರಿಗೆ ಸುಲಭವಾಗಿ ಸೋಂಕು ಹರಡುತ್ತದೆ. ಸಭಾಂಗಣಗಳಲ್ಲಿ ಹವಾನಿಯಂತ್ರಣ ವ್ಯವಸ್ಥೆ ಇದ್ದರೆ ಸೋಂಕು ಹರಡುವ ವೇಗ ಇನ್ನಷ್ಟು ತೀವ್ರವಾಗಿರುತ್ತದೆ' ಎಂದು ಆಯುಕ್ತರು ತಿಳಿಸಿದರು.

'ಸಾಮಾಜಿಕ ಕಾರ್ಯಕ್ರಮಗಳಲ್ಲಿ ಜನರು ಪರಸ್ಪರ 3.25 ಚ.ಮೀ ಅಂತರ ಕಾಯ್ದುಕೊಳ್ಳಲು ಕ್ರಮವಹಿಸಬೇಕು' ಎಂದು ಸಲಹೆ ನೀಡಿದರು.

ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಎಲ್ಲರೂ ಬಳಸುವ ಜಾಗ, ವ್ಯಾಯಾಮ ಕೇಂದ್ರಗಳಲ್ಲೂ ಕೋವಿಡ್ ಹರಡದಂತೆ ತಡೆಯಲು ಮುಂಜಾಗ್ರತಾ ಕ್ರಮಗಳು ಕೈಗೊಳ್ಳಬೇಕು' ಎಂದರು.

ವಿವಿಧ ಆರ್‌ಡಬ್ಲ್ಯುಎಗಳ 300 ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದರು. ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್, ವಿಶೇಷ ಆಯುಕ್ತರು (ಕಸ ವಿಲೇವಾರಿ) ಡಿ.ರಂದೀಪ್, ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ.ವಿಜಯೇಂದ್ರ ಸಲಹೆಗಳನ್ನು ನೀಡಿದರು.

'ಸೋಂಕು ಲಕ್ಷಣವಿದ್ದರೆ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಿ'

ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಯಾರಿಗಾದರೂ ಸೋಂಕಿನ ಲಕ್ಷಣಗಳು ಕಂಡುಬಂದರೆ ಇತರರಿಂದ ಸ್ವಯಂ ಪ್ರತ್ಯೇಕಗೊಂಡು ಆರ್‌.ಟಿ.ಪಿ.ಸಿ.ಆರ್ ಅಥವಾ ಆರ್‌.ಎ.ಟಿ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಬಿಬಿಎಂಪಿ ಆಯುಕ್ತರು ಕೋರಿದರು.

'ಪಾಲಿಕೆಯ 141 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ 200 ಸಂಚಾರಿ ಪರೀಕ್ಷಾ ತಂಡಗಳಲ್ಲಿ ಈ ಪರೀಕ್ಷೆ ಉಚಿತ. ಕೊರೊನಾ ಸೋಂಕಿತರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಹಾಗೂ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ. ಹಾಸಿಗೆ ಕೊರತೆ ಈಗಿಲ್ಲ. ಸಾಕಷ್ಟು ವೈದ್ಯರೂ ಲಭ್ಯ ಇದ್ದಾರೆ' ಎಂದರು.

'ಇನ್ನು ಮುಂದೆ ಸೀಲ್‌ಡೌನ್ ಇಲ್ಲ'

'ನಗರದ ನಿವಾಸಿಗಳ ಸಹಕಾರದಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ ಸಾಧ್ಯವಾಗಿದೆ. ಕೋವಿಡ್ ಪ್ರಕರಣಗಳು ಕಂಡುಬರುವ ಪ್ರದೇಶಗಳಲ್ಲಿ ಇನ್ನು ಸೀಲ್ ಡೌನ್ ಮಾಡುವುದಿಲ್ಲ. ಮನೆ ಮುಂದೆ ಭಿತ್ತಿಪತ್ರ ಅಂಟಿಸುವ ಅಥವಾ ಬ್ಯಾರಿಕೇಡ್ ಅಳವಡಿಸುವ ಕ್ರಮಗಳನ್ನೂ ಕೈಬಿಟ್ಟಿದ್ದೇವೆ. ಕೋವಿಡ್ ದೃಢಪಟ್ಟವರ ಖಾಸಗಿತನಕ್ಕೆ ಧಕ್ಕೆ ಆಗಬಾರದು ಎಂಬುದು ಎಲ್ಲ ನಾಗರಿಕರಿಗೆ ಅರಿವಿದೆ' ಎಂದು ಮಂಜುನಾಥ ಪ್ರಸಾದ್ ಹೇಳಿದರು.

'ಸೋಂಕಿತರ ಜೊತೆ ನೇರ ಅಥವಾ ಪರೋಕ್ಷ ಸಂಪರ್ಕ ಹೊಂದಿದವರಿಗೆ ಕೋವಿಡ್ ಪರೀಕ್ಷೆ ಮಾಡಿ ಅವರ ಪ್ರತ್ಯೇಕವಾಸಕ್ಕೆ ವ್ಯವಸ್ಥೆ ಕಲ್ಪಿಸುತ್ತೇವೆ. ಏಳು ದಿನಗಳ ನಂತರ ಅವರನ್ನು ಮತ್ತೊಮ್ಮೆ ಪರೀಕ್ಷೆಗೆ ಒಳಪಡಿಸುತ್ತೇವೆ. ಅವರಲ್ಲಿ ಸೋಂಕು ಪತ್ತೆಯಾಗದಿದ್ದರೆ ಯಾವುದೇ ಸಮಸ್ಯೆ ಇರುವುದಿಲ್ಲ' ಎಂದು ಬಿಬಿಎಂಪಿ ಆಯುಕ್ತರು ತಿಳಿಸಿದರು.

ಕೋವಿಡ್ ಹೋರಾಟ ಅಂತಿಮ ಘಟ್ಟ ತಲುಪಿದೆ: ಸುಧಾಕರ್

ಚಿನ್ನದ ಪದಕ ಪಡೆದ ವಿಂಧ್ಯಾ ಪ್ರಸಾದ್, ತರುಣ್ ಶ್ಯಾಮ್, ಅದಿತಿ ಕೆ.ಮೂರ್ತಿ, ಸಾಗರ್ ವಿ. ಮತ್ತು ಯಶವಂತ್ ಎಂ. ಪರಸ್ಪರ ಅಭಿನಂದಿಸಿ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕೋವಿಡ್ ಹೋರಾಟದಲ್ಲಿ ಅಂತಿಮ ಘಟ್ಟವನ್ನು ಈಗ ನಾವು ತಲುಪಿದ್ದೇವೆ. 10 ತಿಂಗಳ ಬಳಿಕ ಬಂದಿರುವ ಲಸಿಕೆಯು ಕೋವಿಡ್ ನಿಯಂತ್ರಣಕ್ಕೆ ಸಹಕಾರಿಯಾಗಿದೆ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ ಸುಧಾಕರ್ ತಿಳಿಸಿದರು.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು (ಬಿಎಂಸಿಆರ್‌ಐ) ನಗರದಲ್ಲಿ ಮಂಗಳವಾರ ಏರ್ಪಡಿಸಿದ ಪದವಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಣೆ ಮಾಡಿದರು.

ವೈದ್ಯಕೀಯ ತಜ್ಞ ಡಾ.ಎಸ್. ಶ್ರೀಕಂಠ ಮಾತನಾಡಿ, 'ಪ್ರತಿಯೊಬ್ಬರೂ ಜೀವನದಲ್ಲಿ ಯಶಸ್ಸು ಮತ್ತು ವೈಫಲ್ಯದ ಬಗ್ಗೆ ಚಿಂತಿಸುವುದನ್ನು ಬಿಟ್ಟು, ಸೇವೆಯನ್ನು ನಿಷ್ಠೆಯಿಂದ ಮಾಡಬೇಕು. ಆಗ ಅದರ ಪ್ರತಿಫಲ ನಮಗೆ ದೊರೆಯುತ್ತದೆ. ಭಗವದ್ಗೀತೆಯಲ್ಲಿ ಕೃಷ್ಣನು ಅರ್ಜುನನಿಗೆ ಇದನ್ನೇ ಹೇಳಿದ್ದಾನೆ. ಭಾರತವು ಉಳಿದ ದೇಶಗಳಿಗಿಂತ ವಿಭಿನ್ನವಾಗಿದ್ದು, ಇಲ್ಲಿ ಸೇವೆ ಸಲ್ಲಿಸಲು ನಮಗೆ ವಿಪುಲ ಅವಕಾಶಗಳಿವೆ. ವಿಜ್ಞಾನ ಮತ್ತು ಆಧ್ಯಾತ್ಮದ ಸಮ್ಮಿಲನವನ್ನು ಇಲ್ಲಿ ಮಾತ್ರ ಕಾಣಬಹುದು' ಎಂದರು.

27 ಸಾವಿರ ಮಂದಿಗೆ ಮತ್ತೊಂದು ಡೋಸ್ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 15,490 ಮಂದಿ ಎರಡನೇ ಡೋಸ್ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ.

ಮೊದಲ ಡೋಸ್ ಲಸಿಕೆ ಪಡೆದವರಿಗೆ ಈಗ ಎರಡನೇ ಡೋಸ್ ಲಸಿಕೆ ವಿತರಿಸಲಾಗುತ್ತಿದೆ. ಮೊದಲ ದಿನವಾದ ಸೋಮವಾರ 11,985 ಮಂದಿ ಎರಡನೇ ಡೋಸ್ ಪಡೆದುಕೊಂಡಿದ್ದರು. ಇದರಿಂದಾಗಿ ಎರಡು ದಿನಗಳ ಅವಧಿಯಲ್ಲಿ ರಾಜ್ಯದಲ್ಲಿ ಎರಡು ಡೋಸ್‌ಗಳನ್ನು ಪೂರ್ಣಗೊಳಿಸಿದವರ ಸಂಖ್ಯೆ 27,475ಕ್ಕೆ ತಲುಪಿದೆ. ಮೊದಲ ಮತ್ತು ಎರಡನೇ ಡೋಸ್ ಲಸಿಕೆ ಪಡೆಯಲು ಮಂಗಳವಾರ 71,642 ಮಂದಿಯನ್ನು ಗುರುತಿಸಲಾಗಿತ್ತು. ಅದರಲ್ಲಿ 19,612 ಮಂದಿ ಮಾತ್ರ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ.

ರಾಜ್ಯದಲ್ಲಿ ಈವರೆಗೆ ನಿಗದಿಪಡಿಸಲಾಗಿದ್ದ 8,21,939 ಆರೋಗ್ಯ ಕಾರ್ಯಕರ್ತರಲ್ಲಿ 4,12,822 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಇದರಿಂದ ಶೇ 50ರಷ್ಟು ಗುರಿ ಸಾಧ್ಯವಾಗಿದೆ. 2,90,763 ಮುಂಚೂಣಿ ಯೋಧರನ್ನು ಈವರೆಗೆ ಲಸಿಕೆ ಪಡೆಯಲು ಗುರುತಿಸಲಾಗಿತ್ತು. ಅವರಲ್ಲಿ 92,191 ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದ ಶೇ 32ರಷ್ಟು ಗುರಿ ಸಾಧ್ಯವಾಗಿದೆ.

ಸುದ್ದಿ 2 ನಿಮಿಷ

ರೈತರ ಹೋರಾಟ ಬೆಂಬಲಿಸಿ ನಾಳೆ 'ರೈಲು ತಡೆ ಚಳವಳಿ'

ಬೆಂಗಳೂರು: 'ದೆಹಲಿ ರೈತರ ಹೋರಾಟ ಬೆಂಬಲಿಸಿ ಫೆ.18ರಂದು ರಾಜ್ಯದಾದ್ಯಂತ 3 ಗಂಟೆಗಳ ರೈಲು ತಡೆ ಚಳವಳಿ ನಡೆಸಲಾಗುವುದು' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ನಡೆಸುತ್ತಿರುವ ದೆಹಲಿ ರೈತರ ಚಳವಳಿ ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ಇದನ್ನು ಖಂಡಿಸಿ, ದೇಶದಾದ್ಯಂತ ಇದೇ 18ರಂದು ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ರೈಲು ತಡೆ ಚಳವಳಿ ನಡೆಸಲು ತೀರ್ಮಾನಿಸಲಾಗಿದ್ದು, ರಾಜ್ಯದಲ್ಲೂ ರೈಲು ತಡೆ ಇರಲಿದೆ' ಎಂದರು.

'ರಾಜ್ಯದಲ್ಲಿ ಆರು ತಿಂಗಳಿಗೊಮ್ಮೆ ಸಕ್ಕರೆ ಸಚಿವರು, ಆಯುಕ್ತರು ಬದಲಾಗುತ್ತಿದ್ದಾರೆ. ಇದರಿಂದ ಕಬ್ಬು ಬೆಳೆಗಾರರ ಸಮಸ್ಯೆಗಳು ಹೆಚ್ಚುತ್ತಿದ್ದು, ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಬ್ಬು ಬೆಳೆಗಾರರಿಗೆ ₹4 ಸಾವಿರ ಕೋಟಿ ಬಾಕಿ ಹಣ ಬರಬೇಕಾಗಿದೆ. ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಏಕಾಏಕಿ ಪರೀಕ್ಷೆಗೆ ಐಟಿಐ ವಿದ್ಯಾರ್ಥಿಗಳ ವಿರೋಧ

ಬೆಂಗಳೂರು: 'ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು ಐಟಿಐ ಪ್ರಥಮ ವರ್ಷದ ಪರೀಕ್ಷೆಯನ್ನು ದಿಢೀರ್ ಘೋಷಿಸಿದೆ. ಕೊರೊನಾ ಕಾರಣದಿಂದ ಪರೀಕ್ಷೆ ರದ್ದಗೊಳಿಸಬೇಕು ಹಾಗೂ ದ್ವಿತೀಯ ವರ್ಷಕ್ಕೆ ತೇರ್ಗಡೆ ಮಾಡಬೇಕು' ಎಂದು ಐಟಿಐ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಇಲಾಖೆಯ ಕ್ರಮ ವಿರೋಧಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಶನ್ (ಎಐಡಿವೈಒ) ಹಾಗೂ ಐಟಿಐ ವಿದ್ಯಾರ್ಥಿಗಳ ಹೋರಾಟ ಸಮಿತಿಗಳು ಜಂಟಿಯಾಗಿ ಇಲಾಖೆ ಎದುರು ಮಂಗಳವಾರ ಪ್ರತಿಭಟನೆ ನಡೆಸಿದವು. ಪರೀಕ್ಷೆ ರದ್ದು ಮಾಡುವಂತೆ ಇಲಾಖೆ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

'ಕೊರೊನಾ ಕಾರಣದಿಂದ 2019-20ನೇ ಸಾಲಿನ ಐಟಿಐ ವಿದ್ಯಾರ್ಥಿಗಳಿಗೆ ಪರೀಕ್ಷೆ ರದ್ದು ಮಾಡಲಾಗಿತ್ತು. ಆದರೆ, ಈಗ ಏಕಾಏಕಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿ, ಒಂದೇ ದಿನದಲ್ಲಿ ಪರೀಕ್ಷೆ ಶುಲ್ಕ ತುಂಬಲು ಕಾಲಾವಕಾಶ ನೀಡಿರುವುದು ವಿದ್ಯಾರ್ಥಿ ವಿರೋಧಿ ಕ್ರಮ' ಎಂದು ಐಟಿಐ ವಿದ್ಯಾರ್ಥಿ ಮನು ದೂರಿದರು.

ಸಿಐಎಸ್‌ಎಫ್-2021 ರಲ್ಲಿ ಗುತ್ತಿಗೆ ಆಧಾರದ ಮೇರೆಗೆ ಮಾಜಿ-ಸೇನಾ ಸಿಬ್ಬಂದಿ ನೇಮಕಾತಿ

ಭಾರತೀಯ ಸೇನೆಯಿಂದ ನಿವೃತ್ತರಾಗಿರುವ ಭಾರತೀಯ ನಾಗರಿಕರಿಂದ ಕೇಂದ್ರಿಯ ಕೈಗಾರಿಕಾ ಭದ್ರತಾ ಪಡೆಯಲ್ಲಿನ ಎಸ್‌ಐ/ ಎಕ್ಸೆ, ಎಎಸ್‌ಐ/ ಎಕ್ಸೆ, ಹೆಡ್ ಕಾನ್ಸ್‌ಟೇಬಲ್/ಜಿಡಿ ಮತ್ತು ಕಾನ್ಸ್‌ಟೇಬಲ್/ಜಿಡಿ ರ್‍ಯಾಂಕ್‌ಗಳನ್ನು ಹೊಂದಿರುವವರಿಂದ ಗುತ್ತಿಗೆ ಆಧಾರದ ಮೇರೆಗೆ ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ನೇಮಕಾತಿಯು ಗುತ್ತಿಗೆ ಆಧಾರದಲ್ಲಿ ನೆರವೇರುತ್ತದೆ ಮತ್ತು ನೇಮಕಾತಿ ಆರಂಭಿಕ 1 ವರ್ಷದ ಅವಧಿಗೆ ಇರುತ್ತದೆ ಹಾಗೂ ಈ ಅವಧಿಯು ವರ್ಷದಿಂದ ವರ್ಷದ ಆಧಾರದಲ್ಲಿ ಹೆಚ್ಚಿನ 2 ವರ್ಷ ಕಾಲ ನವೀಕರಣ ಮಾಡಬಹುದಾಗಿರುತ್ತದೆ.

ಹುದ್ದೆಯ ಹೆಸರು	ಸೇನೆಯಲ್ಲಿನ ತತ್ಸಮಾನ ರ್‍ಯಾಂಕ್	ಹುದ್ದೆಗಳ ಸಂಖ್ಯೆ	ನಿರ್ದಿಷ್ಟ ಮಾಸಿಕ ವರಮಾನ (ರೂ.ಗಳಲ್ಲಿ)
ಎಸ್‌ಐ/ಎಕ್ಸೆ	ಸುಬೇದಾರ್	63	40,000/-
ಎಎಸ್‌ಐ/ಎಕ್ಸೆ	ನವಾಬ್ ಸುಬೇದಾರ್	187	35,000/-
ಹೆಚ್‌ಸಿ/ಜಿಡಿ	ಹವಾಲ್‌ದಾರ್	424	30,000/-
ಕಾನ್ಸ್‌ಟೇಬಲ್/ಜಿಡಿ	ಸಿಪಾಯಿ	1326	25,000/-
	ಒಟ್ಟು	2000	

ಅರ್ಜಿ ಸಲ್ಲಿಸುವ ವಿಧಾನ:-

ಅಗತ್ಯ ದಾಖಲಾತಿಗಳ ಸಮೇತ ಅರ್ಜಿ ನಮೂನೆಯನ್ನು ಕಡ್ಡಾಯವಾಗಿ ಇ-ಮೇಲ್ ಮುಖಾಂತರ ಸಂಬಂಧಿತ ಸ್ವೀಕೃತ ಪ್ರಾಧಿಕಾರಕ್ಕೆ ಸಲ್ಲಿಸುವುದು. ಆನ್‌ಲೈನ್ ಅರ್ಜಿ ಭರ್ತಿ ಮಾಡುವ ಸಂಪೂರ್ಣ ಸೂಚನೆಗಳು ಅಧಿಸೂಚನೆಯಲ್ಲಿ ಲಭ್ಯವಿರುತ್ತದೆ.

ಅರ್ಜಿದಾರರು, ಅಧಿಸೂಚನೆಯ ಸಂಪೂರ್ಣ ವಿವರಗಳಿಗಾಗಿ ದಿನಾಂಕ 13.02.2021ರ ಎಂಪ್ಲಾಯ್‌ಮೆಂಟ್ ನ್ಯೂಸ್/ರೋಜಗಾರ್ ಸಮಾಚಾರ್ ಪತ್ರಿಕೆಗಳಲ್ಲಿನ ಜಾಹೀರಾತು ಅಥವಾ ಅಧಿಸೂಚನೆಯನ್ನು ಪರಿಶೀಲಿಸಬಹುದು ಅಥವಾ ಸಿಐಎಸ್‌ಎಫ್ ನೇಮಕಾತಿಯ **https://cisfrectt.in** ವೆಬ್‌ಸೈಟ್‌ನ್ನು ಪರಿಶೀಲಿಸಬಹುದು. ಅರ್ಜಿದಾರರು ಯಾವುದೇ ಹುದ್ದೆಗೆ ಅರ್ಜಿ ಸಲ್ಲಿಸುವುದಕ್ಕಿಂತ ಮುನ್ನ, ಕಡ್ಡಾಯವಾಗಿ ಎಲ್ಲಾ ಮಾಹಿತಿಯನ್ನು ಜಾಗ್ರತೆಯಿಂದ ಓದಿಕೊಂಡು ಅರ್ಥೈಸಿಕೊಳ್ಳಬೇಕು.

ಅಂತಿಮ ದಿನಾಂಕ: ಈಶಾನ್ಯ ರಾಜ್ಯಗಳ ಅಭ್ಯರ್ಥಿಗಳೂ ಸೇರಿದಂತೆ, ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ **15.03.2021** ಆಗಿರುತ್ತದೆ.

davp 19113/11/0003/2021

ಗ್ರಾಮ ಪಂಚಾಯಿತಿಗಳಿಗೆ ಸೌರವಿದ್ಯುತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯುತ್ ಸಮಸ್ಯೆ ನಿವಾರಿಸುವ ಸಲುವಾಗಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ಸೌರ ವಿದ್ಯುತ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಇದರಿಂದ ಪಂಚಾಯಿತಿಗಳಿಗೆ ಸಾಕಷ್ಟು ಹಣ ಉಳಿತಾಯವಾಗಲಿದೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಗ್ರಾಮ ಪಂಚಾಯಿತಿಯ ನೂತನ ಸದಸ್ಯರ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಗ್ರಾಮ ಪಂಚಾಯಿತಿಗಳಿಗೆ ವಿದ್ಯುತ್ ಬಿಲ್ ಹೊರೆಯಾಗಿ ಪರಿಣಮಿಸಿತ್ತು. ಹೀಗಾಗಿ ಪ್ರತಿ ಪಂಚಾಯಿತಿಗೆ ₹5 ಲಕ್ಷ ವೆಚ್ಚದಲ್ಲಿ ಸೋಲಾರ್ ವಿದ್ಯುತ್ ಕಲ್ಪಿಸಲಾಗುತ್ತಿದೆ. ವಿದ್ಯುತ್ ಸಮಸ್ಯೆಯ ನೆಪ ಹೇಳಿ ಅಧಿಕಾರಿಗಳು ರೈತರಿಗೆ ಅಗತ್ಯ ದಾಖಲೆ ಒದಗಿಸಲು ವಿಳಂಬ ಮಾಡುತ್ತಿದ್ದರು. ಇನ್ನು ಮುಂದೆ ಅದಕ್ಕೆ ಆಸ್ಪದ ಇರುವುದಿಲ್ಲ. ಪಂಚಾಯಿತಿಗಳು ತಮಗೆ ಅಗತ್ಯವಿರುವಷ್ಟು ವಿದ್ಯುತ್ ಬಳಸಿಕೊಂಡು ಉಳಿದಿದ್ದನ್ನು ಗ್ರಿಡ್‌ಗಳಿಗೆ ಮಾರಾಟ ಮಾಡಿ ಆದಾಯ ಗಳಿಸಬಹುದು' ಎಂದರು.

'ಏಪ್ರಿಲ್‌ನಲ್ಲಿ ಜಿ.ಪಂ. ಚುನಾವಣೆ'

'ಏಪ್ರಿಲ್‌ನಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳು ನಡೆಯುವ ನಿರೀಕ್ಷೆ ಇದೆ' ಎಂದು ಈಶ್ವರಪ್ಪ ತಿಳಿಸಿದರು.

'ಈಗಿರುವ ಮೂರು ಹಂತದ ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯಿಂದ ಅಷ್ಟೇನೂ ಪ್ರಯೋಜನವಾಗುತ್ತಿಲ್ಲ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ. ಹೀಗಾಗಿ ತಾಲ್ಲೂಕು ಪಂಚಾಯಿತಿಯನ್ನು ರದ್ದು ಪಡಿಸಬೇಕು ಎಂಬ ಮಾತುಗಳು ಕೇಳಿಬಂದಿವೆ. ವಿಧಾನ ಮಂಡಲದ ಅಧಿವೇಶನದಲ್ಲಿ ಈ ಬಗ್ಗೆ ಚರ್ಚಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ನಿರ್ಧರಿಸಿದ್ದೇವೆ' ಎಂದರು.

ಮೂತ್ರ ವಿಸರ್ಜನೆ ವಿಚಾರಕ್ಕೆ ಜಗಳ ಕೊಲೆಯಲ್ಲಿ ಅಂತ್ಯ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ಮೂತ್ರ ವಿಸರ್ಜನೆ ವಿಚಾರಕ್ಕಾಗಿ ಎರಡು ಗುಂಪುಗಳ ನಡುವೆ ಮಂಗಳವಾರ ಮಾರಾಮಾರಿ ನಡೆದಿದ್ದು, ಅರುಣ್‌ಕುಮಾರ್ (26) ಎಂಬುವರನ್ನು ಕೊಲೆ ಮಾಡಲಾಗಿದೆ.

'ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಅರುಣ್‌ಕುಮಾರ್, ಕೆಲಸಕ್ಕಾಗಿ ನಗರಕ್ಕೆ ಬಂದು ಉಲ್ಲಾಳ ಉಪನಗರದಲ್ಲಿ ವಾಸವಿದ್ದರು. ಘಟನೆಯಲ್ಲಿ ನಾಲ್ವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮಂಗಳವಾರ ಸಂಜೆ 5.30ರ ಸುಮಾರಿಗೆ ಅರುಣ್‌ಕುಮಾರ್, ಉಲ್ಲಾಳು ಉಪನಗರದ ರಸ್ತೆ ಬದಿ ಮೂತ್ರ ವಿಸರ್ಜನೆ ಮಾಡುತ್ತಿದ್ದರು. ಸ್ಥಳದಲ್ಲಿದ್ದ ರೌಡಿ ಕೃಷ್ಣನ ಸಹಚರರು, 'ಮಹಿಳೆಯರು ಓಡಾಡುವ ಜಾಗದಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದಿಯಲ್ಲ' ಎಂದು ಪ್ರಶ್ನಿಸಿದ್ದರು. ನಂತರ, ಮಾತಿಗೆ ಮಾತು ಬೆಳೆದು ಜಗಳ ಆರಂಭವಾಗಿತ್ತು.'

'ಮತ್ತಷ್ಟು ಮಂದಿ ಸ್ಥಳದಲ್ಲಿ ಸೇರಿದ್ದರು. ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆಯಿತು. ರೌಡಿ ಕೃಷ್ಣ ಸಹಚರರು, ಅರುಣ್ ಮೇಲೆ ಹಲ್ಲೆ ಮಾಡಿ ಪರಾರಿಯಾಗಿದ್ದಾರೆ. ತೀವ್ರ ಗಾಯಗೊಂಡು ಅರುಣ್ ಮೃತಪಟ್ಟಿದ್ದಾರೆ' ಎಂದೂ ತಿಳಿಸಿದರು.

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ. 1, 1ನೇ ಮುಖ್ಯ ರಸ್ತೆ , 1ನೇ ಬ್ಲಾಕ್ ಕೋರಮಂಗಲ, ಬೆಂಗಳೂರು - 560 034

ಫೋನ್ : 080-25526266 / 25526288 / 25526299

ಬಹಿರಂಗ ಹರಾಜಿನ ಮೂಲಕ ಸ್ಥಿರಾಸ್ತಿ ಮಾರಾಟದ ಸೂಚನೆ

ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಷ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅಡಿಯಲ್ಲಿ ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ, ನಂ. 1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560 034 ಇವರಿಗೆ ಕೆಳಕಂಡ ಸಾಲಗಾರರಿಂದ ಬರಬೇಕಾದ ಬಾಕಿ ಮೊತ್ತ ದಿನಾಂಕ 16-02-2021ರಲ್ಲಿ ಇದ್ದಂತೆ ರೂ. 1,12,36,351/- (ರೂಪಾಯಿ ಒಂದು ಕೋಟಿ ಹನ್ನೆರಡು ಲಕ್ಷ ಮೂವತ್ತಾರು ಸಾವಿರದ ಮೂರು ನೂರ ಐವತ್ತೊಂದು ಮಾತ್ರ) ಮತ್ತು ಸಾಲ ತೀರುವಳಿವರೆಗಿನ ಬಡ್ಡಿ ಮತ್ತು ಇತರೆ ಖರ್ಚು ವಸೂಲಿಗಾಗಿ ಬ್ಯಾಂಕಿಗೆ ಅಡಮಾನ ಮಾಡಿರುವ ಕೆಳಕಂಡ ಸ್ಥಿರಸ್ವತ್ತನ್ನು ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಎಲ್ಲಿ ಏನಿದೆಯೋ ಹಾಗೆಯೇ ಹರಾಜು ಮಾರಾಟ ಮಾಡಲಾಗುವುದು.

ಹರಾಜಿನ ದಿನಾಂಕ ಮತ್ತು ವೇಳೆ : **22-03-2021ರಂದು , ಮಧ್ಯಾಹ್ನ 3.00 ಗಂಟೆಗೆ**

ಹರಾಜು ನಡೆಯುವ ಸ್ಥಳ : **ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ, ಕೋರಮಂಗಲ, ಬೆಂಗಳೂರು - 560034**

ಕಾಯ್ದಿಟ್ಟ / ಮೀಸಲು ಬೆಲೆ : **ರೂ. 1,56,00,000/- (ರೂಪಾಯಿ ಒಂದು ಕೋಟಿ ಐವತ್ತಾರು ಲಕ್ಷಗಳು ಮಾತ್ರ)**

ಇಎಂಡಿ ಮೊತ್ತ : **ರೂ. 15,60,000/-**

ಸಾಲಗಾರ / ಅಡಮಾನದಾರರ ಹೆಸರು

1 **ಶ್ರೀ ಎನ್. ಆನಂದ ರೆಡ್ಡಿ** S/O ಲೇಟ್ ಎ. ಎಲ್. ನಂಜುಂಡ ರೆಡ್ಡಿ . ನಂ. 193, ಶ್ರೀನಿವಾಸ ದೇವಸ್ಥಾನದ ರಸ್ತೆ, ಆಗರ, ಸರ್ಜಾಪುರ ರಸ್ತೆ, ಬೆಂಗಳೂರು-560102

2. ಜಾಮೀನುದಾರರ ಹೆಸರು:

1. **ಮಿಸ್ ನೇಹ ಆನಂದ ರೆಡ್ಡಿ** D/O ಶ್ರೀ ಎನ್. ಆನಂದ ರೆಡ್ಡಿ , ನಂ. 193, ಶ್ರೀನಿವಾಸ ದೇವಸ್ಥಾನದ ರಸ್ತೆ, ಆಗರ, ಸರ್ಜಾಪುರ ರಸ್ತೆ, ಬೆಂಗಳೂರು-560102
2. **ಶ್ರೀ ಸುನೀಲ್‌ಕುಮಾರ್ ರೆಡ್ಡಿ** S/O ಶ್ರೀ ಶಾಮಸುಂದರ ರೆಡ್ಡಿ, ನಂ. 221, , 9ನೇ ಮೈನ್, 6ನೇ ಸೆಕ್ಟರ್, ಹೆಚ್ ಎಸ್ ಆರ್ ಲೇಔಟ್, ಬೆಂಗಳೂರು-560102

ಸ್ಥಿರಾಸ್ತಿಯ ವಿವರ :

ಬೆಂಗಳೂರು ನಗರದ ಹೆಚ್ ಎಸ್ ಆರ್ ಬಡಾವಣೆಯ ಸೆಕ್ಟರ್ ಒಂದರಲ್ಲಿರುವ ನಿವೇಶನ ಸಂಖ್ಯೆ 611 ಆಗಿದ್ದು ಇದರ ಬಿಬಿಎಂಪಿ ಖಾತಾ ಸಂಖ್ಯೆ 518/611 ಆಗಿರುತ್ತದೆ. ಇದರ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 9.14 ಮೀಟರುಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 12.19 ಮೀಟರುಗಳಿದ್ದು ಒಟ್ಟು ವಿಸ್ತೀರ್ಣ 111.41 ಚದರ ಮೀಟರುಗಳಾಗಿರುತ್ತದೆ. ಈ ಸ್ವತ್ತಿನ ಚಕ್ಕುಬಂದಿ

ಪೂರ್ವಕ್ಕೆ : ನಿವೇಶನ ಸಂಖ್ಯೆ 612, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 610, ಉತ್ತರಕ್ಕೆ : ನಿವೇಶನ ಸಂಖ್ಯೆ 608, ದಕ್ಷಿಣಕ್ಕೆ : ರಸ್ತೆ

ನಿಯಮ ಮತ್ತು ನಿಬಂಧನೆಗಳು:

1. ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ.
2. ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಕಾಯ್ದಿಟ್ಟ ಬೆಲೆಯ ಶೇ. 10 ರಷ್ಟನ್ನು ಹಿಂತಿರುಗಿಸುವ ಮುಂಗಡ ಠೇವಣಿಯನ್ನು ಬೆಂಗಳೂರಿನಲ್ಲಿ ಪಾವತಿಯಾಗುವಂತಹ ಡಿಡಿ / ಬ್ಯಾಂಕರ್ಸ್ ಚೆಕ್, ಮುಖಾಂತರ **ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ,** ಬೆಂಗಳೂರು -34 ಇವರಿಗೆ ದಿನಾಂಕ 22-03-2021ರ 3.00 ಗಂಟೆಯ ಒಳಗೆ ಆಫರ್ ಪತ್ರದೊಂದಿಗೆ ಪಾವತಿಸುವುದು.
3. ಆಫರ್ ಪತ್ರದೊಂದಿಗೆ ಬಿಡ್ಡರ್ / ಆಫರ್‌ರವರ ದೃಢೀಕೃತ ಪ್ಯಾನ್‌ಕಾರ್ಡ್ ಮತ್ತು ಭಾವಚಿತ್ರವಿರುವ ಗುರುತಿನ ಚೀಟಿ ಹಾಗೂ ಮನೆ ವಿಳಾಸದ ದಾಖಲೆಗಳನ್ನು ಸಲ್ಲಿಸಬೇಕು. ಯಶಸ್ವಿಯಾಗದ ಬಿಡ್ಡರ್‌ಗಳಿಗೆ ಇಎಂಡಿ ಮೊತ್ತವನ್ನು ಬಡ್ಡಿ ರಹಿತವಾಗಿ ಹಿಂತಿರುಗಿಸಲಾಗುವುದು.
4. ಯಶಸ್ವಿ ಬಿಡ್ಡುದಾರರು ಹರಾಜಿನ ಮೊಬಲಗಿನ ಶೇ. 25ರಷ್ಟು (ಮುಂಗಡವಾಗಿ ಪಾವತಿಸಿದ ಹಣವನ್ನು ಸೇರಿ) ಮೊತ್ತವನ್ನು ಹರಾಜು ಮುಕ್ತಾಯಗೊಂಡ ಸಮಯದಿಂದ 24 ಗಂಟೆಯೊಳಗಾಗಿ ಡಿಡಿ /ಬ್ಯಾಂಕರ್ಸ್ ಚೆಕ್ /ಆರ್‌ಟಿಜಿಎಸ್ ಮುಂಖಾಂತರ ಪಾವತಿಸಿ ಉಳಿದ ಹಣವನ್ನು ಹರಾಜಿನ ದಿನದಿಂದ ಸರಿಯಾಗಿ 15 ದಿನಗಳೊಳಗಾಗಿ ಪಾವತಿಸತಕ್ಕದ್ದು. ವಿಜಯಿ ಬಿಡ್ಡುದಾರರು ಹರಾಜಿನ ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂಗಡವಾಗಿ ಕೊಟ್ಟ ಹಣವನ್ನು ಮುಟ್ಟುಗೋಲು ಹಾಕಿ ಕೊಳ್ಳುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.
5. ಮಾರಾಟವು ಬ್ಯಾಂಕ್‌ನ ದೃಢೀಕರಣಕ್ಕೆ ಒಳಪಡುತ್ತದೆ.
6. ಯಶಸ್ವಿ ಬಿಡ್ಡುದಾರರು ಎಲ್ಲ ರೀತಿಯ ಕಾನೂನು / ಸಾಂದರ್ಭಿಕ ವೆಚ್ಚಗಳನ್ನು ಅಂದರೆ ಮುದ್ರಾಂಕ ಶುಲ್ಕ, ನೋಂದಣಿ ವೆಚ್ಚ , ಸ್ಥಳೀಯ ತೆರಿಗೆಗಳು ಇತ್ಯಾದಿಗಳನ್ನು ಭರಿಸಬೇಕು.
7. ಖರೀದಿದಾರರು ಮಾರಾಟದ ಬೆಲೆಯ ಶೇ. 1% ರಷ್ಟು ಟಿಡಿಎಸ್‌ನ್ನು ಕಡಿತಗೊಳಿಸಿ ಅದನ್ನು ಆದಾಯ ತೆರಿಗೆ ಇಲಾಖೆಗೆ ಇನ್‌ಕಂ ಟ್ಯಾಕ್ಸ್ ಆ್ಯಕ್ಟ್ 194 ಎ ಪ್ರಕಾರ ಪಾವತಿಸಬೇಕು. ಮಾರಾಟದ ಬೆಲೆಯ ಶೇ. 99% ರಷ್ಟು ಮೊತ್ತವನ್ನು ಮಾತ್ರ ಬ್ಯಾಂಕಿಗೆ ಪಾವತಿಸಬೇಕು.
8. ಬ್ಯಾಂಕಿನ ಅಧಿಕೃತ ಅಧಿಕಾರಿಗಳು ಹರಾಜನ್ನು ಯಾವುದೇ ಕಾರಣ ಕೊಡದೆ ಅಂಗೀಕರಿಸಲು / ಮುಂದೂಡಲು ಅಥವಾ ತಿರಸ್ಕರಿಸಲು ಅಧಿಕಾರ ಹೊಂದಿರುತ್ತಾರೆ.
9. ಹರಾಜಾದ ಆಸ್ತಿಗಳ ಕುರಿತು ಯಾವುದೇ ಖರ್ಚು ಋಣಭಾರ ಅಥವಾ ಸರ್ಕಾರಕ್ಕೆ / ಇತರೆ ಯಾರಿಗಾದರೂ ಪಾವತಿಸಬೇಕಾದ ಬಾಕಿ / ಹರಾಜಾದ ಆಸ್ತಿಯ ಮೇಲೆ ಯಾವುದೇ ವ್ಯಕ್ತಿಯ ಕ್ಲೈಮ್‌ಗಳು ಏನಾದರೂ ಇದ್ದಲ್ಲಿ ಅವುಗಳಿಗೆ ಬ್ಯಾಂಕ್ ಜವಾಬ್ದಾರರಲ್ಲ.
10. ಅಧಿಕೃತ ಅಧಿಕಾರಿಯವರು ಮೇಲೆ ತಿಳಿಸಿರುವ ಆಸ್ತಿಗಳ ಸಾಂಕೇತಿಕ ಸ್ವಾಧೀನತೆಯನ್ನು ಮಾತ್ರ ಪಡೆದಿದ್ದು ಭೌತಿಕ ಸ್ವಾಧೀನತೆಯನ್ನು ಪಡೆದಿರುವುದಿಲ್ಲ.
11. ಬ್ಯಾಂಕಿನಿಂದ ಮಾರಾಟ ದೃಢೀಕರಣಗೊಂಡ ನಂತರ ಬ್ಯಾಂಕಿನ ಪಾವತಿಯ ನಿಬಂಧನೆಗಳನ್ನು ಪೂರೈಸಿದ ಮೇಲೆ ಅಧಿಕೃತ ಅಧಿಕಾರಿಯವರು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ಅಪೆಂಡಿಕ್ಸ್ V ರಂತೆ ಖರೀದಿದಾರರ ಹೆಸರಿಗೆ ಮಾತ್ರ ಮಾರಾಟ ಪ್ರಮಾಣ ಪತ್ರವನ್ನು ನೀಡುತ್ತಾರೆ.
12. ಬಿಡ್ಡರ್‌ಗಳು ಮುಂಚಿತವಾಗಿ ಸಮಯವನ್ನು ನಿಗದಿಪಡಿಸಿಕೊಂಡು ಆಸ್ತಿಯನ್ನು ವೀಕ್ಷಿಸಿ ಮತ್ತು ಬ್ಯಾಂಕಿನಲ್ಲಿ ಲಭ್ಯವಿರುವ ದಾಖಲೆ / ಟೈಟಲ್ ಡೀಡ್‌ಗಳನ್ನು ಪರೀಕ್ಷಿಸಿ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.
13. ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯುರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್‌ಕಾಯಿದೆ 2002ರ ಅಡಿಯಲ್ಲಿ ಸಾಲಗಾರರು / ಜಾಮೀನುದಾರರಿಗೆ ನೀಡಿರುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು.

ಸ್ಥಳ : ಬೆಂಗಳೂರು
ದಿನಾಂಕ : 16-02-2021

ಸಹಿ / - ಅಧಿಕೃತ ಅಧಿಕಾರಿ
ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ , ಬೆಂಗಳೂರು

PUBLIC NOTICE

This is to notify the general public that I, A.J. Nanda Kumar, S/o. A.C. Jayawantharaj of Osborne Road, Bengaluru-560 042, I am the absolute owner with clear marketable title and lawful possession over the schedule property, having acquired under registered deed of sale executed on 25.02.1991 and legally competent to deal and dispose of the schedule property in the manner I deem appropriate. I negotiated terms of sale with M/s. S.D.M. Ventures, Bengaluru and propose to conclude the sale transaction.

As an abundant caution, before conclusion of the conveyance of the schedule property in favour of S.D.M. Ventures, I am advised to issue a public notice calling for objections from general public to register their objections if any, with the undersigned to the sale of the schedule property or having any interest therein, within 15 days from the date of publication hereof with supporting document justifying their objections/claims for our consideration. Any objection/complaint received after the expiry of the above time frame, we will not entertain such claim and such claims are deemed to have been waived and we will proceed with the completion of the sale after the expiry of the above time frame.

SCHEDULE PROPERTY

All that piece and parcel of the immovable property being dry agricultural land measuring an extent of 3 (three) acres in Old Survey No. 28, Block No. 4, new Survey No. 44 situated at Byrathi Village, Bidarahalli Hobli, Hosakote Taluk, Bengaluru District, bounded on the

East by : Property belonging to Smt. Ammamani
West by : Kothanur Border
North by : Property belonging to Sri. Krishna Rao Pawar and
South by : Property belonging to Sri. Chandra Gowda.

A.J. Nanda Kumar

Sd/- **PRAKASH T. HEBBAR,** Advocate
Hebbar Law Firm
No. SF-17, 2nd Floor, Hameed Shah Complex,
Cubbonpet Main Road, Bengaluru-560 002.

ರಾಮಮಂದಿರ: ₹6.01 ಕೋಟಿ ಸಂಗ್ರಹ

ಬೆಂಗಳೂರು: ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕಾಗಿ ಕೆ.ಆರ್.ಪುರ ಕ್ಷೇತ್ರದಲ್ಲಿ ನಡೆದ ನಿಧಿ ಸಮರ್ಪಣಾ ಅಭಿಯಾನದಲ್ಲಿ ₹6.01 ಕೋಟಿ ಸಂಗ್ರಹವಾಗಿದೆ.

ನಗರಾಭಿವೃದ್ಧಿ ಸಚಿವ ಬಿ.ಎ.ಬಸವರಾಜ ನೇತೃತ್ವದಲ್ಲಿ ನಡೆದ ನಿಧಿ ಸಂಗ್ರಹ ಅಭಿಯಾನದಲ್ಲಿ ಕ್ಷೇತ್ರದ ಜನ ₹5.50 ಕೋಟಿ ನೀಡಿದರೆ, ಬಸವರಾಜ ಅವರು ₹51 ಲಕ್ಷ ಕೊಟ್ಟಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಎನ್.ಆರ್. ಚೌಕ, ಬೆಂಗಳೂರು-560002

ನಂ.: ಕಾಪಾಅ/ಟಿಇಸಿ/ಟೆಂಡರ್/12/2020-21 ದಿನಾಂಕ: 16.02.2021

ಟೆಂಡರ್‌ಗಾಗಿ ಪ್ರಕಟಣೆ

ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (ಬಿಒಟಿ) ಆಧಾರದಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳಂತೆ ಹೊಸ ಪೊಲೀಸ್ ಸೆಂಟ್ರಿ (ಪೋಲೀಸ್ ಚೌಕಿ) ನಿರ್ಮಾಣದ ಪ್ರಸ್ತಾವನೆಗಾಗಿ ಮನವಿ

(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಟ್ರಾಫಿಕ್ ಇಂಜಿನಿಯರಿಂಗ್ ಸೆಲ್-ರಸ್ತೆ ಮೂಲಸೌಕರ್ಯ) ಬಿಬಿಎಂಪಿ, ಬೆಂಗಳೂರು ಇವರು, ಆಯುಕ್ತರು ಬಿಬಿಎಂಪಿ ಇವರ ಪರವಾಗಿ ಫುಲ್ ಕಲರ್ ಹೆಚ್‌ಡಿ ಎಲ್‌ಇಡಿ ಡಿಸ್‌ಪ್ಲೇ ಸ್ಕ್ರೀನ್ / ಸ್ಕ್ರಾಲರ್ / ಪಾಲಿ ಕಾರ್ಬೋನೇಟ್ ಶೀಟ್ಸ್ ಅಥವಾ ಅದೇ ಅಳತೆಯ ಜಾಹೀರಾತು ಪ್ರದೇಶ ಮೀರದಂತೆ ವಾಣಿಜ್ಯ ಜಾಹೀರಾತುಗಳನ್ನು ಮಾತ್ರ ಬಳಸಿಕೊಂಡು ಪ್ರತಿ ಯೂನಿಟ್‌ಗೆ 15 ಚದರ ಮೀಟರ್‌ಗಳಂತೆ ಬಿಬಿಎಂಪಿಗೆ 15%, ಟ್ರಾಫಿಕ್‌ಗೆ 15% ಮತ್ತು ವಾಣಿಜ್ಯ ಬಳಕೆಗೆ 70%ಗಳಂತೆ ಸ್ಥಳ ಹಂಚಿಕೆಯೊಂದಿಗೆ ಬಿಒಟಿ ಆಧಾರದಲ್ಲಿ 20 ವರ್ಷಗಳ ರಿಯಾಯಿತಿಯ ಅವಧಿಗೆ ಕೆಳಗಿನ ಪ್ಯಾಕೇಜ್ ಕಾಮಗಾರಿಗಳಂತೆ ಹೊಸ ಪೊಲೀಸ್ ಸೆಂಟ್ರಿ ಬಾಕ್ಸ್ (ಪೊಲೀಸ್ ಚೌಕಿ)ನ ನಿರ್ಮಾಣ ಮತ್ತು ನಿರ್ವಹಣೆಗಾಗಿ ಪ್ರತಿಷ್ಠಿತ ರಾಷ್ಟ್ರೀಯ / ಅಂತರರಾಷ್ಟ್ರೀಯ ಸಂಸ್ಥೆಗಳು / ಏಜೆನ್ಸಿಗಳಿಂದ ದ್ವಿ-ಲಕೋಟೆಯಲ್ಲಿ (ತಾಂತ್ರಿಕ & ಆರ್ಥಿಕ ಬಿಡ್‌ಗಳು) ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಯಾವುದೇ ರೀತಿಯಲ್ಲಿ ಈ ಪರದೆಗಳನ್ನು ಬಿಬಿಎಂಪಿ ಅಥವಾ ಟ್ರಾಫಿಕ್ ತಮ್ಮ ಸಮಯದ ಸ್ಲಾಟ್ ಅಡಿಯಲ್ಲಿ ರಾಜ್ಯ ಸರ್ಕಾರದ ಯೋಜನೆಗಳ ಪ್ರಚಾರಕ್ಕಾಗಿ ಬಳಸುವುದಿಲ್ಲ (ಇದು ಜಾಹೀರಾತಿನ ವ್ಯಾಪ್ತಿಗೆ ಬರುತ್ತದೆ) ಎಲ್ಲಾ ವಾಣಿಜ್ಯ ಜಾಹೀರಾತುಗಳನ್ನು ಬಿಡ್ಡುದಾರರ ಸಮಯದ ಪಾಲಿನಲ್ಲಿ ಮಾತ್ರ ಪ್ರದರ್ಶಿಸಲಾಗುತ್ತದೆ (ವಾಣಿಜ್ಯ ಪರಿಗಣನೆಯೊಂದಿಗೆ ಬಿಡ್ಡುದಾರರಿಂದ ನಿರ್ಧರಿಸಿದಂತೆ). ರಸ್ತೆಗಳಲ್ಲಿ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗದಂತೆ ಸ್ಲೈಡ್‌ಗಳು ಬದಲಾಗುವ ಫಾರ್ಮಾಟ್‌ನೊಂದಿಗೆ ನಾನ್ ವೀಡಿಯೋ ಪಿಕ್ಟೋರಿಯಲ್ ಅನಿಮೇಟೆಡ್ ನಾನ್ ಆಡಿಯೋ ಫಾರ್ಮಾಟ್ ವಿಷಯವುಳ್ಳದ್ದಾಗಿರತಕ್ಕದ್ದು.

ನಂ.	ಪ್ಯಾಕೇಜ್ ಸಂಖ್ಯೆ	ಪ್ರತಿ ಪ್ಯಾಕೇಜ್‌ಗೆ ಅಂದಾಜು ಸಂಖ್ಯೆಯ ಸ್ಥಳಗಳು	ಇಎಂಡಿ, ರೂ. ಲಕ್ಷಗಳಲ್ಲಿ (ಆರ್‌ಎಫ್‌ಪಿ ಯಂತೆ)
1	ಪ್ಯಾಕೇಜ್-ಎ	124 (ಪ.ಜಾ./ಪ.ಪಂ ಫಲಾನುಭವಿಗಳು ಮತ್ತು ಪ.ಜಾ./ಪ.ಪಂ. ರವರ ಆಡಳಿತದ ಎನ್‌ಜಿಓಗಳಿಗೆ ಮೀಸಲಿರಿಸಿದೆ).	25.00

ವೇಳಾಪಟ್ಟಿ: (1) ಹೊಸ ಆರ್‌ಎಫ್‌ಪಿ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc.karnataka.gov.in**ನಿಂದ ದಿನಾಂಕ: **18.02.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು **24.02.2021**ರ **ಮಧ್ಯಾಹ್ನ 3:00 ಗಂಟೆಗೆ** ಮುಖ್ಯ ಅಭಿಯಂತರರ ಕಛೇರಿ (ರಸ್ತೆ ಮೂಲಸೌಕರ್ಯ), ಬಿಬಿಎಂಪಿ ಕೇಂದ್ರ ಕಛೇರಿ, ಅನೆಕ್ಸ್-3 ಕಟ್ಟಡ, 4ನೇ ಮಹಡಿ, ಎನ್. ಆರ್. ಚೌಕ, ಬೆಂಗಳೂರು-560002ರಲ್ಲಿ ನಡೆಯಲಿದೆ. (3) ಬಿಡ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **04.03.2021ರ ಸಂಜೆ 4:00 ಗಂಟೆ**ವರೆಗೆ. (4) ತಾಂತ್ರಿಕ ಪ್ರಸ್ತಾವನೆಯನ್ನು ತೆರೆಯುವುದು: **05.03.2021ರ ಸಂಜೆ 4:30 ಗಂಟೆಗೆ**. (5) ಆರ್ಥಿಕ ಪ್ರಸ್ತಾವನೆ ತೆರೆಯುವುದು: **ನಂತರ ತಿಳಿಸಲಾಗುವುದು**. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು (ಟಿಇಸಿ), ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

DH DECCAN HERALD ಪ್ರಜಾವಾಣಿ

ಮಾರಾಟ ಸಹವರ್ತಿಗಳು ಬೇಕಾಗಿದ್ದಾರೆ

ಬೆಂಗಳೂರು ನಗರದಲ್ಲಿ ಮನೆ ಮನೆಗಳಿಗೆ ತೆರಳಿ ನಮ್ಮ ಪ್ರಕಾಶನಗಳನ್ನು ಉತ್ತೇಜಿಸಲು ಮಾರಾಟ ಸಹವರ್ತಿಗಳು ಬೇಕಾಗಿದ್ದಾರೆ. ತಿಂಗಳಿಗೆ ರೂ. 15,000/- ಸಂಪಾದಿಸಬಲ್ಲ ಅದ್ಭುತ ಅವಕಾಶ.

ಅಭ್ಯರ್ಥಿಗಳು ತಮ್ಮ ಸ್ಥಳೀಯ ನಿವಾಸಿ ಪ್ರದೇಶದಲ್ಲಿ ಬೆಳಗಿನ ಅವಧಿಯಲ್ಲಿ ಕಾರ್ಯನಿರ್ವಹಿಸಲು ಉತ್ಸುಕರಾಗಿರತಕ್ಕದ್ದು.

ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಉತ್ತಮ ಸಂವಹನ ಸಾಮರ್ಥ್ಯ ಹೊಂದಿರುವ ಯುವ, ಕ್ರಿಯಾಶೀಲ ಅಭ್ಯರ್ಥಿಗಳು ತಮ್ಮ ಸ್ವವಿವರಗಳನ್ನು ಕೆಳಗಿನ ಇ-ಮೇಲ್ ವಿಳಾಸಕ್ಕೆ ತಲುಪಿಸಬಹುದು:

mvsuresh@deccanherald.co.in
saravanan.k@deccanherald.co.in

ಈ ಕೆಳಗಿನ ವಿಳಾಸದಲ್ಲಿ ಕೂಡ ನಿಮ್ಮ ವಿವರಗಳನ್ನು ಸಲ್ಲಿಸಬಹುದು:

ಸಹ ಪ್ರಧಾನ ವ್ಯವಸ್ಥಾಪಕರು-ಪ್ರಸರಣ ವಿಭಾಗ
ದಿ ಪ್ರಿಂಟರ್ಸ್ (ಮೈಸೂರು) ಪ್ರೈ. ಲಿ.,
ನಂ. 75, ಎಂ.ಜಿ.ರಸ್ತೆ, ಬೆಂಗಳೂರು - 560 001

ಸ್ಪಷ್ಟೀಕರಣಗಳಿಗಾಗಿ ಸಂಪರ್ಕಿಸಿ:
98459 68518 (ಎಂ.ವಿ.ಸುರೇಶ್) 97399 97923 (ಶರವಣನ್.ಕೆ)

'ವರ್ತೂರಿಗೆ ಕಾಂಗ್ರೆಸ್‌ನಲ್ಲಿ ಸ್ಥಾನವಿಲ್ಲ'

ಕೋಲಾರ: 'ಮಾಜಿ ಸಚಿವ ವರ್ತೂರು ಪ್ರಕಾಶ್ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದು ಹೈಕಮಾಂಡ್ ಈ ಮೊದಲೇ ಸ್ಪಷ್ಟೀಕರಣ ನೀಡಿದ್ದರೂ, ತಾವು ಕಾಂಗ್ರೆಸ್ ಸೇರುವುದಾಗಿ ಇಲ್ಲಸಲ್ಲದ ಹೇಳಿಕೆ ನೀಡಿ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ' ಎಂದು ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಹೇಳಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ವರ್ತೂರು ಪ್ರಕಾಶ್ ಕಾಂಗ್ರೆಸ್ ಸೇರುವ ಬಗ್ಗೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಸ್ಪಷ್ಟನೆಯನ್ನು ಗ್ರಾಮ ಪಂಚಾಯಿತಿ ಚುನಾವಣೆ ಮುನ್ನವೇ ನೀಡಿದ್ದರು. ಆದರೂ ಪದೇ ಪದೇ ಒಂದೇ ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಎರಡು ಬಾರಿ ಶಾಸಕರಾಗಿ, ಒಮ್ಮೆ ಸಚಿವರಾಗಿದ್ದ ಅವರು ಸಣ್ಣತನದ ಹೇಳಿಕೆ ನೀಡಬಾರದು' ಎಂದರು.

ಎಸ್‌ಸಿಪಿ–ಟಿಎಸ್‌ಪಿ: ದಲಿತ ಉದ್ಯಮಿಗಳಿಗೆ ಷರತ್ತು ಸಡಿಲಿಕೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನದಡಿ ಎರಡೂ ಸಮುದಾಯಗಳ ಉದ್ಯಮಿಗಳಿಗೆ ನಿವೇಶನ, ಮಳಿಗೆ ಖರೀದಿಗೆ ನೆರವು ನೀಡುವ ಕಾರ್ಯಕ್ರಮದ ಷರತ್ತು ಸಡಿಲಿಸಿ ಆದೇಶ ಹೊರಡಿಸಿರುವ ರಾಜ್ಯ ಸರ್ಕಾರಕ್ಕೆ ಕರ್ನಾಟಕ ದಲಿತ ಉದ್ಯಮಿಗಳ ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಶ್ರೀನಿವಾಸನ್ ಕೃತಜ್ಞತೆ ಸಲ್ಲಿಸಿದ್ದಾರೆ.

ಬಿಬಿಎಂಪಿ ನೌಕರರ ಸಂಘ ಹಾಗೂ ಸಚಿವಾಲಯ ನೌಕರರ ಸಂಘಗಳ ನಡುವೆ ಆರೋಪ ಪ್ರತ್ಯಾರೋಪ

ಕೋವಿಡ್ ಕಾಲದಲ್ಲಿ ನೌಕರರ ಜಗಳ ತಾರಕಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಕರ್ನಾಟಕ ಸಚಿವಾಲಯ ಅಧಿಕಾರಿಗಳ ಸಂಘಗಳು ಆರೋಪ ಪ್ರತ್ಯಾರೋಪದಲ್ಲಿ ತೊಡಗಿದ್ದು ಪರಸ್ಪರ ಜಗಳಕ್ಕೆ ನಿಂತಿವೆ.

ನಗರದಲ್ಲಿ ಒಂದೇ ಅಪಾರ್ಟ್‌ಮೆಂಟ್‌ನಲ್ಲಿ 103 ಮಂದಿಗೆ ಕೋವಿಡ್ ಕಾಣಿಸಿಕೊಂಡಿದ್ದು, ಇದು ಇನ್ನಷ್ಟು ವ್ಯಾಪಿಸದಂತೆ ತಡೆಯಲು ಬಿಬಿಎಂಪಿ ಹಾಗೂ ಸರ್ಕಾರದ ಆಡಳಿತ ಯಂತ್ರಗಳು ಹಿಂದೆಂದಿಗಿಂತಲೂ ಹೆಚ್ಚು ಸಹಕಾರ – ಸಮನ್ವಯದಿಂದ ಕೆಲಸ ಮಾಡಬೇಕಾದ ಸ್ಥಿತಿ ಇದೆ. ಈ ನಡುವೆ, ಉಭಯ ಇಲಾಖೆಗಳ ಸಿಬ್ಬಂದಿ ನಡುವಿನ ತಿಕ್ಕಾಟ ಬಿಬಿಎಂಪಿ ಆಡಳಿತದಲ್ಲಿ ಹೊಸ ಗೊಂದಲ ಸೃಷ್ಟಿಸಿದೆ.

‘ನಗರಾಭಿವೃದ್ಧಿ ಇಲಾಖೆಯ ಜಂಟಿ ಕಾರ್ಯದರ್ಶಿ ಹಿದಾಯತುಲ್ಲ ಅವರು ಕಾನೂನುಬಾಹಿರವಾಗಿ ಎರವಲು ಸೇವೆಯ ಅಧಿಕಾರಿಗಳನ್ನು ಬಿಬಿಎಂಪಿಗೆ ನಿಯೋಜಿಸುತ್ತಿದ್ದಾರೆ. ಅವರನ್ನು ವರ್ಗಾವಣೆ ಮಾಡಬೇಕು’ ಎಂದು ಬಿಬಿಎಂಪಿ ನೌಕರರ ಸಂಘ ಅಧ್ಯಕ್ಷ ಅಮೃತರಾಜ್ ಒತ್ತಾಯಿಸಿದ್ದಾರೆ.

ಬಿಬಿಎಂಪಿ ನೌಕರರ ಸಂಘದ ಆರೋಪಕ್ಕೆ ಪ್ರತ್ಯುತ್ತರ ನೀಡಿರುವ ಸಚಿವಾಲಯ ನೌಕರರ ಸಂಘವು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರಿಗೆ ಬುಧವಾರ ಪತ್ರ ಬರೆದಿದೆ. ‘ಕ್ಷೇತ್ರ ಇಲಾಖೆಗಳ ಸಿಬ್ಬಂದಿ ನೀಡುವ ಇಂತಹ ದೂರು ಸಚಿವಾಲಯದ ಅಧಿಕಾರಿಗಳ ಮನೋಸ್ಥೈರ್ಯವನ್ನು ಕುಗ್ಗಿಸಲಿದೆ. ಆಧಾರರಹಿತ ಆರೋಪ ಮಾಡಿ, ಸಂಬಂಧ ಪಟ್ಟ ಪ್ರಾಧಿಕಾರದ ಅನುಮತಿ ಪಡೆಯದೆ ಅಪಪ್ರಚಾರ ಮಾಡಿರುವ ಅಮೃತರಾಜ್ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸಚಿವಾಲಯದ ಸಿಬ್ಬಂದಿಯೂ ಚಳವಳಿಯ ಹಾದಿ ಹಿಡಿಯುವುದು ಅನಿವಾರ್ಯವಾಗಲಿದೆ’ ಎಂದು ಸಂಘದ ಅಧ್ಯಕ್ಷ ಬಿ.ಎಸ್.ನಾಗರಾಜ್ ಹೇಳಿದ್ದಾರೆ.

‘ವೃಂದ ಮತ್ತು ನೇಮಕಾತಿ ನಿಯಮಗಳನ್ನು ಗಾಳಿಗೆ ತೂರಿ ಬಿಬಿಎಂಪಿಗೆ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ಜಂಟಿ ಕಾರ್ಯದರ್ಶಿ ಅವರು ತುಂಬುತ್ತಿದ್ದಾರೆ ಎನ್ನುವುದೂ ಸುಳ್ಳು ಆರೋಪ. ಸಚಿವಾಲಯದ ಜಂಟಿ ಕಾರ್ಯದರ್ಶಿಯವರಿಗೆ ಸ್ವಂತ ತೀರ್ಮಾನ ಕೈಗೊಳ್ಳುವ ಅಧಿಕಾರವೇ ಇಲ್ಲ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕಾರ್ಯದರ್ಶಿ, ಸಚಿವರು ಹಾಗೂ ಮುಖ್ಯಮಂತ್ರಿ ಅವರ ಅನುಮೋದನೆ ಪಡೆದೇ ಅವರು ಕಾರ್ಯನಿರ್ವಹಿಸಬೇಕಾಗುತ್ತದೆ ಎಂಬ ಮಾಹಿತಿ ಬಿಬಿಎಂಪಿ ನೌಕರರಿಗೆ ಇಲ್ಲದೇ ಇರುವುದು ಸೋಜಿಗ’ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

‘ಜಂಟಿ ಕಾರ್ಯದರ್ಶಿ ಅವರ ಕಾರ್ಯಕ್ಷಮತೆಯನ್ನು ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ ಅಥವಾ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಅಳೆಯಬೇಕೇ ಹೊರತು ಕ್ಷೇತ್ರ ಇಲಾಖೆಗಳ ಸಿಬ್ಬಂದಿ ಮತ್ತು ನೌಕರರ ಸಂಘ ಅಲ್ಲ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಜಗಳ ಶೋಭೆ ತರುವುದಿಲ್ಲ’

‘ನಗರದಲ್ಲಿ ಕೋವಿಡ್ ಹರಡುವಿಕೆ ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ. ಇಂತಹ ಸಂದರ್ಭದಲ್ಲಿ ನೌಕರರು ಸಾಮೂಹಿಕ ರಜೆ ಹಾಕುವುದಕ್ಕೆ ಸಾರ್ವಜನಿಕರಿಂದಲೂ ಆಕ್ಷೇಪ ವ್ಯಕ್ತವಾಗಿದೆ.

‘ಲಾಕ್‌ಡೌನ್ ಸಂದರ್ಭದಲ್ಲಿ ಜನರು ಕೆಲಸ ಕಳೆದುಕೊಂಡು ಬೀದಿಗೆ ಬಿದ್ದಿದ್ದರು. ಆಗಲೂ ನೌಕರರಿಗೆ ಎಲ್ಲ ಸವಲತ್ತುಗಳನ್ನು ನೀಡಲಾಗಿತ್ತು. ಏನೇ ಭಿನ್ನಾಭಿಪ್ರಾಯಗಳಿದ್ದರೂ ಸೌಹಾರ್ದಯುತವಾಗಿ ಬಗೆಹರಿಸಿಕೊಂಡು ನೌಕರರು ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಒಂದಾಗಿ ಕಾರ್ಯನಿರ್ವಹಿಸಬೇಕು. ಸರ್ಕಾರದ ಎರಡು ಇಲಾಖೆಗಳ ನೌಕರರು ಈ ರೀತಿ ಜಗಳವಾಡುವುದು ಅವರಿಗೆ ಶೋಭೆ ತರುವುದಿಲ್ಲ’ ಎಂದು ಶಶಿಕುಮಾರ್ ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ (ಎಡದಿಂದ) ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಅನೂರು ಅನಂತಕೃಷ್ಣ ಶರ್ಮ, ಚಿಂತಲಪಲ್ಲಿ ರಮೇಶ್, ವಿ.ವಿ ಗೋಪಾಲ್, ಚಿಂತಲಪಲ್ಲಿ ಕೃಷ್ಣಮೂರ್ತಿ ಅವರ ಮಗ ನಾಗರಾಜ ರಾವ್ ಮತ್ತು ಪಳನಿ ಸುಬ್ರಹ್ಮಣ್ಯ ಅವರು ಚಿಂತಲಪಲ್ಲಿ ಕೃಷ್ಣಮೂರ್ತಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಚಿಂತಲಪಲ್ಲಿ ಕೃಷ್ಣಮೂರ್ತಿ ಜನ್ಮಶತಮಾನೋತ್ಸವ

ಬೆಂಗಳೂರು: ‘ವಿದ್ವಾನ್ ಚಿಂತಲಪಲ್ಲಿ ಕೃಷ್ಣಮೂರ್ತಿ ಸ್ನೇಹಜೀವಿಯಾಗಿ ಬದುಕಿದವರು. ಅವರ ಮನಸ್ಸು ಸದಾ ಕಾಲ ಸಂಗೀತದ ಕುರಿತು ತುಡಿಯುತ್ತಿತ್ತು. ಯಾರೂ ಎಲ್ಲೇ ಸಿಕ್ಕರೂ ಸಂಗೀತದ ಬಗ್ಗೆಯೇ ಮಾತನಾಡುತ್ತಿದ್ದರು’ ಎಂದು ವಿದ್ವಾನ್ ಟಿ.ಎಸ್.ಚಂದ್ರಶೇಖರ್ ಹೇಳಿದರು.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಕನ್ನಡ ಭವನದ ನಯನ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ವಿದ್ವಾನ್ ಚಿಂತಲಪಲ್ಲಿ ಕೃಷ್ಣಮೂರ್ತಿ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹಿಂದೊಮ್ಮೆ ನಡೆದಿದ್ದ ಕಾರ್ಯಕ್ರಮದಲ್ಲಿ ಕೃಷ್ಣಮೂರ್ತಿ ಅವರು ಒಂದು ಗಂಟೆ ಕಲ್ಯಾಣಿ ರಾಗ ಹಾಡಿ ಎಲ್ಲರನ್ನು ಬೆರಗುಗೊಳಿಸಿದ್ದರು. ಶಂಕರಾಭರಣ ರಾಗದ ಬಗ್ಗೆ ಒಂಬತ್ತು ತಿಂಗಳು ಪಾಠ ಮಾಡಿದ್ದರು. ಸಂಗೀತದ ಬಗ್ಗೆ ಅವರು ಹೊಂದಿದ್ದ ಪಾಂಡಿತ್ಯಕ್ಕೆ ಇದೊಂದು ನಿದರ್ಶನ. ಯಾರು ಏನೇ ಕೇಳಿದರೂ ಕೋಪಿಸಿಕೊಳ್ಳದೆ ಹೇಳಿಕೊಡುತ್ತಿದ್ದರು’ ಎಂದರು.

ಲೇಖಕ ವಿ.ವಿ.ಗೋಪಾಲ್, ‘ಕೃಷ್ಣಮೂರ್ತಿ ಅವರು ಅಂತರ್ಮುಖಿಯಾಗಿದ್ದರು. ಸಂಗೀತದ ಬಗ್ಗೆ ಎಳ್ಳಷ್ಟೂ ಆಸಕ್ತಿ ಇರದ ನನ್ನಂತಹ ವ್ಯಕ್ತಿಯಲ್ಲೂ ಅವರು ಸಂಗೀತದ ಅಭಿರುಚಿ ಬೆಳೆಸಿದರು. ಸಂಗೀತದ ಶಕ್ತಿಯನ್ನು ತಿಳಿಸಿ ಹೇಳಿದರು’ ಎಂದರು.

ಬಹುಮುಖ ವ್ಯಕ್ತಿತ್ವದ ಜಸ್ಟಿಸ್ ರಾಮಾ ಜೋಯಿಸ್

• ನ್ಯಾಯಮೂರ್ತಿ ಎನ್.ಕುಮಾರ್

ನ್ಯಾಯಮೂರ್ತಿ ರಾಮಾ ಜೋಯಿಸ್ ಅವರದು ಬಹುಮುಖ ವ್ಯಕ್ತಿತ್ವ. ಸ್ವಯಂಸೇವಕರಾಗಿ, ವಕೀಲರಾಗಿ, ನ್ಯಾಯಾಧೀಶರಾಗಿ, ಬರಹಗಾರರಾಗಿ, ಕನ್ನಡ ಪರ ಹೋರಾಟಗಾರರಾಗಿ ಮತ್ತು ರಾಜಕೀಯ ಮುತ್ಸದ್ದಿಯಾಗಿ ಅವರು ಮಾಡಿರುವ ಕೆಲಸ ಈ ದೇಶಕ್ಕೆ ಅಪಾರ.

ದೇಶದಲ್ಲಿ ತುರ್ತು ಪರಿಸ್ಥಿತಿ ಇದ್ದಾಗ ನಾನು ವಕೀಲನಾಗಿ ವೃತ್ತಿ ಜೀವನ ಪ್ರಾರಂಭ ಮಾಡಿದ ಸಮಯ. ಆಗ ರಾಮಾ ಜೋಯಿಸ್ ಅವರು ಕಾನೂನು ವೃತ್ತಿಜೀವನದ ಉತ್ತುಂಗದಲ್ಲಿದ್ದರು.

ತುರ್ತು ಪರಿಸ್ಥಿತಿಯಲ್ಲಿ ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಅಡ್ವಾಣಿ, ಮಧು ದಂಡವತೆ, ಶ್ಯಾಮಾನಂದನ್ ಮಿಶ್ರಾ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಬಂದಿಯಾಗಿದ್ದರು. ಅವರ ಬಂಧನವನ್ನು ಪ್ರಶ್ನಿಸಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಾಮಾ ಜೋಯಿಸರು ವಕಾಲತ್ತು ವಹಿಸಿದ್ದರು. ಇಂತಹ ಒಂದು ಸುವರ್ಣ ಅವಕಾಶ ಒಬ್ಬ ವಕೀಲನ ಜೀವನದಲ್ಲಿ ಸಿಗುವುದು ಬಹಳ ಅಪರೂಪ. ಇದು ಅವರ ವೃತ್ತಿ ಜೀವನದ ಮರೆಯಲಾರದ ಕ್ಷಣ. ಇಂತಹ ಅವಕಾಶದ ಸದುಪಯೋಗ ಪಡಿಸಿಕೊಳಲು ಧೈರ್ಯ ಮತ್ತು ಕಾನೂನಿನ ಆಳವಾದ ಜ್ಞಾನ ಎರಡು ಬಹಳ ಅವಶ್ಯ. ರಾಮಾ ಜೋಯಿಸರಲ್ಲಿ ಈ ಎರಡೂ ಗುಣಗಳ ಸಮ್ಮಿಲನ ಅಪಾರವಾಗಿತ್ತು. ಆದರೆ ಅವರ ಕರ್ತವ್ಯ ನಿಷ್ಠೆಗೆ ಅವರು ಬಾರಿ ದೊಡ್ಡ ದಂಡವನ್ನು ತೆರಬೇಕಾಯಿತು. ಅಂದಿನ ಸರ್ಕಾರ ಅವರನ್ನು ಈ ಕಾರ್ಯಕ್ಕಾಗಿ ಮಿಸಾ ಕಾಯ್ದೆ ಅಡಿಯಲ್ಲಿ ಬಂಧನದಲ್ಲಿ ಇಟ್ಟಿತು. ಆ ಕಾರಣಕ್ಕಾಗಿ ಅಂದು ಅವರು ಬರಿ ವಕೀಲರ ಸಮುದಾಯಕ್ಕಲ್ಲ, ಕನ್ನಡಿಗರ ಕಣ್ಮಣಿಯಾದರು.

ತುರ್ತು ಪರಿಸ್ಥಿತಿ ಮುಗಿದು ನಂತರದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಧೂಳೀಪಟವಾದ ಮೇಲೆ, ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂತು. ಅವರ ಎಲ್ಲ ಕಕ್ಷಿಗಾರರು ಆ ಸರ್ಕಾರದ ಮಂತ್ರಿಗಳಾದರು. ರಾಮಾಜೋಯಿಸರನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾಗಿ ನೇಮಿಸಲಾಯಿತು. ಅವರು ನ್ಯಾಯಮೂರ್ತಿಯಾಗಿ ಬಹಳ ಉತ್ತಮ, ನಿರ್ಭಯ ತೀರ್ಪುಗಳನ್ನು ಕೊಟ್ಟು ಜನಮೆಚ್ಚುಗೆಗೆ ಪಾತ್ರರಾದರು. ಅವರ ಒಂದು ತೀರ್ಪಿನಿಂದ, ಅಂದರೆ ARRAC BOTTLING (ಸಾರಾಯಿ ಬಾಟ್ಲಿಂಗ್ ಹಗರಣ) ಮೊಕದ್ದಮೆಯಲ್ಲಿ ಅಂದಿನ ಜನಪ್ರಿಯ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ರಾಜೀನಾಮೆ ಕೊಡಬೇಕಾಯಿತು, ಕೊಟ್ಟರು. ಬಳಿಕ ಈ ತೀರ್ಪನ್ನು ಭಾರತದ ಸುಪ್ರೀಂ ಕೋರ್ಟ್ ಎತ್ತಿ ಹಿಡಿಯಿತು.

ಸೇವಾ ಕಾನೂನು ತಜ್ಞರಾಗಿದ್ದ ಜೋಯಿಸ್, ಸೇವಾ ಕಾನೂನಿನಲ್ಲಿ ನೀಡಿರುವ ತೀರ್ಪುಗಳು ಇಂದಿಗೂ ಸಹ ಹೊಸ ಪೀಳಿಗೆಯ ನ್ಯಾಯಾಧೀಶರುಗಳಿಗೆ, ವಕೀಲರಿಗೆ ಮಾರ್ಗದರ್ಶಕವಾಗಿದೆ.

ಅವರು ಸಂಸ್ಕೃತ ಭಾಷೆಯಲ್ಲಿ ಬಹಳ ಆಳವಾದ ಜ್ಞಾನ ಹೊಂದಿದ್ದರು. ಹೀಗಾಗಿ, ಭಾರತೀಯ ಪುರಾತನ ನ್ಯಾಯಶಾಸ್ತ್ರ ಅಭ್ಯಸಿಸಿ, ನಮ್ಮ ಪೀಳಿಗೆಯ ಅನುಕೂಲಕಾಗಿ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ "Legal and Constitutional History of India", "Seeds of modern public law in ancient Indian jurisprudence", "historic legal battle", "dharma-the global ethic" etc. ಧರ್ಮ ಮತ್ತು ಮನು ಸ್ಮೃತಿಯ ಬಗ್ಗೆ ಅವರ ನಿಲುವು ಬಹಳ ಉಪಯುಕ್ತ. ಮನುಸ್ಮೃತಿಯ ಬಗ್ಗೆ ಇರುವಂತಹ ತಪ್ಪು ತಿಳಿವಳಿಕೆಗಳನ್ನು ನಿವಾರಿಸುವ ಒಂದು ಪ್ರಾಮಾಣಿಕ ಪ್ರಯತ್ನವನ್ನು ಅವರು ಮಾಡಿದ್ದಾರೆ. ಅಷ್ಟೇ ಅಲ್ಲದೆ ಮಿತಾಕ್ಷರ, ವಿಜ್ಞಾನೇಶ್ವರರ ಕಾರ್ಯಕ್ಷೇತ್ರವಾದ ಕಲಬುರ್ಗಿ ಜಿಲ್ಲೆಯ ಮರತೂರಿನಲ್ಲಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ, ಜಗತ್ತಿಗೆ ವಿಜ್ಞಾನೇಶ್ವರರ ಕಾರ್ಯವನ್ನು ಪರಿಚಯಿಸಿದ ಹೆಗ್ಗಳಿಕೆ ಅವರದು.

ಸೇವೆಯಿಂದ ನಿವೃತ್ತರಾದ ಮೇಲೆ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ರಾಮ ಜನ್ಮಭೂಮಿ ಹೋರಾಟದಲ್ಲೂ ನ್ಯಾಯಾಂಗ ಸ್ತರದಲ್ಲಿ ತಮ್ಮ ಸಕ್ರಿಯ ಯೋಗದಾನ ನೀಡಿದರು. ಕನ್ನಡ ಸಾಹಿತಿಗಳ ಒಡನಾಟದಲ್ಲಿ, ಎಲ್ಲ ರಂಗಗಳಲ್ಲೂ ಕನ್ನಡ ಭಾಷೆಯ ಅನುಷ್ಠಾನಕ್ಕಾಗಿ ಹೋರಾಟದಲ್ಲಿ ಕೈ ಜೋಡಿಸಿದರು.

ಪಂಜಾಬ್ - ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿಯೂ, ಜಾರ್ಖಂಡ್ ಮತ್ತು ಬಿಹಾರ ರಾಜ್ಯಗಳ ರಾಜ್ಯಪಾಲರಾಗಿಯೂ, ರಾಜ್ಯಸಭೆಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ರಾಮಾ ಜೋಯಿಸರು ಇಷ್ಟೆಲ್ಲ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರೂ, ಅದು ಅವರ ವ್ಯಕ್ತಿತ್ವದ ಮೇಲೆ ಆಗಲಿ ಅಥವಾ ಅವರ ನಿತ್ಯ ಜೀವನದ ಮೇಲಾಗಲಿ ಯಾವುದೇ ತರಹದ ಪ್ರಭಾವವನ್ನು ಬೀರಲಿಲ್ಲ. ಅವರು ಎಂದಿಗೂ ಸರಳ, ಸಜ್ಜನಿಕೆಯ ಮೂರ್ತಿಯಾಗಿದ್ದರು. ಸ್ವಜನ ಪಕ್ಷಪಾತ, ಅಧಿಕಾರದ ದುರುಪಯೋಗ ಮತ್ತು ಭ್ರಷ್ಟಾಚಾರ ಇಂದಿನ ಅಧಿಕಾರಸ್ಥರಲ್ಲಿ ಸಾಮಾನ್ಯವಾಗಿರುವ ಪರಿಸರದಲ್ಲಿ, ಇದೆಲ್ಲದ್ದಕ್ಕೂ ಹೊರತಾಗಿ ಸ್ಪಟಿಕದಂತೆ ಅವರು ಕಂಗೊಳಿಸುತ್ತಿದ್ದರು. ಇಂದು ಅಂತಹ ಶ್ರೇಷ್ಠ ವ್ಯಕ್ತಿಗಳ ಅವಶ್ಯಕತೆ ಸಮಾಜಕ್ಕೆ ಬಹಳವಾಗಿ ಬೇಕಾಗಿದೆ. ಅಂತಹವರ ಬಣ ಬರುವ ದಿನಗಳಲ್ಲಿ ಹೆಚ್ಚಾಗಿ ಬೆಳೆಯಲಿ.

(ಲೇಖಕರು– ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ ಕೆ. ಎಸ್ ಈಶ್ವರಪ್ಪ ಅವರು ಮಂಗಳವಾರ ರಾಮಾ ಜೋಯಿಸ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ಪ್ರಜಾವಾಣಿ ಚಿತ್ರ

ಇದೀಗ ಎಲ್ಲ ಮಕ್ಕಳೂ ಮನೆಯಲ್ಲಿಯೇ
www.treehouseonline.in
ಮುಖಾಂತರ ಮಿತವ್ಯಯಕಾರಿ ವೆಚ್ಚದಲ್ಲಿ ಪ್ರಿಸ್ಕೂಲ್ ಶಿಕ್ಷಣ ಪಡೆಯುತ್ತಾರೆ
Only Rs.18000/- (Including Books & Uniform)
Call: 022 41639999

ಸೇವಾ ಲಾಲ್ ಜಯಂತಿಯಲ್ಲಿ ಸುರೇಶ್ ರಾಥೋಡ್, ಕೆ.ಡಿ.ನಾಯಕ್, ಸಿ.ಚಂದ್ರು, ಎ.ಆರ್.ಗೋವಿಂದಸ್ವಾಮಿ, ದೇನಾಭಗತ್ ಸ್ವಾಮಿಜಿ, ಶ್ರೀಧರ್, ಶಶಿಧರಕೋಟೆ, ಕಾ.ತ.ಚಿಕ್ಕಣ್ಣ, ಲಕ್ಷ್ಮಣಕೊಡಸೆ ಭಾಗವಹಿಸಿದ್ದರು

‘ಬಂಜಾರರು ಸ್ನೇಹ ಪ್ರಿಯರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಂಜಾರರು ಎಂದರೆ ಸ್ನೇಹ ಪ್ರಿಯರು. ಎಲ್ಲರನ್ನು ಕೂಡಿ ಸಾಗುವ ಮನೋಭಾವದವರು’ ಎಂದು ಚಿತ್ರನಟ ಶ್ರೀಧರ್ ಹೇಳಿದರು.

ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ, ಗೋರೂರು ಸೇವಾ ಫೌಂಡೇಷನ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 3ನೇ ವರ್ಷದ ಸಂತ ಸೇವಾಲಾಲರ ಜಯಂತಿಯಲ್ಲಿ ಭಾಗವಹಿಸಿ ಮಾತನಾಡಿದರು. ಕಥೆಗಾರ ಕಾ.ತ.ಚಿಕ್ಕಣ್ಣ, ಹಿರಿಯ ಪತ್ರಕರ್ತ ಲಕ್ಷ್ಮಣ ಕೊಡಸೆ ಮಾತನಾಡಿದರು. ಲೇಖಕ ಎ.ಆರ್.ಗೋವಿಂದಸ್ವಾಮಿ ಇದ್ದರು.

ಪ್ರಥಮ ದರ್ಜೆ ಕಾಲೇಜಿನ ಕೊಠಡಿಗಳ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ’ಬಡವರು, ಕೂಲಿ ಕಾರ್ಮಿಕರು, ಮಧ್ಯಮ ವರ್ಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ದೃಷ್ಟಿಯಿಂದ ಸರ್ಕಾರಿ ಶಾಲಾ-ಕಾಲೇಜು ಅಭಿವೃದ್ಧಿಗೆ ಶಾಸಕರ ಅನುದಾನ ಮತ್ತು ವಿವಿಧ ಮೂಲಗಳಿಂದ ಸಂಪನ್ಮೂಲ ತರುತ್ತಿದ್ದೇನೆ ಎಂದು ಶಾಸಕ ಮುನಿರತ್ನ ಹೇಳಿದರು.

ಪೀಣ್ಯದಲ್ಲಿ ₹17 ಕೋಟಿ ವೆಚ್ಚದಲ್ಲಿ ಶಾಸಕರ ಅನುದಾನದಲ್ಲಿ ನಿರ್ಮಾಣವಾಗುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 10 ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದರು.

ಶಾಸಕ ಮುನಿರತ್ನ ಅವರು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿದರು.

ಪ್ರಾಂಶುಪಾಲ ಪ್ರಕಾಶ್ ಮಾತನಾಡಿ. ‘ಆರು ತಿಂಗಳೊಳಗಾಗಿ 20 ಕೊಠಡಿಗಳನ್ನು ಬಿಟ್ಟುಕೊಡುವ ಭರವಸೆ ಸಿಕ್ಕಿದ್ದು ಮುಂದಿನ ಶೈಕ್ಷಣಿಕ ವರ್ಷದಿಂದ ಕೊಠಡಿಗಳಿಗೆ ಸಮಸ್ಯೆ ಯಾಗುವುದಿಲ್ಲ‘ ಎಂದರು.

ಐವರು ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಆಂತರಿಕ ಭದ್ರತಾ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಎಡಿಜಿಪಿ) ಭಾಸ್ಕರ್ ರಾವ್ ಸೇರಿ ಐವರು ಹಿರಿಯ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಮಾಡಿ ಮಂಗಳವಾರ ಆದೇಶ ಹೊರಡಿಸಲಾಗಿದೆ.

ಭಾಸ್ಕರ್ ರಾವ್ ಅವರನ್ನು ರೈಲ್ವೆ ಎಡಿಜಿಪಿ ಹುದ್ದೆಗೆ ವರ್ಗಾವಣೆ ಮಾಡಿದ್ದು, ಆ ಹುದ್ದೆಯಲ್ಲಿದ್ದ ಅರುಣ್ ಜೇಜಿ ಚಕ್ರವರ್ತಿ ಅವರನ್ನು ಆಂತರಿಕ ಭದ್ರತಾ ವಿಭಾಗದ ಎಡಿಜಿಪಿಯಾಗಿ ನೇಮಿಸಲಾಗಿದೆ. ಪ್ರಶಾಂತ್ ಕುಮಾರ್ ಠಾಕೂರ್ ಅವರನ್ನು ಲೋಕಾಯುಕ್ತ ಎಡಿಜಿಪಿ, ಡಾ.ಅಲಿಕಾನಾ ಎಸ್. ಮೂರ್ತಿ ಅವರನ್ನು ಪೊಲೀಸ್ ಗೃಹ ನಿರ್ಮಾಣ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಮತ್ತು ಕೆ. ರಾಮಚಂದ್ರ ರಾವ್ ಅವರನ್ನು ಬೆಂಗಳೂರು ಮಹಾನಗರ ಕಾರ್ಯಪಡೆ ಎಡಿಜಿಪಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

2ಎ ಪಟ್ಟಿಗೆ ಹೊಸ ಸೇರ್ಪಡೆಗೆ ನೇಕಾರರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಪ್ರವರ್ಗ ‘2ಎ’ ಪಟ್ಟಿಗೆ ಹೊಸದಾಗಿ ಯಾವುದೇ ಜಾತಿಗಳನ್ನು ಸೇರ್ಪಡೆ ಮಾಡಬಾರದು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ನೇಕಾರ ಸಂಘ ಮಂಗಳವಾರ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ ಸಲ್ಲಿಸಿದೆ.

‘ಪ್ರವರ್ಗ 2ಎ ಪಟ್ಟಿಯಲ್ಲಿ 102 ಜಾತಿಗಳಿವೆ. 2002ರಲ್ಲಿ ಆಯೋಗವು ಮಾಡಿರುವ ವರ್ಗೀಕರಣದಂತೆ ಈ ಪಟ್ಟಿ ಸಿದ್ಧಪಡಿಸಲಾಗಿದೆ. ಈ ಜಾತಿಯಲ್ಲಿ ಕೆಲವು ಪ್ರಬಲ ಜಾತಿಗಳೂ ಇದ್ದು, ಸಂಖ್ಯಾಬಾಹುಳ್ಯದಲ್ಲಿ ಅಲ್ಪಸಂಖ್ಯಾತರಾಗಿರುವ ಸಣ್ಣ ಸಮುದಾಯಗಳೂ ಇವೆ. 2ಎ ಪ್ರವರ್ಗಕ್ಕೆ ಲಭ್ಯವಿರುವ ಶೇ 15ರಷ್ಟು ಮೀಸಲಾತಿಯಲ್ಲಿ 102 ಜಾತಿಗಳಿಗೆ ಸರಿಯಾದ ಸೌಲಭ್ಯ ಸಿಗುತ್ತಿಲ್ಲ’ ಎಂದು ನೇಕಾರರ ಸಂಘದ ಅಧ್ಯಕ್ಷ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಮನವಿಯಲ್ಲಿ ತಿಳಿಸಿದ್ದಾರೆ.

ಈಗ ಪ್ರವರ್ಗ ‘3ಎ’ ಮತ್ತು ‘3ಬಿ’ ಪಟ್ಟಿಯಲ್ಲಿರುವ ಕೆಲವು ಜಾತಿಗಳನ್ನು ಪ್ರವರ್ಗ ‘2ಎ’ ಪಟ್ಟಿಗೆ ಸೇರಿಸಬೇಕೆಂಬ ಒತ್ತಾಯ ಕೇಳಿಬರುತ್ತಿದೆ. ಬಲಿಷ್ಠ ಸಮುದಾಯವೊಂದನ್ನು ‘2ಎ’ ಪಟ್ಟಿಗೆ ಸೇರಿಸುವ ಸಂಬಂಧ ರಾಜ್ಯ ಸರ್ಕಾರವು ಆಯೋಗದ ವರದಿಯನ್ನು ಕೇಳಿದೆ. ಪ್ರಬಲ ಸಮುದಾಯಗಳನ್ನು 2ಎ ಪಟ್ಟಿಗೆ ಸೇರಿಸಿದರೆ ಆ ವರ್ಗದ ಜನರಿಗೆ ಮಾತ್ರ ಲಾಭವಾಗುತ್ತದೆ. ಮೀಸಲಾತಿಯ ಮಾನದಂಡಗಳಲ್ಲಿ ಅಸಮತೋಲನ ಸೃಷ್ಟಿಯಾಗುತ್ತದೆ. ಆದ್ದರಿಂದ 2ಎ ಪಟ್ಟಿಯಲ್ಲಿ ಯಾವುದೇ ಜಾತಿಯನ್ನೂ ಸೇರಿಸಬಾರದು’ ಎಂದು ಒತ್ತಾಯಿಸಿದ್ದಾರೆ.

ಉದ್ಯೋಗ ವಾಣಿ

WAYANAMAC EDUCATION TRUST®
DON BOSCO INSTITUTE OF TECHNOLOGY
(Approved by AICTE, Affiliated to VTU, Belagavi, NBA & NAAC Accredited)
KUMBALAGODU, MYSORE ROAD, BANGALORE – 560074.
Ph. : 080 - 28437028 / 29 / 30. Website: www.dbit.co.in

We are looking for talented, competent, qualified faculty & professionals for the following positions:

TEACHING STAFF :

Professors, Associate & Assistant Professors in following disciplines:
- Artificial Intelligence & Machine Learning
- Computer Science & Engineering
- Electronics & Communication Engineering
- Information Science & Engineering
- Electrical & Electronics Engineering
- Civil Engineering
- Mechanical Engineering
- MBA - VTU
- Physics - Chemistry - Mathematics

NON - TEACHING STAFF
- Computer Programmer
- Foreman (EEE / Civil)
- Lab Instructors
- Asst. Librarian
- Drivers (Car &Bus)
- System Administrator
- Placement Executive
- IT Manager
- Receptionist, Tele-callers
- Warden - Boys/Girls Hostel

- The institution provides professional work environment and ample opportunities for career development.
- Eligible candidates may please forward their profile with copies of testimonials and recent passport size photo to the Secretary within 10 days of this advertisement by post/courier only.
- Alternatively, eligible candidates can also E-mail their profile with all relevant details to recruitment@dbit.co.in.
- The emoluments will be as per AICTE pay scales (6th Pay Commission) and commensurate with the qualification and experience.
- Adjunct faculty with 18 years of Industrial / Research / Teaching experience may also apply.
- Appropriate weightage will be given for candidates with Doctorate qualification.
- While forwarding the application, candidates are requested to superscribe on the envelope, the position for which the application is being made.
- The candidates should appear for interview at their cost.

Secretary

ಪಿ.ಇ.ಎಸ್ ಇಂಜಿನಿಯರಿಂಗ್ ಕಾಲೇಜು
ಮಂಡ್ಯ – 571 401, ಕರ್ನಾಟಕ
(ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಡಿಯಲ್ಲಿನ ಸ್ವಾಯತ್ತ ಸಂಸ್ಥೆ, ಕರ್ನಾಟಕ ರಾಜ್ಯ ಅನುದಾನಿತ ಸಂಸ್ಥೆ ಮತ್ತು ಎನ್.ಬಿ.ಎ.ಯ ಮಾನ್ಯತೆ ಪಡೆದಿರುತ್ತದೆ)
ಫೋನ್ ನಂ: +91 8232–220043, 238683, 238042, Fax: +91 8232–222075
ನಂ:ಪಿಇಎಸ್/ಇಎಸ್‌ಟಿ/2020–21 ದಿನಾಂಕ: 16.02.2021

ಉದ್ಯೋಗ ಪ್ರಕಟಣೆ

ಕಾಲೇಜಿನ ಈ ಕೆಳಕಂಡ ವಿಭಾಗಗಳಿಗೆ (ಅನುದಾನರಹಿತ) **ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು** ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು **ರೂ.1000/–** ಗಳ ಅರ್ಜಿ ಶುಲ್ಕವನ್ನು ನೇರವಾಗಿ ನಗದು ವಿಭಾಗದಲ್ಲಿ ಅಥವಾ **ಪ್ರಾಂಶುಪಾಲರು, ಪಿಇಎಸ್ ಇಂಜಿನಿಯರಿಂಗ್ ಕಾಲೇಜು, ಮಂಡ್ಯ** ರವರ ಹೆಸರಿನಲ್ಲಿ ಡಿ.ಡಿ ಮೂಲಕ ಪಾವತಿಸಿ, ಅರ್ಜಿ ನಮೂನೆಯನ್ನು ಪಡೆದು **ದಿನಾಂಕ: 10.03.2021 ರಂದು ಸಂಜೆ 5.00 ಗಂಟೆಯೊಳಗೆ** ಭರ್ತಿ ಮಾಡಿದ ಅರ್ಜಿಗಳನ್ನು ಸೂಕ್ತ ದಾಖಲಾತಿಗಳೊಡನೆ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ, ಖುದ್ದು ಅಥವಾ ಅಂಚೆ ಮೂಲಕ ಪ್ರಾಂಶುಪಾಲರು, ಪಿಇಎಸ್ ಇಂಜಿನಿಯರಿಂಗ್ ಕಾಲೇಜು, ಮಂಡ್ಯ–571401 ರವರಿಗೆ ತಲುಪಿಸತಕ್ಕದ್ದು.

ಲಕೋಟೆಯ ಮೇಲೆ ಹುದ್ದೆಯ ಹೆಸರು ಮತ್ತು ಸ್ಪೆಷಲೈಸೇಷನ್ ಬಗ್ಗೆ ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಕ್ರ. ಸಂ.	ವಿಭಾಗ	ಒಟ್ಟು ಹುದ್ದೆಗಳ ಸಂಖ್ಯೆ	ಸ್ಪೆಷಲೈಸೇಷನ್
1	ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್	01	ಕಂಪ್ಯೂಟರ್ ಇಂಜಿನಿಯರಿಂಗ್ / ಕಂಪ್ಯೂಟರ್ ಸೈನ್ಸ್ ಅಂಡ್ ಇಂ.
2	ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್	02	ಡಿಜಿಟಲ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ /ವಿಎಲ್‌ಎಸ್‌ಐ ಡಿಸೈನ್ ಅಂಡ್ ಎಂಬೆಡೆಡ್ ಸಿಸ್ಟಮ್
3	ಎಂ.ಬಿ.ಎ.	01	ಎಂಬಿಎ (ಫೈನಾನ್ಸ್ ಹಾಗೂ ಪಿಹೆಚ್.ಡಿ ಪದವಿ ಹೊಂದಿರಬೇಕು)
4	ಭೌತಶಾಸ್ತ್ರ	02	ಎಂ.ಎಸ್ಸಿ ಪದವಿಯನ್ನು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿ, ನೆಟ್/ಸ್ಲೆಟ್‌ನಲ್ಲಿ ತೇರ್ಗಡೆ ಹೊಂದಿರಬೇಕು. ಪಿಹೆಚ್.ಡಿ ಪದವಿ ಹೊಂದಿದವರಿಗೆ ನೆಟ್/ಸ್ಲೆಟ್‌ನಲ್ಲಿ ವಿನಾಯಿತಿ ನೀಡಲಾಗುವುದು.
5	ರಸಾಯನಶಾಸ್ತ್ರ	02	
6	ಗಣಿತಶಾಸ್ತ್ರ	02	

1) ವಿದ್ಯಾರ್ಹತೆ:– ಎ) ಬಿಇ/ಬಿ.ಟೆಕ್ & ಎಂ.ಇ/ಎಂ.ಟೆಕ್ /ಎಂಬಿಎ ಪದವಿಗಳಲ್ಲಿ ಸಂಬಂಧಿಸಿದ ವಿಷಯಗಳಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರಬೇಕು. ಹಾಗೂ ಪಿಹೆಚ್.ಡಿ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
2) ವೇತನ : ಎಐಸಿಟಿಇ ನಿಯಮಾವಳಿ ಪ್ರಕಾರ ಹಾಗೂ ಪಿಇಟಿ ವೇತನ ಶ್ರೇಣಿ.

ಸಾಮಾನ್ಯ ನಿಬಂಧನೆಗಳು:
1) ಕೊನೆ ದಿನಾಂಕ ಮುಗಿದ ನಂತರ ಬಂದ ಅರ್ಜಿಗಳನ್ನು ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
2) ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
3) ನೇಮಕಾತಿಗೆ ಆಯ್ಕೆಗೊಂಡ ಅಭ್ಯರ್ಥಿಯು ಕೇಂದ್ರ ಸ್ಥಾನದಲ್ಲಿಯೇ ವಾಸವಾಗಿರಬೇಕು.
4) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.
5) ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ಮುಂದೆ ತಿಳಿಸಲಾಗುವುದು.
6) ಹುದ್ದೆಗಳನ್ನು ಭರ್ತಿ ಮಾಡುವ ಹಕ್ಕನ್ನು ಸಂಸ್ಥೆಯ ಆಡಳಿತ ಮಂಡಳಿಯ ವಿವೇಚನೆಗೆ ಒಳಪಟ್ಟಿರುತ್ತದೆ.

ಸಹಿ/– (ಕೆ.ಎಸ್. ವಿಜಯ್ ಆನಂದ್) ಅಧ್ಯಕ್ಷರು, ಆಡಳಿತ ನಿರ್ವಹಣಾ ಮಂಡಳಿ
ಸಹಿ/– (ಡಾ: ಹೆಚ್.ವಿ. ರವೀಂದ್ರ) ಪ್ರಾಂಶುಪಾಲರು

ಎಚ್‌ಡಿಎಫ್‌ಸಿ ಹೋಮ್ ಲೋನ್ಸ್
@6.80%*
ರಿಂದ ಪ್ರಾರಂಭ (ವಾರ್ಷಿಕ)
ಎಲ್ಲಿಯೂ. ಯಾವಾಗಲೂ.
ಪಿಎಮ್‌ಎವೈ - ಸಿಎಲ್‌ಎಸ್‌ಎಸ್ ಅಡಿಯಲ್ಲಿ ₹2.67 ಲಕ್ಷದಷ್ಟು** ಉಳಿತಾಯ ಮಾಡಿ
ಆನ್‌ಲೈನ್ ಅಪ್ಲೈ ಮಾಡಿ hdfc.com ನಲ್ಲಿ
ನಮಗೆ ಈ ನಂಬರ್‌ನಲ್ಲಿ ಮಿಸ್ಡ್ ಕಾಲ್ ಕೊಡಿ 09289 120 120
HDFC HOME LOANS apni jagah banao
*ಮೇಲ್ಕಂಡ ಬಡ್ಡಿ ದರವು ಸಾಲದ ಅರ್ಜಿ ಸಲ್ಲಿಸಿರುವ ಮತ್ತು 730 ಹಾಗೂ ಅಧಿಕ ಕ್ರೆಡಿಟ್ ಸ್ಕೋರ್ ಹೊಂದಿರುವ ಮತ್ತು ದಿನಾಂಕ 31.03.2021 ರೊಳಗಾಗಿ (ಆಂಶಿಕ/ಸಂಪೂರ್ಣ) ಸಾಲದ ಬಟವಾಡೆ ಪಡೆಯಲಿರುವವರಿಗೆ ಲಭ್ಯವಿರುತ್ತದೆ. **ಸಬ್ಸಿಡಿಯು ಭಾರತ ಸರಕಾರದ ಮೂಲಕ ನಿಗದಿಪಡಿಸಿದ ಸಿಎಲ್‌ಎಸ್‌ಎಸ್‌ನ ವಿವರವಾದ ಷರತ್ತು ಮತ್ತು ನಿಬಂಧನೆಗಳ ಅನುಸಾರ. ಎಲ್ಲ ಸಾಲಗಳ ನೀಡುವಿಕೆ ಕೇವಲ ಎಚ್‌ಡಿಎಫ್‌ಸಿ ಲಿಮಿಟೆಡ್‌ನ ವಿವೇಚನೆಗೆ ಒಳಪಟ್ಟಂತೆ. ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ತಿಳಿಯಲು ಭೇಟಿ ನೀಡಿ : www.hdfc.com. CIN: L70100MH1977PLC019916. NETWORK HDFC2815-20 Kan

ಉನ್ನತ ಜನರು, ಉನ್ನತ ಅಭಿರುಚಿ®
ಸೂತ್ರೀಕರಣ ನಿರ್ಮಿತಿ : ರಸಿಕ್‌ಲಾಲ್ ಮಾಣಿಕ್‌ಚಂದ್ ಧಾರಿವಾಲ್
ಶಾಸನೀಯ ಎಚ್ಚರಿಕೆ : ಪಾನ್ ಮಸಾಲಾ ಸೇವನೆ ಆರೋಗ್ಯಕ್ಕೆ ಹಾನಿಕರ. ಅಪ್ರಾಪ್ತ ವಯಸ್ಕರಿಗೆ ಪ್ರತಿಬಂಧಿತ
NO TOBACCO, NO NICOTINE
Tiger/KAN

ಸೈಕಲ್ ಜಾಥಾಕ್ಕೆ ಶಾಸಕ ಸತೀಶ್ ರೆಡ್ಡಿ ಚಾಲನೆ ನೀಡಿದರು. ಸಾರಿಗೆ ಆಯುಕ್ತ ಎನ್.ಶಿವಕುಮಾರ್, ಜಂಟಿ ಸಾರಿಗೆ ಆಯುಕ್ತ ಕೆ.ಟಿ.ಹಾಲಸ್ವಾಮಿ ಇದ್ದಾರೆ

ರಸ್ತೆ ಸುರಕ್ಷತೆಗಾಗಿ 'ಸೈಕಲ್ ಜಾಥಾ'

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸಲು ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಹುಳಿಮಾವುವರೆಗೆ ಮಂಗಳವಾರ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಸುತ್ತಮುತ್ತಲ ಶಾಲೆಗಳ ನೂರಾರು ವಿದ್ಯಾರ್ಥಿಗಳು ರಸ್ತೆ ಸುರಕ್ಷತೆ ಕುರಿತ ಭಿತ್ತಿಪತ್ರಗಳನ್ನು ಹಿಡಿದು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಜನರಲ್ಲಿ ಜಾಗೃತಿ ಮೂಡಿಸಿದರು.

ಇದಕ್ಕೂ ಮೊದಲು ಪ್ರಾದೇಶಿಕ ಸಾರಿಗೆ ಕಚೇರಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರಿಗೆ ಆಯುಕ್ತ ಎನ್.ಶಿವಕುಮಾರ್. 'ದೇಶದಲ್ಲಿ ರಸ್ತೆ ಅಪಘಾತಗಳಲ್ಲಿ ದಿನಕ್ಕೆ 7 ಜನರಂತೆ ಸಾಯುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ರಸ್ತೆ ಅಪಘಾತಗಳು ಹೆಚ್ಚುತ್ತಿವೆ. ಸಂಚಾರ ನಿಯಮಗಳ ಉಲ್ಲಂಘನೆಯೇ ಇದಕ್ಕೆ ಕಾರಣ' ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಸತೀಶ್ ರೆಡ್ಡಿ 'ರಸ್ತೆ ಅಪಘಾತಗಳಿಂದಾಗುವ ಸಾವು ನೋವು ಕುಟುಂಬ ಆರ್ಥಿಕ ಪರಿಸ್ಥಿತಿ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಅಜಾಗರೂಕತೆ ಸಂಚಾರ ಇತರರ ಪ್ರಾಣಕ್ಕೂ ಕುತ್ತು ತರುತ್ತದೆ. ಈ ಎಚ್ಚರ ಎಲ್ಲರಲ್ಲೂ ಇರಬೇಕು. ಈ ಕಾರಣದಿಂದ ಜಾಗೃತಿ ಅಭಿಯಾನ ಇನ್ನಷ್ಟು ಪರಿಣಾಮಕಾರಿಯಾಗಿ ಆಗಬೇಕು' ಎಂದರು.

ಮುಖ್ಯಾಂಶಗಳು

- ಭಿತ್ತಿಪತ್ರ ಹಿಡಿದು ಜಾಗೃತಿ ಮೂಡಿಸಿದ ಶಾಲಾ ವಿದ್ಯಾರ್ಥಿಗಳು
- ಪ್ರಮುಖ ರಸ್ತೆಗಳಲ್ಲಿ ಸೈಕಲ್ ಜಾಥಾ

ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಭುಸ್ವಾಮಿ 'ಜಗತ್ತಿನ ಒಟ್ಟು ಅಪಘಾತಗಳಲ್ಲಿ ಭಾರತದ ಪಾಲು ಶೇಕಡ 11 ರಷ್ಟಿದೆ. ಇದರಿಂದ ದೇಶದ ಆರ್ಥಿಕತೆ ಶೇಕಡ 3ರಷ್ಟು ಕುಂಠಿತವಾಗಿದೆ. ರಸ್ತೆ ಸುರಕ್ಷತೆ ಎಂಬುದು ಸಮುದಾಯದ ಜವಾಬ್ದಾರಿ. ಜಾಗೃತ ಸಮಾಜದಿಂದ ರಸ್ತೆ ಸುರಕ್ಷತೆಯನ್ನು ಕಾಪಾಡಲು ಮಾತ್ರವೇ ಸಾಧ್ಯ' ಎಂದರು.

ಹೆಚ್ಚುವರಿ ಸಾರಿಗೆ ಆಯುಕ್ತ ನರೇಂದ್ರ ಹೋಳ್ಕರ್, ಜಂಟಿ ಆಯುಕ್ತ ಕೆ.ಟಿ.ಹಾಲಸ್ವಾಮಿ, ಬಿಜೆಪಿ ಮುಖಂಡ ಪುರುಷೋತ್ತಮ್ ಇದ್ದರು. ಮಾಸಾಚರಣೆ ಅಂಗವಾಗಿ ವ್ಯಂಗ್ಯ ಚಿತ್ರ ಪ್ರದರ್ಶನ, ವಾಕಥಾನ್, ಆಟೋ ರಿಕ್ಷಾ ಚಾಲಕರಿಗೆ ಪ್ರಥಮ ಚಿಕಿತ್ಸೆ ಪೆಟ್ಟಿಗೆ ನೀಡುವುದು, ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಚಿವ ಉಮೇಶ ಕತ್ತಿ ಹೇಳಿಕೆಗೆ ವಿರೋಧ

ಬೆಂಗಳೂರು: ಟಿವಿ, ಬೈಕ್, ಫ್ರಿಡ್ಜ್ ಹೊಂದಿರುವ ಕುಟುಂಬಗಳ ಬಿಪಿಎಲ್ ಪಡಿತರ ಚೀಟಿ ರದ್ದು ಮಾಡಲಾಗುವುದು ಎಂಬ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಉಮೇಶ ಕತ್ತಿ ಅವರ ಹೇಳಿಕೆಗೆ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ವಿರೋಧ ವ್ಯಕ್ತಪಡಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜತೆ ಮಂಗಳವಾರ ಮಾತನಾಡಿದ ಅವರು, 'ಬಿಜೆಪಿ ಸರ್ಕಾರ ಬಡವರ ಪರ ಇದೆ. ಸಚಿವರು ದ್ವಂದ್ವ ಹೇಳಿಕೆಗಳನ್ನು ನೀಡಬಾರದು. ಅದು ಸಚಿವ ಕತ್ತಿಯವರ ಹೇಳಿಕೆಯೋ ಅಥವಾ ಯಾರೋ ಐಎಎಸ್ ಅಧಿಕಾರಿ ಹೇಳಿದ್ದನ್ನೇ ಅವರು ಹೇಳಿದ್ದಾರೋ ಗೊತ್ತಿಲ್ಲ' ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED LECTURERS in Physics, Maths, Biology, Computer, History, English and Commerce for Vidyavana PU College, Tirumalashettyhalli, White field, Bangalore. Contact: 9663389388, freshers also can apply

Bishop Cotton Girls' School
(Managed by CSI Karnataka Central Diocese)
BANGALORE
REQUIRES

SENIOR SCHOOL - ICSE & ISC

1. ENGLISH - 1 Teacher (ISC) – 1, Qualifications required : M.A. B.Ed. - 5 years experience at the Senior School level with English Literature as the main subject in the ICSE/ISC stream.
2. FINE ARTS - 1 Teacher, Qualifications required: M.F.A B.Ed. with 5 years experience at the Senior School level in the ICSE/ISC stream.
3. CHEMISTRY - 2 Teachers (ICSE – 1, ISC - 1), Qualifications required: M.Sc. B.Ed (Chemistry) with 5-10 years experience at the ICSE/ISC level.
4. MASS MEDIA & COMMUNICATION - 1 Teacher (ISC), Qualifications required : M.A. (Mass Media & Communications) B.Ed + 5 years experience in ISC stream.
5. PHYSICAL EDUCATION - 1 Teacher (ICSE), Qualifications required : M.P. Ed. With 5 years experience at the ICSE level.
6. PHYSICS - 1 Teacher (ICSE), Qualifications required : M.Sc. (Physics) B.Ed + 5 years experience at the ICSE level
7. MATHEMATICS - 1 Teacher (ICSE), Qualifications required: B.Sc. / MS.c. (Mathematics) B.Ed with 5 years experience at the ICSE level.
8. GEOGRAPHY - 1 Teacher (ICSE), Qualifications required : M.A. (Geography) B.Ed + 5 years experience at the ICSE level

MIDDLE SCHOOL

1. MATH/PHYSICS - 1 Teacher, Qualifications required : B.Sc (Mathematics/Physics) B.Ed. with 5 years experience.
2. ENGLISH – 1 Teacher, Qualifications required : B..A. / M.A. B.Ed with 5 years experience
3. TAMIL - 1 Teacher, Qualifications required : B.A. /M.A. (Tamil) B.Ed with 5 years experience
4. KANNADA - 1 Teacher, Qualifications required : B.A./M.A. (Kannada) B.Ed. with 5 years experience

JUNIOR SCHOOL

1. KANNADA – 2 Teachers, Qualifications required: B.A. /M.A. B.Ed - 5 years experience in the Junior School with Kannada as the main subject.
2. JUNIOR SCHOOL - 1 Teacher, Qualifications required : B.A. /B.Sc. B.Ed with 5 years experience in the junior school

KINDERGARTEN DEPARTMENT

1. KINDERGARTEN - 1 Teacher, Qualification : Graduation + N.T.T. with minimum 5 years experience
2. COMPUTERS - 1 Teacher, Qualification required : BCA/B.Sc. Computer Science, B.Ed + 5 years experience
3. ART & CRAFT – 1 Teacher, Qualification required : Diploma in Art & Craft + 2 years experience

ALL DEGREES SHOULD BE ACQUIRED THROUGH REGULAR STREAM ONLY, NOT CORRESPONDENCE/DISTANCE EDUCATION

LAST DATE FOR SUBMISSION OF APPLICATIONS IS 25TH February, 2021 before 3.00 p.m.

Please mention the post you are applying for on the envelope and send your application to:
The Principal, Bishop Cotton Girls' School
St. Mark's Road, Bangalore 560 001.

ROUNAQH

ST. MARY'S CONVENT
St.Mary's Public School & Little Daffodils Kindergarten
1, Dasarahalli, Off Tumkur Road, Bengaluru - 560057
REQUIRES

- Trained & Experienced NTT, Montessori, Graduates/ Post Graduates of Science and Arts with B.Ed/M.Ed for all the subjects to teach in State / ICSE Syllabus.
- Experienced Librarian, Computer Faculty, PE, Music, Dance, Art & Craft, Science Lab Technician and Band teachers.
- Front office Executives with effective communication skills (English,Kannada & Hindi) and Accountant with Tally knowledge.
- Housekeeping staff, Drivers & Attenders

Lady candidates with good command over English and a progressive outlook towards education preferred. Van facility is available within the radius of 8 kms;Mail your resume to sln.smps@gmail.com on or before 28.02.2021

CONTACT : 080-28392711 / 9611444664

HKBK GROUP OF INSTITUTIONS
Opp. Manyata Tech. Park, Nagawara, Bengaluru – 560045

ARE YOU AN EDUCATOR OR FROM CORPORATE? | Do you have passion for education, enjoy mentoring and empowering young minds, willing to take challenges, have qualifications?

WE HAVE A CAREER FOR YOU TO LEAD AND INSPIRE!

HKBK College of Engineering

DEAN - RESEARCH, DEPARTMENT HEAD, PROFESSORS, ASSOCIATE PROFESSORS, ASSISTANT PROFESSORS, INSTRUCTORS/PROGRAMMERS
For the following branches: Civil, Mechanical, Electronics and Communication, Information Science, Computer Science, Physics, Chemistry, Math, Management /Humanities (English)

FACULTY FOR MANAGEMENT
Marketing / HR / Finance

Training & Placement Department

TRAINING & PLACEMENT HEAD
Experience in Engineering Placements for 10+ years,

PLACEMENT OFFICER
5+ years Experience in Engineering Placements,

TRAINING OFFICER
6+ years of experience in training engineering students for placements - soft skills, technical training & company specific training.

Qualification, experience, age limit as per VTU/AICTE norm. Candidates looking for Adjunct /visiting faculty also can apply. Interested candidates please send your resume by email to careers1@hkbk.edu.in

WANTED ENGLISH & Mathematic Teachers for S.A.I Oriental High School, Ilyas Nagar, Kumaraswamy Layout, Bangalore. Contact: 9590018926/ 9036715767

WANTED TRAINED Lady TEACHERS to teach English, Sanskrit, Maths and Science in English medium High-School. Walk-in Interview on 18/2/2021 between 11.30AM and 1.30PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70 Phone: 080-26710170

ST JOSEPH'S Boys' High School, Museum Road, Bengaluru requires Teachers for the ISC: Business Studies & Commerce (PG with B Ed). Primary &High School Section: All Subjects. PE teachers may also apply. Please send an email with your CV & recent photograph mentioning the post applied for in the subject line and also submit a hard copy to the school office at the earliest. 27, Museum Road, Bengaluru 560025 Phone: 8884200549 Email: recruitmentsjbhs@gmail.com / Website: www.sjbhs.edu.in

REQUIRES LADY Teachers for English-(M.A BEd),Chemistry and Biology-(BSc.BEd) Physics-(MSc,BEd), Chemistry (MSc,BEd), Art and craft,,Social Studies (BA.BEd), Computer MCA/MSc Computers, Substitution Teacher BA/B.Com Graduates with good English skills,Walk-in on 18-2-2021 and 19-2-2021 @10.AM Secretary, Srikrishna International School, ITI-Layout,BSK 3rd-Stage, Bangalore-85. Phone:65365824

SRI AHAM_AATHMA VIDYALAYA-[ICSE], Gruhalakshmi layout, Nelagadaranahalli, Near Nagasandra metro-station, Dasarahalli, Bangalore-73 Invites applications for the following posts with good English vocabulary for the academic year 2020-21 onwards (1).Computer science- BCA/MCA/ GEOGRAPHY (2).Teachers to teach all the subjects for Nursery/ Primary/ Middle/ High-school. (3).Office Staff/ Clerk (4).Lab-Assistant/ Librarian. Offers Attractive Salary. 'Transportation provided". Call: 9880200172, 9663778869 Email: sriaavapplic@gmail.com

WANTED HIGH SCHOOL ENGLISH AND SOCIAL STUDIES TEACHERS. BA/MA B.Ed., Walk-in Interview Contact 080-41722256

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Accounts & Finance

REQUIRED FEMALE OFFICE ASSISTANT having knowledge of Computer & Accounts package must know Hindi,English walk-in-Interview at PERFECT ENGINEERS, Lingadheeranahalli Adjacent D-Group Society, Blore Ph-9036171197. Mail-uktindia@gmail.com

WANTED FOR Reputed Company, Graduates Age-30-70, Bangalore only, Earn: 30,000- 50,000. Contact: 9008305194/ 9880441530.

FRESHERS/EXPERIENCED BE Civil/Diploma Graduates for PROPERTY VALUATION in Koramangala-Chandapura-Anekal-Whitefield-Sarjapur. 7259810579 nhaprasad64@gmail.com

Cook

LADY COOK pure vegetarian required for Bangalore family. srininag82@gmail.com. Call 8618890208

WANTED STAY in Cook Female in and around Electronic City, Good Salary Contact: 9360381638, 9740783835

Engg/ Production Technical

REQUIRED HR Admin, Manager, Accounts, BE, Diploma, B-Tech-M-Tech, MSc, Mechanical, Electronics, Electrical, Computer Engineers -7676760299

General

PRODUCTION SUPERVISOR- Diploma (Mech), 5-10 years experience (2) Experienced OFFICE ASSISTANT: B.Com. 'VINUMAC' 205A, Peenya 3rd phase, Bangalore-58. Phone: 080-28391959 admin@vinumac.com

OFFICE EXECUTIVE with-minimum 3years exp.Salary Rs.30,000/-, Operators and-Supervisors for-a manufacturing company located-at Bommanahalli, Hosur-Road, Bangalore-68. Send-Resume: uppbangalore@gmail.com/ Contact: 9449817703.

Hospital & Medical Jobs

HOSMAT HOSPITAL, is Recruiting the following Staff Male and Female at HOSMAT Second Unit at Ring Road, Hennur Junction, Third Unit of HOSMAT is opening shortly at Sadashivanagar, #18, Bellary Main Road. 1. Administrator/ VP/ COO 2. Medical Director 3. Marketing Head with Hospital Experience only 4. Finance and Accounts Head CA/ICWA 5. Duty Doctors (ICU) 6. Casualty Medical Officer/ Emergency Medical Officer 7. Corporate Marketing Executives 8.Branding and Digital Marketing Executives 9. International Marketing Manager 10. Public Relations Officers 11. Accounts Executives 12. ICU Nurses 13. Bio Medical Engineers 14. Head Maintenance and Manager 15. Pharmacists 16. OT Scrub Nurses 17. Nurses for Wards and Home care 18. Front Office– Executives 19. OT Staffs & Assistants 20. Anaesthesia Technicians 21. Billing and collection Executives 22. Plaster Technicians 23. Echo Technicians 24. EEG Technicians 25. Dialysis Technicians 26. OT Technicians 27.CSSD Technicians 28. A/ c Technicians 29.Electricians 30. Plumbers 31. House Keeping staffs. Call : 080 41139762, 9108450312 recruitment@hosmathospitals.com /coordinatorhosmat@gmail.com

Manager

REPUTED BANGALORE Based Logistics Company requires experienced and qualified Fleet Manager Contact: 9972055002

Marketing & Sales

WizWindows
SALES EXECUTIVES REQUIRED
For a UPVC windows fabricator to market their services to builders, contractors & architects.
Candidates who are experienced in the same field preferred
Mail your resumes to reachus@wizwindows.com

ESQUIRE SURGICALS requires Fresh / Experienced Candidates for Surgical Product Sales & Marketing. HQR- Bengaluru. E-Mail Resume to bangesq@gmail.com

Multiple Vacancy

OFFICE EXECUTIVE, Administration and Properties. Young male, B.Com fresh upto 3years experience, Computer proficiency, English & Kannada knowledge, Requiring driving 2W, 4W, small office near Forum mall Koramangala. Resume: mahesh24239@yahoo.com / 9343795466/ 9342816060.

REQUIREDEXPERIENCED MANAGER, SUPERVISOR, FIELD EXECUTIVES (DRA_QUALIFIED) & TELECALLER (Males_&_Females) For MNC Banking Collections.Contact:- 9902952498, 7019700755, 080-42123018.

V&V GROUP-IPM, Bannerghatta Road Wanted immediately BUSINESS MANAGERS, BUSINESS EXECUTIVES, Lady OFFICE EXECUTIVES, TELE-CALLERS. Good Salary. Whatsapp interview everyday 10-11am: 99455-22220

Part-Time Jobs

EXCELLENT OPPORTUNITY Work from Home for-Retired, Self Employed, Housewives. Fixed Salary, Unlimited Incentives. Contact: 9731888752

Receptionist/ Secretary

WANTED-FRESH GRADUATES as PERSONAL SECRETARY (male); age 20-40years, computer Knowledge and driving essential. 9880228272, 9886692694.

PUBLIC NOTICE

PUBLIC NOTICE

This Public Notice is issued in the course of verification of title of the property bearing **Villa No. 339** forming part of **Adarsh Palm Retreat**, owned by **Mr. Herald Ignatius Poulose Manjooran** and **Mrs. Blessy Ignatius Manjooran**, both presently residing at 155, Braymore Ct. Inverness, IL 60010, USA, who have entered into an agreement to sell through GPA for a proposed sale transaction with our clients namely **Mr. Ramesh Sathyanarayana** and **Mrs. Suchitra Ramesh**.

SCHEDULE PROPERTY:
Residential building bearing **Villa No. 339**, of **Adarsh Palm Retreat**, situated in **Sy No. 17/3**, Devarabeesanahalli village, Varthur Hobli, Bangalore East Taluk (formerly Bangalore South Taluk), bounded on:
East by : Residential buildings bearing Villa Nos. 344 & 345;
West by : Road / Access;
North by : Residential buildings bearing Villa No. 340;
South by: Residential buildings bearing Villa No. 338;

General Public are hereby informed that any person claiming to have any manner of right, title and interest over the said schedule property are hereby called upon to communicate their objections/claim along with authenticated documents for such claim within 15 days from the date of notice/today to the address mentioned herein below:
Bengaluru
17.02.2021
Mr. G V CHANDRASHEKAR & Ms. APEKSHA D
Advocates
No. 16, 2nd Floor
Sarpabhushana Mutt Building
Tank Bund Road
Kempegowda Circle
Bengaluru-560 009
Mob: 93124 39932 / 99166 02087
Email: gvcapkadvocates@gmail.com

ಸಾರ್ವಜನಿಕ ಸೂಚನೆ

ನಮ್ಮ ಕ್ಲೈಂಟ್ ಶ್ರೀ ಬಿಯ್ಯನ್ ವೇರಿಂಗ್ s/o ಟ್ರೆವರ್ ವೇರಿಂಗ್, ವಸತಿ ಸೈಟ್ ನಂ. 104 ಆಸ್ತಿ ಸಂಖ್ಯೆ. 120 ಹೊರಾಮಾವು ಅಗರ ಗ್ರಾಮದಲ್ಲಿದೆ, ಪ್ರಸ್ತುತ ಮಾಲೀಕರಾದ ಶ್ರೀಮತಿ. ಇ.ನಂದಿತಾ w/o ಶ್ರೀ ವಿನಯ್ ವೆಂಕಟೇಶ್‌ಇಲ್ಲಿ ವೇಳಾಪಟ್ಟಿಯಲ್ಲಿ ಹೆಚ್ಚು ಸಂಪೂರ್ಣವಾಗಿ ವಿವರಿಸಲಾಗಿದೆ, ವೇಳಾಪಟ್ಟಿ ಆಸ್ತಿ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಸ್ವಭಾವದ ಯಾವುದೇ ಹಕ್ಕುಗಳು ಅಥವಾ ಆಕ್ಷೇಪಣೆಗಳನ್ನು ಹೊಂದಿರುವ ಯಾವುದೇ ವ್ಯಕ್ತಿ, ಫೆಬ್ರವರಿ 23, 2021 ರೊಳಗೆ ಸಹಿ ಮಾಡದವರಿಗೆ ಬರೆಯಬಹುದು, ವೇಳಾಪಟ್ಟಿ ಆಸ್ತಿಗೆ ಸಂಬಂಧಿಸಿದಂತೆ ಅವರು ತಮ್ಮ ಹಕ್ಕು ಸಾಧಿಸುತ್ತಿದ್ದಾರೆ ಎಂಬ ಆಧಾರದ ಮೇಲೆ ಸಾಕ್ಷ್ಯಚಿತ್ರ ಸಾಕ್ಷ್ಯಗಳನ್ನು ಒದಗಿಸಬಹುದು. ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ರೀತಿಯಲ್ಲಿ, ಇದನ್ನು ವಿಫಲವಾದರೆ ನಮ್ಮ ಕ್ಲೈಂಟ್ 2021 ರ ಫೆಬ್ರವರಿ 24 ರಂದು ವೇಳಾಪಟ್ಟಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಸ್ವಭಾವದ ಹಕ್ಕುಗಳಿಲ್ಲ ಎಂಬ ಆಧಾರದ ಮೇಲೆ ಅವರ ಹೆಸರಿನಲ್ಲಿ ನೋಂದಾಯಿತ ಮಾರಾಟ ಪತ್ರವನ್ನು ಪಡೆಯಲು ಮುಂದಾಗುತ್ತಾರೆ.

ಶೆಡ್ಯೂಲ್ ಪ್ರಾಪರ್ಟಿ
ಸ್ಥಿರ ಆಸ್ತಿ ಹೊಂದಿರುವ ಸೈಟ್ನ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಸಂಖ್ಯೆ. 104, ಆಸ್ತಿ ಸಂಖ್ಯೆ. 120, ಕಥಾ ನಂ 82. ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರಂ ಹೊಬ್ಲಿಯ ಹೊರಾಮಾವು ಅಗರಾ ಗ್ರಾಮದಲ್ಲಿ ನೆಲೆಗೊಂಡಿರುವ , ಈಗ ಬಿಬಿಎಂಪಿ ಮಿತಿಯಲ್ಲಿದೆ, ಬೆಂಗಳೂರು ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 60 ಅಡಿ, ಉತ್ತರದಿಂದ ದಕ್ಷಿಣಕ್ಕೆ: 40 ಅಡಿ, ಎಲ್ಲಾ 2400 ಚದರ ಅಡಿ ಅಳತೆಯಲ್ಲಿ. ಮತ್ತು ಬಂಧಿಸಲಾಗಿದೆ: ಪೂರ್ವದಿಂದ: ರಸ್ತೆ, ಪಶ್ಚಿಮಕ್ಕೆ ಇವರಿಂದ: ಸೈಟ್ ಸಂಖ್ಯೆ. 101, ಉತ್ತರದಿಂದ: ಸೈಟ್ ಸಂಖ್ಯೆ. 105 ಮತ್ತು ದಕ್ಷಿಣದಲ್ಲಿ: ಸೈಟ್ ಸಂಖ್ಯೆ. 103.

ಸಂಖ್ಯೆ 205, 2 ನೇ ಕ್ರಾಸ್, ವಿಭೂತಿಪುರ, ಬೆಂಗಳೂರು - 560037
ಜಿ ಎಸ್ ಸತೀಶ್ : 95356 55819
ಶ್ರೀ ಬಿಯ್ಯನ್ ವೇರಿಂಗ್ : 98453 94049
ಸ್ಥಳ : ಬೆಂಗಳೂರು –ದಿನಾಂಕ : 16.02.2021

PUBLIC NOTICE

This is to inform the General Public that Mr.S.Narayana, S/o Late Shanmugam, being Managing Director of M/s.THIRU MARGADARSHI CONSTRUCTION PRIVATE LIMITED, has lost / misplaced the below referred Original Sale Deed dated 29.06.1998, registered as Document No.2475/1998-99, Property bearing Site No.9/2/B and 9/3/C, House List Khatha No.40/19/5, situated at Kothanur Village, K.R.Puram Hobli, Bangalore South Taluk and a police complaint is filed before Pulkeshinagar Police Station S.No. 954806 dated.15.02.21 to that effect.

Finder may return the below referred Original Sale Deed, Possession Certificate & Mortgage Deed to the undersigned.
(i) Sale Deed dated 29.06.1998, Document No.2475/1998-98.

If any person/institution has any claim or interest of any nature pertaining to aforesaid property and Sale Deed, the said claims along-with supporting documents shall be filed with undersigned within 07 days from the date of publication of this Notice at the address mentioned below. Any claims raised thereafter shall not be entertained or binding.

S.B. ABDUR RAHMAN
Advocate,
2nd Floor, Modi Masjid,
Chinnaswamy Mudaliar Road,
Tasker Town, Bangalore-560051.
Phone No: 9845083304

RENTAL PROPERTIES

Accommodation Available

Commercial

2517 SQFT in First Floor,Commercial Space available for Rent at Empire Infantry, Infantry Road, Bangalore. Please Contact: 7598087539

REAL ESTATE SELLING

Commerical

HSR Layout

Site For Sale 2400 Sqft HSR 2nd ,24th Main Sector, Commercial, 9448450544

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 8618691434, 8073277210

Jalahalli

2.5 Bedroom Apartment In Commanders Glory Abbigere Singapura 40 Lakhs Negotiable Contact 9243438508

Kothanur

FOR SALE KMT APARTMENT Total 14 Flats from Hennur Road BTS Depot 7 kms to Ring Road near K.Narayanpura Site Measurement 35x90 each flat 900 sqft, Lift Facility with Parking and Borewell 2 BHK Total 14 Flats Rate 3,40,00,000/- Katha Panchayat Katha Office Kammanahalli, Kullappa Circle. Contact No 9341242570.

M G Road And Around

SALE 3BHK at NITESH WIMBLEDON PARK. Race Course Road 2815sqft Servant Quarters 2Carpark. 9845291967 9900743700

General

Multiple Locations

PROPERTY DOCUMENTATION Services, DC Conversion, Phodi,Khata,NOC'S, Approvals,Land Survey, any Pending Work. Call: 9916310226, Verna Developers, MG Road, Bangalore.

House

Vijayanagar

SALE 40X60SITE With HOUSE 32 Square Building Ground, First, Vijayanagar Near Metro Contact: Owner: 9845716884

Sites

Hosur Road

APPROX. ONE Acre Industrial Land for Sale. Power, Water available. Papers upto date. Ideal for Pharma as well. Brokers Excuse. Contact: 9620938350/ 9342825263.

Kumaraswamy Layout

BDA 30*40 Intermediate 2nd Stage, Near 15F/G Bus Stop, ISKCON South, Genuine Buyers Call 9972095359 Brokers Excuse

EDUCATIONAL

Admission

DIRECT FINAL Year: B.Ed/ LL.B/ B.Tech/M.Tech/ Diploma/MBA/BBA/BCA/ B.Com. Govt, UGC Recognised, Join immediately. Asha Institute: Bangalore. 9448460103/ 7093438248

BUSINESS

Business to Business

Business

KOLKATA BASED IT Startup Firm Is Looking for an Investor with 5 Lakh Debt investment. Annual ROI @24%. Interested Person May Contact at 7872221837

Finance

NRI'S INVESTMENT AND FINANCE AVAILABLE ON LOW INTEREST AGAINST PROPERTIES,LAND & BUILDINGS, SITES, FLATS ALSO COMPANIES, BUSINESSES CALL:7411265189

Business Offers

Distributors

REQUIRED DISTRIBUTOR'S for 20 liter Packged drinking water in around Bangalore City Brand name Alpha Aqua Soft-Aqua ISI certified company minimum 2-3 lakhs 7619405978

General

INVESTMENT PARTNER/S Required for an Industrial Estate Development Project near Bangalore around 120 Acres. ROI 100% in 2-3 years. Call or SMS to call back: 9606969969

OTHERS

For Sale

EQUIPMENT FOR SALE
ELECTRICAL SUBSTATION EQUIPMENT containing 1000 KVA Transformer.
(1) 11 KW to 400 volts and accessories.
(2) 500 KVA Caterpillar Diesel generating set Model 3412.
(3) 500 KVA DG Control panel 1000A 4p MDO ACB.
The equipment was installed on November 2007and was in use upto 2012-13. All equipments are in good condition.
People interested can inspect the equipment and send quotations to the following email Id:
channappads@gmail.com
or Contact:
7349 33 9152

PERSONAL

Change of Name

I, RAMANATHAN NARASHIMA MURTHY S/O LATE ANANTHASASTRY NARASIMHAMURHTY resident at #147, 5th Cross, 6th Block, BSK III Stage, 3rd Phase, Bangalore-560085, have changed my name to RAMANATH NARASHIMA MURTHY vide affidavit Dated 15.02.2021 sworn before notary Prakash.C reg.no LAW 187LCL2016 Bangalore

I, SUSEEL KUMAR. P., Residing at Bangalore-57 have changed my name as P.SUSHEEL KUMAR, vide affidavit dated 16/2/2021 beforeNotary P.C.Ramaiah, Bangalore

KUSUM W/O. JC670368X, SUB/CLK, Upendra Kumar, Village: Pure Jarbandhan Dadra Musafirkhana Amethi, UP, name KUSUM to KUSUM MISHRA, notary K.V. Mani, Bangalore.

KAJAL W/O. 14833398X, SEP, Bhore Ravindra Akaram, Vill/Post: Shetphale Atpadi Sangli, Maharashtra, my name KAJAL to KAJAL RAVINDRA BHORE notary Harisha. G, Bangalore.

14833398X, SEP, Bhore Ravindra Akaram, 1ATC, son name service record RITHVEK instead of RITHVEK RAVINDRA BHORE notary Harisha. G, Bangalore.

14833398X, SEP, Bhore Ravindra Akaram, 1ATC, mother name service record LAXUMI instead of LAXMI AKARAM BHORE notary Harisha. G, Bangalore.

I, JULIEN Peter W/o Peter Paul aged about 47 Years, R/a No 14, Seeliammal Lane, ISRO, Old Airport Road, Murugeshpalya, Bangalore 560017 declare that in my Son's D. Derek Peter's ICSE 10th Marks Card my husband's name is changed as D. Peter Paul for all document purpose vide affidavit dated 06.02.2021 before XXIV Addl. Chief Metropolitan Magistrate,Bangalore.

I, VIVEK V, R/ at No. 765 Perody Residency, Flat No G4, 3rd-A Cross, 10th Main, Vijaya Bank Colony, Bannerghatta Road, Bangalore-560076, have changed my name to VIVEK VEERAMANI for all purposes vide affidavit dated:12/2/2021 before Notary Hegde Ganapati Venkatraman, Bangalore

I, ANIL RAMANATHAN S/O Ramanath Narasimha Murthy residentat #147, 5th Cross, 6th Block, BSK III Stage, 3rd Phase, Bangalore-560085, have changed my name to ANIL RAMANATHA vide affidavit Dated 05.04.2018 sworn before notary Mamatha.N.K Reg.no. 10201 Bangalore

I, GEETHA W/O RAMANATH NARASHIMA MURTHY resident at, #147, 5th Cross, 6th Block, BSK III Stage, 3rd Phase, Bangalore-560085, have changed my name to GEETHA RAMANATHA vide affidavit Dated 15.02.2021 sworn before notary Prakash.C reg.no LAW 187LCL2016 Bangalore

I, DANICA D SEN residing at No.110, 2nd Main, MLA Layout, R.T.Nagar, Bengaluru– 560032 have changed my name to DANNICAA D SEN, vide affidavit dated 15-02-2021 before Notary Y.R. CHANDRASEKAR, Bengaluru.

I, GOPI Murali S/o Late T.R. Sampath aged about 46 Years, R/a #97, Dispensary Road, Bengaluru-01 Have changed my name to GOPI MURALI SAMPATH vide affidavit dated 16.02.2021 before notary L Gopalakrishna, Bangalore

MOHIT KUMAR S/O. JC670368X, SUB/CLK, Upendra Kumar, Village: Pure Jarbandhan Dadra Musafirkhana Amethi, UP, name MOHIT KUMAR to MOHIT KUMAR MISHRA, notary K.V. Mani, Bangalore.

14832955Y, SEP/MT, Dhayalan. S, 870, ATCOY, ASC my mother name service record SATHYA VATHI instead of SATHYAVATHI. S, notary Harisha. G, Bangalore.

14833398X, SEP, Bhore Ravindra Akaram, 1ATC, father name service record AKARAM BHORE instead of AKARAM TULASHIRAM BHORE notary Harisha. G, Bangalore.

TOURS & TRAVEL

Resort

EXOTIC ESTATE Stay with Valley in Chikamaglur Near Hornadu at Reasonable Price. Call: 9008461094/ 9632365251

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಫಾಸ್ಟ್ಯಾಗ್ ಸ್ಟಿಕ್ಕರ್ ಸ್ಕ್ಯಾನಿಂಗ್ ಸಮಸ್ಯೆಗಿಲ್ಲ ಪರಿಹಾರ • ಹೆದ್ದಾರಿ ಟೋಲ್‌ನಲ್ಲಿ ವಿಪರೀತ ದಟ್ಟಣೆ

‘ದುಡಿದಿದ್ದು ಹೊಟ್ಟೆಗೆ ಸಾಲಲ್ಲ, ಖಾತೆಗೇನು ಮಾಡ್ಲಿ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಿನದ ದುಡಿಮೆ ನಂಬಿ ಬದುಕುವವರು ನಾವು. ದುಡಿದಿದ್ದು ಹೊಟ್ಟೆಗೆ ಸಾಲುತ್ತಿಲ್ಲ. ಬ್ಯಾಂಕ್ ಖಾತೆಯಲ್ಲಿ ಹಣ ಹೇಗೆ ನಿರ್ವಹಣೆ ಮಾಡುವುದು? ಹಣವಿಲ್ಲದಿದ್ದರೆ, ಫಾಸ್ಟ್ಯಾಗ್ ಸ್ಟಿಕ್ಕರ್ ಸ್ಕ್ಯಾನ್ ಆಗುವುದಿಲ್ಲ. ಅನಿವಾರ್ಯವಾಗಿ ನಗದು ಪಾವತಿಸಲೇಬೇಕು. ಇದೀಗ ದುಪ್ಪಟ್ಟು ಶುಲ್ಕ ಕೇಳುತ್ತಿದ್ದು, ನಮ್ಮಂಥ ಬಡವರು ಹೇಗೆ ಬದುಕುವುದು?’

ನಗರದ ಯಶವಂತಪುರದಿಂದ ನೆಲಮಂಗಲಕ್ಕೆ ದಿನಸಿ ಸಾಮಗ್ರಿಗಳನ್ನು ಸಾಗಿಸುತ್ತಿದ್ದ ಮ್ಯಾಕ್ಸಿಕ್ಯಾಬ್ ಚಾಲಕ ರಘು ಕೇಳಿದ ಪ್ರಶ್ನೆ ಇದು.

ಟೋಲ್‌ಗೇಟ್‌ಗಳಲ್ಲಿ ಫಾಸ್ಟ್ಯಾಗ್ ಬಳಕೆ ಕಡ್ಡಾಯ ಮಾಡಲಾಗಿದ್ದು, ಫಾಸ್ಟ್ಯಾಗ್ ಇಲ್ಲದವರಿಂದ ದುಪ್ಪಟ್ಟು ಶುಲ್ಕ ಸಂಗ್ರಹಿಸಲಾಗುತ್ತಿದೆ. ಇದಕ್ಕೆ ವಾಹನಗಳ ಮಾಲೀಕರು ಹಾಗೂ ಚಾಲಕರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ತುಮಕೂರು ರಸ್ತೆ ಹಾಗೂ ಎಲೆಕ್ಟ್ರಾನಿಕ್ ಸಿಟಿ ಬಳಿಯ ಟೋಲ್ ಗೇಟ್‌ಗಳಲ್ಲಿ ದುಪ್ಪಟ್ಟು ಶುಲ್ಕದ ವಿಚಾರವಾಗಿ ಚಾಲಕರು–ಟೋಲ್ ಸಿಬ್ಬಂದಿ ನಡುವೆ ಮಂಗಳವಾರ ವಾಗ್ವಾದ ನಡೆಯಿತು.

ಟೋಲ್ ಎದುರೇ ವಾಹನಗಳನ್ನು ನಿಲ್ಲಿಸಿದ್ದ ಚಾಲಕರು, ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು. ‘ಕಡ್ಡಾಯ ಆದೇಶ ಮಾಡಿದ್ದು ಎನ್‌ಎಚ್‌ಎಐ. ನೀವು ಅವರನ್ನು ಕೇಳಿ. ನಾವು ಇಲ್ಲಿ ಕೆಲಸ ಮಾಡುತ್ತಿದ್ದೇವೆ’ ಎಂದು ಸಿಬ್ಬಂದಿ ಹೇಳಿದರು. ಮಾತಿಗೆ ಮಾತು ಬೆಳೆದು ಗಲಾಟೆಯೂ ನಡೆಯಿತು. ಬಸ್ ಹಾಗೂ ಇತರೆ ವಾಹನಗಳಲ್ಲಿದ್ದ ಪ್ರಯಾಣಿಕರು ಸ್ಥಳಕ್ಕೆ ಬಂದು ಪರಿಸ್ಥಿತಿ ತಿಳಿಗೊಳಿಸಿದರು.

ಕಿ.ಮೀ.ಗಟ್ಟಲೇ ದಟ್ಟಣೆ: ಸೋಮವಾರ ಮಧ್ಯರಾತ್ರಿಯಿಂದಲೇ ಫಾಸ್ಟ್ಯಾಗ್ ಕಡ್ಡಾಯವಾಗಿತ್ತು. ತುಮಕೂರು ರಸ್ತೆ ಟೋಲ್‌ನ ಒಂದು ಗೇಟ್‌ನಲ್ಲಿ ಮಾತ್ರ ನಗದು ಪಾವತಿಗೆ ಅವಕಾಶ ಕಲ್ಪಿಸಲಾಗಿತ್ತು. ಅದೇ ಗೇಟ್ ಎದುರೇ ಹೆಚ್ಚು ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಕೌಂಟರ್ ಬಳಿಯೇ ಚಾಲಕರು ವಾಹನ ನಿಲ್ಲಿಸಿ ವಾಗ್ವಾದ ನಡೆಸಿದರು. ಹಿಂದಿನ ವಾಹನಗಳೆಲ್ಲವೂ ನಿಂತಲ್ಲೇ ನಿಲ್ಲಬೇಕಾಯಿತು. ಇದರಿಂದ ಮಂಗಳವಾರ ಬೆಳಿಗ್ಗೆ ಹಾಗೂ ಸಂಜೆ ವಿಪರೀತ ದಟ್ಟಣೆ ಕಂಡುಬಂತು. ಕಿ.ಮೀ.ಗಟ್ಟಲೇ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಚಾಲಕರು ಹಾಗೂ ಪ್ರಯಾಣಿಕರು, ಕಾದು ಕಾದು ಸುಸ್ತಾದರು.

ತುಮಕೂರಿನ ಚಾಲಕ ಲೋಕೇಶ್, ‘ಚಾಲನೆ ನಂಬಿ ಬದುಕು ಕಟ್ಟಿಕೊಂಡಿದ್ದೇನೆ. ಹಳದಿ ಫಲಕದ ವಾಹನ ತೆಗೆದುಕೊಂಡಿದ್ದು, ಪ್ರತಿ ವರ್ಷವೂ ತೆರಿಗೆ ಪಾವತಿ ಮಾಡುತ್ತೇನೆ. ಫಾಸ್ಟ್ಯಾಗ್ ಸಹ ಹಾಕಿಸಿದ್ದೇನೆ. ಖಾತೆಯಲ್ಲಿ ಹಣವಿಲ್ಲ. ಹೀಗಾಗಿ, ಇಂದು ದುಪ್ಪಟ್ಟು ಹಣ ಪಾವತಿ ಮಾಡಿದ್ದೇನೆ’ ಎಂದರು.

‘ಖಾತೆಯಲ್ಲಿರುವ ಹಣವೆಲ್ಲ ವಾಹನದ ತಿಂಗಳ ಕಂತಿಗೆ ಹೋಗುತ್ತದೆ. ತಿಂಗಳಲ್ಲಿ ಹತ್ತಾರು ಬಾರಿ ಬೆಂಗಳೂರಿಗೆ ಬಂದು ಹೋಗುತ್ತೇನೆ. ಹಲವು ಬಾರಿ ಸ್ಕ್ಯಾನಿಂಗ್ ಸಮಸ್ಯೆ ಉಂಟಾಗುತ್ತಿದ್ದು, ತಮ್ಮ ತಪ್ಪಿದರೂ ಟೋಲ್ ಸಿಬ್ಬಂದಿ ಶುಲ್ಕ ಪಾವತಿಸಲು ಹೇಳುತ್ತಾರೆ. ನಿತ್ಯವೂ ದುಪ್ಪಟ್ಟು ಹಣ ಪಾವತಿಸಿದರೆ, ಬದುಕುವುದು ಹೇಗೆ’ ಎಂದು ಪ್ರಶ್ನಿಸಿದರು.

ನಾಗಸಂದ್ರ ಬಳಿಯ ತುಮಕೂರು ರಸ್ತೆಯ ಟೋಲ್‌ನಲ್ಲಿ ಮಂಗಳವಾರ ದುಪ್ಪಟ್ಟು ದಂಡ ವಿರೋಧಿಸಿ ಟೋಲ್ ಸಿಬ್ಬಂದಿಯೊಂದಿಗೆ ಚಾಲಕರು ವಾಗ್ವಾದ ನಡೆಸಿದರು – ಪ್ರಜಾವಾಣಿ ಚಿತ್ರ

ಹೆಚ್ಚುವರಿ ಸಿಬ್ಬಂದಿ ನಿಯೋಜನೆ

ಪ್ರತಿ ಟೋಲ್‌ನಲ್ಲೂ ಮಂಗಳವಾರ ಹೆಚ್ಚುವರಿ ಸಿಬ್ಬಂದಿಯನ್ನು ದುಪ್ಪಟ್ಟು ಶುಲ್ಕ ಸಂಗ್ರಹಕ್ಕೆ ನಿಯೋಜಿಸಿದ್ದು ಕಂಡುಬಂತು.

‘ಎನ್‌ಎಚ್‌ಎಐ ಆದೇಶದಂತೆ ಶುಲ್ಕ ಸಂಗ್ರಹ ಮಾಡುತ್ತಿದ್ದು, ಎಲ್ಲವೂ ಪಾರದರ್ಶಕವಾಗಿದೆ. ಎಲ್ಲ ದತ್ತಾಂಶವೂ ಕಂಪ್ಯೂಟರ್‌ನಲ್ಲಿ ಸಂಗ್ರಹವಾಗುತ್ತದೆ. ಚಾಲಕರು ಗಲಾಟೆ ಮಾಡುತ್ತಾರೆ ಎಂಬುದು ಗೊತ್ತಾಗಿಯೇ ಹೆಚ್ಚಿನ ಸಿಬ್ಬಂದಿ ನಿಯೋಜನೆ ಮಾಡಿದ್ದೇವೆ. ಇಷ್ಟಾದರೂ ಕೆಲವರು, ಸಿಬ್ಬಂದಿಯನ್ನು ಬೆದರಿಸಿ ಟೋಲ್‌ನಿಂದ ತಪ್ಪಿಸಿಕೊಂಡು ಹೋಗಿದ್ದಾರೆ’ ಎಂದು ಟೋಲ್‌ಗೇಟ್ ಸಿಬ್ಬಂದಿಯೊಬ್ಬರು ಹೇಳಿದರು.

‘ಇದೊಂದು ದೊಡ್ಡ ವ್ಯವಹಾರ’

ಕಾರಿನ ಮಾಲೀಕ ಪ್ರಕಾಶ್, ‘ವರ್ಷದಲ್ಲಿ ಒಮ್ಮೆ ಮಾತ್ರ ಹೆದ್ದಾರಿ ಬಳಸುತ್ತೇನೆ. ಹೀಗಾಗಿ, ಫಾಸ್ಟ್ಯಾಗ್ ಮಾಡಿಸಿಲ್ಲ. ಇದೀಗ ದುಪ್ಪಟ್ಟು ಶುಲ್ಕ ಪಡೆಯುತ್ತಿರುವುದು ಖಂಡನೀಯ’ ಎಂದರು.

‘ಟೋಲ್ ಎಂಬುದೇ ದೊಡ್ಡ ವ್ಯವಹಾರವಾಗಿದೆ. ನಾವು ತುಂಬಿದ ತೆರಿಗೆಯಿಂದ ನಿರ್ಮಿಸಿದ ರಸ್ತೆಗಳು ಎಲ್ಲಿವೆ ಎಂಬುದನ್ನು ಹುಡುಕುವಂತಾಗಿದೆ. ನಾವು ಮತ ಹಾಕಿದ್ದು ಯಾರಿಗೆ? ಈಗ ದುಪ್ಪಟ್ಟು ಹಣ ಕೊಡುತ್ತಿರುವುದು ಯಾರಿಗೆ? ಎಂಬುದೇ ತಿಳಿಯುತ್ತಿಲ್ಲ’ ಎಂದರು.

ಚಾಲಕ ರಮೇಶ್, ‘ಇದು ದುಡ್ಡು ತಿನ್ನುವ ಸರ್ಕಾರ. ಜನರ ಹಿತಕ್ಕಿಂತ ಸರ್ಕಾರಕ್ಕೆ ದುಡ್ಡೇ ಮುಖ್ಯವಾಗಿದೆ. ಇಂಥ ಕೆಟ್ಟ ಸರ್ಕಾರ ನಮಗೆ ಬೇಡ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಟೊ ಚಾಲಕ ಶಬ್ಬೀರ್, ‘ಹೆದ್ದಾರಿಯಲ್ಲಿ ಆಟೊ ಸಂಚರಿಸಬಾರದೆಂಬ ನಿಯಮವಿದ್ದರೂ ಹಣದ ಆಸೆಗಾಗಿ ಸಿಬ್ಬಂದಿ ನಮ್ಮನ್ನು ಒಳಗೆ ಬಿಡುತ್ತಿದ್ದಾರೆ. ನಮ್ಮಿಂದ ಅಕ್ರಮವಾಗಿ ಇಷ್ಟುದಿನ ಟೋಲ್ ಸಂಗ್ರಹಿಸಿದ್ದಾರೆ. ಇದೀಗ ದುಪ್ಪಟ್ಟು ಶುಲ್ಕವೆಂದರೆ ಎಲ್ಲಿಂದ ತರುವುದು. ಇದೊಂದು ದೊಡ್ಡ ಮಾಫಿಯಾ’ ಎಂದು ದೂರಿದರು.

ಚಾಲಕ ವಿಜಯ್, ‘ನೆಲಮಂಗಲಕ್ಕೆ ಬಾಡಿಗೆ ಹೋಗಲು ₹ 300 ಪಡೆದಿದ್ದೇನೆ. ಟೋಲ್‌ನಲ್ಲಿ ಎರಡು ಟ್ರಿಪ್‌ಗೆ ₹80 ಕೊಟ್ಟಿದ್ದೇನೆ. ಉಳಿದಿದ್ದರಲ್ಲಿ ಡೀಸೆಲ್ ಹಾಕಿಸಬೇಕು. ಕೈಲಿ ಉಳಿಯುವುದು ಅಲ್ಪಮಾತ್ರ. ಹೀಗಾದರೆ, ಚಾಲಕರು ಹೇಗೆ ಬದುಕುವುದು. ಸರ್ಕಾರ, ಬಡವರ ಹೊಟ್ಟೆ ಮೇಲೆ ಹೊಡೆಯಬಾರದು’ ಎಂದು ಅಳಲು ತೋಡಿಕೊಂಡರು.

ನೂತನ ಅಧ್ಯಕ್ಷೆ ಮತ್ತು ಉಪಾಧ್ಯಕ್ಷರಾಗಿ ಆಯ್ಕೆಯಾದ ಸೌಮ್ಯ ಆಂಜನೇಯ ಮತ್ತು ಎನ್.ವಸಂತಕುಮಾರ್ ಅವರನ್ನು ಅಂತರರಾಷ್ಟ್ರೀಯ ವಿಮಾನನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ ಅಭಿನಂದಿಸಿದರು. ಬಿಜೆಪಿ ಮುಖಂಡರಾದ ದೊಡ್ಡಬಸವರಾಜು, ಪ್ರಕಾಶ್, ದೀಪು, ಮುನೇಗೌಡ ಇದ್ದರು

ಮೀನುಕುಂಟೆ ಹೊಸೂರು: ಗ್ರಾ.ಪಂ. ಅಧ್ಯಕ್ಷೆ, ಉಪಾಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಜಾಲಾ ಹೋಬಳಿ ಮೀನುಕುಂಟೆ ಹೊಸೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಸೌಮ್ಯಾ ಆಂಜನೇಯ ಹಾಗೂ ಉಪಾಧ್ಯಕ್ಷರಾಗಿ ಎನ್.ವಸಂತಕುಮಾರ್ ಆಯ್ಕೆಯಾಗಿದ್ದಾರೆ.

ಎಸ್.ಟಿ (ಮಹಿಳೆ) ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ ಸೌಮ್ಯಾ ಹಾಗೂ ಶುಭ ನರಸಿಂಹಮೂರ್ತಿ ನಾಮಪತ್ರ ಸಲ್ಲಿಸಿದ್ದರು.

ಒಟ್ಟು 21 ಸದಸ್ಯಬಲ ಹೊಂದಿರುವ ಗ್ರಾಮ ಪಂಚಾಯಿತಿಯಲ್ಲಿ ಬೈನಹಳ್ಳಿ ವಾರ್ಡ್ ಸದಸ್ಯೆ ಸೌಮ್ಯಾ 12 ಹಾಗೂ ಶುಭಾ ನರಸಿಂಹಮೂರ್ತಿ 9 ಮತ ಪಡೆದರು. ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ ವಸಂತಕುಮಾರ್ ಮತ್ತು ರವಿ ಕುಮಾರ್ ನಾಮಪತ್ರ ಸಲ್ಲಿಸಿದ್ದರು. ವಸಂತ ಕುಮಾರ್ 11 ಮತ್ತು ರವಿಕುಮಾರ್ 10 ಮತ ಪಡೆದರು.

ನೂತನವಾಗಿ ಆಯ್ಕೆಯಾಗಿರುವ ಅಧ್ಯಕ್ಷೆ ಸೌಮ್ಯಾ ಪದವೀಧರೆಯಾಗಿದ್ದು, ಉಪಾಧ್ಯಕ್ಷ ವಸಂತಕುಮಾರ್ ವೃತ್ತಿಯಲ್ಲಿ ವಕೀಲರಾಗಿದ್ದಾರೆ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ, ಬಿಜೆಪಿ ಮುಖಂಡರಾದ ದೊಡ್ಡಬಸವರಾಜು, ಪ್ರಕಾಶ್, ದೀಪು, ಮುನೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಟನೆ... ಡೀಸೆಲ್ ಬೆಲೆ ಏರಿಕೆ ಖಂಡಿಸಿ ಕರ್ನಾಟಕ ಹಾಗೂ ತಮಿಳುನಾಡು ರಿಗ್ ಮಾಲೀಕರ ಸಂಘಗಳ ನೇತೃತ್ವದಲ್ಲಿ ಮುದ್ದನ್ ಪಾಳ್ಯ ವೃತ್ತದ ಮೈದಾನದಲ್ಲಿ ಬೋರ್‌ವೆಲ್ ಮಾಲೀಕರು ಮಂಗಳವಾರ ಪ್ರತಿಭಟನೆ ನಡೆಸಿದರು. ಕರ್ನಾಟಕ ರಿಗ್ ಮಾಲೀಕರ ಸಂಘದ ಕಾರ್ಯದರ್ಶಿ ಎಸ್.ನಾಗೇಶ್ ಹಾಗೂ ಸದಸ್ಯರು ಇದ್ದರು.

ಕುಟುಂಬದ ಗೌರವ ಕಳೆದಿದ್ದಕ್ಕೆ ಮಗಳ ಪ್ರಿಯಕರನ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮದುವೆಯಾದ ಹದಿನೈದು ದಿನಕ್ಕೆ ಪತಿ ಮನೆ ತೊರೆದು ಪ್ರಿಯಕರನ ಜೊತೆ ಎರಡನೇ ಮದುವೆಯಾಗಿ ಕುಟುಂಬದ ಗೌರವ ಕಳೆದಳು’ ಎಂಬ ಕಾರಣಕ್ಕೆ ಸಿಟ್ಟಾದ ಯುವತಿ ಸಂಬಂಧಿಕರು, ಆಕೆಯ ಪ್ರಿಯಕರನನ್ನು ಮಾರಕಾಸ್ತ್ರಗಳಿಂದ ಹೊಡೆದು ಹತ್ಯೆ ಮಾಡಿರುವ ಘಟನೆ ನಗರದಲ್ಲಿ ಮಂಗಳವಾರ ನಡೆದಿದೆ.

‘ಲಗ್ಗೆರೆಯಲ್ಲಿ ವಾಸವಿದ್ದ ಚೇತನ್ (27) ಎಂಬುವರನ್ನು ಕೊಲೆ ಮಾಡಲಾಗಿದೆ. ಅವರ ಜೊತೆ ಎರಡನೇ ಮದುವೆಯಾಗಿದ್ದ ಯುವತಿ ಭೂಮಿಕಾ ಸಂಬಂಧಿಕರೇ ಕೃತ್ಯ ಎಸಗಿರುವ ಮಾಹಿತಿ ಇದೆ. ಆರೋಪಿಗಳು ಸದ್ಯ ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ರಾಜಗೋಪಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ಹೇಳಿದರು.

‘ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಚೇತನ್ ಮತ್ತು ಯುವತಿ, ಒಂದೇ ಸಮುದಾಯಕ್ಕೆ ಸೇರಿದವರು. ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದರು. ಅದಕ್ಕೆ ಕುಟುಂಬದವರ ವಿರೋಧವಿತ್ತು. ಕುಟುಂಬದವರ ಒತ್ತಾಯಕ್ಕೆ ಮಣಿದು ಮದುವೆಯಾಗಿದ್ದ ಯುವತಿ, ಪತಿ ಮನೆಯಿಂದಲೇ ಪರಾರಿಯಾಗಿ ಚೇತನ್ ಅವರನ್ನು ದೇವಸ್ಥಾನವೊಂದರಲ್ಲಿ ಮದುವೆಯಾಗಿದ್ದಳು. ನಂತರ, ಬೆಂಗಳೂರಿಗೆ ಬಂದು ಲಗ್ಗೆರೆಯಲ್ಲಿ ಬಾಡಿಗೆ ಮನೆಯಲ್ಲಿ ಇಬ್ಬರೂ ವಾಸವಿದ್ದರು’ ಎಂದೂ ತಿಳಿಸಿದರು.

ಹುಟ್ಟುಹಬ್ಬದ ಶುಭಾಶಯ ಕೋರುವ ನೆಪ: ‘ಚೇತನ್ ಹಾಗೂ ಯುವತಿ ಮನೆ ಎಲ್ಲಿದೆ ಎಂಬುದು ಸಂಬಂಧಿಕರಿಗೆ ಗೊತ್ತಿರಲಿಲ್ಲ. ಹಲವು ದಿನಗಳಿಂದ ಹುಡುಕಾಟ ನಡೆಸುತ್ತಿದ್ದರು. ಸ್ನೇಹಿತರೊಬ್ಬರ ಮೂಲಕ ಮನೆ ವಿಳಾಸ ಸಿಕ್ಕಿತ್ತು. ಫೆ. 17ರಂದು ಚೇತನ್ ಅವರ ಹುಟ್ಟುಹಬ್ಬ ಇತ್ತು. ಶುಭಾಶಯ ಕೋರುವ ನೆಪದಲ್ಲಿ ಯುವತಿಯ ಸೋದರ ಆಕಾಶ್, ಚಿಕ್ಕಪ್ಪ ನಂಜೇಗೌಡ ಹಾಗೂ ಚಿಕ್ಕಪ್ಪನ ಮಗ ದಿಲೀಪ್ ಮನೆಗೆ ಬಂದಿದ್ದರು. ರಾತ್ರಿ ಹುಟ್ಟುಹಬ್ಬದ ಪಾರ್ಟಿ ಮಾಡೋಣವೆಂದು ಹೇಳಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಭೂಮಿಕಾ ಅವರು ಟಿ.ವಿ ನೋಡಲೆಂದು ಪಕ್ಕದ ಮನೆಗೆ ಹೋಗಿದ್ದರು. ಚೀಲದಲ್ಲಿ ತಂದಿದ್ದ ಲಾಂಗು–ಮಚ್ಚುಗಳನ್ನು ಹೊರಗೆ ತೆಗೆದಿದ್ದ ಆರೋಪಿಗಳು, ಚೇತನ್ ಅವರನ್ನು ಕೊಚ್ಚಿ ಪರಾರಿಯಾಗಿದ್ದಾರೆ. ಚೀರಾಟ ಕೇಳಿ ಪತ್ನಿ ಮನೆಗೆ ಬಂದು ನೋಡಿದಾಗಲೇ ವಿಷಯ ಗೊತ್ತಾಗಿದೆ’ ಎಂದೂ ವಿವರಿಸಿದರು.

ಎಚ್ಚರಿಕೆ ನೀಡಿದ್ದ ಸಂಬಂಧಿಕರು: ‘ಚೇತನ್, ಎಲೆಕ್ಟ್ರಿಷಿಯನ್ ಆಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ರೈತರಾಗಿರುವ ಅವರ ತಂದೆ, ಗ್ರಾಮ ಪಂಚಾಯಿತಿ ಸದಸ್ಯ. ಪ್ರೀತಿ ವಿಷಯ ತಿಳಿದ ಯುವತಿ ಸಂಬಂಧಿಕರು, ಚೇತನ್‌ಗೆ ಹಲವು ಬಾರಿ ಎಚ್ಚರಿಕೆ ನೀಡಿದ್ದರು. ಅದೇ ವಿಚಾರವಾಗಿ ಜಗಳ ನಡೆದು, ಸಂಧಾನವೂ ಆಗಿತ್ತು’ ಎಂದು ಪೊಲೀಸರು ಹೇಳಿದರು.

‘ಬೆಸ್ಕಾಂನಲ್ಲಿ ಕೆಲಸ ಮಾಡುತ್ತಿದ್ದ ನೌಕರನ ಜೊತೆ ಯುವತಿಯನ್ನು ಮದುವೆ ಮಾಡಿಕೊಡಲಾಗಿತ್ತು. 15 ದಿನ ಪತಿ ಜೊತೆಗಿದ್ದ ಯುವತಿ, ಮನೆ ಬಿಟ್ಟು ಪರಾರಿಯಾಗಿದ್ದರು. ಯುವತಿಯ ನಡತೆ ಸರಿ ಇಲ್ಲವೆಂದು ಊರಿನವರು ಮಾತನಾಡಿಕೊಳ್ಳುತ್ತಿದ್ದರು. ಇದರಿಂದ ಸಿಟ್ಟಾದ ಸಂಬಂಧಿಕರು, ಈ ಕೃತ್ಯ ಎಸಗಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದೂ ಪೊಲೀಸರು ವಿವರಿಸಿದರು.

ಬಿದರಹಳ್ಳಿ ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ವರುಣ್ ಬಿ.ವಿ.ಹಾಗೂ ಉಪಾಧ್ಯಕ್ಷೆ ಸುಜಾತ ಅವರನ್ನು ಮುಖಂಡ ಎಂಸಿಬಿ ರಾಜಣ್ಣ, ಡೈರಿ ನಾಗಣ್ಣ, ಚಂದ್ರಶೇಖರ್, ಸುನಿಲ್ ಕುಮಾರ್, ಮರಗೊಂಡಹಳ್ಳಿ ಸುರೇಶ್ ಅಭಿನಂದಿಸಿದರು.

ಬಿದರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ವರುಣ್ ಆಯ್ಕೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿದರಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ವರುಣ್ ಬಿ.ವಿ. ಮತ್ತು ಉಪಾಧ್ಯಕ್ಷರಾಗಿ ಸುಜಾತ ಆಯ್ಕೆಯಾಗಿದ್ದಾರೆ.

36 ಸದಸ್ಯರನ್ನು ಹೊಂದಿರುವ ಬಿದರಹಳ್ಳಿ ಪಂಚಾಯತಿಯ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯಿತು. ಅಧ್ಯಕ್ಷ (ಸಾಮಾನ್ಯ) ಸ್ಥಾನಕ್ಕೆ ವರುಣ್ ಮತ್ತು ರಾಜೇಶ್ ನಾಮಪತ್ರ ಸಲ್ಲಿಸಿದ್ದರು.

ಉಪಾಧ್ಯಕ್ಷರ ಸ್ಥಾನಕ್ಕೆ (ಪರಿಶಿಷ್ಟ ಜಾತಿ ಮಹಿಳೆ) ಸುಜಾತ ಮತ್ತು ತುಳಸಿ ನಾಮಪತ್ರ ಸಲ್ಲಿಸಿದ್ದರು. 18 ಮತಗಳನ್ನು ಪಡೆದ ವರುಣ್ ಅಧ್ಯಕ್ಷರಾಗಿ, 19 ಮತ ಪಡೆದ ಸುಜಾತ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ವರುಣ್ ಮಾತನಾಡಿ, ‘ಬಿದರಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲಾಗುವುದು. ರಸ್ತೆ ಮತ್ತು ಚರಂಡಿ ಒದಗಿಸುವ ಮೂಲಕ ಗ್ರಾಮದ ಅಭಿವೃದ್ಧಿಗೆ ಶ್ರಮಿಸಲಾಗುವುದು’ ಎಂದು ಅವರು ಹೇಳಿದರು.

ಬೆಲೆ ಏರಿಕೆ: ಎಳ್ಳುನೀರು ತರ್ಪಣ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಿನಬಳಕೆ ವಸ್ತುಗಳು, ಪೆಟ್ರೋಲ್ ಮತ್ತು ಡೀಸೆಲ್‌ಬೆಲೆಯು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಈ ವೈಫಲ್ಯಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯಕ್ರಮದ ಜತೆಗೆ ಎಳ್ಳು ನೀರು ತರ್ಪಣ ಬಿಡುವ ಅಭಿಯಾನ ಹಮ್ಮಿಕೊಳ್ಳಲಾಗಿದೆ’ ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಟ್ವಿಟರ್, ಫೇಸ್‌ಬುಕ್ ಸೇರಿದಂತೆ ಎಲ್ಲ ರೀತಿಯ ಸಾಮಾಜಿಕ ಜಾಲತಾಣಗಳಲ್ಲಿಯೂ ಕೇಂದ್ರ ಸರ್ಕಾರದ ವಿರುದ್ಧ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗುವುದು. ವಾರ್ಡ್ ಮಟ್ಟದಲ್ಲಿ ನಾಗರಿಕ ಸಭೆಗಳನ್ನು ಏರ್ಪಡಿಸಲಾಗುವುದು’ ಎಂದು ಅವರು ತಿಳಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವ ಫೆ.17ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಬೋರ್ ಬ್ಯಾಂಕ್ ರಸ್ತೆ, ಹ್ಯಾರಿಸ್ ರಸ್ತೆ, ಐಟಿಐ ಬಡಾವಣೆ, ಚಿನ್ನಪ್ಪ ಗಾರ್ಡನ್, ಗಾಂಧಿಗ್ರಾಮ, ವಿಲಿಯಮ್ಸ್ ಟೌನ್, ಪಾಟರಿ ಟೌನ್, ಕಾಕ್ಸ್ ಟೌನ್, ಸಿ.ಸಿ. ರಸ್ತೆ, ಆರ್.ಕೆ.ರಸ್ತೆ, ಎಂ.ಎಂ.ರಸ್ತೆ, ಮಸೀದಿ ರಸ್ತೆ, ಕೋಲ್ಸ್ ರಸ್ತೆ, ಸ್ಟೀಫನ್ಸ್ ರಸ್ತೆ, ರತನ್ ಸಿಂಗ್ ರಸ್ತೆ, ಕುಮಾರ ಸ್ವಾಮಿ ನಾಯ್ಡು ರಸ್ತೆ, ಆಂಧ್ರ ಬ್ಯಾಂಕ್ ರಸ್ತೆ, ಸತ್ಯನಗರ, ಅಂಬೇಡ್ಕರ್ ನಗರ, ಗಜೇಂದ್ರ ನಗರ, ಹಳೇ ಬೈಯಪ್ಪನಹಳ್ಳಿ, ಕನಕದಾಸ ಬಡಾವಣೆ, ಒರಿಯನ್ ಮಾಲ್, ಜೈಭಾರತ ನಗರ, ಲಿಂಗರಾಜಪುರ, ರಾಮಚಂದ್ರಪ್ಪ ಬಡಾವಣೆ, ಬಾಣಸವಾಡಿ ಮುಖ್ಯರಸ್ತೆ, ವೆಂಕಟೇಶಪುರ, ಭಾರತ್ ಮಾತಾ ಬಡಾವಣೆ, ಹೆಣ್ಣೂರು ಮುಖ್ಯರಸ್ತೆ, ದೋಬಿ ಘಾಟ್ ಹಾಗೂ ಸುತ್ತಮುತ್ತ.

ಕೋವಿಡ್ ಸಂದರ್ಭದಲ್ಲಿ ಮಾನವ ಸಂಪನ್ಮೂಲ ವಿಭಾಗವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದ ಸಾಧನೆಗಾಗಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಅವರಿಗೆ ವಿಶ್ವ ಎಚ್‌ಆರ್‌ಡಿ ಕಾಂಗ್ರೆಸ್ ಮತ್ತು ಅವಾರ್ಡ್‌ನ 29ನೇ ಆವೃತ್ತಿಯ ‘ಮುಖ್ಯ ಕಾರ್ಯನಿರ್ವಹಣಾಧಿಕಾರಿ–2021’ ಪ್ರಶಸ್ತಿ ದೊರೆತಿದೆ

ಮಹಾರಾಷ್ಟ್ರಕ್ಕೆ ಪರಾರಿಯಾಗಿದ್ದ ಆರೋಪಿಯ ಬಂಧನ

₹4.58 ಕೋಟಿ ಮೌಲ್ಯದ ಚಿನ್ನದ ಗಟ್ಟಿ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಅಂಗಡಿಯಿಂದಲೇ ₹4.58 ಕೋಟಿ ಬೆಲೆ ಬಾಳುವ ಚಿನ್ನದ ಗಟ್ಟಿಗಳನ್ನು ಕದ್ದು ಪರಾರಿಯಾಗಿದ್ದ ಆರೋಪಿಯನ್ನು ವಿಲ್ಸನ್ ಗಾರ್ಡನ್ ಪೊಲೀಸರು ಬಂಧಿಸಿದ್ದಾರೆ.

ಮಹಾರಾಷ್ಟ್ರದ ಸೊಲ್ಲಾಪುರ ಮೂಲದ ಸ್ವಪ್ನಿಲ್ ಫಾಡ್ಗೆ (19) ಬಂಧಿತ ಆರೋಪಿ.

ಬೆಂಗಳೂರಿನ ನಗರ್ತಪೇಟೆಯಲ್ಲಿ ಸಿದ್ದೇಶ್ವರ್ ಹರಿಭಾ ಸಿಂಧೆ ಎಂಬುವರು ಉದ್ಯಮಿಗಳಿಂದ ಹಳೆಯ ಚಿನ್ನದ ಆಭರಣ ಪಡೆದು, ಕರಗಿಸಿ ಚಿನ್ನದ ಗಟ್ಟಿ ತಯಾರಿಸುವ ಅಂಗಡಿಯನ್ನು ಹೊಂದಿದ್ದರು. ಅದೇ ಅಂಗಡಿಯಲ್ಲಿ ಆರೋಪಿ ಸ್ವಪ್ನಿಲ್ ಕೆಲಸ ಮಾಡಿಕೊಂಡಿದ್ದ.

ಜ. 29ರಂದು ಸುಮಾರು 12 ಕೆ.ಜಿಯಷ್ಟು ಚಿನ್ನ ಕರಗಿಸಿ ಮಾಡಲಾಗಿದ್ದ ಚಿನ್ನದ ಗಟ್ಟಿಗಳನ್ನು ಸಿದ್ದೇಶ್ವರ್ ತನ್ನ ಕೆಲಸಗಾರರ ಜೊತೆ ತೆರಳಿ, ಆರ್.ಟಿ. ಸ್ಟ್ರೀಟ್‌ನಲ್ಲಿದ್ದ ಸಂಬಂಧಿಕರ ಮನೆಯಲ್ಲಿ ಇಟ್ಟು ಬಂದಿದ್ದರು. ಈ ವಿಷಯ ತಿಳಿದಿದ್ದ ಆರೋಪಿ ಸ್ವಪ್ನಿಲ್, ಮರುದಿನವೇ ಆ ಮನೆಗೆ ತೆರಳಿದ್ದ. ಮಾಲೀಕರು ಕಳುಹಿಸಿದ್ದಾರೆ ಎಂದು ಸುಳ್ಳು ಹೇಳಿ ಮನೆಯಿಂದ ಚಿನ್ನದ ಗಟ್ಟಿಗಳನ್ನು ಅಂಗಡಿಗೆ ತಂದು, ಬಳಿಕ ಅಲ್ಲಿಂದ ಕಳವು ಮಾಡಿದ್ದ. ಈ ಸಂಬಂಧ ಅಂಗಡಿ ಮಾಲೀಕ ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದರು.

‘ಕಳವು ಮಾಡಿದ ಬಳಿಕ ಆರೋಪಿ ಮಹಾರಾಷ್ಟ್ರದ ತನ್ನ ಮನೆಯಲ್ಲಿ ಅಡಗಿಕೊಂಡಿದ್ದ. ಆತನನ್ನು ಪತ್ತೆ ಹಚ್ಚಿ, ₹4.58 ಕೋಟಿ ಬೆಲೆ ಬಾಳುವ 11 ಕೆ.ಜಿಯಷ್ಟು ಚಿನ್ನದ ಗಟ್ಟಿಗಳನ್ನು ಜಪ್ತಿ ಮಾಡಲಾಗಿದೆ. ಉಳಿದ ಒಂದು ಕೆ.ಜಿ ಚಿನ್ನವನ್ನು ಪರಿಚಿತರಿಗೆ ಮಾರಾಟ ಮಾಡಿರುವುದಾಗಿ ಆರೋಪಿ ತಿಳಿಸಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಈ ಹಿಂದೆ ಹೈದರಾಬಾದ್‌ನಲ್ಲಿ ಚಿನ್ನ ಕರಗಿಸುವ ಕೆಲಸ ಮಾಡಿಕೊಂಡಿದ್ದ. ಕಳೆದ ವರ್ಷ ಕೊರೊನಾದಿಂದ ಊರಿಗೆ ಮರಳಿದ್ದು, ಮೂರು ತಿಂಗಳ ಹಿಂದಷ್ಟೇ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದ್ದ. ಬೇಗ ಶ್ರೀಮಂತನಾಗಬೇಕು ಎಂಬ ಆಸೆಯಿಂದ ಚಿನ್ನದ ಗಟ್ಟಿಗಳನ್ನು ಕಳವು ಮಾಡಿದ್ದಾನೆ’ ಎಂದೂ ಪೊಲೀಸರು ತಿಳಿಸಿದರು.

ಕದ್ದ ಮಾಲು ಜೊತೆಗೆ ಆರೋಪಿ ಸ್ವಪ್ನಿಲ್ ಫಾಡ್ಗೆ

ಮೂರು ಬೈಕ್ ವಶ:ಆರೋಪಿ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ ಆರೋಪಿಯನ್ನು ಬಸವೇಶ್ವರ ನಗರ ಪೊಲೀಸರು ಬಂಧಿಸಿದ್ದಾರೆ.

ಮಾಗಡಿ ರಸ್ತೆಯ ಗೋಪಾಲಪುರ ನಿವಾಸಿ ಜಹೀರ್ ಅಹಮದ್ (35) ಬಂಧಿತ ಆರೋಪಿ.

ಕುರುಬರಹಳ್ಳಿಯ ಅಂಗಡಿಯೊಂದರ ಬಳಿ ನಿಲ್ಲಿಸಿದ್ದ ಬೈಕ್ ಅನ್ನು ಆರೋಪಿ ಕದ್ದಿದ್ದ. ಈ ಸಂಬಂಧ ಬೈಕ್ ಮಾಲೀಕ ಪೊಲೀಸರಿಗೆ ದೂರು ನೀಡಿದ್ದರು.

‘ಆರೋಪಿಯು ಬಸವೇಶ್ವರನಗರ ಠಾಣೆಯ ಸರಹದ್ದಿನಲ್ಲಿ ಮೂರು ದ್ವಿಚಕ್ರ ವಾಹನಗಳನ್ನು ಕದ್ದಿದ್ದ. ಆರೋಪಿಯನ್ನು ಬಂಧಿಸಲಾಗಿದ್ದು, ಮೂರು ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ದಿಶಾ ಬಂಧನ ಯುವಜನರಿಗೆ ಎಚ್ಚರಿಕೆಯ ಗಂಟೆ’

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ‘ರೈತರ ಪ್ರತಿಭಟನೆ ಬೆಂಬಲಿಸಿ ಟೂಲ್ ಕಿಟ್ ಸಿದ್ಧಪಡಿಸಿದ ಆರೋಪದಲ್ಲಿ ದಿಶಾ ರವಿ ಅವರನ್ನು ಬಂಧಿಸಿರುವುದು ಇಡೀ ಯುವ ಸಮುದಾಯಕ್ಕೆ ಎಚ್ಚರಿಕೆಯ ಗಂಟೆ. ಎಲ್ಲರ ಅಭಿಪ್ರಾಯ, ಅನಿಸಿಕೆಗಳನ್ನು ಮಟ್ಟಹಾಕಲು ಸರ್ಕಾರಗಳು ಪ್ರಯತ್ನಿಸುತ್ತಿವೆ. ಇದರ ವಿರುದ್ಧ ಪ್ರತಿಭಟನೆ ಅನಿವಾರ್ಯ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ದಿಶಾ ರವಿ ಬಂಧನದಿಂದ ಯುವ ಸಮುದಾಯ ದಿಗ್ಭ್ರಮೆಗೆ ಒಳಗಾಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಾಕ್ ಸ್ವಾತಂತ್ರ್ಯ ಪ್ರಮುಖವಾದುದು. ನಮ್ಮ ಸಂವಿಧಾನ ಈ ಸ್ವಾತಂತ್ರ್ಯ ನೀಡಿದೆ. ಯುವಕರು ತಮ್ಮ ಸ್ವಾತಂತ್ರ್ಯ ವ್ಯಕ್ತಪಡಿಸದಂತೆ ಬಾಯಿ ಮುಚ್ಚಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರ ಮುಂದಾಗಿರುವುದು ಖಂಡನೀಯ’ ಎಂದರು.

‘ರಾಜ್ಯ ಹಾಗೂ ಕೇಂದ್ರ ಸರ್ಕಾರ ಪ್ರಜಾಪ್ರಭುತ್ವ ವಿರೋಧಿ ಧೋರಣೆ ಅನುಸರಿಸುತ್ತಿವೆ. ಯುವಕರ ಧ್ವನಿ ಈ ದೇಶದ ಧ್ವನಿ. ಆದರೆ, ಈ ಧ್ವನಿ ದಮನಕ್ಕೆ ಸರ್ಕಾರಗಳು ಮುಂದಾಗಿವೆ. ಯುವಕರು ತಮ್ಮ ಹಕ್ಕು ರಕ್ಷಣೆಗೆ ಹೋರಾಟ ಮಾಡಬೇಕಾಗಿದೆ’ ಎಂದರು.

‘ಸರ್ಕಾರಕ್ಕೆ ನಾಯಕರು, ರಾಜಕೀಯ ಪಕ್ಷಗಳು, ಸಾರ್ವಜನಿಕ ಸಂಘಟನೆಗಳು, ಎನ್‌ಜಿಒಗಳು, ಮಾಧ್ಯಮಗಳು ಸೇರಿದಂತೆ ಯಾರು ಬೇಕಾದರೂ ಮಾರ್ಗದರ್ಶನ ನೀಡಬಹುದು. ಬಾಯಿ ಮುಚ್ಚಿಸಲು ಯಾರಿಂದಲೂ ಸಾಧ್ಯವಿಲ್ಲ. ಎಲ್ಲ ಯುವಕರು ಎದ್ದೇಳಬೇಕು, ಮಾಧ್ಯಮ ಸ್ನೇಹಿತರು ಕೂಡ ನಿಮ್ಮ ಸ್ವಾತಂತ್ರ್ಯ ಕಾಪಾಡಿಕೊಳ್ಳಬೇಕು’ ಎಂದರು.

‘ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ’

‘ಕೇಂದ್ರ ಸರ್ಕಾರದ ವಿರುದ್ಧ ಧ್ವನಿಯೆತ್ತಿದವರ ಮೇಲೆ ದೇಶದ್ರೋಹದ ಆರೋಪ ಹೊರಿಸಿ, ಜೈಲಿಗೆ ಕಳುಹಿಸುತ್ತಿರುವುದು ಪ್ರಜಾಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ’ ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಖಂಡಿಸಿದ್ದಾರೆ.

ದಿಶಾ ರವಿ ಬಂಧನ ಕುರಿತಂತೆ ಪ್ರತಿಕ್ರಿಯಿಸಿರುವ ಅವರು, ‘ಕೃಷಿ ಕಾಯ್ದೆಗಳನ್ನು ವಿರೋಧಿಸಿ ಕೇಂದ್ರ ಸರ್ಕಾರದ ವಿರುದ್ಧ ಧ್ವನಿಯೆತ್ತಿದ ಕಾರಣಕ್ಕೆ ದಿಶಾ ಅವರನ್ನು ಬಂಧಿಸಲಾಗಿದೆ. ಇದು ಅಕ್ಷಮ್ಯ ಅಪರಾಧ ಮತ್ತು ಖಂಡನೀಯ. ರೈತರನ್ನು ಕಾರ್ಪೊರೇಟ್ ಕಂಪನಿಗಳ ನಿಯಂತ್ರಣಕ್ಕೆ ಸಿಲುಕಿಸುತ್ತಿರುವುದರ ವಿರುದ್ಧ ಧ್ವನಿಯೆತ್ತಿದರೆ ಭಯ ಹುಟ್ಟಿಸುವಂತಹ ಕೆಲಸ ಮಾಡಲಾಗುತ್ತಿದೆ. ಪರೋಕ್ಷವಾಗಿ ರೈತರ ಚಳವಳಿಯನ್ನು ಹತ್ತಿಕ್ಕುವ ಪ್ರಯತ್ನ ಇದಾಗಿದೆ’ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

‘ಕೇಂದ್ರವು ಕೂಡಲೇ ಅವರನ್ನು ಬಿಡುಗಡೆಗೊಳಿಸಿ, ಗಂಭೀರ ಪ್ರಕರಣಗಳಿದ್ದರೆ ನ್ಯಾಯೋಚಿತ ತನಿಖೆಗೆ ಮುಂದಾಗಬೇಕು’ ಎಂದೂ ಒತ್ತಾಯಿಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ತರಬೇತಿ

ಬೆಂಗಳೂರು: ಸ್ಪರ್ಧಾ ಭಾರತ್ ಕೋಚಿಂಗ್ ಅಕಾಡೆಮಿಯು ಕೆಎಎಸ್, ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಕಾನ್‌ಸ್ಟೆಬಲ್, ಎಫ್‌ಡಿಎ, ಎಸ್‌ಡಿಎ ಹಾಗೂ ಬ್ಯಾಂಕಿಂಗ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ಇಚ್ಛಿಸುವ ಅಭ್ಯರ್ಥಿಗಳಿಗೆ 4 ತಿಂಗಳ ಉಚಿತ ತರಬೇತಿ ನೀಡಲಿದೆ.

‘ಕೆ.ಆರ್.ಪುರ ಎಕ್ಸ್‌ಟೆನ್ಷನ್ ಬಸ್ ನಿಲ್ದಾಣದ ಸಮೀಪದ ಕಟ್ಟಡದಲ್ಲಿ ಫೆ. 21ರಿಂದ ತರಬೇತಿ ಆರಂಭವಾಗಲಿದೆ. ಆಸಕ್ತರು ಅಕಾಡೆಮಿಗೆ ಭೇಟಿ ನೀಡಿ ಪ್ರವೇಶ ಪಡೆಯಬಹುದು’ ಎಂದು ಅಕಾಡೆಮಿಯ ನಿರ್ದೇಶಕ ಬೀರಲಿಂಗ ಪೂಜಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ: 99456 86366.

ತಂದೆ ಕೊಲೆಗೆ ಸುಪಾರಿ: ಪುತ್ರ, ಸಹೋದರ ಬಂಧನ

ಬೆಂಗಳೂರು: ಆಸ್ತಿಗಾಗಿ ತಂದೆಯನ್ನೇ ಕೊಲೆ ಮಾಡಲು ಸುಪಾರಿ ನೀಡಿದ್ದ ಪುತ್ರ ಹಾಗೂ ಕೃತ್ಯದಲ್ಲಿ ಭಾಗಿಯಾಗಿದ್ದ ಚಿಕ್ಕಪ್ಪನನ್ನು ತಲಘಟ್ಟಪುರ ಪೊಲೀಸರು ಒಂದು ವರ್ಷದ ಬಳಿಕ ಬಂಧಿಸಿದ್ದಾರೆ.

ಪುತ್ರ ಹರಿಕೃಷ್ಣ ಹಾಗೂ ಚಿಕ್ಕಪ್ಪ ಶಿವರಾಮ್ ಪ್ರಸಾದ್ ಬಂಧಿತರು.

2020ರ ಫೆಬ್ರುವರಿಯಲ್ಲಿ ಬೆಂಗಳೂರಿನ ಗುಬ್ಬಲಾಳ ರಸ್ತೆಯಲ್ಲಿ ಮಾಧವ್ ಎಂಬುವವರ ಕೊಲೆಯಾಗಿತ್ತು. ಹಂತಕರು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ತಂದೆಯ ಕೊಲೆಗೆ ಮಗ ಹರಿಕೃಷ್ಣ ಸುಪಾರಿ ನೀಡಿದ್ದ. ಕೊಲೆಯಾದ ಮಾಧವ್ ಸಹೋದರ ಶಿವರಾಮ್ ಪ್ರಸಾದ್ ಕೂಡ ಕೃತ್ಯದಲ್ಲಿ ಭಾಗಿಯಾಗಿದ್ದ.

ತನಿಖೆ ಆರಂಭಿಸಿದ್ದ ಪೊಲೀಸರು ಕಳೆದ ವರ್ಷವೇ ಆರೋಪಿಗಳಾದ ರಿಯಾಜ್ ಅಹಮದ್, ಶಾರುಖ್ ಖಾನ್, ಸೈಯ್ಯದ್ ಸಲ್ಮಾನ್, ಆದಿಲ್ ಖಾನ್, ಷಹಬಾಜ್ ನಜೀರ್‌ನನ್ನು ಬಂಧಿಸಿದ್ದರು. ಈಗ ಕೃತ್ಯಕ್ಕೆ ಕಾರಣಕರ್ತರಾದ ಹರಿಕೃಷ್ಣ ಹಾಗೂ ಶಿವರಾಮ್‌ನನ್ನು ಬಂಧಿಸಲಾಗಿದೆ.

‘ಗಣಿ ಉದ್ಯಮಿಯಾಗಿದ್ದ ಮಾಧವ್ ಅವರು ಕೋಟಿಗಟ್ಟಲೆ ಬೆಲೆಬಾಳುವ ಬಳ್ಳಾರಿ ಸ್ಟೀಲ್ ಮತ್ತು ಅಲಾಯ್ ಲಿಮಿಟೆಡ್ ಸಂಸ್ಥೆಗಳ ಮಾಲೀಕರಾಗಿದ್ದರು. ಗಣಿಗಾರಿಕೆ ನಿಂತಿದ್ದರಿಂದ ನಷ್ಟ ಅನುಭವಿಸಿದ್ದರು. ಆಸ್ತಿಯನ್ನು ಮಾರುವಂತೆ ಮಾಧವ್ ಅವರಿಗೆ ಪುತ್ರ ಹಾಗೂ ಸಹೋದರ ಸಲಹೆ ನೀಡಿದ್ದರು. ಮಾತು ಕೇಳಲಿಲ್ಲ ಎಂದು ಹಾಗೂ ಆಸ್ತಿ ಪಡೆದುಕೊಳ್ಳುವ ಉದ್ದೇಶದಿಂದ ಕೊಲೆ ಮಾಡಲು ಹಂತಕರಿಗೆ ಸುಪಾರಿ ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಕೋವಿಡ್‌-19 ಲಸಿಕೆ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ಒಂದು ದಿನದ ಕಾರ್ಯಾಗಾರ: ಆಯೋಜನೆ–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ–ಮಹಾತ್ಮ ಗಾಂಧಿ ಮಾಧ್ಯಮ ಕೇಂದ್ರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಭಗವಾನ್ ಮಹಾವೀರ ರಸ್ತೆ, ಬೆಳಿಗ್ಗೆ 10.45

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ: ಸಿದ್ಧಲಿಂಗಯ್ಯ, ಉದ್ಘಾಟನೆ–ಅರವಿಂದ ಲಿಂಬಾವಳಿ, ಅತಿಥಿ–ಜೆ.ರವಿಶಂಕರ್, ಎಸ್. ರಂಗಪ್ಪ, ಅಧ್ಯಕ್ಷತೆ–ಎಂ.ಎನ್.ನಂದೀಶ್ ಹಂಚೆ, ಆಯೋಜನೆ–ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11



ಸಿದ್ಧಲಿಂಗಯ್ಯ

ಕಾರ್ಮಿಕರ ಸಮಸ್ಯೆಗಳ ಕುರಿತು ಸಭೆ: ಅಧ್ಯಕ್ಷತೆ–ಸಚಿವ ಶಿವರಾಂ ಹೆಬ್ಬಾರ್, ಸ್ಥಳ–ಕ್ಯಾಬಿನೆಟ್ ಹಾಲ್, ಎಫ್‌ಕೆಸಿಸಿಐ, ಕೆ.ಜಿ.ರಸ್ತೆ, ಸಂಜೆ 4.30

ಸಂಕ್ಷಿಪ್ತ ಸುದ್ದಿ

ಜಾಲಪ್ಪ ಅಕಾಡೆಮಿಯಿಂದ ಉಚಿತ ತರಬೇತಿ

ಬೆಂಗಳೂರು: ಆರ್.ಎಲ್.ಜಾಲಪ್ಪ ಅಕಾಡೆಮಿಯು ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 4 ತಿಂಗಳ ಉಚಿತ ತರಬೇತಿ ನೀಡಲಿದೆ.

ಪ್ರವರ್ಗ 1 ಮತ್ತು ‘2ಎ’ಗೆ ಸೇರಿರುವ ಪದವೀಧರರು ಹಾಗೂ ಗ್ರಾಮೀಣ ಭಾಗದ ಯುವಕ, ಯುವತಿಯರು ತರಬೇತಿಯಲ್ಲಿ ಭಾಗವಹಿಸಬಹುದು.

ಫೆಬ್ರುವರಿ 25ರಿಂದ ತರಬೇತಿ ಪ್ರಾರಂಭಗೊಳ್ಳಲಿದೆ. ಆಸಕ್ತರು www.rljacademy.in ವೆಬ್‌ಸೈಟ್‌ನಲ್ಲಿ ಫೆ.20ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. **ತರಬೇತಿ ನಡೆಯುವ ಸ್ಥಳ:** ಆರ್.ಎಲ್.ಜಾಲಪ್ಪ ಅಕಾಡೆಮಿ, ಸೋಲೂರು, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ. ಸಂಪರ್ಕ:9900 606042, 8660 495498.

ಬಾಲಕಿಯ ಕುತ್ತಿಗೆಯಲ್ಲಿ 3.5 ಕೆ.ಜಿ. ತೂಕದ ಗಡ್ಡೆ

ಬೆಂಗಳೂರು: ಗುಜರಾತಿನ 15 ವರ್ಷದ ಬಾಲಕಿಯ ಕುತ್ತಿಗೆಯ ಭಾಗ ದಲ್ಲಿ ಬೆಳೆದಿದ್ದ 3.5 ಕೆ.ಜಿ. ತೂಕದ ಗಡ್ಡೆಯನ್ನು ಆಸ್ಟರ್ ಸಿಎಂಐ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಕೃಷಿ ದಂಪತಿಯ ಪುತ್ರಿ ಸುರಭಿ ಬೇನ್‌ಗೆ ಚಿಕ್ಕವಳಿರುವಾಗಲೇ ಮುಖದ ಸುತ್ತ ಚಿಕ್ಕದಾಗಿ ಗಡ್ಡೆ ಕಾಣಿಸಿಕೊಂಡಿತ್ತು. ಬಳಿಕ ಅದು ದೊಡ್ಡದಾಗಿ ಕುತ್ತಿಗೆಯನ್ನು ಆವರಿಸಿಕೊಂಡಿತು. ಇದರಿಂದ ಆಕೆ ಶಾಲೆಯನ್ನು ತೊರೆಯಬೇಕಾಯಿತು.

ಸರ್ಕಾರೇತರ ಸಂಸ್ಥೆಗಳು ಬಾಲಕಿಯ ಶಸ್ತ್ರಚಿಕಿತ್ಸೆಗೆ ₹ 70 ಲಕ್ಷ ವ್ಯವಸ್ಥೆ ಮಾಡಿದವು. 21 ಮಂದಿ ವೈದ್ಯರ ತಂಡವು ಶಸ್ತ್ರಚಿಕಿತ್ಸೆಯ ಮೂಲಕ ಗಡ್ಡೆಯನ್ನು ತೆಗೆ ದಿದ್ದು, ಬಾಲಕಿ ಸುರಭಿ ಬೇನ್ ಈಗ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡಿದ್ದಾಳೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಟೋಲ್‌ಗಳಲ್ಲಿ ಎನ್‌ಎಚ್‌ಎಐನಿಂದ ಸಹಾಯ ಕೇಂದ್ರ: ದುಪ್ಪಟ್ಟು ಶುಲ್ಕಕ್ಕೆ ಆಕ್ರೋಶ, ವಾಗ್ವಾದ

ಸ್ಥಳೀಯರಿಗೆ ಹೊರೆಯಾದ 'ಫಾಸ್ಟ್ಯಾಗ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫಾಸ್ಟ್ಯಾಗ್ ಬಳಕೆಯ ಕಡ್ಡಾಯ ಜಾರಿ ಹಾಗೂ ಫಾಸ್ಟ್ಯಾಗ್ ಇಲ್ಲದಿದ್ದ ಸಂದರ್ಭದಲ್ಲಿ ದುಪ್ಪಟ್ಟು ಶುಲ್ಕ ವಸೂಲಿ ಮಾಡುವ ಆದೇಶ ವಿವಿಧೆಡೆ ಟೋಲ್ ಪ್ಲಾಜಾಗಳಲ್ಲಿ ವಾಹನ ಮಾಲೀಕರು, ಚಾಲಕರು ಮತ್ತು ಸಿಬ್ಬಂದಿ ನಡುವೆ ವಾಗ್ವಾದಕ್ಕೆ ಕಾರಣವಾಯಿತು.

ಆಸುಪಾಸಿನ ರೈತರು, ಸ್ಥಳೀಯರಿಗೂ ವಿನಾಯಿತಿ ನೀಡಿಲ್ಲ ಎಂಬ ಆಕ್ರೋಶವೂ ವ್ಯಕ್ತವಾಗಿದೆ. ಗೊಂದಲ ಬಗೆಹರಿಸುವ ಕ್ರಮವಾಗಿ ಹೆದ್ದಾರಿ ಪ್ರಾಧಿಕಾರವು ವಿವಿಧ ಟೋಲ್‌ಗಳಲ್ಲಿ ಸಹಾಯ ಕೇಂದ್ರ ತೆರೆದು ಫಾಸ್ಟ್ಯಾಗ್ ವಿತರಣೆಗೆ ಕ್ರಮವಹಿಸಿದೆ.

ಫಾಸ್ಟ್ಯಾಗ್ ನಿಯಮದಿಂದ ಚಿತ್ರದುರ್ಗ–ಹಿರಿಯೂರು ನಡುವೆ ಸೇವೆ ಒದಗಿಸುವ ಕ್ರೂಸರ್ ಮಾಲೀಕರು ಸಮಸ್ಯೆಗೆ ಸಿಲುಕಿದ್ದಾರೆ. ಶುಲ್ಕವನ್ನು ಡಿಜಿಟಲ್ ಸ್ವರೂಪದಲ್ಲಿ ವಸೂಲಿ ಮಾಡುವುದು ಸ್ಥಳೀಯರಿಗೆ ಹೊರೆಯಾಗಿ ಪರಿಣಮಿಸಿದೆ.

ಕ್ರೂಸರ್‌ಗಳು ಮಾಸಿಕ ಪಾಸ್ ಪಡೆದು ಸಂಚರಿಸುತ್ತಿದ್ದವು. ಈಗ ನಿತ್ಯ ₹ 120 ಕೊಡಬೇಕಿದೆ. ಜಮೀನಿಗೆ ತೆರಳುವ ರೈತರಿಗೂ ವಿನಾಯಿತಿ ಸಿಕ್ಕಿಲ್ಲ. ಹಿರಿಯೂರು-ಚಿತ್ರದುರ್ಗ ನಡುವೆ ಸಂಚರಿಸುವ ವಾಹನ ಸವಾರರು ಈಗ ಮೇಟಿಕುರ್ಕೆ, ಸೂರಗೊಂಡನಹಳ್ಳಿ, ಹುಲಿಕೆರೆ, ಸಿ.ಎನ್.ಮಾಳಿಗೆ ಮೂಲಕ ಸಂಚರಿಸುತ್ತಿದ್ದಾರೆ.

ದುಪ್ಪಟ್ಟು ದರ ಕೊಡಲು ತಕರಾರು: ದಾವಣಗೆರೆ ಹೊರವಲಯದ ಹೆಬ್ಬಾಳು ಟೋಲ್ ಪ್ಲಾಜಾದಲ್ಲಿ ಮಂಗಳವಾರ ಕೆಲವರು ಸಿಬ್ಬಂದಿ ಜೊತೆಗೆ ವಾಗ್ವಾದಕ್ಕಿಳಿದರು. ಫಾಸ್ಟ್ಯಾಗ್ ಇಲ್ಲದವರು ಸರತಿ ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಬಂತು. ಸೋಮವಾರ ಮಧ್ಯ ರಾತ್ರಿಯಿಂದ ಮಂಗಳವಾರ ಮಧ್ಯಾಹ್ನದವರೆಗೆ 800ಕ್ಕೂ ಹೆಚ್ಚು ವಾಹನಗಳಿಗೆ ದುಪ್ಪಟ್ಟು ಶುಲ್ಕ ವಿಧಿಸಲಾಗಿದೆ.

ಹೆಬ್ಬಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯವರೆಗೆ ಬಿಳಿಯ ಬೋರ್ಡ್ ಇರುವ ವಾಹನಗಳಿಗೆ ಮಾತ್ರ ವಿನಾಯಿತಿ ನೀಡಲಾಗಿದೆ. ಶುಲ್ಕ ದುಪ್ಪಟ್ಟಾಗಿರುವುದರಿಂದ ಹಲವರು ಪರ್ಯಾಯ ಮಾರ್ಗಗಳಲ್ಲಿ ಕಣ್ಣು ತಪ್ಪಿಸಿ ಸಂಚರಿಸುತ್ತಿದ್ದಾರೆ.

ಮೈಸೂರು- ಒಂದು ರಸ್ತೆ, ಎರಡು ಕಡೆ ಟೋಲ್ (ಮೈಸೂರು): ಕೇರಳ-ಕರ್ನಾಟಕ ಸಂಪರ್ಕಿಸುವ ಕೋಯಿಕ್ಕೋಡ್–ಕೊಳ್ಳೇಗಾಲ ರಾಷ್ಟ್ರೀಯ ಹೆದ್ದಾರಿ ಮೈಸೂರು ಜಿಲ್ಲೆಯಲ್ಲಿ ಹಾದು ಹೋಗಿದ್ದು, ಎರಡು ಕಡೆ ಟೋಲ್ ಸಂಗ್ರಹಿಸಲಾಗುತ್ತಿದೆ. ಫಾಸ್ಟ್ಯಾಗ್ ಕಡ್ಡಾಯಗೊಂಡ ಬೆನ್ನಲೇ ಟೋಲ್ ಸಿಬ್ಬಂದಿ ದರ ಪಟ್ಟಿ ತೆರವುಗೊಳಿಸಿದ್ದಾರೆ. ಫಾಸ್ಟ್ಯಾಗ್ ಇಲ್ಲದಿದ್ದರೆ ದುಪ್ಪಟ್ಟು ವಸೂಲಿ ಕ್ರಮ ಮಾತಿನ ಚಕಮಕಿಗೆ ಕಾರಣವಾಗಿದೆ.

ತಿ.ನರಸೀಪುರ ತಾಲ್ಲೂಕಿನ ಯಡದೊರೆ ಬಳಿಯೂ ಟೋಲ್ ಸಂಗ್ರಹ ಕೇಂದ್ರವಿದೆ. ಇಲ್ಲಿ ಚತುಷ್ಪಥ ರಸ್ತೆಯಲ್ಲಿದ್ದರೂ, ಶುಲ್ಕ ಸಂಗ್ರಹಿಸಲು ಸ್ಥಳೀಯರಿಂದ ತೀವ್ರ ವಿರೋಧವಿದೆ. ಸ್ಥಳೀಯರಿಗೆ 20 ಕಿ.ಮೀ. ದೂರದವರೆಗೆ ಪಾಸ್ ಕೊಡಲಾಗಿದೆ.

ಸ್ಥಳೀಯ ವಾಹನಗಳಿಗೂ ಫಾಸ್ಟ್ಯಾಗ್ ಕಡ್ಡಾಯ: ಹಾಸನ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 75 ರ ಶಾಂತಿಗ್ರಾಮದ ಟೋಲ್ ಪ್ಲಾಜಾದಲ್ಲಿ ಫಾಸ್ಟ್ಯಾಗ್ ಇಲ್ಲದಿದ್ದಲ್ಲಿ ದುಪ್ಪಟ್ಟು ಹಣ ವಸೂಲಿ ಮಾಡಲಾಗುತ್ತಿದೆ. ಒಂದು ಪಥ ನಗದು, ಉಳಿದಿದ್ದನ್ನು ಫಾಸ್ಟ್ಯಾಗ್ ಪಥಗಳನ್ನಾಗಿ ನಿಗದಿ ಮಾಡಲಾಗಿದೆ.

ಸ್ಥಳೀಯರಿಗೂ ಫಾಸ್ಟ್ಯಾಗ್ ಕಡ್ಡಾಯ ಮಾಡಲಾಗಿದೆ. 'ಫಾಸ್ಟ್ಯಾಗ್ ಕಡ್ಡಾಯ ಮಾಡಿರುವುದರಿಂದ ಶೇ 75 ವಾಹನಗಳಿಗೆ ಸ್ಟಿಕರ್ ಇದೆ. ಟೋಲ್ ಬಳಿಯೇ ವಾಹನ ಮಾಲೀಕರ ಅಗತ್ಯ ದಾಖಲೆಗಳನ್ನು ನೀಡಿ ಫಾಸ್ಟ್ಯಾಗ್ ಸ್ಟಿಕರ್ ಪಡೆಯಬಹುದು. 'ಸ್ಥಳೀಯರಿಗೆ ಮೊದಲಿನಂತೆ ಗುರುತಿನ ಚೀಟಿ ತೋರಿಸಿದರೆ ಬಿಡುವ ವ್ಯವಸ್ಥೆ ಮಾಡಬೇಕು. ಇಲ್ಲವಾದರೆ ಪ್ರತಿಭಟನೆ ಮಾಡಲಾಗುವುದು' ಎಂದು ಮಡೇನೂರು ನಿವಾಸಿ ಪ್ರದೀಪ್ ತಿಳಿಸಿದರು.

ದುಪ್ಪಟ್ಟು ಶುಲ್ಕ- ಟೋಲ್ ಸಿಬ್ಬಂದಿಯೊಂದಿಗೆ ವಾಗ್ವಾದ (ಹುಬ್ಬಳ್ಳಿ): ಫಾಸ್ಟ್ಯಾಗ್ ಕಡ್ಡಾಯಗೊಳಿಸಿದ್ದರಿಂದ ಹೆಚ್ಚಿನ ವಾಹನಗಳ ಮಾಲೀಕರು ದಂಡ ತೆರಬೇಕಾದ ಸ್ಥಿತಿ ಉತ್ತರ ಕನ್ನಡ, ವಿಜಯನಗರ, ಬೆಳಗಾವಿ ಜಿಲ್ಲೆಯ ಟೋಲ್‌ಗಳಲ್ಲಿ ಮಂಗಳವಾರ ಕಂಡು ಬಂತು. ಅಲ್ಲಲ್ಲಿ ವಾಗ್ವಾದವೂ ನಡೆಯಿತು.

ಕುಮಟಾ ತಾಲ್ಲೂಕಿನ ಹೊಳೆಗದ್ದೆ ಟೋಲ್ ಬಳಿ ವಾಗ್ವಾದದ ಕಾರಣ ಪೊಲೀಸ್ ಬಂದೋಬಸ್ತ್ ಇತ್ತು. ಫಾಸ್ಟ್ಯಾಗ್ ಕುರಿತ ಮಾಹಿತಿ ಇಲ್ಲದೆ ಹೊರ ಜಿಲ್ಲೆಗಳಿಂದ ಬಂದ ವಾಹನ ಸವಾರರು ಹಟ್ಟಿಕೇರಿ ಟೋಲ್ ಬಳಿ ಸಮಸ್ಯೆ ಎದುರಿಸುವಂತಾಯಿತು.

ಹೊಸಪೇಟೆ ನಗರ ಹೊರವಲಯದ ರಾಷ್ಟ್ರೀಯ ಹೆದ್ದಾರಿ 50ರ ಹಿಟ್ನಾಳ್, ಮರಿಯಮ್ಮನಹಳ್ಳಿಯ ಟೋಲ್ ಕೇಂದ್ರ, ಬೆಳಗಾವಿ ಜಿಲ್ಲೆಯ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಹಿರೇಬಾಗೇವಾಡಿ ಮತ್ತು ಹತ್ತರಗಿ ಟೋಲ್ ಪ್ಲಾಜಾ, ನಿಪ್ಪಾಣಿ ತಾಲ್ಲೂಕಿನ ಕೊಗನೋಳಿಯ ಟೋಲ್‌ನಲ್ಲಿಯೂ ಬಹುತೇಕ ಇಂಥದೇ ಸ್ಥಿತಿ ಕಂಡುಬಂದಿತು.

ಹುಬ್ಬಳ್ಳಿ ಹೊರವಲಯದ ಗಬ್ಬೂರ್ ಬೈಪಾಸ್‌ನಲ್ಲಿ ಎಂದಿನಂತೆ ದರ ಪಡೆಯಲಾಯಿತು. ಮುಂಡರಗಿ ತಾಲ್ಲೂಕಿನ ಕೊರ್ಲಹಳ್ಳಿ ಗ್ರಾಮದ ಟೋಲ್‌ನಲ್ಲಿ ಕೆಆರ್‌ಡಿಸಿಎಲ್ ಫಾಸ್ಟ್ಯಾಗ್ ವ್ಯವಸ್ಥೆ ಕಲ್ಪಿಸಿಲ್ಲ. ಡಂಬಳ ಸಮೀಪದ ಪಾಪನಾಶಿ ಟೋಲ್‌ನಲ್ಲಿ ಬಹುತೇಕ ವಾಹನ ಚಾಲಕರು ಫಾಸ್ಟ್ಯಾಗ್ ಬಳಕೆ ಮಾಡುತ್ತಿಲ್ಲ.



ತುಮಕೂರು ರಸ್ತೆಯ ಟೋಲ್ ಪ್ಲಾಜಾ ಬಳಿ ಮಂಗಳವಾರ ಕಂಡುಬಂದ ದೃಶ್ಯ – ಪ್ರಜಾವಾಣಿ ಚಿತ್ರ

ಕಲಬುರ್ಗಿ: ಸ್ಥಳೀಯರಿಗೆ ಪಾಸ್

ಕಲಬುರ್ಗಿ: ಕಲಬುರ್ಗಿ, ಬೀದರ್, ಕೊಪ್ಪಳ ಜಿಲ್ಲೆಯ ಹೆದ್ದಾರಿಗಳಲ್ಲಿರುವ ಟೋಲ್‌ಪ್ಲಾಜಾಗಳ 20 ಕಿ.ಮೀ. ಆಸುಪಾಸಿನಲ್ಲಿರುವ ಗ್ರಾಮಸ್ಥರ ವಾಹನಗಳಿಗೆ ₹ 275 ಶುಲ್ಕ ಪಡೆದು ಮಾಸಿಕ ಪಾಸ್ ನೀಡಲಾಗುತ್ತಿದೆ.

ಬೀದರ್ ಜಿಲ್ಲೆಯಲ್ಲಿ ಸ್ಥಳೀಯ ನೋಂದಣಿಯ ಶಾಲಾ ವಾಹನಗಳಿಗೆ ಅರ್ಧದಷ್ಟು ಶುಲ್ಕ ವಿಧಿಸಲಾಗಿದೆ. ಹೊರ ಜಿಲ್ಲೆ ನೋಂದಣಿ ಸಂಖ್ಯೆ ಇದ್ದರೆ ಪೂರ್ಣ ಶುಲ್ಕ ಆಕರಿಸಲಾಗುತ್ತಿದೆ. ಪೂರ್ಣ ಶುಲ್ಕ ವಸೂಲಿ ಕ್ರಮ ಚಿಟಗುಪ್ಪ ತಾಲ್ಲೂಕಿನ ಮಂಗಲಗಿ ಸಮೀಪದ ಟೋಲ್ ಪ್ಲಾಜಾದಲ್ಲಿ ವಾಗ್ವಾದಕ್ಕೆ ಆಸ್ಪದವಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಸೊಲ್ಲಾಪುರ-ಚಿತ್ರದುರ್ಗ, ಗುತ್ತಿ-ಅಂಕೋಲಾ ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗಿವೆ. ಇಲ್ಲಿ ಸರ್ವಿಸ್ ರಸ್ತೆ ಇಲ್ಲ, ಅದನ್ನು ಮಾಡುವವರೆಗೆ ಟೋಲ್ ಶುಲ್ಕ ಪಡೆಯಬಾರದು ಎಂದು ಹಿಟ್ನಾಳ, ಹೊಸಹಳ್ಳಿ, ಮುನಿರಾಬಾದ್ ಗ್ರಾಮಸ್ಥರು ಟೋಲ್ ಗೇಟ್ ಬಳಿ ಪಟ್ಟು ಹಿಡಿದರು. ಈ ಸಂಬಂಧ ಕೊಪ್ಪಳ ಜಿಲ್ಲಾಧಿಕಾರಿಗೂ ಮನವಿ ಸಲ್ಲಿಸಿದರು.

ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಸೊನ್ನ ಕ್ರಾಸ್ ಬಳಿ ಇರುವ ಟೋಲ್‌ನಲ್ಲಿ ಫಾಸ್ಟ್ಯಾಗ್ ವಿತರಣೆಗೆ ಸಹಾಯ ಕೇಂದ್ರ ತೆರೆದಿದೆ. ಫಾಸ್ಟ್ಯಾಗ್ ಅಳವಡಿಕೆಗೆ ಸಿಬ್ಬಂದಿ ಚಾಲಕರ ಮನವೊಲಿಸಿದರು.

ವಿನಾಯಿತಿಗೆ ಸ್ಥಳೀಯರ ಪಟ್ಟು

ಮಂಗಳೂರು: ಫಾಸ್ಟ್ಯಾಗ್ ಕಡ್ಡಾಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದು, ಸ್ಥಳೀಯರಿಗೆ ವಿನಾಯಿತಿನೀಡಲು ಆಗ್ರಹಿಸಿ ಉಡುಪಿ ಜಿಲ್ಲೆಯ ಸಾಸ್ತಾನ ಹಾಗೂ ಹೆಜಮಾಡಿ ಟೋಲ್ ಪ್ಲಾಜಾ ಬಳಿ ಪ್ರತಿಭಟನೆ ನಡೆದವು.

ದಕ್ಷಿಣ ಕನ್ನಡ ಜಿಲ್ಲೆಯ ತಲಪಾಡಿ, ಬ್ರಹ್ಮರಕೂಟ್ಲು ಟೋಲ್‌ಗೇಟ್‌ಗಳಲ್ಲಿ ಫಾಸ್ಟ್ಯಾಗ್ ಇಲ್ಲದ ವಾಹನಗಳ ಮಾಲೀಕರಿಂದ ದುಪ್ಪಟ್ಟು ಶುಲ್ಕ ಸಂಗ್ರಹಿಸಲಾಯಿತು. ಸುರತ್ಕಲ್ ಟೋಲ್‌ನಲ್ಲಿ ಸ್ಥಳೀಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ನೀಡಿದ್ದು, ಮಂಗಳವಾರ ಯಾವುದೇ ತೊಂದರೆ ಆಗಿಲ್ಲ.

ಫಾಸ್ಟ್ಯಾಗ್ ಇಲ್ಲದ್ದರಿಂದ ವಾಹನಗಳ ಸರದಿ ಕಂಡುಬಂತು. ಟೋಲ್‌ಗೇಟ್‌ಗಳ ಬಳಿ ವಿವಿಧ ಕಂಪನಿಗಳು ಹಾಗೂ ಹೆದ್ದಾರಿ ಪ್ರಾಧಿಕಾರದಿಂದ ಫಾಸ್ಟ್ಯಾಗ್ ವಿತರಣೆಗೆ ಕೌಂಟರ್ ತೆರೆಯಲಾಗಿದೆ. 'ಶೇ 30ರಷ್ಟು ವಾಹನಗಳು ಫಾಸ್ಟ್ಯಾಗ್ ಅಳವಡಿಸಿಲ್ಲ. ಫಾಸ್ಟ್ಯಾಗ್ ಒದಗಿಸಿ ನಗದು ರಹಿತ ವ್ಯವಸ್ಥೆಗೆ ಕ್ರಮವಹಿಸಲಾಗುತ್ತಿದೆ' ಎಂದು ನವಯುಗ್ ಉಡುಪಿ ಟೋಲ್ ವ್ಯವಸ್ಥಾಪಕ ಶಿವಪ್ರಸಾದ್ ರೈ ಹೇಳಿದರು.

ಸುದ್ದಿ 2 ನಿಮಿಷ

ಕ್ವಾರಿ ಮಾಲೀಕರ ದೂರು: ಇಬ್ಬರು ಅಧಿಕಾರಿಗಳು ಸಸ್ಪೆಂಡ್

ಬಾಗಲಕೋಟೆ: ಇಲ್ಲಿನ ಪ್ರವಾಸಿ ಮಂದಿರದಲ್ಲಿ ಜಿಲ್ಲೆಯ ಕಲ್ಲು ಕ್ವಾರಿಗಳು ಹಾಗೂ ಗಣಿ ಮಾಲೀಕರೊಂದಿಗೆ ಮಂಗಳವಾರ ಸಭೆ ನಡೆಸಿದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವ ಮುರುಗೇಶ ನಿರಾಣಿ, ಅಲ್ಲಿ ಕೇಳಿಬಂದ ದೂರುಗಳ ಹಿನ್ನೆಲೆಯಲ್ಲಿ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸಿ ಆದೇಶಿಸಿದರು.

ಸಭೆಯ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಕಲ್ಲು ಕ್ವಾರಿಗಳ ಮಾಲೀಕರಿಗೆ ಕಿರುಕುಳ ನೀಡಿದ ಹಾಗೂ ವ್ಯಾಪಕ ಭ್ರಷ್ಟಾಚಾರದ ಆರೋಪದ ಮೇಲೆ ಬಾಗಲಕೋಟೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕಚೇರಿಯ ಭೂ ವಿಜ್ಞಾನಿ ಫಯಾಜ್ ಅಹಮದ್ ಶೇಖ್ ಹಾಗೂ ಈ ಹಿಂದೆ ಇಲ್ಲಿ ಕೆಲಸ ಮಾಡಿ ಸದ್ಯ ಚಿತ್ರದುರ್ಗಕ್ಕೆ ವರ್ಗಾವಣೆಯಾಗಿರುವ ಹಿರಿಯ ಭೂ ವಿಜ್ಞಾನಿ ಬಿ.ಎಂ.ಲಿಂಗರಾಜು ಅವರನ್ನು ಅಮಾನತು ಮಾಡಲಾಗಿದೆ ಎಂದು ತಿಳಿಸಿದರು.

ಸಚಿವರು ಕರೆದಿದ್ದ ಸಭೆಗೆ ಮಾಧ್ಯಮದವರಿಗೆ ಪ್ರವೇಶವಿರಲಿಲ್ಲ. ಸಭೆಯಲ್ಲಿ ಪಾಲ್ಗೊಂಡಿದ್ದ ಫಯಾಜ್ ಅಹಮದ್ ಅರ್ಧದಲ್ಲಿಯೇ ಹೊರ ನಡೆದಿದ್ದರು. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕರೆ ಮಾಡಿದರೆ ಅವರು ಸ್ವೀಕರಿಸಲಿಲ್ಲ.

ಹಸುವಿನ ಹೊಟ್ಟೆಯಲ್ಲಿತ್ತು 40 ಕೆ.ಜಿ. ಪ್ಲಾಸ್ಟಿಕ್!

ಕೋಣಂದೂರು (ತೀರ್ಥಹಳ್ಳಿ ತಾ.): ಸಮೀಪದ ಹೊರಬೈಲ್ ಗ್ರಾಮದ ಸುಧೀರ್ ಭಟ್ ಅವರು ಸಾಕಿಕೊಂಡಿದ್ದ ಹಸುವಿನ ಹೊಟ್ಟೆಯಲ್ಲಿದ್ದ 40 ಕೆ.ಜಿ. ಪ್ಲಾಸ್ಟಿಕ್ ಅನ್ನು ಪಶು ವೈದ್ಯಾಧಿಕಾರಿ ಡಾ.ಆನಂದ್ ಅವರು ಶಸ್ತ್ರಚಿಕಿತ್ಸೆ ಮಾಡಿ ಹೊರತೆಗೆದಿದ್ದಾರೆ.

ಮಲೆನಾಡು ತಳಿಯ ಈ ಹಸು ಕೆಲ ದಿನಗಳಿಂದ ಮೇವು ತಿನ್ನದೇ, ಮೆಲುಕು ಹಾಕದೇ ಹೊಟ್ಟೆ ಉಬ್ಬರಿಸಿತ್ತು. ಡಾ.ಆನಂದ್ ಪರೀಕ್ಷಿಸಿ ಶಸ್ತ್ರ-ಚಿಕಿತ್ಸೆ ನಡೆಸಿದ್ದು, 40 ಕೆ.ಜಿ.ಗೂ ಹೆಚ್ಚು ಮೇವು ರಸಮಿಶ್ರಿತ ಗಟ್ಟಿಯಾದ ಪ್ಲಾಸ್ಟಿಕ್ ಅನ್ನು ಹೊರ ತೆಗೆದಿದ್ದಾರೆ.

'ರಸ್ತೆ ಬದಿಯಲ್ಲಿ ಪ್ಲಾಸ್ಟಿಕ್ ಮತ್ತು ಕಸವನ್ನು ಎಲ್ಲೆಂದರಲ್ಲಿ ಎಸೆಯುವುದರಿಂದ ಜಾನುವಾರು ಇಂತಹ ಆಪತ್ತಿಗೆ ಸಿಲುಕುತ್ತವೆ. ಜನರು ಪರಿಸರಕ್ಕೆ ಹಾನಿಯಾದ ಪ್ಲಾಸ್ಟಿಕ್ ಅನ್ನು ಮಿತಿಯಲ್ಲಿ ಬಳಸಬೇಕು. ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಮೂಕ ಪ್ರಾಣಿಗಳ ಜೀವಕ್ಕೆ ಸಂಚಕಾರ ತರದಂತೆ ಎಚ್ಚರ ವಹಿಸಬೇಕು' ಎಂದೂ ಡಾ.ಆನಂದ ಸಲಹೆ ನೀಡಿದ್ದಾರೆ. ಪಶು ವೈದ್ಯಕೀಯ ಸಹಾಯಕ ಸಚಿನ್, ಸುಧೀರ್ ಭಟ್ ಇದ್ದರು.

ಪ್ರಾಥಮಿಕ ಶಾಲಾರಂಭಕ್ಕೆ ಒತ್ತಡ

ಒಂದನೇ ಪುಟದಿಂದ

ವಿಡಿಯೊ ಸಂವಾದ: 'ಶಾಲೆಗಳ ಸುರಕ್ಷತೆ ಮತ್ತು ನಿಯಮಗಳ ಪಾಲನೆಯನ್ನು ಗಮನಿಸುವ ಹಾಗೂ ಸ್ಥಳೀಯ ಅಗತ್ಯಗಳಿಗೆ ಅನುಸಾರವಾಗಿ ಶಾಲೆಗಳನ್ನು ಆರಂಭಿಸುವ ಕುರಿತಂತೆ ಕೆಲ ಮಾರ್ಗದರ್ಶಿ ಸೂತ್ರಗಳನ್ನು ವಿವರಿಸುವ ಸಂಬಂಧ ಶೀಘ್ರದಲ್ಲೇ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೊ ಸಂವಾದ ನಡೆಸಲಾಗುವುದು' ಎಂದು ತಿಳಿಸಿದರು.

'ವಿದ್ಯಾರ್ಥಿಗಳ ಹಾಜರಾತಿಗೆ ಅನುಗುಣವಾಗಿ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು ವಿದ್ಯಾರ್ಥಿನಿಲಯಗಳನ್ನು ತೆರೆಯಲಿದ್ದಾರೆ. ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ಸಾರಿಗೆ ಸಂಸ್ಥೆಯ ನಿಗಮಗಳು ಬಸ್ ಚಾಲನೆಗೆ ಕ್ರಮಗಳನ್ನು ಕೈಗೊಳ್ಳಲಿವೆ. ಈ ಕುರಿತಂತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ' ಎಂದೂ ಹೇಳಿದರು.

ರಾಘವೇಂದ್ರ ರಾಜ್‌ಕುಮಾರ್ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯದಲ್ಲಿ ಏರುಪೇರು ಉಂಟಾದ ಕಾರಣದಿಂದಾಗಿ ನಟ ರಾಘವೇಂದ್ರ ರಾಜ್‌ಕುಮಾರ್ ಅವರನ್ನು ಯಶವಂತಪುರದ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಪಾಲ್ಪಿಟೇಷನ್ಸ್' (ಅನಾರೋಗ್ಯದ ಕಾರಣ ಹೃದಯಬಡಿತದಲ್ಲಿ ಆಗುವ ಏರುಪೇರು) ಕಾರಣದಿಂದ ಮಂಗಳವಾರ ಸಂಜೆ ಆಸ್ಪತ್ರೆಗೆ ದಾಖಲಾಗಿದ್ದರು. ಸದ್ಯ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಕೊಲಂಬಿಯಾ ಏಷಿಯಾ ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಮಂಗಳವಾರ ಬೆಳಗ್ಗೆ 9 ಗಂಟೆಯಿಂದ 'ಬೆಳಕು' ಚಿತ್ರದ ಚಿತ್ರೀಕರಣದಲ್ಲಿ ಭಾಗವಹಿಸಿದ್ದ ರಾಘವೇಂದ್ರ ರಾಜ್‌ಕುಮಾರ್ ಸಂಜೆ 4 ಗಂಟೆಯವರೆಗೂ ಚಿತ್ರೀಕರಣದ ಸ್ಥಳದಲ್ಲೇ ಇದ್ದರು.

'ಸೋಮವಾರದಿಂದ 'ಬೆಳಕು' ಚಿತ್ರದ ಚಿತ್ರೀಕರಣ ಆರಂಭವಾಗಿದ್ದು, ಸಂಜೆ 4.15ಕ್ಕೆ ಸಾಮಾನ್ಯ ಆರೋಗ್ಯ ತಪಾಸಣೆ ಇದೆ ಎಂದು ರಾಘವೇಂದ್ರ ರಾಜ್‌ಕುಮಾರ್ ತಿಳಿಸಿದ್ದರು. ಮಧ್ಯಾಹ್ನ ಸುದ್ದಿಗೋಷ್ಠಿಯಲ್ಲೂ ಅವರು ಭಾಗವಹಿಸಿದ್ದರು ಎಂದು ಚಿತ್ರದ ನಿರ್ದೇಶಕ ಮಂಜುನಾಥ್ ಮಾಹಿತಿ ನೀಡಿದರು.

ಆಸ್ಪತ್ರೆಗೆ ಅವರ ಕುಟುಂಬದ ಸದಸ್ಯರು ಭೇಟಿ ನೀಡಿದ್ದಾರೆ. ರಾಘವೇಂದ್ರ ರಾಜ್‌ಕುಮಾರ್ ಅವರ ಕೈಯಲ್ಲಿ ಈಗ ಕ್ಯಾಪ್ಟನ್ ರಾಜಾರಾಂ ಚಿತ್ರ ಇದೆ. ನಿವೃತ್ತ ಸೈನಿಕನ ಬದುಕಿನ ಕಥೆ ಆಧರಿಸಿದ ಚಿತ್ರ ನಿರ್ಮಾಣದ ಹಂತದಲ್ಲಿದೆ.

ಫಾಸ್ಟ್ಯಾಗ್; ದುಪ್ಪಟ್ಟು ಶುಲ್ಕ– ವಾಗ್ವಾದ

ಒಂದನೇ ಪುಟದಿಂದ

ದಟ್ಟಣೆಯಲ್ಲಿ ಸಿಲುಕಿ ಕಂಗೆಟ್ಟ ಪ್ರಯಾಣಿಕರೊಬ್ಬರು, ಟೋಲ್‌ಗೇಟ್‌ನ ಕಂಬವನ್ನು ತೆಗೆದು ವಾಹನಗಳು ಮುಂದಕ್ಕೆ ಕಳುಹಿಸಿದ್ದು ನೆಲಮಂಗಲ ಟೋಲ್‌ಗೇಟ್ ಬಳಿ ನಡೆಯಿತು.

'ಫಾಸ್ಟ್ಯಾಗ್ ವ್ಯವಸ್ಥೆಯೇ ಸರಿ ಇಲ್ಲ. ಸಾಕಷ್ಟು ಸಮಸ್ಯೆಗಳು ಇವೆ. ಅದನ್ನು ಸರಿಪಡಿಸುವ ಬದಲು ಫಾಸ್ಟ್ಯಾಗ್ ಕಡ್ಡಾಯ ಮಾಡಿರುವುದು ಸರಿಯಲ್ಲ' ಎಂದು ಚಾಲಕರು ವಾದಿಸಿದರು.

ಟೋಲ್ ಬಳಿಯೇ ಮಳಿಗೆ: ಫಾಸ್ಟ್ಯಾಗ್ ಅಳವಡಿಸಿಕೊಳ್ಳದ ಚಾಲಕರಿಗೆ, ಫಾಸ್ಟ್ಯಾಗ್ ಪಡೆದುಕೊಳ್ಳಲು ಅನುಕೂಲವಾಗುವಂತೆ ಟೋಲ್ ಬಳಿಯೇ ಮಳಿಗೆ ತೆರೆಯಲಾಗಿದೆ. ಅಲ್ಲಿಯೂ ಸರದಿಯಲ್ಲಿ ನಿಂತು ಚಾಲಕರು, ಫಾಸ್ಟ್ಯಾಗ್ ಸ್ಟಿಕರ್ ಪಡೆಯುತ್ತಿದ್ದ ದೃಶ್ಯಗಳು ಕಂಡುಬಂದವು.

'ಫಾಸ್ಟ್ಯಾಗ್ ಸ್ಟಿಕರ್ ಅಳವಡಿಕೆ ಹೆಚ್ಚಳ

ಫಾಸ್ಟ್ಯಾಗ್ ಕಡ್ಡಾಯ ಆದೇಶ ಮಾಡಿದ್ದರಿಂದಾಗಿ ಕಳೆದ ವಾರಕ್ಕೆ ಹೋಲಿಸಿದರೆ, ಈ ವಾರ ಫಾಸ್ಟ್ಯಾಗ್ ಪಡೆದವರ ಸಂಖ್ಯೆ ಶೇ 70ರಷ್ಟು ಹೆಚ್ಚಿದೆ' ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಪ್ರಾದೇಶಿಕ ಅಧಿಕಾರಿ ಆರ್.ಕೆ. ಸೂರ್ಯವಂಶಿ ತಿಳಿಸಿದ್ದಾರೆ.

'ರಾಜ್ಯದಲ್ಲಿ 45 ಟೋಲ್‌ಗೇಟ್‌ಗಳಿದ್ದು, 488 ಸಾಲುಗಳಿವೆ. ಪ್ರತಿಯೊಬ್ಬರೂ ಫಾಸ್ಟ್ಯಾಗ್ ಪಡೆದರೆ ತಡೆರಹಿತ ಪ್ರಯಾಣ ಮಾಡಬಹುದು' ಎಂದೂ ತಿಳಿಸಿದ್ದಾರೆ. 'ಎರಡು ಬಗೆಯ ಫಾಸ್ಟ್ಯಾಗ್ ನೀಡಲಾಗುತ್ತಿದೆ. ಒಂದೂ ಖಾತೆಯಲ್ಲಿ ಕನಿಷ್ಠ ₹ 250 ನಿರ್ವಹಣೆ ಮಾಡಿ ಸ್ಟಿಕರ್ ಪಡೆಯುವುದು. ಇನ್ನೊಂದು ಕೇವಲ ₹ 100 ಪಾವತಿಸಿ ಭಾರತೀಯ ಹೆದ್ದಾರಿ ನಿರ್ವಹಣಾ ಕಂಪನಿಯಿಂದ (ಐಎಚ್‌ಎಂಸಿಎಲ್) ಸ್ಟಿಕರ್ ತೆಗೆದುಕೊಳ್ಳಬಹುದು' ಎಂದೂ ಹೇಳಿದ್ದಾರೆ.

ಸ್ಥಳೀಯರಿಗೂ ಇಲ್ಲ ರಿಯಾಯಿತಿ: ಬಹುತೇಕ ಟೋಲ್‌ಗೇಟ್‌ಗಳಲ್ಲಿ ಸ್ಥಳೀಯರಿಗೂ ರಿಯಾಯಿತಿ ಇರಲಿಲ್ಲ. 'ನಿತ್ಯವೂ ಇದೇ ರಸ್ತೆಯಲ್ಲಿ ಹೋಗುತ್ತೇವೆ. ಇಂದು ಏಕೆ ಅವಕಾಶ ನೀಡುತ್ತಿಲ್ಲ' ಎಂದು ಸ್ಥಳೀಯ ಚಾಲಕರು ಪ್ರಶ್ನಿಸಿದರು.

'ಸ್ಥಳೀಯರ ಓಡಾಟಕ್ಕೆ ಹೆದ್ದಾರಿ ಪಕ್ಕವೇ ಸರ್ವೀಸ್ ರಸ್ತೆ ಇದೆ. ಅಲ್ಲಿಯೇ ಸಂಚರಿಸಿ. ಹೆದ್ದಾರಿಗೆ ಬರಬೇಡಿ. ಬಂದರೆ, ಶುಲ್ಕ ಪಾವತಿ ಮಾಡಲೇಬೇಕು' ಎಂದು ಸಿಬ್ಬಂದಿ ಹೇಳಿದರು. ಈ ವಿಷಯದಲ್ಲೂ ವಾಗ್ವಾದ ಸಾಮಾನ್ಯವಾಗಿತ್ತು.

ರಕ್ಷಾ ರಾಮಯ್ಯ ಯುವ ಕಾಂಗ್ರೆಸ್ ಅಧ್ಯಕ್ಷ: ಸುರಭಿ ದ್ವಿವೇದಿ ಸ್ಪಷ್ಟನೆ

ಬೆಂಗಳೂರು: 'ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ರಕ್ಷಾ ರಾಮಯ್ಯ ಚುನಾವಣೆಯಲ್ಲಿ ಆಯ್ಕೆಯಾಗಿದ್ದು, ಈ ವಿಚಾರದಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕದ ಉಸ್ತುವಾರಿ ಸುರಭಿ ದ್ವಿವೇದಿ ಸ್ಪಷ್ಟಪಡಿಸಿದರು.

ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಗೊಂದಲಗಳ ಕುರಿತು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪದಾಧಿಕಾರಿಗಳು, ಪಕ್ಷದ ಕಾರ್ಯಕರ್ತರಿಂದ ಮಾಹಿತಿ ಕ್ರೋಢೀಕರಿಸಿದ ಬಳಿಕ ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಎರಡು ವಾರಗಳಿಂದ ಈ ಕುರಿತು ಉಂಟಾಗಿರುವ ಗೊಂದಲಗಳಿಗೆ ತೆರೆ ಎಳೆದರು. 'ಪಕ್ಷದ ಆಂತರಿಕ ಸಮಸ್ಯೆಗಳನ್ನು ಪಕ್ಷದ ವೇದಿಕೆಯಲ್ಲಿಯೇ ಬಗೆಹರಿಸಿಕೊಳ್ಳುತ್ತೇವೆ. ಬ್ಲಾಕ್ ಕಾಂಗ್ರೆಸ್ ಘಟಕದ ಚುನಾವಣೆಯಲ್ಲಿ ಸೋತವರು ನಮ್ಮವರೇ, ಗೆದ್ದವರೂ ನಮ್ಮವರೇ. ಹಲವು ಪ್ರಮುಖ ಯುವ ನಾಯಕರು ಚುನಾವಣೆಯಲ್ಲಿ ಸೋತಿದ್ದಾರೆ. ಅವರಿಗೂ ಪಕ್ಷದ ವಿವಿಧ ಘಟಕಗಳಲ್ಲಿ ಅವಕಾಶ ಕಲ್ಪಿಸುತ್ತೇವೆ. ಎಲ್ಲರಿಗೂ ನ್ಯಾಯ ದೊರಕಿಸಿಕೊಡುವ ಪ್ರಯತ್ನ ಮಾಡಲಾಗುವುದು' ಎಂದರು.

ಅದಕ್ಕೂ ಮೊದಲು ಅವರು, ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಯುವ ಕಾಂಗ್ರೆಸ್ ಕಾರ್ಯಕರ್ತರಿಂದ ಚುನಾವಣೆ ನಡೆದ ವಿಧಾನದ ಬಗ್ಗೆ ಮಾಹಿತಿ ಪಡೆದರು.

ಗಡಿಯಲ್ಲಿ ನಡೆಯುತ್ತಿಲ್ಲ ತಪಾಸಣೆ

ಪ್ರಜಾವಾಣಿ ವಾರ್ತೆ

ಮೈಸೂರು / ಮಡಿಕೇರಿ / ಚಾಮರಾಜನಗರ: ಕೇರಳ ರಾಜ್ಯದಲ್ಲಿ ಮತ್ತೆ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, ಗಡಿ ಭಾಗದ ಜಿಲ್ಲೆಗಳಾದ ಮೈಸೂರು, ಕೊಡಗು ಹಾಗೂ ಚಾಮರಾಜನಗರದಲ್ಲಿ ಆತಂಕ ನೆಲೆಸಿದೆ. ಆದರೆ, ಆ ರಾಜ್ಯದಿಂದ ಬರುವವರಿಗೆ ಕರ್ನಾಟಕದಲ್ಲಿ ಪರೀಕ್ಷೆ ಕಡ್ಡಾಯಗೊಳಿಸಿಲ್ಲ. ಗಡಿಯಲ್ಲಿ ತಪಾಸಣೆಗೆ ವ್ಯವಸ್ಥೆಯನ್ನೂ ಮಾಡಿಲ್ಲ.

'ಕೇರಳದಿಂದ ಬಂದವರನ್ನು ಕಡ್ಡಾಯವಾಗಿ ಪರೀಕ್ಷೆಗೆ ಒಳಪಡಿಸುವ ಸಂಬಂಧ ನಮಗೆ ಯಾವುದೇ ಮಾರ್ಗಸೂಚಿ ಬಂದಿಲ್ಲ. ಗಡಿಯಲ್ಲಿ ಕಾದುಕುಳಿತು ಪರೀಕ್ಷೆ ಮಾಡುವುದಾದರೂ ಹೇಗೆ? ಅವರೇ ಬಂದು ಪರೀಕ್ಷೆ ಮಾಡಿಸಿಕೊಂಡರೆ ಒಳ್ಳೆಯದು' ಎಂದು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಅಮರನಾಥ್ ಪ್ರತಿಕ್ರಿಯಿಸಿದರು.

ವ್ಯಾಸಂಗಕ್ಕಾಗಿ ಕೇರಳದಿಂದ ಮೈಸೂರಿಗೆ ಬರುತ್ತಿದ್ದು, ಅವರಲ್ಲೇ ಸೋಂಕು ಕಾಣಿಸಿಕೊಳ್ಳುತ್ತಿದೆ. ಖಾಸಗಿ ನರ್ಸಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ 53 ವಿದ್ಯಾರ್ಥಿಗಳಲ್ಲಿ ಈಚೆಗೆ ಕೋವಿಡ್ ಪತ್ತೆಯಾಗಿದೆ. ಹೀಗಾಗಿ, ಮೈಸೂರಿನಲ್ಲಿರುವ ಎಲ್ಲಾ ನರ್ಸಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

ಪರೀಕ್ಷೆ ಮಾಡಿಸಿಕೊಳ್ಳಲು ಸೂಚನೆ: ವ್ಯಾಪಾರ, ಪ್ರವಾಸಕ್ಕೆಂದು ಕೇರಳಕ್ಕೆ ಹೋಗಿ ಬಂದವರು ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಕೊಡಗು ಜಿಲ್ಲಾಡಳಿತ ಸೂಚಿಸಿದೆ. ಆದರೆ, ಚೆಕ್‌ಪೋಸ್ಟ್‌ಗಳಲ್ಲಿ ಯಾವುದೇ ಉಷ್ಣಾಂಶ ತಪಾಸಣೆ ನಡೆಯುತ್ತಿಲ್ಲ.

ಕೇರಳದಿಂದ ಕೊಡಗಿಗೆ ಬಂದು, ರೆಸಾರ್ಟ್ ಹಾಗೂ ಹೋಂಸ್ಟೇಗಳಲ್ಲಿ ವಾಸ್ತವ್ಯ ಮಾಡುವವರಿಗೆ ಕೋವಿಡ್ ನೆಗೆಟಿವ್ ವರದಿ ಕಡ್ಡಾಯ ಮಾಡಲಾಗಿದೆ.

ನಿರ್ಬಂಧ ಇಲ್ಲ: ಚಾಮರಾಜನಗರ ಗಡಿಯಲ್ಲಿ ಇದುವರೆಗೆ ಯಾವುದೇ ನಿರ್ಬಂಧ ಹೇರಿಲ್ಲ. ತಪಾಸಣೆಯೂ ನಡೆಯುತ್ತಿಲ್ಲ. ಈ ಬಗ್ಗೆ ಸರ್ಕಾರದಿಂದ ಯಾವುದೇ ನಿರ್ದೇಶನ ಬಂದಿಲ್ಲ ಎಂದು ಚಾಮರಾಜನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಂ.ಸಿ.ರವಿ ತಿಳಿಸಿದ್ದಾರೆ.

ವಿದೇಶಿ ಪ್ರಯಾಣಿಕರು: ನೆಗೆಟಿವ್ ವರದಿ ಕಡ್ಡಾಯ

ಬೆಂಗಳೂರು: ವಿದೇಶಗಳಿಂದ ಇಲ್ಲಿಗೆ ಬರುವವರು ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ತರಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ. ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಕೂಡ ಕೊರೊನಾ ರೂಪಾಂತರ ವೈರಾಣು ಕಾಣಿಸಿಕೊಂಡ ಕಾರಣ ಅಲ್ಲಿಂದ ಬರುವವರು ಸೋಂಕಿತರಾಗಿರದ ಬಗ್ಗೆ ಆರ್‌ಟಿ–ಪಿಸಿಆರ್ ಪರೀಕ್ಷೆ ವರದಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು. ಅವರಿಗೆ ಇಲ್ಲಿನ ವಿಮಾನ ನಿಲ್ದಾಣಗಳಲ್ಲಿ ಕೂಡ ಆರ್‌ಟಿ–ಪಿಸಿಆರ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಸೋಂಕಿತರಾದಲ್ಲಿ ಅವರನ್ನು 14 ದಿನಗಳು ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಿ, ಮಾದರಿಯನ್ನು ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಗೆ ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ. ಸೋಂಕಿತರಾಗಿರದವರು 14 ದಿನಗಳು ಮನೆ ಕ್ವಾರಂಟೈನ್‌ಗೆ ಒಳಪಡಬೇಕು. 7ನೇ ದಿನಕ್ಕೆ ಮತ್ತೊಮ್ಮೆ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಲಾಗುತ್ತದೆ.

ಕೇರಳದಿಂದ ಬರುವವರಿಗೆ 'ನೆಗೆಟಿವ್' ವರದಿ ಕಡ್ಡಾಯ

ಬೆಂಗಳೂರು: ಕೇರಳದಿಂದ ರಾಜ್ಯಕ್ಕೆ ಬರುವವರು 72 ಗಂಟೆಗಳಿಗಿಂತ ಈಚೆಗೆ ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ಪಡೆದ 'ಕೋವಿಡ್ ನೆಗೆಟಿವ್' ವರದಿ ಹೊಂದಿರುವುದನ್ನು ಕಡ್ಡಾಯಗೊಳಿಸಿ ಆರೋಗ್ಯ ಇಲಾಖೆ ಮಂಗಳವಾರ ಸುತ್ತೋಲೆ ಹೊರಡಿಸಿದೆ.

ಕೇರಳದಿಂದ ರಾಜ್ಯಕ್ಕೆ ಬರುವ ಎಲ್ಲ ಜನರ ಮೇಲೆ ವಿಶೇಷ ನಿಗಾ ಇಡುವಂತೆಯೂ ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಸುತ್ತೋಲೆಯಲ್ಲಿ ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳ ಹಿರಿಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಹೋಟೆಲ್, ರೆಸಾರ್ಟ್, ಹಾಸ್ಟೆಲ್, ಹೋಂ ಸ್ಟೇಗಳು ಮತ್ತಿತರ ಕಡೆಗಳಲ್ಲಿ ಕೇರಳದಿಂದ ಹಿಂದಿರುಗಿರುವವರಿಗೆ ಪ್ರವೇಶ ನೀಡುವ ಮುನ್ನ 'ಕೋವಿಡ್ ನೆಗೆಟಿವ್' ವರದಿಯನ್ನು ಖಾತರಿಪಡಿಸಿಕೊಳ್ಳುವುದು ಕಡ್ಡಾಯ. ಕೇರಳದಿಂದ ಬರುವ ವಿದ್ಯಾರ್ಥಿಗಳ ಮಾಹಿತಿಯನ್ನು ಕಾಲೇಜು ಮತ್ತು ಹಾಸ್ಟೆಲ್‌ಗಳ ಪ್ರತಿನಿಧಿಗಳು ಸಕ್ಷಮ ಪ್ರಾಧಿಕಾರದ ಜತೆ ಹಂಚಿಕೊಳ್ಳಬೇಕು. ನೋಡಲ್ ಅಧಿಕಾರಿ ಅನುಮತಿ ಇಲ್ಲದೆ ಪೋಷಕರ ಭೇಟಿಗೆ ಅವಕಾಶ ಕಲ್ಪಿಸುವಂತಿಲ್ಲ. ಊಟದ ಕೊಠಡಿಯಲ್ಲಿ ದಟ್ಟಣೆ ತಡೆಯಲು ಊಟದ ಅವಧಿ ವಿಸ್ತರಿಸಬೇಕು ಎಂದು ತಿಳಿಸಲಾಗಿದೆ.

ಕೇರಳದಿಂದ ಶಾಲಾ, ಕಾಲೇಜುಗಳಿಗೆ ನಿತ್ಯ ಪ್ರಯಾಣ ಮಾಡುವವರು ಪ್ರತಿ 15 ದಿನಗಳಿಗೊಮ್ಮೆ 'ಕೋವಿಡ್ ನೆಗೆಟಿವ್' ವರದಿ ಹಾಜರುಪಡಿಸಬೇಕು. ಕಳೆದ ಎರಡು ವಾರದ ಅವಧಿಯಲ್ಲಿ ಕೇರಳದಿಂದ ರಾಜ್ಯಕ್ಕೆ ಬಂದಿರುವವರು (72 ಗಂಟೆಗಳ ಅವಧಿಯಲ್ಲಿ ಪರೀಕ್ಷೆಗೊಳಗಾದವರ ಹೊರತಾಗಿ) ಆರ್‌ಟಿ–ಪಿಸಿಆರ್ ಮಾದರಿಯಲ್ಲಿ ಕೋವಿಡ್ ಪತ್ತೆ ಪರೀಕ್ಷೆ ಮಾಡಿಸಿಕೊಳ್ಳುವುದು ಕಡ್ಡಾಯ. ಈ ಸೂಚನೆ ಉಲ್ಲಂಘಿಸಿದವರನ್ನು ತಕ್ಷಣವೇ ಕ್ವಾರಂಟೈನ್‌ನಲ್ಲಿ ಇರಿಸಬೇಕು. ನೆಗೆಟಿವ್ ವರದಿ ಲಭ್ಯವಾದ ಬಳಿಕವೇ ಹೊರಹೋಗಲು ಅನುಮತಿ ನೀಡಬೇಕು ಎಂದು ಸೂಚಿಸಲಾಗಿದೆ.

ಸೇನೆ ಹಿಂದಕ್ಕೆ ಹಿಮಾಲಯದ ಲಡಾಖ್ ಬಳಿಯ ವಿವಾದಿತ ಪ್ರದೇಶದಿಂದ ಸೇನೆಯನ್ನು ವಾಪಸ್ ಕರೆಸಿಕೊಳ್ಳುವ ಪ್ರಕ್ರಿಯೆಯನ್ನು ಭಾರತ ಹಾಗೂ ಚೀನಾ ಮಂಗಳವಾರ ಆರಂಭಿಸಿದ್ದು, ಈ ಚಿತ್ರವನ್ನು ಭಾರತೀಯ ಸೇನೆ ಬಿಡುಗಡೆ ಮಾಡಿದೆ

ಇನ್ನು ಮನೆ ಬಾಗಿಲಿಗೆ ಕಂದಾಯ ಇಲಾಖೆ- ಸಚಿವ ಆರ್. ಅಶೋಕ್

227 ಹಳ್ಳಿಗಳಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದೇ 20ರಂದು 227 ಹಳ್ಳಿಗಳಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮ ನಡೆಯಲಿದೆ' ಎಂದು ಕಂದಾಯ ಸಚಿವ ಆರ್.ಅಶೋಕ ಮಂಗಳವಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಜೊತೆ ವಿಡಿಯೊ ಸಂವಾದದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಣ್ಣ ಪುಟ್ಟ ಕೆಲಸಗಳಿಗೂ ಜಿಲ್ಲಾಧಿಕಾರಿ, ತಹಶೀಲ್ದಾರ್ ಕಚೇರಿಗೆ ಸಾರ್ವಜನಿಕರು ಅಲೆಯುವುದನ್ನು ತಪ್ಪಿಸಲು ಪ್ರತಿ ತಿಂಗಳ ಮೂರನೇ ಶನಿವಾರ ಗುಮಾಸ್ತರನ್ನು ಹೊರತುಪಡಿಸಿ ಉಳಿದ ಎಲ್ಲ ಅಧಿಕಾರಿ, ಸಿಬ್ಬಂದಿ ಹಳ್ಳಿ ವಾಸ್ತವ್ಯ ಮಾಡಲಿದ್ದಾರೆ' ಎಂದರು.

'ಹಳ್ಳಿಗಳಿಗೆ ಭೇಟಿ ನೀಡುವ ಅಧಿಕಾರಿಗಳು ಸರ್ಕಾರಿ ಶಾಲೆಗಳಲ್ಲಿ, ಪರಿಶಿಷ್ಟ ಜಾತಿ, ಪಂಗಡದ ವಸತಿನಿಲಯಗಳಲ್ಲಿ ಊಟ ಮಾಡಲಿದ್ದಾರೆ. ಭೇಟಿ ನೀಡುವ ಒಂದು ವಾರದ ಮೊದಲೇ ಅಧಿಕಾರಿಗಳು, ಕಾರ್ಯಸೂಚಿಗಳ ಅನ್ವಯ ಫಲಾನುಭವಿಗಳ ಅರ್ಜಿಗಳನ್ನು ಸಂಗ್ರಹಿಸಿ, ಯಾರ ಹಂತದಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂಬ ಪ್ರಕ್ರಿಯೆ ಪೂರ್ಣಗೊಳಿಸಿ ಗ್ರಾಮಗಳಿಗೆ ಭೇಟಿ ನೀಡಿದಾಗ ವಿಲೇವಾರಿ ಮಾಡಲಿದ್ದಾರೆ'' ಎಂದರು.

'ಪಹಣಿಯಲ್ಲಿನ ಲೋಪ ಸರಿಪಡಿಸುವುದು, ಸರ್ಕಾರದ ಸೌಲಭ್ಯಗಳ ಅರಿವು, ಮತದಾರರ ಪಟ್ಟಿ ಪರಿಷ್ಕರಣೆ, ಬರ-ಪ್ರವಾಹ ಪರಿಹಾರ, ಪ್ರವಾಹದ ಹಾನಿ ತಡೆಗಟ್ಟಲು ಸಲಹೆ, ಅತಿವೃಷ್ಟಿ- ಅನಾವೃಷ್ಟಿ ಎದುರಿಸಲು ಮುಂಜಾಗ್ರತೆ, ಅರ್ಹರಿಗೆ ಬಿಪಿಎಲ್ ಕಾರ್ಡ್ ಸಿಕ್ಕಿರುವ ಬಗ್ಗೆ ಖಚಿತಪಡಿಸಿಕೊಳ್ಳಲಿದ್ದಾರೆ. ಅರ್ಹ ವ್ಯಕ್ತಿಗಳಿಗೆ ಪಿಂಚಣಿ ಬಿಟ್ಟು ಹೋಗಿದ್ದರೆ ವಿತರಣೆಗೆ ಆದೇಶ ನೀಡಲಿದ್ದಾರೆ' ಎಂದು ವಿವರಿಸಿದರು.

ಜಿಲ್ಲಾಧಿಕಾರಿಗಳಿಗೆ ಸೂಚನೆ: 'ತಾಂಡಾ, ಹಟ್ಟಿ, ದೊಡ್ಡಿ, ಮಜಿರೆ, ಹಾಡಿ, ಕಾಲೊನಿ ಹಾಗೂ ಇನ್ನಿತರೆ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಅರ್ಹ ಪ್ರದೇಶಗಳನ್ನು ಗುರುತಿಸಲು ಬಾಕಿ ಇದೆ. ಅಂಥ ಪ್ರದೇಶಗಳನ್ನು ಗುರುತಿಸಿ 60 ದಿನಗಳ ಒಳಗೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ತಿಳಿಸಿದರು.

'ಹೊಸಹಳ್ಳಿಯಲ್ಲಿ ವಾಸ್ತವ್ಯ'

'ಇದೇ 20ರಂದು ಬೆಳಿಗ್ಗೆ 11 ಗಂಟೆಗೆ ದೊಡ್ಡಬಳ್ಳಾಪುರದ ಹೊಸಹಳ್ಳಿಗೆ ಭೇಟಿ ನೀಡಿ, ಎತ್ತಿನಗಾಡಿಯಲ್ಲಿ ಗ್ರಾಮದೇವತೆ ದರ್ಶನ ಪಡೆದು, ಪರಿಶಿಷ್ಟರ ಕಾಲೊನಿಯಲ್ಲಿ ಒಂದು ಗಂಟೆ ಕಳೆಯುತ್ತೇನೆ. ಅಲ್ಲಿನ ಸಮಸ್ಯೆ ಪರಿಹರಿಸಲು ಕ್ರಮ ತೆಗೆದುಕೊಳ್ಳುತ್ತೇನೆ. ನಂತರ ಹಳ್ಳಿಕಟ್ಟೆಗಳಲ್ಲಿ ಕುಳಿತು ಜನರ ಸಮಸ್ಯೆ ಆಲಿಸುತ್ತೇನೆ. ಅಂಗವಿಕಲರಿಗೆ ಆರೋಗ್ಯ ಶಿಬಿರದ ಮೂಲಕ ಕೃತಕ ಕೈ, ಕಾಲು ಜೋಡಣೆ ಮಾಡಲಾಗುವುದು. ಜನಪ್ರತಿನಿಧಿಗಳ ಜೊತೆ ಸಂಜೆ ಚರ್ಚಿಸಿ, ಜನರ ಸಮಸ್ಯೆ ಪರಿಹರಿಸಲು ತೆಗೆದುಕೊಂಡಿರುವ ಕ್ರಮಗಳನ್ನು ಪರಿಶೀಲಿಸುತ್ತೇನೆ. ರಾತ್ರಿ ಸ್ಥಳೀಯ ಕಲಾವಿದರ ಪ್ರದರ್ಶನ ವೀಕ್ಷಿಸಿ, ಹಿಂದುಳಿದ ವರ್ಗಗಳ ಇಲಾಖೆ ವಿದ್ಯಾರ್ಥಿ ವಸತಿನಿಲಯದಲ್ಲಿ ವಾಸ್ತವ್ಯ ಮಾಡುತ್ತೇನೆ. ಮರುದಿನ ದಲಿತರ ಮನೆಯಲ್ಲಿ ತಿಂಡಿ ಸೇವಿಸುತ್ತೇನೆ' ಎಂದು ಅಶೋಕ ಹೇಳಿದರು.

ಎರಡು ಚಿನ್ನದ ಪದಕ ಗೆದ್ದ ಪ್ರಿಯಾಂಕಾ

ಎಲ್.ಪ್ರಿಯಾಂಕ ರೆಡ್ಡಿ

ಬೆಂಗಳೂರು: ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿನಿ ಎಲ್.ಪ್ರಿಯಾಂಕಾ ರೆಡ್ಡಿ ಅವರು ರಾಜ್ಯ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಚಿನ್ನದ ಪದಕಗಳನ್ನು ಜಯಿಸಿದ್ದಾರೆ.

ಮೈಸೂರು ಜಿಲ್ಲಾ ಕಿಕ್ ಬಾಕ್ಸಿಂಗ್ ಸಂಸ್ಥೆ ಹಾಗೂ ಕರ್ನಾಟಕ ಕಿಕ್ ಬಾಕ್ಸಿಂಗ್ ಸಂಸ್ಥೆಗಳ ಸಹಯೋಗದಲ್ಲಿ ಮೈಸೂರಿನ ಯುವರಾಜ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಚಾಂಪಿಯನ್‌ಷಿಪ್ ಆಯೋಜನೆಯಾಗಿತ್ತು.

ಐಶ್ವರ್ಯಾ ಅಮರ್ತ್ಯ ಆರತಕ್ಷತೆ ರಾಹುಲ್, ಪ್ರಿಯಾಂಕಾ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪುತ್ರಿ ಐಶ್ವರ್ಯಾ ಮತ್ತು ಕೆಫೆ ಕಾಫಿಡೇ ಸಂಸ್ಥಾಪಕ ದಿವಂಗತ ವಿ.ಜಿ. ಸಿದ್ಧಾರ್ಥ ಹೆಗ್ಡೆ ಅವರ ಪುತ್ರ, ಎಸ್.ಎಂ. ಕೃಷ್ಣ ಮೊಮ್ಮಗ ಅಮರ್ತ್ಯ ಹೆಗ್ಡೆ ವಿವಾಹ ಆರತಕ್ಷತೆ ನಗರದ ಹೊರವಲಯದ ಪ್ರೆಸ್ಟೀಜ್ ಗಾಲ್ಫ್‌ಶೈರ್ ರೆಸಾರ್ಟ್‌ನಲ್ಲಿ ಬುಧವಾರ (ಫೆ. 17) ನಡೆಯಲಿದೆ.

ಎಐಸಿಸಿ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಗುಲಾಂ ನಬಿ ಆಜಾದ್, ಕೆ.ಸಿ. ವೇಣುಗೋಪಾಲ್, ಪುದುಚೇರಿ ಮುಖ್ಯಮಂತ್ರಿ ನಾರಾಯಣಸ್ವಾಮಿ, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೇರಳದ ಕಾಂಗ್ರೆಸ್ ನಾಯಕರಾದ ಉಮ್ಮನ್‌ಚಾಂಡಿ, ರಮೇಶ ಚೆನ್ನಿತಲ ಮತ್ತಿತರ ಪ್ರಮುಖರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ದೆಹಲಿಯಿಂದ ಬುಧವಾರ ಸಂಜೆ ನಗರಕ್ಕೆ ಬರಲಿರುವ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಸೇರಿದಂತೆ ಪ್ರಮುಖ ನಾಯಕರು, ದೇವನಹಳ್ಳಿಯಲ್ಲಿರುವ ತಾಜ್ ಹೋಟೆಲ್‌ನಲ್ಲಿ ತಂಗಲಿದ್ದಾರೆ. ಅಲ್ಲಿಂದಲೇ ಗುರುವಾರ ಬೆಳಿಗ್ಗೆ ದೆಹಲಿಗೆ ಮರಳಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ಪ್ರೇಮಿಗಳ ದಿನ'ವಾದ ಭಾನುವಾರ (ಫೆ. 14) ಐಶ್ವರ್ಯಾ ಮತ್ತು ಅಮರ್ತ್ಯ ಹೆಗ್ಡೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು.

ಈ ಕಾರ್ಯಕ್ರಮಕ್ಕೆ ಆಹ್ವಾನಿತರಿಗೆ ಮಾತ್ರ ಪ್ರವೇಶ ಇದ್ದು, ಸಾರ್ವಜನಿಕರು, ಕಾರ್ಯಕರ್ತರಿಗೆ ಪ್ರವೇಶ ಇರುವುದಿಲ್ಲ ಎಂದು ಮೂಲಗಳು ಹೇಳಿವೆ.



ರಿಯಾಯಿತಿ ಆಮಿಷಕ್ಕೆ ಮರುಳಾಗದಿರಿ!

ವಿಶ್ವನಾಥ ಎಸ್.

ಕೈಗೆಟುಕುವ ಬೆಲೆಗೆ ಸ್ಮಾರ್ಟ್‌ಫೋನ್, ಕಡಿಮೆ ಬೆಲೆಗೆ ಇಂಟರ್ನೆಟ್ ಲಭ್ಯವಾಗುತ್ತಿರುವುದು ಡಿಜಿಟಲ್ ಜಗತ್ತಿಗೆ ಹೆಚ್ಚು ಹೆಚ್ಚು ತೆರೆದುಕೊಳ್ಳುವಂತೆ ನಮ್ಮನ್ನು ಪ್ರೇರೇಪಿಸುತ್ತಿದೆ. ಅದರಲ್ಲಿಯೂ ಕೊರೊನಾ ಬಂದ ಬಳಿಕವಂತೂ ನಮ್ಮ ಆನ್‌ಲೈನ್ ಖರೀದಿ ಭಾರಿ ಹೆಚ್ಚಾಗಿದೆ. ಅಂಗಡಿ ಮಳಿಗೆಗೆ ಖುದ್ದು ಭೇಟಿ ನೀಡದೇ ಖರೀದಿ ಸಾಧ್ಯವೇ ಇಲ್ಲ ಎಂದುಕೊಂಡಿದ್ದನ್ನೂ ಮನೆಯಲ್ಲಿ ಕುಳಿತುಕೊಂಡೇ ಖರೀದಿ ಮಾಡಿದ್ದೇವೆ. ಆರಂಭದಲ್ಲಿ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು, ಬಟ್ಟೆ, ಸೌಂದರ್ಯವರ್ಧಕಗಳಿಗೆ ಸೀಮಿತವಾಗಿದ್ದ ಆನ್‌ಲೈನ್ ವ್ಯಾಪಾರ ಇಂದು ದಿನಸಿ ವಸ್ತುಗಳನ್ನೂ ಪೂರೈಸುತ್ತಿದೆ. ಇದ್ದಲ್ಲಿಗೇ ಎಲ್ಲವನ್ನೂ ತರಿಸಿಕೊಳ್ಳಬಹುದು ಎಂದ ಮಾತ್ರಕ್ಕೆ ಆನ್‌ಲೈನ್ ಖರೀದಿ ಸುರಕ್ಷಿತ ಎಂದುಕೊಳ್ಳಲಾಗದು. ಏಕೆಂದರೆ ದಿನಕ್ಕೆ ಕನಿಷ್ಠ ಒಂದಾದರೂ ಆನ್‌ಲೈನ್ ವಂಚನೆ ನಡೆದ ಬಗ್ಗೆ ವರದಿಯಾಗುತ್ತಲೇ ಇರುತ್ತದೆ.

ಘಟನೆ 1: ಸ್ನೇಹಿತರೊಬ್ಬರು ಫೇಸ್‌ಬುಕ್‌ನಲ್ಲಿ ಬಂದ ಜಾಹೀರಾತನ್ನು ನಂಬಿ ₹ 1,499 ಕಳೆದುಕೊಂಡರು. ಆಗಿದ್ದಿಷ್ಟೆ; ₹ 3 ಸಾವಿರದ ಚೇರ್ ₹ 1,499ಕ್ಕೆ ನೀಡುವುದಾಗಿ ಫೇಸ್‌ಬುಕ್‌ನಲ್ಲಿ flakeshop.in ಹೆಸರಿನ ಜಾಲತಾಣ ಪ್ರಕಟಿಸಿತ್ತು. ಭಾರಿ ರಿಯಾಯಿತಿ ಸಿಗುತ್ತದೆ ಎಂದು ಸಂಭ್ರಮಪಟ್ಟ ಅವರು, ಆನ್‌ಲೈನ್ ಪೇಮೆಂಟ್ ಮಾಡಿಯೇಬಿಟ್ಟರು. ಆರ್ಡರ್ ಕನ್ಫರ್ಮ್ ಆಯಿತು. ಆದರೆ ಎಷ್ಟು ದಿನ ಕಳೆದರೂ ಚೇರ್ ಬರಲೇ ಇಲ್ಲ. ಟ್ರ್ಯಾಕ್ ಮಾಡೋಣ ಅಂತ ವೆಬ್‌ಸೈಟ್‌ಗೆ ಹೋಗಿ ಅಲ್ಲಿ ನೀಡಿದ್ದ ನಂಬರಿಗೆ ಕರೆ ಮಾಡಿದರೆ ಯಾರೂ ರಿಸೀವ್ ಮಾಡಲಿಲ್ಲ. ಇ-ಮೇಲ್ ಮಾಡಿದರೆ ಅದಕ್ಕೂ ನೊ ರಿಪ್ಲೆ. ಆ ಬಳಿಕ ಆ ಜಾಲತಾಣ ಮಂಗಮಾಯ! ಅವರು ಸ್ಕ್ರೀನ್ ಶಾಟ್ ತೆಗೆದುಕೊಂಡಿದ್ದನ್ನೇ ಎಲ್ಲರಿಗೂ ತೋರಿಸಿ, ನೀವೂ ಮೋಸ ಹೋಗದಿರಿ ಎಂದು ಎಚ್ಚರಿಸುತ್ತಿದ್ದಾರೆ.

ಘಟನೆ 2: ಐ.ಟಿ. ಕಂಪನಿಯಲ್ಲಿ ಕೆಲಸ ಮಾಡುವ ಪ್ರಮೋದ್ (ಹೆಸರು ಬದಲಿಸಲಾಗಿದೆ) ಅವರು ಇದೇ ರೀತಿ ರಿಯಾಯಿತಿ ಕೊಡುಗೆಯ ಜಾಲಕ್ಕೆ ಬಿದ್ದು ₹5 ಸಾವಿರ ಕಳೆದುಕೊಂಡಿದ್ದಾರೆ. ಇಂತಹ ಸಾಕಷ್ಟು ಘಟನೆಗಳು ನಮ್ಮ ಸುತ್ತಮುತ್ತ ನಡೆಯುತ್ತಲೇ ಇರುತ್ತವೆ. ಆದರೆ, ಯಾರು ಸಹ ಮೋಸ ಹೋಗಿದ್ದೇನೆ ಎಂದು ತಾವಾಗಿಯೇ ಹೇಳಿಕೊಳ್ಳುವುದಿಲ್ಲ. ಯಾರಾದರೂ ಅಂತಹ ವಿಷಯದ ಬಗ್ಗೆ ಮಾತಾಡಿದರೆ ಆಗ, ನನಗೂ ಹೀಗೇ ಆಗಿದೆ ಎಂದು ಹೇಳುತ್ತಾರಷ್ಟೆ.

ಜನವರಿಯಲ್ಲಿ ಮುಂಬೈ ಪೊಲೀಸರು ನಕಲಿ ಶಾಪಿಂಗ್ ಜಾಲತಾಣ ನಡೆಸುತ್ತಿದ್ದ ಗುಜರಾತ್‌ನ ಐ.ಟಿ ತಜ್ಞರೊಬ್ಬರನ್ನು ಬಂಧಿಸಿದ್ದಾರೆ. ನಕಲಿ ಜಾಲತಾಣಗಳ ಮೂಲಕ ಗೃಹೋಪಯೋಗಿ ವಸ್ತುಗಳನ್ನು ಮಾರಾಟ ಮಾಡುವ ಸೋಗಿನಲ್ಲಿ 22 ಸಾವಿರಕ್ಕೂ ಅಧಿಕ ಜನರಿಗೆ ಸುಮಾರು ₹70 ಲಕ್ಷ ಮೋಸ ಮಾಡಿದ್ದರು ಎಂದು ಪೊಲೀಸರು ತಮ್ಮ ಟ್ವಿಟರ್ ಖಾತೆಯಲ್ಲಿ ಹೇಳಿಕೊಂಡಿದ್ದಾರೆ.

ಆನ್‌ಲೈನ್ ಶಾಪಿಂಗ್‌ಗೆ ಪಾವತಿ ಬಗೆ	
ಯುಪಿಐ: 48.02%	ನೆಟ್‌ಬ್ಯಾಂಕಿಂಗ್: 8.69%
ಕಾರ್ಡ್: 37.84%	ಬ್ಯಾಂಕ್ ಟ್ರಾನ್ಸ್‌ಫರ್: 2.87%
	ವಾಲೆಟ್: 2.58%

ಮುಂಬೈ ಪೊಲೀಸರ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿರುವ ಜಾಲತಾಣಗಳ ಪಟ್ಟಿ:

- shopiiee.com
- white-stones.in
- jollyfashion.in
- fabricmaniaa.com
- takesaree.com
- assuredkart.in
- republicsaleoffers.myshopify.com
- fabricwibes.com
- efinancetic.com
- thefabricshome.com
- thermoclassic.site
- kasmira.in

ಅಧಿಕೃತ (ಉದಾಹರಣೆಗೆ ಫ್ಲಿಪ್‌ಕಾರ್ಟ್, ಅಮೆಜಾನ್) ಜಾಲತಾಣದಲ್ಲಿ ಖರೀದಿಸಿದರೆ ಯಾವುದೇ ಹಂತದಲ್ಲಿ ಸಮಸ್ಯೆ ಅಥವಾ ವಂಚನೆ ಆದರೂ ಕಂಪನಿ ಅದನ್ನು ಬಗೆಹರಿಸುವ ಪ್ರಯತ್ನ ನಡೆಸುತ್ತದೆ. ಏಕೆಂದರೆ ಇವುಗಳು ಗ್ರಾಹಕರ ವಿಶ್ವಾಸ ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಕಳೆದ ವರ್ಷ ಸ್ನೇಹಿತರೊಬ್ಬರು ಫ್ಲಿಪ್‌ಕಾರ್ಟ್ ಮೂಲಕ ಮಂಚ ಆರ್ಡರ್ ಮಾಡಿದ್ದರು. ಮನೆಗೆ ತಂದು ಫಿಟ್ ಮಾಡುವ ಮೊದಲೇ ಅದು ಡ್ಯಾಮೇಜ್ ಆಗಿತ್ತು. ಅದನ್ನು ಫಿಟ್ ಮಾಡುವ ವ್ಯಕ್ತಿಗೆ ತಿಳಿಸಿದರೂ ಆತ ಅದನ್ನು ಫಿಟ್ ಮಾಡಿಯೇ ಹೋದ. ಕೊನೆಗೆ ಫ್ಲಿಪ್‌ಕಾರ್ಟ್ ಅನ್ನು ಸಂಪರ್ಕಿಸಿದಾಗ ಮಂಚವನ್ನು ವಾಪಸ್ ಪಡೆದು ಅವರ ಹಣ ಖಾತೆಗೆ ಜಮಾ ಆಯಿತು. ಅದೇ, ಅನಧಿಕೃತ ಅಥವಾ ಇದುವರೆಗೂ ಒಮ್ಮೆಯೂ ಕೇಳಿಯೇ ಇರದ ಜಾಲತಾಣದಲ್ಲಿ ಅಗ್ಗದ ಬೆಲೆಗೆ ಸಿಗುತ್ತದೆ ಎನ್ನುವ ಕಾರಣಕ್ಕೆ ಖರೀದಿಸಲು ಮುಂದಾದರೆ ದುಡ್ಡು ಕಳೆದುಕೊಳ್ಳುವುದರಲ್ಲಿ ಸಂದೇಹವೇ ಇಲ್ಲ. ದೂರು ಕೊಟ್ಟು ಹಣ ಮರಳಿ ಪಡೆಯುತ್ತೇನೆ ಎಂದರೆ, ಆ ಜಾಲತಾಣ ಅಸ್ತಿತ್ವದಲ್ಲೇ ಇರುವುದಿಲ್ಲ! ಅಲ್ಲಿ ನೀಡಿದ್ದ ಫೋನ್ ನಂಬರ್, ಇ-ಮೇಲ್ ವಿಳಾಸ ಎಲ್ಲವೂ ನಕಲಿ ಆಗಿರುತ್ತದೆ. ಹಾಗಾಗಿ ಭಾರಿ ರಿಯಾಯಿತಿ, ವಿನಾಯಿತಿ ಎಂದು ಕಂಡೊಡನೆ ಮರುಳಾಗದಿರಿ. ❖

ಸುರಕ್ಷಿತ ಆನ್‌ಲೈನ್ ವಹಿವಾಟಿಗೆ...

- ಕಂಪ್ಯೂಟರ್ ಬಳಸುತ್ತಿದ್ದರೆ ಆಗಾಗ್ಗೆ ಸಾಫ್ಟ್‌ವೇರ್ ಅಪ್‌ಡೇಟ್ ಮಾಡುತ್ತಿರಿ
- ಹಣ ಪಾವತಿಸಲು ಸಾರ್ವಜನಿಕ ವೈಫೈ ಬಳಸದಿರಿ
- ಜನಪ್ರಿಯ ಜಾಲತಾಣಗಳಿಂದ ಮಾತ್ರವೇ ಖರೀದಿಸಿ
- ವಿಶ್ವಾಸಾರ್ಹ ಇ-ಕಾಮರ್ಸ್ ಕಂಪನಿಗಳಲ್ಲಿಯೇ ಖರೀದಿಸಿ
- ಸಾಮಾಜಿಕ ಜಾಲತಾಣಗಳಲ್ಲಿ ಕ್ಲಿಕ್ ಟು ಬೈ ಆಯ್ಕೆಯ ಮೂಲಕ ಖರೀದಿಸಬೇಡಿ
- ಕ್ಯಾಷ್ ಆನ್ ಡೆಲಿವರಿ ಇದ್ದರೆ ಆ ಆಯ್ಕೆಯನ್ನೇ ಬಳಸುವುದು ಹೆಚ್ಚು ಸೂಕ್ತ. ಏಕೆಂದರೆ ಒಂದೊಮ್ಮೆ ಖರೀದಿಸಿದ ವಸ್ತು ಬರದೇ ಇದ್ದರೆ ಏನನ್ನೂ ಕಳೆದುಕೊಳ್ಳುವುದಿಲ್ಲ
- ಮೊಬೈಲ್‌ಗೆ ಇದುವರೆಗೂ ಕೇಳದೇ ಇರುವ ಕಂಪನಿಗಳ ಹೆಸರಿನಲ್ಲಿ ಭಾರಿ ರಿಯಾಯಿತಿ ಕೊಡುಗೆಗಳ ನಾನಾ ಮೆಸೇಜ್ ಬರುತ್ತಿರುತ್ತವೆ. ಅವುಗಳನ್ನು ನಿರ್ಲಕ್ಷಿಸಿ
- ಇ-ಮೇಲ್‌ಗೆ ಬರುವ ಅಪರಿಚಿತ ಅಥವಾ ಇನ್ಯಾವುದೇ ರೀತಿಯ ಲಿಂಕ್‌ಗಳನ್ನು ಕ್ಲಿಕ್ ಮಾಡಿ ಖರೀದಿಸಲು ಮುಂದಾಗದಿರಿ

ವಿಂಡೋಸ್, ಮ್ಯಾಕ್ ಕಂಪ್ಯೂಟರುಗಳಲ್ಲಿ ಸ್ಕ್ರೀನ್ ರೆಕಾರ್ಡ್ ಮಾಡುವುದು ಹೇಗೆ?

ಸ್ಕ್ರೀನ್ ರೆಕಾರ್ಡರ್ ಮೂಲಕ ನಾವೇ ರೆಕಾರ್ಡ್ ಮಾಡಿಕೊಳ್ಳಬಹುದು. ಇದು ಹೇಗೆ? ವಿಂಡೋಸ್ 10 ಅಥವಾ ಆ್ಯಪಲ್ ಮ್ಯಾಕ್ ಕಂಪ್ಯೂಟರ್‌ಗಳನ್ನು ಬಳಸುತ್ತಿರುವವರು ಇದಕ್ಕಾಗಿ ಪ್ರತ್ಯೇಕವಾದ ತಂತ್ರಾಂಶವನ್ನು ಅಳವಡಿಸಿಕೊಳ್ಳಬೇಕಿಲ್ಲ. ಅಂತರ್‌ನಿರ್ಮಿತ ತಂತ್ರಾಂಶಗಳಿಂದಲೇ ಇದು ಸಾಧ್ಯ. ಅದು ಹೇಗೆ ಅಂತ ತಿಳಿಯೋಣ.

ಅವಿನಾಶ್ ಬಿ.

ಈ ಡಿಜಿಟಲ್ ಕಾಲದಲ್ಲಿ ಫೇಸ್‌ಬುಕ್, ಯೂಟ್ಯೂಬ್, ಝೂಮ್ ಮುಂತಾದ ವೇದಿಕೆಗಳ ಮೂಲಕ ಕಾರ್ಯಕ್ರಮಗಳ ನೇರ ಪ್ರಸಾರ, ವೆಬಿನಾರ್, ಮೀಟಿಂಗ್‌ಗಳು - ಇವೆಲ್ಲವೂ ಅನಿವಾರ್ಯವೇ ಆಗಿಬಿಟ್ಟಂತಾಗಿದೆ. ಅದೇ ರೀತಿಯಲ್ಲಿ, ಮನೆಯಿಂದಲೇ ಕೆಲಸ ಮಾಡುವ ಈ ಕಾಲದಲ್ಲಿ ನಮ್ಮ ಕಂಪ್ಯೂಟರಿನಲ್ಲಿ ಏನೋ ತೊಂದರೆಯಾದಾಗ, ಏನು ಸಮಸ್ಯೆ ಅಂತ ಸ್ಕ್ರೀನ್ ರೆಕಾರ್ಡ್ ಮಾಡಿ ಕಳುಹಿಸಿ ಅಂತ ಐಟಿ ತಜ್ಞರು ಕೇಳಿಕೊಳ್ಳಬಹುದು. ಕಾರ್ಯಕ್ರಮಗಳು ಅಥವಾ ವೆಬಿನಾರ್‌ಗಳನ್ನು ರೆಕಾರ್ಡ್ ಮಾಡಿಕೊಳ್ಳಲು ಝೂಮ್‌ನಂತಹ ಕೆಲವು ಆ್ಯಪ್‌ಗಳಲ್ಲಿ ಅವಕಾಶ ಇರುತ್ತದೆ. ಇನ್ನು ಕೆಲವನ್ನು ಸ್ಕ್ರೀನ್ ರೆಕಾರ್ಡರ್ ಮೂಲಕ ನಾವೇ ರೆಕಾರ್ಡ್ ಮಾಡಿಕೊಳ್ಳಬಹುದು. ಇದು ಹೇಗೆ? ವಿಂಡೋಸ್ 10 ಅಥವಾ ಆ್ಯಪಲ್ ಮ್ಯಾಕ್ ಕಂಪ್ಯೂಟರ್‌ಗಳನ್ನು ಬಳಸುತ್ತಿರುವವರು ಇದಕ್ಕಾಗಿ ಪ್ರತ್ಯೇಕವಾದ ತಂತ್ರಾಂಶವನ್ನು ಅಳವಡಿಸಿಕೊಳ್ಳಬೇಕಿಲ್ಲ. ಅಂತರ್‌ನಿರ್ಮಿತ ತಂತ್ರಾಂಶಗಳಿಂದಲೇ ಇದು ಸಾಧ್ಯ. ಆದರೆ ಅದನ್ನು ನಾವು ಸಕ್ರಿಯಗೊಳಿಸಬೇಕಷ್ಟೇ. ಅದು ಹೇಗೆ ಅಂತ ತಿಳಿಯೋಣ ಬನ್ನಿ.

ಮೈಕ್ರೋಸಾಫ್ಟ್ ವಿಂಡೋಸ್ 10 ಕಂಪ್ಯೂಟರ್‌ಗಳಲ್ಲಿ ಎಕ್ಸ್‌ಬಾಕ್ಸ್ ಗೇಮ್‌ಗೆ ಸಹಕರಿಸುವ ಗೇಮ್ ಬಾರ್ ಎಂಬ ತಂತ್ರಾಂಶವನ್ನೇ ನಾವು ಸ್ಕ್ರೀನ್ ರೆಕಾರ್ಡ್ ಮಾಡಿಕೊಳ್ಳಲು ಬಳಸಬಹುದು.

ಇದನ್ನು ಹೇಗೆ ಸಕ್ರಿಯಗೊಳಿಸುವುದು ಎಂದರೆ, ಕೀಬೋರ್ಡ್‌ನಲ್ಲಿ ವಿಂಡೋಸ್ ಲೋಗೊ ಇರುವ ಒಂದು ಕೀಲಿ ಇದೆ. ಅದರ ಜೊತೆಗೆ G ಕೀಲಿಯನ್ನು (Win + G) ಒತ್ತಿಹಿಡಿದಾಗ, ಎಕ್ಸ್‌ಬಾಕ್ಸ್ ಗೇಮ್‌ಬಾರ್ ತೆರೆದುಕೊಳ್ಳುತ್ತದೆ. (ಇನ್‌ಸ್ಟಾಲ್ ಆಗಿಲ್ಲದಿದ್ದರೆ, ಮೈಕ್ರೋಸಾಫ್ಟ್ ಸ್ಟೋರ್‌ನಿಂದ ಅದನ್ನು ಪಡೆದುಕೊಳ್ಳಬಹುದು.) ಅಲ್ಲಿ Capture ಅಂತ ಎಲ್ಲಿದೆ ನೋಡಿ. ಅಲ್ಲಿರುವ ರೆಕಾರ್ಡ್ ಬಟನ್ ಒತ್ತಿದರೆ ತೆರೆದಿರುವ ಸ್ಕ್ರೀನ್ ಪೂರ್ತಿಯಾಗಿ ವಿಡಿಯೊ ರೂಪದಲ್ಲಿ ರೆಕಾರ್ಡ್ ಆಗುತ್ತದೆ.

ಯಾವ ಸ್ಕ್ರೀನ್ ರೆಕಾರ್ಡ್ ಮಾಡಬೇಕೆಂದು ನಿರ್ಧರಿಸಿದ್ದೀರೋ, ಅದನ್ನು ತೆರೆದು (ಉದಾ. ಯೂಟ್ಯೂಬ್ ವಿಡಿಯೊ ಅಥವಾ ಫೇಸ್‌ಬುಕ್ ವಿಡಿಯೊ) ನಂತರ Win + G ಬಟನ್ ಒತ್ತಿ, ರೆಕಾರ್ಡಿಂಗ್ ಆರಂಭಿಸಬೇಕು. ರೆಕಾರ್ಡಿಂಗ್ ಆರಂಭಿಸಲು Win + Alt + R ಕೀಲಿಗಳನ್ನೂ ಏಕಕಾಲದಲ್ಲಿ ಒತ್ತಬಹುದಾಗಿದೆ. ಕೆಂಪು ಬಟನ್ ಒತ್ತಿದರೆ ರೆಕಾರ್ಡಿಂಗ್ ನಿಲ್ಲಿಸಬಹುದು. ಯಾವುದೇ ವಿಡಿಯೊಗಳನ್ನು ಫುಲ್ ಸ್ಕ್ರೀನ್‌ನಲ್ಲಿ ಪ್ಲೇ ಆಗುವಂತೆ ಮಾಡಿದ ಬಳಿಕ ರೆಕಾರ್ಡ್ ಬಟನ್ ಒತ್ತಬೇಕು. ಇಲ್ಲವೆಂದಾದರೆ, ಹಿನ್ನೆಲೆಯ ಚಿತ್ರವೂ ರೆಕಾರ್ಡ್ ಆಗುತ್ತದೆ ಎಂಬುದು ಗಮನದಲ್ಲಿರಲಿ.

ಇಲ್ಲಿ ಹೊರಗಿನ ಧ್ವನಿಯೂ ರೆಕಾರ್ಡ್ ಆಗುವ ಸಾಧ್ಯತೆಗಳಿರುವುದರಿಂದ, ಅಲ್ಲೇ ಕಾಣಿಸುವ ಮೈಕ್ ಬಟನ್ ಒತ್ತಿ, 'ಮ್ಯೂಟ್' ಆಯ್ಕೆ ಮಾಡಿಕೊಂಡರೆ ಉತ್ತಮ ಧ್ವನಿಯುಳ್ಳ ವಿಡಿಯೊ ದೊರೆಯುತ್ತದೆ. ರೆಕಾರ್ಡ್ ಆದ ವಿಡಿಯೊಗಳು ಎಂಪಿ4 ರೂಪದಲ್ಲಿ 'ಮೈ ಕಂಪ್ಯೂಟರ್'ನ ವಿಡಿಯೊಸ್ ಫೋಲ್ಡರ್‌ನಲ್ಲಿ 'Captures' ಹೆಸರಿನ ಸಬ್-ಫೋಲ್ಡರ್‌ನಲ್ಲಿ ಸೇವ್ ಆಗಿರುತ್ತದೆ. ಇದೇ ತಂತ್ರಾಂಶದ ಮೂಲಕ ಸ್ಕ್ರೀನ್-ಶಾಟ್ ತೆಗೆಯುವ ಆಯ್ಕೆಯೂ ಇದೆ.

ಇನ್ನು ಆ್ಯಪಲ್ ಕಂಪ್ಯೂಟರ್ (ಮ್ಯಾಕ್ ಒಎಸ್) ಬಳಸುವವರಿಗೆ ಕ್ವಿಕ್‌ಟೈಮ್ ಎಂಬ ಅಂತರ್‌ನಿರ್ಮಿತ ಪ್ಲೇಯರ್ ಮೂಲಕ ಸ್ಕ್ರೀನ್ ರೆಕಾರ್ಡ್ ಮಾಡಬಹುದು. ಇದನ್ನು ತೆರೆಯಲು, ಏಕಕಾಲದಲ್ಲಿ ಒತ್ತಬೇಕಾದ ಬಟನ್‌ಗಳೆಂದರೆ Command + Shift + 5. ಅಥವಾ ಕ್ವಿಕ್‌ಟೈಮ್ ಎಂಬ ಆ್ಯಪ್ ತೆರೆದು, 'ಫೈಲ್ಸ್' ಎಂಬುದನ್ನು ಕ್ಲಿಕ್ ಮಾಡಿ, 'New Screen Recording' ಅಂತ ಒತ್ತಿದರೂ ಆಗುತ್ತದೆ. ❖

ಹೋಂಡಾ ಸಿಬಿ 350 ಆರ್‌ಎಸ್: ಬೆಲೆ ₹ 1.96 ಲಕ್ಷ

ಹೋಂಡಾ ಮೋಟರ್‌ಸೈಕಲ್ಸ್ ಆ್ಯಂಡ್ ಸ್ಕೂಟರ್ ಇಂಡಿಯಾ ಕಂಪನಿಯು ಮಧ್ಯಮ ಗಾತ್ರದ ಸಿಬಿ350ಆರ್‌ಎಸ್ ಬೈಕ್ ಅನ್ನು ಜಾಗತಿಕ ಮಾರುಕಟ್ಟೆಗೆ ಪರಿಚಯಿಸಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 1.90 ಲಕ್ಷ ಇದೆ. ಮಂಗಳವಾರದಿಂದಲೇ ಬುಕಿಂಗ್‌ಗೆ ಅವಕಾಶ ನೀಡಲಾಗಿದೆ. ಸಿಬಿ ಕುಟುಂಬದ ಎರಡನೇ ಹೊಸ ಮೋಟರ್‌ಸೈಕಲ್ ಇದಾಗಿದೆ.

'ಕಾರ್ಯಕ್ಷಮತೆ, ಆರಾಮ, ಶೈಲಿ, ತಂತ್ರಜ್ಞಾನ ಮತ್ತು ವಿಶ್ವಾಸಾರ್ಹತೆಯ ಪ್ರತೀಕ ಇದಾಗಿದೆ' ಎಂದು ಕಂಪನಿಯ ಅಧ್ಯಕ್ಷ ಅತ್ಸುಶಿ ಒಗಾಟಾ ಹೇಳಿದರು.

ಹೋಂಡಾ ಸಿಬಿ350ಆರ್‌ಎಸ್

4 ಸ್ಟ್ರೋಕ್ 350 ಸಿಸಿ ಎಂಜಿನ್ 5,500 ಆರ್‌ಪಿಎಂನಲ್ಲಿ ಗರಿಷ್ಠ 15.5ಕಿಲೊವಾಟ್ ಶಕ್ತಿ ಉತ್ಪಾದಿಸಬಲ್ಲದು. ಗಿಯರ್ ಶಿಫ್ಟ್ ಮೃದುವಾಗಿಸಲು ಅಸಿಸ್ಟ್ ಮತ್ತು ಸ್ಲಿಪ್ಪರ್ ಕ್ಲಚ್ ಒಳಗೊಂಡಿದೆ. ಡಿಜಿಟಲ್ ಅನಲಾಗ್ ಮೀಟರ್‌ನಲ್ಲಿ ಟಾರ್ಕ್ ಕಂಟ್ರೋಲ್, ಎಬಿಎಸ್, ಸೈಡ್ ಸ್ಟ್ಯಾಂಡ್ ಇಂಡಿಕೇಟರ್ ವಿತ್ ಎಂಜಿನ್ ಎಕ್ಸಿಬಿಟರ್, ಗಿಯರ್ ಪೊಸಿಷನ್ ಇಂಡಿಕೇಟರ್ ಮತ್ತು ಬ್ಯಾಟರಿ ವೋಲ್ಟೇಜ್ ಮಾಹಿತಿಗಳನ್ನು ಪಡೆಯಬಹುದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ತ್ರಿಭುಜದ ನಿರ್ಧಾರಕ ಗುಣಗಳು

ಗಣಿತ

ಎಸ್ಸೆಸ್ಸೆಲ್ಸಿ

ಎರಡು ತ್ರಿಭುಜಗಳು ಸಮರೂಪವಾಗಬೇಕಾದರೆ ಅವುಗಳ ಅನುರೂಪ ಕೋನಗಳು ಸಮವಾಗಿರಬೇಕು.



ಅಂದರೆ ΔABC ಮತ್ತು DEF ಗಳಲ್ಲಿ

$\angle A = \angle D,\ \angle B = \angle E,\ \angle C = \angle F$ ಮತ್ತು

$$\frac{AB}{DE} = \frac{BC}{EF} = \frac{CA}{FD}$$

ಆದರೆ ಆ ಎರಡು ತ್ರಿಭುಜಗಳು ಸಮರೂಪಿಗಳಾಗಿರುತ್ತದೆ.

ಸಾಂಕೇತಿಕವಾಗಿ ' ~ 'ಸಮರೂಪ ಎಂಬುದನ್ನು ಸೂಚಿಸುತ್ತದೆ.

ಪ್ರಮೇಯ: ಅನುರೂಪ ಬಾಹುಗಳ ಅನುಪಾತಗಳು ಸಮ ಆದ್ದರಿಂದ ಆ ತ್ರಿಭುಜಗಳು ಸಮರೂಪವಾಗಿರುತ್ತವೆ.



ΔABC ಮತ್ತು DEF ಗಳಲ್ಲಿ

$\angle A = \angle D,\ \angle B = \angle E$ ಮತ್ತು , $\angle C = \angle F$

ಆಗುವಂತೆ ತೆಗೆದುಕೊಂಡು ಈ ಪ್ರಮೇಯವನ್ನು ಸಾಧಿಸಬಹುದು.

DP = AB ಮತ್ತು DQ = AC ಆಗುವಂತೆ ಕತ್ತರಿಸಿ PQ ವನ್ನು ಸೇರಿಸಿ

ಆದ್ದರಿಂದ $\Delta ABC \equiv \Delta DPQ$

ಇದರಿಂದ $\angle B = \angle P = \angle E$ ಮತ್ತು $PQ = EF$

ಆದ್ದರಿಂದ $\frac{DP}{PE} = \frac{DQ}{QF}$

ಆದ್ದರಿಂದ $\frac{AB}{DE} = \frac{AC}{DF}$

ಅದೇ ರೀತಿ $\frac{AB}{DE} = \frac{BC}{EF}$

ಅಂದರೆ $\frac{AB}{DE} = \frac{BC}{EF} = \frac{AC}{DF}$ ಆಗಿರುತ್ತದೆ.

ಒಂದು ತ್ರಿಭುಜದ ಎರಡು ಕೋನಗಳು ಮತ್ತೊಂದು ತ್ರಿಭುಜದ ಎರಡು ಕೋನಗಳಿಗೆ ಕ್ರಮವಾಗಿ ಸಮವಾಗಿದ್ದರೆ ಕೋನಗಳ ಮೊತ್ತದ ಗುಣ ಲಕ್ಷಣದಿಂದ 3ನೇ ಕೋನಗಳು ಪರಸ್ಪರ ಸಮವಾಗಿರುತ್ತವೆ. ಆದ್ದರಿಂದ ಕೋ ಕೋ ಕೋ ಸಮರೂಪತೆಯ ನಿರ್ಧಾರಕ ಗುಣವನ್ನು ಹೀಗೆ ಕೂಡ ಹೇಳಬಹುದು.

ಒಂದು ತ್ರಿಭುಜದ ಎರಡು ಕೋನಗಳು ಕ್ರಮವಾಗಿ ಮತ್ತೊಂದು ತ್ರಿಭುಜದ ಎರಡು ಕೋನಗಳಿಗೆ ಸಮವಾಗಿದ್ದರೆ ಆ ಎರಡು ತ್ರಿಭುಜಗಳು ಸಮರೂಪವಾಗಿರುತ್ತದೆ.

ಪೈಥಾಗೊರಸ್‌ನ ಪ್ರಮೇಯ

ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ವರ್ಗವು ಉಳಿದೆರೆಡು ಬಾಹುಗಳ ವರ್ಗಗಳ ಮೊತ್ತಕ್ಕೆ ಸಮನಾಗಿರುತ್ತದೆ.



ಸಾಧನೆ:- ΔABC ಯು ಒಂದು ಲಂಬಕೋನ ತ್ರಿಭುಜವಾಗಿದ್ದು $\angle B$ ಯು ಲಂಬಕೋನವಾಗಿದೆ.

ನಾವು ಸಾಧಿಸಬೇಕಾದುದು $AC^2 = AB^2 + BC^2$

$BD \perp AC$ ರಚಿಸಬೇಕು

ಈಗ ΔABD ~ ΔABC

ಆದ್ದರಿಂದ $\frac{AD}{AB} = \frac{AB}{AC}$

ಅಥವಾ AD AC = AB2---(1)

ಅಲ್ಲದೇ ΔBDC ~ ΔABC

ಆದ್ದರಿಂದ $\frac{CD}{BC} = \frac{BC}{AC}$

CD AC = BC2 ----- (2)

(1) ಮತ್ತು (2)ನ್ನು ಕೂಡಿಸುವುದರಿಂದ

$$AD\,AC + CD\,AC = AB^2 + BC^2$$
$$AC\,(AD + CD) = AB^2 + BC^2$$
$$AC * AC = AB^2 + BC^2$$
$$AC^2 = AB^2 + BC^2$$

ಪೈಥಾಗೊರಸ್ ಪ್ರಮೇಯದ ವಿಲೋಮ

ಒಂದು ತ್ರಿಭುಜದಲ್ಲಿ ಅತ್ಯಂತ ದೊಡ್ಡ ಬಾಹುವಿನ ಮೇಲಿನ ವರ್ಗವು ಉಳಿದೆರೆಡು ಬಾಹುಗಳ ವರ್ಗಗಳ ಮೊತ್ತಕ್ಕೆ ಸಮನಾದರೆ ಆ ಎರಡು ಬಾಹುಗಳ ನಡುವೆ ಲಂಬಕೋನ ಏರ್ಪಡುತ್ತದೆ.



ಸಾಧನೆ: ΔABC ಯಲ್ಲಿ $AC^2 = AB^2 + BC^2$ ಎಂದು ನಮಗೆ ನೀಡಲಾಗಿದೆ.

ನಾವು ಸಾಧಿಸಬೇಕಾದುದು $\angle B = 90^0$

PQ = AB ಮತ್ತು QR = BC ಆಗುವಂತೆ ಹಾಗೂ ΔPQR ನಲ್ಲಿ $\angle Q = 90^0$ ಇರುವಂತೆ ರಚಿಸೋಣ.

ಈಗ ΔPQR ನಿಂದ ನಮಗೆ

$PR2 = PQ^2 + QR^2$ (ಪೈಥಾಗೊರಸ್‌ನ ಪ್ರಮೇಯ)

$PR2 = AB^2 + BC^2$ (ರಚನೆಯಿಂದ)

ಆದ್ದರಿಂದ $AC^2 = AB^2 + BC^2$ (ದತ್ತ)

AC = PR

ಈಗ ΔABC ಮತ್ತು ΔPQR ಗಳಲ್ಲಿ

AB = PQ (ರಚನೆಯಿಂದ)

BC = QR

AC = PR (ಮೇಲಿನ ಸಾಧನೆ)

ಆದ್ದರಿಂದ ΔABC ≅ ΔPQR (ಬಾ.ಬಾ.ಬಾ ಸಿದ್ಧಾಂತ)

ಆದ್ದರಿಂದ $\angle B = \angle Q$ (ಸ. ತ್ರಿ. ಅ. ಬಾ)

$\angle Q = 90^0$

$\angle B = 90^0$ ❖

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ರಸಾಯನಶಾಸ್ತ್ರ ವಿಭಾಗದ 'ಕೆಮಿಕಲ್ ರಿಯಾಕ್ಷನ್ ಅಂಡ್ ಇಕ್ವೇಷನ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಹವರ್ತನೀಯ ನಿಯಮ

ದ್ವಿತೀಯ ಪಿಯುಸಿ

ಗಣಿತ

ದ್ವಿಮಾನ ಕ್ರಿಯೆಯಲ್ಲಿ ಸಹವರ್ತನೀಯ ಗುಣ ಅತೀ ಪ್ರಮುಖವಾದುದು. ನಾವು $a_1 * a_2 * a_3$..... a_n ಎಂದು ಬರೆಯಬಹುದು ಮತ್ತು ಇವು ಅಸ್ಪಷ್ಟವಾದುದಲ್ಲ. ಉಕ್ತಿ $a_1 * a_2 * a_3 \ldots a_n$ ಅಲ್ಪವಾಗುತ್ತದೆ. ಇದರಿಂದ ಆದರಣಗಳನ್ನು ಉಪಯೋಗಿಸುವುದು ಅವಶ್ಯಕವಾಗಿದೆ.

ವ್ಯಾಖ್ಯೆ

$(a*b)*c = a*(b*c)$ V a,b,c ∈ A ಆದರೆ ದ್ವಿಮಾನ ಕ್ರಿಯೆ $*: A \times A \to A$ ಅನ್ನು ಸಹವರ್ತನೀಯ ಗುಣ ಎಂದು ಕರೆಯುತ್ತಾರೆ. ವಾಸ್ತವಿಕ ಸಂಖ್ಯೆ R ಮೇಲೆ + ಎಂಬ ದ್ವಿಮಾನ ಕ್ರಿಯೆಯಲ್ಲಿ ಸೊನ್ನೆಯ ಚಿತ್ತಾಕರ್ಷಕ ಲಕ್ಷಣವೇನೆಂದರೆ $a + 0 = 0 + a$ ಅಂದರೆ ಯಾವುದೇ ಸಂಖ್ಯೆಗೆ ಸೊನ್ನೆಯನ್ನು ಕೂಡಿಸಿದಾಗ ಅದರಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಈ ಕ್ರಮವಾಗಿ ಗುಣಾಕಾರದಲ್ಲಿ ಸಂಖ್ಯೆ 1 ಮೇಲಿನ ಪಾತ್ರವನ್ನು ವಹಿಸುತ್ತದೆ. ಏಕೆಂದರೆ $a \times 1 = 1 \times a = a$ ಅನನ್ಯವಾಗುತ್ತದೆ.

ವ್ಯಾಖ್ಯೆ: ಒಂದು ದ್ವಿಮಾನ ಕ್ರಿಯೆ $*: A \times A \to A$ ಗೆ ಅನುಗುಣವಾಗಿ ಒಂದು ಗಂಣಾಂಶ ಅಸ್ತಿತ್ವದಲ್ಲಿದ್ದು, $a*e = a = e*a$ V a ∈ A ಆದರೆ e ಯನ್ನು ಅನನ್ಯತಾಂಶ ಎಂದು ಕರೆಯುತ್ತಾರೆ.

ಗಮನಿಸಿ: ಮೇಲೆ ಶೂನ್ಯವು ಸಂಕಲನ ಕ್ರಿಯೆಯ ಅನನ್ಯತಾಂಶವಾಗಿದೆ. ಆದರೆ N ನಲ್ಲಿ ಅದು ಸಂಕಲನ ಕ್ರಿಯೆಯ ಅನನ್ಯತಾಂಶವಾಗಿಲ್ಲ. ಏಕೆಂದರೆ $0 \notin N$.

N ನಲ್ಲಿ ಸಂಕಲನ ಕ್ರಿಯೆಗೆ ಅನುಗುಣವಾಗಿ ಯಾವುದೇ ಅನನ್ಯತಾಂಶ ಇರುವುದಿಲ್ಲ.

ವಿಲೋಮಾಂಶ

ಕ್ರಿಯೆ $+: R \times R \to R$ ಗೆ ಅನುಗುಣವಾಗಿ V a ∈ R-a ∈ R ಅಸ್ತಿತ್ವದಲ್ಲಿದ್ದು, $a + (-a) = 0 = (-a) + a$ (ಸಂಕಲನದಲ್ಲಿ ಅನನ್ಯತಾಂಶ) ಆಗುತ್ತದೆ.

ಇದೇ ರೀತಿಯಲ್ಲಿ R ನ $a \times 1/a = 1/a \times a$ ಮೇಲೆ ಗುಣಾಕಾರಕ್ಕೆ ಅನುಗುಣವಾಗಿ ಆಗುತ್ತದೆ. ಇಲ್ಲಿ 1 (ಗುಣಾಕಾರದಲ್ಲಿ ಅನನ್ಯತಾಂಶ) ಆಗುತ್ತದೆ.

ವ್ಯಾಖ್ಯೆ: $*: A \times A \to A$ ದ್ವಿಮಾನ ಕ್ರಿಯೆಯಲ್ಲಿ e ∈ A ಅನನ್ಯತಾಂಶವಾದಾಗ a ∈ A ಅಂಶಕ್ಕೆ * ಗೆ ಅನುಗುಣವಾಗಿ b ∈ A ಅಸ್ತಿತ್ವದಲ್ಲಿದ್ದು, $a*b = b*a = e$ ಆದರೆ a ∈ A ವಿಲೋಮವನ್ನು ಹೊಂದಿದೆ ಎನ್ನುತ್ತೇವೆ.

ಉದಾಹರಣೆ:- R ನಲ್ಲಿ + ಸಂಕಲನ ಕ್ರಿಯೆಯಾಗಿದ್ದು -a ಯು a ಸಂಕಲನ ವಿಲೋಮವಾಗಿದೆ. ಮತ್ತು R ಮೇಲೆ x ಗುಣಾಕಾರ ಕ್ರಿಯೆಯಾಗಿದ್ದು 1/a ಯು ಗುಣಾಕಾರ ವಿಲೋಮ ಎಂದು ತೋರಿಸಿ.

ಪರಿಹಾರ:- $-a + a = a + (-a) = 0$ ಆದ ಕಾರಣ -a ಯು a ನ ಸಂಕಲನ ವಿಲೋಮವಾಗಿದೆ. ಇದೇ ರೀತಿ $a \times 1/a = 1$ $1/a = \times a$ ಯು a ನ ಗುಣಾಕಾರ ವಿಲೋಮವಾಗಿದೆ.

ಉದಾಹರಣೆ: N ಮೇಲೆ + ಸಂಕಲನ ಕ್ರಿಯೆಯಾಗಿದ್ದು -a ಯು a ನ ಸಂಕಲನ ವಿಲೋಮವಾಗಿಲ್ಲ. ಮತ್ತು N ನ ಮೇಲೆ x ಗುಣಾಕಾರದಲ್ಲಿ 1/a ವಿಲೋಮವಾಗಿಲ್ಲವೆಂದು ತೋರಿಸಿ.

ಪರಿಹಾರ: $a \notin N$ ಕಾರಣದಿಂದ N ಮೇಲೆ -a ಯು a ನ ಸಂಕಲನ ಕ್ರಿಯೆ ವಿಲೋಮವಾಗಿಲ್ಲ. ಆದರೂ -a ಯು $a + (-a) = 0 = (-a) + a$ ಯನ್ನು ತೃಪ್ತಿಗೊಳಿಸುತ್ತದೆ.

ಇದೇ ರೀತಿಯಲ್ಲಿ ಇದರ ಅರ್ಥ 1ನ್ನು ಹೊರತುಪಡಿಸಿ Nನ ಯಾವ ಗಣಾಂಶವೂ ಗುಣಾಕಾರ ವಿಲೋಮಾಂಶ Nನಲ್ಲಿ ಇರುವುದಿಲ್ಲ.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರಿಕ್ ಚಾರ್ಜಸ್ ಅಂಡ್ ಫೀಲ್ಡ್ಸ್-3' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ನಾಯಿಗೆ ಲೈಂಗಿಕ ಕಿರುಕುಳ: ಬಂಧನ

ಮೈಸೂರು: ಬೀದಿ ನಾಯಿಗೆ ಲೈಂಗಿಕ ಕಿರುಕುಳ ನೀಡಿ, ಪೈಶಾಚಿಕ ಕೃತ್ಯ ಎಸಗಿದ ಆರೋಪದಲ್ಲಿ ನಗರದ ವಿ.ವಿ.ಪುರಂ ಠಾಣೆಯ ಪೊಲೀಸರು ಯುವಕನೊಬ್ಬನನ್ನು ಬಂಧಿಸಿದ್ದಾರೆ.

ನಗರದ ಗೋಕುಲಂನ 2ನೇ ಹಂತದ, ಎಂಸಿಸಿ ಕಾಲೊನಿ ನಿವಾಸಿ ಸೋಮಶೇಖರ್ ಬಂಧಿತ ಆರೋಪಿ.

ಗೋಕುಲಂನ 3ನೇ ಹಂತದ ಗಣಪತಿ ದೇವಸ್ಥಾನದ ರಸ್ತೆ ಬಳಿ ಫೆ.11ರ ರಾತ್ರಿ ಆರೋಪಿ ಸೋಮಶೇಖರ್, ಹೆಣ್ಣು ನಾಯಿ ಮೇಲೆ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ. ಈ ಕೃತ್ಯವನ್ನು ದಾರಿಹೋಕರೊಬ್ಬರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಸೋಮಶೇಖರ್

ವಿಡಿಯೊ ಆಧರಿಸಿ ಪೀಪಲ್ ಫಾರ್ ಅನಿಮಲ್ಸ್ (ಪಿಎಫ್‌ಎ) ಸಂಸ್ಥೆಯ ಪ್ರಾಣಿ ಕ್ಷೇಮಾಭಿವೃದ್ಧಿ ಅಧಿಕಾರಿ ಕೆ.ಬಿ.ಹರೀಶ್, ಪೊಲೀಸರಿಗೆ ದೂರು ನೀಡಿದ್ದರು.

ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ ಪೊಲೀಸರು, ಬಂಧಿಸಿದ್ದಾರೆ.

ದರ್ಶನ್ ಜನ್ಮದಿನ: ಅಭಿಮಾನಿಗಳಿಗೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರಿಗೆ ಮಂಗಳವಾರ 44ನೇ ಜನ್ಮದಿನದ ಸಂಭ್ರಮ. ಜೊತೆಗೆ ಮಾ.11ರಂದು ತೆರೆಯ ಮೇಲೆ ಬರಲು ಸಿದ್ಧವಾಗಿರುವ ಬಹುನಿರೀಕ್ಷೆಯ 'ರಾಬರ್ಟ್' ಚಿತ್ರದ ಟ್ರೇಲರ್ ಬಿಡುಗಡೆಯ ಸಡಗರ. ಆದರೆ, ಈ ಎರಡೂ ಕ್ಷಣಗಳನ್ನು ಅದ್ದೂರಿಯಾಗಿ ಆಚರಿಸಲು ಸಿದ್ಧತೆ ನಡೆಸಿದ್ದ ಡಿ ಬಾಸ್ ಅಭಿಮಾನಿಗಳಿಗೆ ಈ ಬಾರಿ ನಿರಾಸೆ ಆಯಿತು.

ಕೋವಿಡ್–19 ಕಾರಣದಿಂದ ಅಭಿಮಾನಿಗಳ ನಡುವೆ ಜನ್ಮದಿನವನ್ನು ಸಂಭ್ರಮದಿಂದ ಆಚರಿಸಲು ದರ್ಶನ್ ಹಿಂದೇಟು ಹಾಕಿದ್ದರು. ಇದನ್ನು ಕೆಲ ದಿನಗಳ ಹಿಂದೆಯೇ ದರ್ಶನ್ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡಿದ್ದರು. ಹೀಗಾಗಿ ರಾಜರಾಜೇಶ್ವರಿನಗರದಲ್ಲಿರುವ ದರ್ಶನ್ ಮನೆ ಮುಂಭಾಗದಲ್ಲಿ ಈ ಹಿಂದೆ ಕಂಡುಬರುತ್ತಿದ್ದ ಅಭಿಮಾನಿಗಳ ದಂಡು ಕಂಡುಬರಲಿಲ್ಲ.

ದರ್ಶನ್ ಮನೆ ಮುಂಭಾಗದಲ್ಲಿ ಈ ಕುರಿತು ಬ್ಯಾನರ್ ಹಾಕಲಾಗಿದ್ದು, 'ಪ್ರೀತಿಯ ಅಭಿಮಾನಿಗಳಲ್ಲಿ ನಿಮ್ಮ ದಾಸ ದರ್ಶನ್ ತೂಗುದೀಪ ಮಾಡುವ ವಿನಂತಿ. ಕೊರೊನಾ ವೈರಸ್ ಇರುವುದರಿಂದ ಈ ವರ್ಷ ಹುಟ್ಟುಹಬ್ಬದ ಸಂಭ್ರಮಾಚರಣೆ ಬೇಡ ಎಂದು ನಿರ್ಧರಿಸಿದ್ದೇನೆ. ನಾನು ಊರಿನಲ್ಲಿ ಇರುವುದಿಲ್ಲ. ದೂರದ ಊರುಗಳಿಂದ ನನ್ನ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಲು ಬರುತ್ತಿದ್ದ ನಲ್ಮೆಯ ಅಭಿಮಾನಿಗಳಿಗೆ ಈ ಸೂಚನೆ. ಯಾರೂ ಮನೆಯ ಹತ್ತಿರ ಬಂದು ನಿರಾಶರಾಗಬೇಡಿ. ದಯಮಾಡಿ ನನ್ನ ಈ ಕೋರಿಕೆಯನ್ನು ಈಡೇರಿಸಿಕೊಡಿ' ಎಂದು ಅದರಲ್ಲಿ ಬರೆಯಲಾಗಿದೆ.

ರಾಜರಾಜೇಶ್ವರಿ ನಗರದಲ್ಲಿರುವ ದರ್ಶನ್ ಅವರ ನಿವಾಸದ ಮುಂದೆ ಸೇರಿದ್ದ ಅಭಿಮಾನಿಗಳು –ಪ್ರಜಾವಾಣಿ ಚಿತ್ರ

ಹೀಗಿದ್ದರೂ, ದೂರದ ಊರುಗಳಿಂದ ನೂರಾರು ಅಭಿಮಾನಿಗಳು ನಿವಾಸದ ಮುಂದೆ ಜಮಾಯಿಸಿ, ದರ್ಶನ್ ಅವರಿಗೆ ಕಾಯುತ್ತಿದ್ದ ದೃಶ್ಯ ಮಂಗಳವಾರ ಕಂಡುಬಂತು. ಆಗಾಗೆ ಗುಂಪು ಸೇರುತ್ತಿದ್ದ ಜನರನ್ನು ಪೊಲೀಸರು ಚದುರಿಸುತ್ತಿದ್ದ ದೃಶ್ಯವೂ ಸಾಮಾನ್ಯವಾಗಿತ್ತು.

ಟ್ವಿಟರ್‌ನಲ್ಲಿ ಟ್ರೆಂಡಿಂಗ್: ಸಾರ್ವಜನಿಕವಾಗಿ ಜನ್ಮದಿನಾಚರಣೆಗೆ ದರ್ಶನ್ ಅವರೇ ಬ್ರೇಕ್ ಹಾಕಿರುವ ಕಾರಣ, ಸಾಮಾಜಿಕ ಜಾಲತಾಣಗಳ ಮೂಲಕವೇ ಅಪಾರ ಸಂಖ್ಯೆಯ ಅಭಿಮಾನಿಗಳು, ಹಿತೈಷಿಗಳು ಶುಭಾಶಯ ಕೋರಿದ್ದಾರೆ. ಟ್ವಿಟರ್‌ನಲ್ಲಿ #RobertTrailer ಹಾಗೂ #HBDChallengingStarDarshan ಎಂಬುವುದು ಟ್ರೆಂಡಿಂಗ್‌ನಲ್ಲಿತ್ತು. ಜೊತೆಗೆ ದರ್ಶನ್ ಅಭಿಮಾನಿಗಳೆಲ್ಲರೂ ತಮ್ಮ ಪ್ರೊಫೈಲ್ ಚಿತ್ರದಲ್ಲಿ ಕಾಮನ್ ಡಿಪಿ ಹಾಕಿಕೊಂಡು, ತಮ್ಮ ಅಭಿಮಾನವನ್ನು ಪ್ರದರ್ಶಿಸಿದರು. ಖ್ಯಾತ ನಟ, ನಟಿಯರು, ರಾಜಕೀಯ ನಾಯಕರೂ ಶುಭ ಹಾರೈಸಿದರು.

ರಾಬರ್ಟ್ ಟ್ರೇಲರ್: 20 ಲಕ್ಷ ಜನರಿಂದ ವೀಕ್ಷಣೆ

ದರ್ಶನ್ ಜನ್ಮದಿನದಂದೇ ಬಿಡುಗಡೆಯಾಗಿರುವ ರಾಬರ್ಟ್ ಚಿತ್ರದ ಟ್ರೇಲರ್ ಯೂಟ್ಯೂಬ್‌ನಲ್ಲಿ ಗಮನಸೆಳೆದಿದೆ. ತೆಲುಗಿನಲ್ಲೂ ರಾಬರ್ಟ್ ಟ್ರೇಲರ್ ಪ್ರೇಕ್ಷಕರನ್ನು ಸೆಳೆದಿದೆ. ಕನ್ನಡ ಹಾಗೂ ತೆಲುಗಿನಲ್ಲಿ ಏಕಕಾಲದಲ್ಲಿ ಮಾ.11ರಂದು ಚಿತ್ರವು ತೆರೆ ಮೇಲೆ ಬರಲಿದೆ. ಯೂಟ್ಯೂಬ್‌ನಲ್ಲಿ, ಟ್ರೇಲರ್ ಈಗಾಗಲೇ 20 ಲಕ್ಷಕ್ಕೂ ಅಧಿಕ ಜನ ನೋಡಿದ್ದಾರೆ.

ಚಂದ್ರಕಾಂತ ಬೆಲ್ಲದಗೆ ಕಸಾಪ ದತ್ತಿ ಪ್ರಶಸ್ತಿ


ಚಂದ್ರಕಾಂತ

ವಿಶ್ವೇಶ್ವರ ಭಟ್

ಸುಜಾತಾ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಕನ್ನಡ ಚಳವಳಿ ವೀರಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ'ಗೆ ಕನ್ನಡಪರ ಹೋರಾಟಗಾರ ಚಂದ್ರಕಾಂತ ಬೆಲ್ಲದ ಆಯ್ಕೆಯಾಗಿದ್ದಾರೆ.

'ಟಿ. ಗಿರಿಜಾ ಸಾಹಿತ್ಯ ಪ್ರಶಸ್ತಿ'ಗೆ ಡಾ.ಎಚ್.ಎಸ್. ಸುಜಾತಾ ಹಾಗೂ 'ನಾಗಡಿಕೆರೆ–ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ ಪ್ರಶಸ್ತಿ'ಗೆ ವಿಶ್ವವಾಣಿಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಭಾಜನರಾಗಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನೇತೃತ್ವದಲ್ಲಿ ಈ ಆಯ್ಕೆಗಳು ನಡೆದಿವೆ. ಈ ಪ್ರಶಸ್ತಿಗಳು ಕ್ರಮವಾಗಿ ₹ 25 ಸಾವಿರ, ₹ 15 ಸಾವಿರ ಹಾಗೂ ₹ 10 ಸಾವಿರ ನಗದು ಬಹುಮಾನ, ಸ್ಮರಣಿಕೆ ಒಳಗೊಂಡಿದೆ ಎಂದು ಕಸಾಪ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ತಿಳಿಸಿದ್ದಾರೆ.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ,
ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(65ಇ)2020–21:ಜೆಇ–1 ದಿನಾಂಕ: 16.02.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ '5054–04–337–0–01–422 ಎಸ್.ಸಿ.ಪಿ ಉಪಯೋಜನೆ'ಯಡಿ ಮಂಗಳೂರು ತಾಲೂಕಿನ 3 ಕಾಮಗಾರಿಗಳಿಗೆ **ಟೆಂಡರು ಆಹ್ವಾನಿಸಲಾಗಿದೆ.** (ಕಾಮಗಾರಿಗಳ ಗರಿಷ್ಠ ಅಂದಾಜು ಮೊತ್ತ ₹ 30.26 ಲಕ್ಷ ಮತ್ತು ಕನಿಷ್ಠ ₹ 12.00 ಲಕ್ಷ ಮೊತ್ತದ ಕಾಮಗಾರಿ ಆಗಿರುತ್ತದೆ.)
ಟೆಂಡರನ್ನು ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್ ಮುಖಾಂತರ **ದಿನಾಂಕ: 25.02.2021** ರ ಅಪರಾಹ್ನ 4.00 ಗಂಟೆ (16:00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. **ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ/ಕರೆ/ತಿದ್ದುಪಡಿ/ಟೆಂಡರು ಮುಂದೂಡಿಕೆ/ರದ್ಧತಿ ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ನೀಡಲಾಗುವುದು.**
ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಟೆಂಡರು ಡಾಕ್ಯುಮೆಂಟ್‌ಗಳನ್ನು Download ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಮತ್ತು ಅಂತರ್‌ಜಾಲದ ಮೂಲಕ ಪಡೆಯಬಹುದಾಗಿದೆ

ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್
DIPR / MNG / 892 / MPL / 20-21

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No : 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇ:ಪಿಬಿ– :ವಿವಿಧ/2020–21/4874 ದಿನಾಂಕ : 16–02–2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಗದಗ ಲೋ ಇ ವಿಭಾಗದಡಿ ಬರುವ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **550.00** ಲಕ್ಷ ಮೊತ್ತದಲ್ಲಿ ಗದಗ ವಿಭಾಗದ 4 ಕಾಮಗಾರಿಗಳಿಗೆ ವ ಇ 134986, 134987, 135598 ಹಾಗೂ 135597 (ಕನಿಷ್ಟ ಮೊತ್ತ ರೂ: **75.00** ಲಕ್ಷ ಗರಿಷ್ಟ ಮೊತ್ತ ರೂ: **200.00** ಲಕ್ಷ) ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ– ಪ್ರೊಕ್ಯೂರಮೆಂಟ್ (E- Procurement) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ– 3 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.eproc.karnataka.gov.in/ ದಲ್ಲಿ ನೋಡಿಕೊಳ್ಳಬಹುದು.
ಮೇಲಿನ ಕಾಮಗಾರಿಗಳಿಗೆ ಟೆಂಡರ್ ವಿವರ ಪ್ರಶ್ನೋತ್ತರ ದಿನಾಂಕ : **20.02.2021** ಟೆಂಡರ್ ಸಲ್ಲಿಸುವ ದಿನಾಂಕ : **24.02.2021** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **25.02.2021.** ಆರ್ಥಿಕ ಬಿಡ್ ತೆರೆಯುವ ದಿನಾಂಕ : **26.02.2021**
GST of 12% shall be added separately in the estimate as per Govt. Letter No PWD 65 RDF 2017, dated 11-10-2018. The increase in GST shall not be paid in the extended period of contract for which the contractor alone is responsible for dela
ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಗದಗ, ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/491/2020–21

26ಕ್ಕೆ ಲಾರಿ ಮುಷ್ಕರ; ಸಂಚಾರ ಸ್ಥಗಿತ

ಬೆಂಗಳೂರು: ಕೇಂದ್ರ ಸರ್ಕಾರದ ಜಿಎಸ್‌ಟಿ ವೇ–ಬಿಲ್ ಕ್ರಮ ಖಂಡಿಸಿ ರಾಷ್ಟ್ರೀಯಟ್ರೇಡರ್ಸ್‌ಯೂನಿಯನ್‌ವತಿಯಿಂದ ಫೆ. 26ರಂದು ಕರೆ ನೀಡಿರುವ ಬಂದ್‌ಗೆ ರಾಜ್ಯದ ಲಾರಿ ಮಾಲೀಕರು ಬೆಂಬಲ ವ್ಯಕ್ತಪಡಿಸಿದ್ದಾರೆ. ಅಂದು ರಾಜ್ಯದಾದ್ಯಂತ ಲಾರಿಗಳ ಸಂಚಾರವನ್ನು ಸ್ಥಗಿತಗೊಳಿಸಿ, ಮಾಲೀಕರು ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ.

'ಹೋರಾಟಕ್ಕೆ ನಾವೂ ಬೆಂಬಲ ನೀಡುತ್ತಿದ್ದು, ಅಂದು ಲಾರಿಗಳ ಓಡಾಟ ಇರುವುದಿಲ್ಲ' ಎಂದು ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಗಪ್ಪ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:54/2020–21/ ದಿನಾಂಕ :15.02.2021

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಕೊಪ್ಪ ಹಾಗೂ ಕಡೂರು ಉಪವಿಭಾಗಕ್ಕೆ ಒಳಪಡುವ ಕಾಮಗಾರಿಗಳಿಗೆ (Standard Tender Document- KW 1,2 & 3 ನಿಬಂಧನೆಗನುಸಾರ) ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ ಹಾಗೂ ಮ್ಯಾನುವಲ್ ಮೂಲಕ ಟೆಂಡರ್ ಕರೆಯಲಾಗಿರುತ್ತದೆ. ಒಟ್ಟು 51 ಕಾಮಗಾರಿಗಳಿದ್ದು, ಕನಿಷ್ಠ ಅಂದಾಜು ಮೊತ್ತ ರೂ.0.42 ಲಕ್ಷಗಳು ಗರಿಷ್ಠ ಅಂದಾಜು ಮೊತ್ತ ರೂ.100.00 ಲಕ್ಷಗಳು ಆಗಿರುತ್ತವೆ.

1) ಕ್ರಮ ಸಂಖ್ಯೆ 1 ಕಾಮಗಾರಿಗೆ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ದಿನಾಂಕ 06.03.2021 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು.
2) ಕ್ರಮ ಸಂಖ್ಯೆ 2 ರಿಂದ 9 ರ ವರೆಗಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ದಿನಾಂಕ 05.03.2021 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು.
3) ಕ್ರಮ ಸಂಖ್ಯೆ 4 ರ ಕಾಮಗಾರಿಗೆ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ದಿನಾಂಕ 20.02.2021 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು.
4) ಟೆಂಡರ್ ಕ್ರಮ ಸಂಖ್ಯೆ 10 ರಿಂದ 51 ರ ವರೆಗಿನ ಕಾಮಗಾರಿಗಳಿಗೆ ಮ್ಯಾನುವಲ್ ಮೂಲಕ ಮೂಲಕ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಫಾರಂಗೆ ಅರ್ಜಿಯನ್ನು ದಿನಾಂಕ 22.02.2021 ರಿಂದ 24.02.2021 ರ ಸಂಜೆ 4.00 ಗಂಟೆ ಒಳಗೆ ಸಲ್ಲಿಸಬೇಕು.

ಕಾಮಗಾರಿಗಳ ಬಗೆಗಿನ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋ.ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ರಾಮಮಂದಿರ ನಿರ್ಮಾಣಕ್ಕೆ ದೇಣಿಗೆ; ಪೇಜಾವರ ಶ್ರೀ
'ಮನೆ ಗುರುತಿಗೆ ಸೂಚನೆ ನೀಡಿಲ್ಲ'

ಪ್ರಜಾವಾಣಿ ವಾರ್ತೆ

ಉಡುಪಿ: ರಾಮಮಂದಿರ ನಿರ್ಮಾಣಕ್ಕೆ ದೇಣಿಗೆ ನೀಡದವರ ಮನೆಗಳನ್ನು ಮಾರ್ಕಿಂಗ್ ಮಾಡಲಾಗುತ್ತಿದೆ ಎಂಬ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಆರೋಪಕ್ಕೆ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.


ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಮಂಗಳವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಸ್ವಾಮೀಜಿ 'ಕುಮಾರಸ್ವಾಮಿ ಅವರದು ಗಂಭೀರ ಆರೋಪ. ಅದಕ್ಕೆ ಪೂರಕವಾದ ಸಾಕ್ಷ್ಯ ಒದಗಿಸಬೇಕು. ಸುಖಾಸುಮ್ಮನೆ ಆರೋಪ ಮಾಡುವುದು ಸರಿಯಲ್ಲ' ಎಂದಿದ್ದಾರೆ.

'ರಾಮಮಂದಿರ ನಿರ್ಮಾಣಕ್ಕೆ ದೇಣಿಗೆ ಕೊಡದವರ ಮಾಹಿತಿ ಸಂಗ್ರಹಿಸಲು ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹಾಗೂ ಆರ್‌ಎಸ್‌ಎಸ್ ಸೂಚನೆ ನೀಡಿಲ್ಲ. ದೇಣಿಗೆ ಕೊಟ್ಟವರ ಮಾಹಿತಿ ಟ್ರಸ್ಟ್‌ಗೆ ಅಗತ್ಯ, ಸಂಗ್ರಹಿಸಲಾಗುತ್ತದೆ' ಎಂದು ಹೇಳಿದರು.

ರಾಮಮಂದಿರ ನಿರ್ಮಾಣಕ್ಕೆ ನಿರೀಕ್ಷೆಗೂ ಮೀರಿ ದೇಣಿಗೆ ಸಂಗ್ರಹವಾಗುತ್ತಿದ್ದು, ದೇಣಿಗೆ ಸ್ವೀಕಾರ ರಶೀದಿ ಹಾಗೂ ಕೂಪನ್‌ಗಳ ಕೊರತೆ ಉಂಟಾಗಿದೆ. ಹಾಗಾಗಿ, ಮುಂದೆ ದೇಣಿಗೆ ಪಡೆಯಲು ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಮನೆಗಳನ್ನು ಗುರುತು ಹಾಕಿಕೊಂಡಿರಬಹುದು. ಇದು ಖಂಡಿತ ತಪ್ಪಲ್ಲ ಎಂದು ಸ್ವಾಮೀಜಿ ಹೇಳಿದರು.

'ಆತ್ಮವಂಚನೆ ಹೇಳಿಕೆ ಬೇಡ'

ಚಿಕ್ಕಮಗಳೂರು: 'ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮನಸ್ಸಿಗೆ ಮೊಳೆ ಹೊಡೆಯುವ ಕೆಲಸ ಮಾಡುತ್ತಿದ್ದಾರೆ. ಅದು ಅವರಿಗೆ ಶ್ರೇಯಸ್ಕರವಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ತಿರುಗೇಟು ನೀಡಿದರು.

ಸಿ.ಟಿ. ರವಿ

ರಾಮಮಂದಿರ ನಿರ್ಮಾಣಕ್ಕೆ ದೇಣಿಗೆ ನೀಡದ ಮನೆಗಳ ಮುಂದೆ ಮಾರ್ಕ್ ಹಾಕಲಾಗುತ್ತಿದೆ ಎಂದು ಕುಮಾರಸ್ವಾಮಿ ಹೇಳಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, 'ಎಲ್ಲಿ, ಯಾರ ಮನೆಗೆ ಮೊಳೆ ಹೊಡೆಯಲಾಗಿದೆ ಎಂದು ಅವರು ಸ್ಪಷ್ಟಪಡಿಸಬೇಕು. ಆತ್ಮವಂಚನೆಯಿಂದ ಮಾತನಾಡುವುದು ದುರದೃಷ್ಟಕರ' ಎಂದು ಟೀಕಿಸಿದರು. 'ಜನರು ಸ್ವಯಂಪ್ರೇರಿತವಾಗಿ ದೇಣಿಗೆ ನೀಡುತ್ತಿದ್ದಾರೆ. ಗುರಿ ಇದ್ದದ್ದು ₹ 1,000 ಕೋಟಿ. 1,511 ಕೋಟಿಗೂ ಅಧಿಕ ಸಂಗ್ರಹವಾಗಿದೆ. ಇನ್ನೂ ₹ 500 ಕೋಟಿಗೂ ಹೆಚ್ಚು ಸಂಗ್ರಹವಾಗಬಹುದು' ದಬಾಯಿಸಿ ತೆಗೆದುಕೊಳ್ಳುವ ಅಗತ್ಯ ಇಲ್ಲ' ಎಂದರು.

'ಪ್ರಚಾರಕ್ಕಾಗಿ ಕುಮಾರಸ್ವಾಮಿ ಹೇಳಿಕೆ'

ಕಾರವಾರ: 'ರಾಮಮಂದಿರ ನಿರ್ಮಾಣ ವಿಚಾರದಲ್ಲಿ ಎಚ್.ಡಿ.ಕುಮಾರಸ್ವಾಮಿ ರಾಜಕೀಯ ಮಾಡುವುದು ಬೇಡ. ಕೇವಲ ಪ್ರಚಾರಕ್ಕಾಗಿ ಹೇಳಿಕೆ ಕೊಡುವುದು ಅವರಿಗೆ ಶೋಭೆ ತರುವುದಿಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಟೀಕಿಸಿದರು.

ಶ್ರೀರಾಮುಲು

'ಬಿಪಿಎಲ್ ಕಾರ್ಡ್ ಹಿಂದಿರುಗಿಸದವರ ವಿರುದ್ಧ ಕ್ರಮ'

ಶಿವಮೊಗ್ಗ: 'ಬಿಪಿಎಲ್ ಕಾರ್ಡ್ ಹೊಂದಲು ಹಿಂದೆ ಇದ್ದ ನಿಯಮಗಳನ್ನೇ ಮುಂದುವರಿಸಲಾಗುವುದು. ಆದರೆ, ಶ್ರೀಮಂತರು ಕಾರ್ಡ್ ಪಡೆದಿದ್ದರೆ ಸ್ವಇಚ್ಛೆಯಿಂದ ಮರಳಿಸಬೇಕು. ಹಿಂದಿರುಗಿಸದವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೇ ನೀಡಲಾಗಿದೆ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಂಗಳವಾರ ಹೇಳಿದರು.

ಸೋಗಾನೆ ವಿಮಾನನಿಲ್ದಾಣ ಕಾಮಗಾರಿಗಳನ್ನು ವೀಕ್ಷಿಸಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಬಿಪಿಎಲ್ ಕಾರ್ಡ್ ಸೌಲಭ್ಯ ಬಡವರಿಗೇ ಸಿಗಬೇಕು. ಶ್ರೀಮಂತರು ಇದನ್ನು ಪಡೆಯದಂತೆ ಕಡಿವಾಣ ಹಾಕಬೇಕು' ಎಂದರು.

ಎಚ್ಚರಿಕೆ ಹೆಜ್ಜೆ: ಯಾರಿಗೂ ತೊಂದರೆಯಾಗದಂತೆ ಕಾನೂನು ಚೌಕಟ್ಟಿನಲ್ಲಿ ಮೀಸಲಾತಿ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು. ಸಂಪುಟ ಸಭೆಯಲ್ಲಿ ಚರ್ಚಿಸಿ, ಎಚ್ಚರಿಕೆಯ ಹೆಜ್ಜೆ ಇಡಲಾಗುವುದು ಎಂದು ಅವರು ಪ್ರತಿಕ್ರಿಯಿಸಿದರು.

ನರ್ತಕಿ | ಊರ್ವಶಿ | ವೀರೇಶ್ | ಪ್ರಸನ್ನ | ಸಿದ್ದೇಶ್ವರ

ರಾಜಾಜಿನಗರ : ನವರಂಗ್ 4 ಆಟ; ಸ್ಯಾಂಕಿ ರೋಡ್ : ಕಾವೇರಿ 4 ಆಟ; ಆವಲಹಳ್ಳಿ : ವೆಂಕಟೇಶ್ವರ 4 ಆಟ; ಎಂ.ಜಿ ರೋಡ್ : Swagath Shankarnag M.G.Road; ಮಾರುತಿಸೇವಾನಗರ : ಮುಕುಂದ 4 ಆಟ; ಕಾಮಾಕ್ಷಿಪಾಳ್ಯ : VICTORY CINEMA Kamakshipalya 4 ಆಟ; ತಾವರೆಕೆರೆ : ಲಕ್ಷ್ಮೀ 4 ಆಟ; ಯಶವಂತಪುರ : ಗೋವರ್ಧನ್ 4 ಆಟ; ಲಗ್ಗೆರೆ : ಆಕಾಶ್ 4 ಆಟ; ರಾಜಗೋಪಾಲನಗರ : MC 4 ಆಟ; ಕಮಲನಗರ : ವೀರಭದ್ರೇಶ್ವರ 4 ಆಟ; ಸಂಜಯ್‌ನಗರ : ವೈಭವ್ 4 ಆಟ; ಆರ್.ಟಿ ನಗರ : ರಾಧಾಕೃಷ್ಣ 4 ಆಟ; ಬನಶಂಕರಿ : ಈಶ್ವರಿ 4 ಆಟ; ಪೀಣ್ಯ : ಭಾರತಿ 4 ಆಟ; ಗೌಡನಪಾಳ್ಯ : ಶ್ರೀನಿವಾಸ 4 ಆಟ; ಕದರೇನಹಳ್ಳಿ : ಮಹದೇಶ್ವರ 4 ಆಟ; ವಿದ್ಯಾಪೀಠ : ಚಂದ್ರೋದಯ 4 ಆಟ; ಮಾರತಹಳ್ಳಿ : ತುಳಸಿ 4 ಆಟ; ಮಲ್ಲತ್ತಹಳ್ಳಿ : VR Cinemas 4 ಆಟ; ಸುಂಕದಕಟ್ಟೆ : ಮೋಹನ್ 4 ಆಟ; ಕೊಡಿಗೆಹಳ್ಳಿ : ರಾಜ್‌ಮುರಳಿ 4 ಆಟ; ಗರುಡಾಚಾರ್‌ಪಾಳ್ಯ : ವಿಜಯಲಕ್ಷ್ಮೀ 4 ಆಟ; ಎಸ್.ಪಿ ರೋಡ್ : ಶಾರದಾ 4 ಆಟ

ಅಗರ : ತಿರುಮಲ 4 ಆಟ; ಜಾಲಹಳ್ಳಿ : heat cinemas 4 ಆಟ; ಸರ್ಜಾಪುರ : Ravi 4 ಆಟ; ಉಳ್ಳಾಲ : ವಜ್ರೇಶ್ವರಿ 4 ಆಟ; ನಾಗವಾರ : ಪೃಥ್ವಿ 4 ಆಟ; ಯಲಹಂಕ : ಪ್ರಕಾಶ್ 4 ಆಟ; ಗೊಟ್ಟಿಗೆರೆ : ಲಕ್ಷ್ಮೀ 4 ಆಟ; ಕೆ.ಆರ್ ಪುರಂ : ಕೃಷ್ಣ 4 ಆಟ; ಹೊಸಕೋಟೆ : ಸಾಧನ 4 ಆಟ; FORUM MALL PVR; ORION MALL PVR; VAISHNAVI MALL PVR; MARKET CITY PVR; REGALIA PVR; VR PVR; ARENA PVR; SPIRIT PVR; VEGA CITY PVR; VR Mall INOX; Mantri INOX; Central INOX; Swagath INOX; Garuda INOX; RMZ INOX; FORUM INOX

BROOKFIELD INOX; LIDO INOX; ETA Cinépolis; RMM Cinépolis; ORION EAST Cinépolis; SHANTINIKETAN Cinépolis; FUN Cinépolis; ARCH MALL GOPALAN CINEMAS; INNOVATION GOPALAN CINEMAS; LEGACY GOPALAN CINEMAS; GRAND GOPALAN CINEMAS; SIGNATURE GT WORLD MALL; CARNIVAL CINEMAS; INNOVATIVE; KINO CINEMAS; SPI CINEMAS; ತುಮಕೂರು : ಗಾಯಿತ್ರಿ 4 ಆಟ; ಕೃಷ್ಣ 4 ಆಟ; ತಿಪಟೂರು : ಲಕ್ಷ್ಮೀ 4 ಆಟ; ತ್ರಿಮೂರ್ತಿ 4 ಆಟ; ಶಿರಾ : ಸಪ್ತಗಿರಿ 4 ಆಟ; ಭಾಗ್ಯಲಕ್ಷ್ಮೀ 4 ಆಟ; ತುರುವೆಕೆರೆ : ಕೃಷ್ಣ 4 ಆಟ

ಕುಣಿಗಲ್ : ಆಕಾಶ್ 4 ಆಟ; ಕೋಲಾರ : ನಾರಾಯಣಿ 4 ಆಟ; ಚಿಕ್ಕಬಳ್ಳಾಪುರ : ಬಾಲಾಜಿ 4 ಆಟ; ಗಾಯತ್ರಿ 4 ಆಟ; ವಿಜಯ್‌ಪುರ : ಗೌರಿಶಂಕರ್ 4 ಆಟ; ಮಾಲೂರು : ಬಾಲಾಜಿ 4 ಆಟ; ದೊಡ್ಡಬಳ್ಳಾಪುರ : ರಾಜ್‌ಕಮಲ್ 4 ಆಟ; ವೈಭವ್ 4 ಆಟ; ಕನಕಪುರ : ವಾಣಿ 4 ಆಟ; ಗೋಪಾಲ್ ಕೃಷ್ಣ 4 ಆಟ; ಶಿಡ್ಲಘಟ್ಟ : ವೆಂಕಟೇಶ್ವರ 4 ಆಟ; ಮಯೂರ 4 ಆಟ; ಚಿಂತಾಮಣಿ : ಎಸ್.ಎಲ್.ಎನ್ 4 ಆಟ; ಪಾವಗಡ : ಮಾರುತಿ 4 ಆಟ; ಬಾಗೇಪಲ್ಲಿ : ವೆಂಕಟೇಶ್ವರ 4 ಆಟ; ಗೌರಿಬಿದನೂರು : ಅಭಿಲಾಶ್ 4 ಆಟ; ಆನೇಕಲ್ : ಲಕ್ಷ್ಮೀ ನರಸಿಂಹ 4 ಆಟ; ರಾಮನಗರ : ಶಾನ್ 4 ಆಟ; ಚನ್ನಪಟ್ಟಣ : ಲಕ್ಷ್ಮೀ 4 ಆಟ; ಮಾಗಡಿ : ಬಾಲಾಜಿ 4 ಆಟ; ನೆಲಮಂಗಲ : ರೂಪ 4 ಆಟ; ಮೈಸೂರು : ಪದ್ಮ 4 ಆಟ; DRC CINEMAS; sathyam CINEMAS; PVR CINEMAS; MVC MYSURU VISION CINEMAS

ಕುಂಬಾರಕೊಪ್ಪಲ : ಮಹಾದೇಶ್ವರ 4 ಆಟ; ಮಂಡ್ಯ : ಗುರುಶ್ರೀ 4 ಆಟ; ಸಂಜಯ 4 ಆಟ; ಹಾಸನ : ಎಸ್.ಬಿ.ಜಿ 4 ಆಟ; ಶ್ರೀ ಗುರು 4 ಆಟ; ಚನ್ನರಾಯಪಟ್ಟಣ : ಗಾಯತ್ರಿ 4 ಆಟ; ಬಾಲಾಜಿ 4 ಆಟ; ಹೊಳೆನರಸಿಪುರ : ಚೆನ್ನಾಂಬಿಕಾ 4 ಆಟ; ಬನ್ನೂರು : ರತ್ನಮಹಲ್ 4 ಆಟ; ಮದ್ದೂರು : ಸಂಜಯ 4 ಆಟ; ಚಾಮರಾಜನಗರ : ಬಸವೇಶ್ವರ 4 ಆಟ; ಭ್ರಮರಾಂಬ 4 ಆಟ; ಕೊಳ್ಳೇಗಾಲ : ಶಾಂತಿ 4 ಆಟ; ಕೃಷ್ಣ 4 ಆಟ; ಮಳವಳ್ಳಿ : ಮಹಾಲಕ್ಷ್ಮೀ 4 ಆಟ; ಕೆ.ಆರ್.ಪೇಟೆ : ಕೆ.ಜೆ.ಬಿ 4 ಆಟ; ಗುಂಡ್ಲುಪೇಟೆ : ಸೂರ್ಯ 4 ಆಟ; ಹುಣಸೂರು : ಲೀಲಾ 4 ಆಟ; ನೆಲಮಂಗಲ : ವೆಂಕಟೇಶ್ವರ 4 ಆಟ; ಪಿರಿಯಾಪಟ್ಟಣ : ಶಾರದಾ 4 ಆಟ; ಕುಶಾಲನಗರ : ಕೂರ್ಗ್ ಸಿನಿಪ್ಲೆಕ್ಸ್ 4 ಆಟ; ಸಿದ್ದಪುರಾ : ವುಡ್ಲ್ಯಾಂಡ್ ಸಿನೆಪ್ಲೆಕ್ಸ್ 4 ಆಟ; ಕೆ.ಎಂ.ದೊಡ್ಡಿ : ಸುಮ 4 ಆಟ; ಮಾರುತಿ 4 ಆಟ; ಬೆಳ್ಳೂರು ಕ್ರಾಸ್ : ಮಾರುತಿ 4 ಆಟ; ಶುಂಠಿಕೊಪ್ಪ : ಗಣೇಶ್ 4 ಆಟ

ಹುಲ್ಲಹಳ್ಳಿ : ವಿನಾಯಕ 4 ಆಟ; ಪಾಂಡವಪುರ : ಲಾಲ್ ಬಹದ್ದೂರ್ 4 ಆಟ; ಟಿ. ನರಸೀಪುರ : ಮರುಗನ್ 4 ಆಟ; ಅರಕಲಗೂಡು : ಮಂಜುನಾಥ 4 ಆಟ; ಅರಸೀಕೆರೆ : ರತ್ನ 4 ಆಟ; ಸಕಲೇಶ್‌ಪುರ : ಜೈ ಮಾರುತಿ 4 ಆಟ; ದಾವಣಗೆರೆ : ಮೂವಿ ಟೈಮ್ 4 ಆಟ; ಚಿತ್ರದುರ್ಗ : ಪ್ರಸನ್ನ 4 ಆಟ; ಬಸವೇಶ್ವರ 4 ಆಟ; ಚಳ್ಳಕೆರೆ : ರಾಮಕೃಷ್ಣ 4 ಆಟ; ಹಿರಿಯೂರು : ಶ್ರೀಶೈಲ 4 ಆಟ; ಹಗರಿಬೊಮ್ಮನಹಳ್ಳಿ : ಕೊಟ್ಟೂರೇಶ್ವರ 4 ಆಟ; ಕೂಡ್ಲಿಗಿ : ಬಸವೇಶ್ವರ 4 ಆಟ; ಕಂಪ್ಲಿ : ಚಂದ್ರಕಲಾ 4 ಆಟ; ಸಂಡೂರು : ಶ್ರೀನಿವಾಸ 4 ಆಟ; ಹುಬ್ಬಳ್ಳಿ : ಅಪ್ಸರ 4 ಆಟ; ಸುಧಾ 4 ಆಟ; PVR CINEMAS; Cinépolis; ಧಾರವಾಡ : ಸಂಗಮ 4 ಆಟ; ಗದಗ : ಮಹಾಲಕ್ಷ್ಮೀ 4 ಆಟ

ಬೆಳಗಾಂ : ಚಿತ್ರಾ 4 ಆಟ; ಗ್ಲೋಬ್ ಮಲ್ಟಿಪ್ಲೇಕ್ಸ್ 4 ಆಟ; INOX; BIG Cinemas; ಬಿಜಾಪುರ : ಲಕ್ಷ್ಮೀ ಣ 4 ಆಟ; ಡ್ರಿಮ್‌ಲ್ಯಾಂಡ್ 4 ಆಟ; ಶಿರಸಿ : ನಟರಾಜ್ 4 ಆಟ; ಇಳಕಲ್ : ಶ್ರೀನಿವಾಸ 4 ಆಟ; ಲಕ್ಷ್ಮೇಶ್ವರ : ಕೃಷ್ಣ 4 ಆಟ; ರವಿ 4 ಆಟ; ಬಾಗಲಕೋಟೆ : ಶಕ್ತಿ 4 ಆಟ; ರಾಣಿಬೆನ್ನೂರು : ಶಂಕರ್ 4 ಆಟ; ಶಕ್ತಿ 4 ಆಟ; ಮುಧೋಳ್ : ಸುಭಾಷಿಣಿ 4 ಆಟ; ಬ್ಯಾಡಗಿ : ಶೋಭಾ 4 ಆಟ; ಅಂಕಲಿ : ಮಯೂರ 4 ಆಟ; ತಾಳಿಕೋಟೆ : ಅಮೀರ್ 4 ಆಟ; ಕಾರವಾರ : ಅರ್ಜುನ 4 ಆಟ; ಅಥಣಿ : ದುರ್ಗ ಲಕ್ಷ್ಮೀ 4 ಆಟ; ಶಿವಮೊಗ್ಗ : ಮಲ್ಲಿಕಾರ್ಜುನ 4 ಆಟ; ಮಾಡ್ರನ್ 4 ಆಟ; Bharath Cinemas

ಚಿಕ್ಕಮಗಳೂರು : ಮಿಲನ್ 4 ಆಟ; ಶ್ರೀಲೇಖ 4 ಆಟ; ಭದ್ರಾವತಿ : ವೆಂಕಟೇಶ್ವರ 4 ಆಟ; ನೇತ್ರಾವತಿ 4 ಆಟ; ಕಡೂರು : ವಿಜಯಲಕ್ಷ್ಮೀ 4 ಆಟ; ಅನ್ನಪೂರ್ಣ 4 ಆಟ; ತರೀಕೆರೆ : ವಿನಾಯಕ 4 ಆಟ; ಹೊನ್ನಳ್ಳಿ : ಶಾಂತಾ 4 ಆಟ; ಸಾಗರ : ಶ್ರೀ 4 ಆಟ; ತೀರ್ಥಹಳ್ಳಿ : ವಿನಾಯಕ 4 ಆಟ; ಚನ್ನಗಿರಿ : ವೀರಭದ್ರೇಶ್ವರ 4 ಆಟ; ಕುಂದಾಪುರ : ವಿನಾಯಕ 4 ಆಟ; ಭಾರತ್ ಸಿನಿಮಾಸ್ 4 ಆಟ; ಶಿಕಾರಿಪುರ : ಮಾಲತೇಶ 4 ಆಟ; ಕಿರಣ್ 4 ಆಟ; ಶಿರಾಳಕೊಪ್ಪ : ಮಾರುತಿ 4 ಆಟ; ನ್ಯಾಮತಿ : ಶ್ರೀ ಶೈಲಾ 4 ಆಟ; ಕೊಪ್ಪ : ಜೆ.ಎಂ.ಜೆ 4 ಆಟ; ಗುಲ್ಬರ್ಗ : ಸಂಗಮ್ 4 ಆಟ; SHETTY'S MULTIPLEX; MIRAJ CINEMAS; ಗಂಗಾವತಿ : ಶಿವೆ 4 ಆಟ

ಅಮರ್ 4 ಆಟ; ರಾಯಚೂರು : ಪೂರ್ಣಿಮಾ 4 ಆಟ; ಬೀದರ್ : ಸಪ್ನಾ ಮಾಲ್ 4 ಆಟ; ಶಹಾಪುರ : ಜಯಶ್ರೀ 4 ಆಟ; ಭವಾನಿ 4 ಆಟ; ಸಿಂಧನೂರು : ಶರಣಬಸವೇಶ್ವರ 4 ಆಟ; ಮಂಜುನಾಥ 4 ಆಟ; ಕೊಪ್ಪಳ : ಲಕ್ಷ್ಮೀ 4 ಆಟ; ಶಾರದ 4 ಆಟ; ಕರ್ಟಗಿ : ಪದ್ಮಾವತಿ 4 ಆಟ; ಮಸ್ಕಿ : ವಿಜಯ್ 4 ಆಟ; ದೇವದುರ್ಗ : ಭಾರತ್ 4 ಆಟ; ಭಾಲ್ಕಿ : ಅಮರ್ 4 ಆಟ; ಹುಮ್ನಾಬಾದ್ : ಸಾಯಿ 4 ಆಟ; ಮಂಗಳೂರು : SP CINEMAS since 1976; PVR CINEMAS; BIG Cinemas; Cinépolis; ಉಡುಪಿ : ಅಲಂಕಾರ್ 4 ಆಟ; ಪುತ್ತೂರು : ಅರುಣಾ 4 ಆಟ; ಮಣಿಪಾಲ್ : INOX; BIG Cinemas

ಹಾಗೂ ರಾಜ್ಯಾದ್ಯಂತ ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ

ಕಾಲುವೆಗೆ ಬಿದ್ದ ಬಸ್: 45 ಸಾವು

ಪ್ರಧಾನಿ ಪರಿಹಾರ ನಿಧಿಯಿಂದ ತಲಾ ₹2 ಲಕ್ಷ ಪರಿಹಾರ

ಸಿಧಿ/ರೇವಾ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದಲ್ಲಿ ಬಸ್ ಕಾಲುವೆಗೆ ಬಿದ್ದು 20 ಮಹಿಳೆಯರು, ಒಂದು ಮಗು ಸೇರಿ 45 ಪ್ರಯಾಣಿಕರು ಮಂಗಳವಾರ ಮೃತಪಟ್ಟಿದ್ದಾರೆ.

ಸಿಧಿ ಜಿಲ್ಲಾ ಕೇಂದ್ರದಿಂದ ಸುಮಾರು 80 ಕಿ.ಮೀ. ದೂರದ ಪಟ್ನಾದಲ್ಲಿ ಈ ದುರಂತ ಬೆಳಿಗ್ಗೆ 8.30ರ ಹೊತ್ತಿಗೆ ಸಂಭವಿಸಿದೆ. 50ಕ್ಕೂ ಹೆಚ್ಚು ಪ್ರಯಾಣಿಕರು ಈ ಬಸ್ಸಿನಲ್ಲಿದ್ದರು. ಏಳು ಮಂದಿ ಈಜಿ ದಡ ಸೇರಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ ಎಂದು ರೇವಾ ವಿಭಾಗೀಯ ಆಯುಕ್ತ ರಾಜೇಶ್ ಜೈನ್ ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯ ಮಾಹಿತಿ ಪ್ರಕಾರ, ಬಸ್ ಚಾಲಕನ ನಿಯಂತ್ರಣ ಕಳೆದುಕೊಂಡು ಸೇತುವೆಗೆ ಡಿಕ್ಕಿ ಹೊಡೆದು, ಕಾಲುವೆಗೆ ಉರುಳಿ ಬಿದ್ದಿದೆ.

ಮೃತಪಟ್ಟ ಪ್ರಯಾಣಿಕರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರವನ್ನು ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಮಧ್ಯಪ್ರದೇಶದ ಸಿಧಿ ಜಿಲ್ಲೆಯಲ್ಲಿ ಮಂಗಳವಾರ ಕಾಲುವೆಗೆ ಬಸ್ ಉರುಳಿಬಿದ್ದು ಪ್ರಯಾಣಿಕರು ದುರ್ಮರಣಕ್ಕೀಡಾದ ಸ್ಥಳದಲ್ಲಿ ರಾಷ್ಟ್ರೀಯ ವಿಪತ್ತು ಪರಿಹಾರ ಕಾರ್ಯಾಚರಣೆ ತಂಡ ರಕ್ಷಣಾ ಕಾರ್ಯ ನಡೆಸಿತು (ಪಿಟಿಐ ಚಿತ್ರ)

ಒಟಿಟಿ ನಿಯಂತ್ರಣಕ್ಕೆ ಕ್ರಮ: ಮಾಹಿತಿ ನೀಡಲು ಕೇಂದ್ರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್‌ನಂಥ ಒಟಿಟಿ ವೇದಿಕೆಗಳನ್ನು ಸ್ವಾಯತ್ತ ಸಂಸ್ಥೆಯೊಂದರ ಮೂಲಕ ನಿಯಂತ್ರಿಸುವ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬುದರ ಬಗ್ಗೆ ಮಾಹಿತಿ ನೀಡುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ.

ಜಸ್ಟಿಸ್ ಫಾರ್ ರೈಟ್ಸ್ ಫೌಂಡೇಶನ್ ಎಂಬ ಸ್ವಯಂಸೇವಾ ಸಂಸ್ಥೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ, ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠವು, 'ನೀವೇನು ಕಾನೂನು ಮಾಡುತ್ತಿರುವಿರೋ ಏನು? ಸರ್ಕಾರ ಪರಿಗಣಿಸುತ್ತಿದೆ, ಚಿಂತನೆ ನಡೆಸುತ್ತಿದೆ ಎಂದಷ್ಟೇ ಹೇಳಿದರೆ ಸಾಲದು, ಏನು ಮಾಡುತ್ತಿದ್ದೀರಿ ಎಂಬುದರ ಬಗ್ಗೆ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜನ್ ಅವರಿಗೆ ಸೂಚಿಸಿದೆ.

ಆನ್‌ಲೈನ್ ವೇದಿಕೆಗಳಲ್ಲಿ ಆಕ್ಷೇಪಾರ್ಹ ಮತ್ತು ಅಶ್ಲೀಲ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದನ್ನು ನಿಯಂತ್ರಿಸಲು ಸ್ವಾಯತ್ತ ಸಂಸ್ಥೆಯೊಂದನ್ನು ರಚಿಸುವಂತೆ ವಕೀಲರಾದ ಶಶಾಂಕ್ ಶೇಖರ್ ಝಾ ಹಾಗೂ ಅಪೂರ್ವ ಅರ್ಹತಿಯಾ ಅವರು ಜಂಟಿಯಾಗಿ ಮನವಿ ಸಲ್ಲಿಸಿದ್ದರು. 'ಡಿಜಿಟಲ್ ಮಾಧ್ಯಮದಲ್ಲಿ ಲಭ್ಯವಾಗುವ ಮನರಂಜನೆಯನ್ನು ನಿಯಂತ್ರಿಸಲು ಪ್ರಸಕ್ತ ಯಾವುದೇ ಕಾನೂನಾಗಲಿ, ಸ್ವಾಯತ್ತ ಸಂಸ್ಥೆಯಾಗಲಿ ಇಲ್ಲ. ಒಟಿಟಿ ಮಾಧ್ಯಮದಲ್ಲಿ ಶುಲ್ಕ ಪಡೆದು, ಜಾಹೀರಾತು ಸಹಿತವಾದ ಹಾಗೂ ಉಚಿತವಾಗಿ ಕಾರ್ಯಕ್ರಮಗಳನ್ನು ಒದಗಿಸುವ ಸಮಾರು 40 ಸಂಸ್ಥೆಗಳು ಸಂವಿಧಾನದಲ್ಲಿ ದತ್ತವಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರುಪಯೋಗಪಡಿಸುತ್ತಿವೆ' ಎಂದು ಅರ್ಜಿದಾರರು ವಾದಿಸಿದ್ದರು.

ಮಹಿಳೆಗೆ ಹೆಗಲ ಮೇಲೆ ವ್ಯಕ್ತಿ ಹೊತ್ತು ಸಾಗುವ ಶಿಕ್ಷೆ

ಗುನಾ (ಪಿಟಿಐ): ಪತಿಯಿಂದ ದೂರವಾಗಿದ್ದ ಬುಡಕಟ್ಟು ಮಹಿಳೆಯೊಬ್ಬಳಿಗೆ ತನ್ನ ಗಂಡನ ಕುಟುಂಬದ ಹರೆಯದ ಹುಡುಗನನ್ನು ಹೆಗಲ ಮೇಲೆ ಹೊತ್ತು ಮೂರು ಕಿ.ಮೀ. ದೂರ ನಡೆಯುವ ಶಿಕ್ಷೆ ವಿಧಿಸಿರುವ ಘಟನೆ ಮಧ್ಯಪ್ರದೇಶದ ಗುನಾ ಜಿಲ್ಲೆಯಲ್ಲಿ ನಡೆದಿದೆ ಎಂದು ಮಂಗಳವಾರ ಪೊಲೀಸರು ತಿಳಿಸಿದ್ದಾರೆ.

ಸನಾಯ್ ಗ್ರಾಮದಲ್ಲಿ ಘಟನೆ ನಡೆದಿದ್ದು, ಇದಕ್ಕೆ ಸಂಬಂಧಿಸಿದಂತೆ ಐವರನ್ನು ಬಂಧಿಸಲಾಗಿದೆ ಗುನಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಜೇಶ್‌ಕುಮಾರ್ ಮಿಶ್ರಾ ತಿಳಿಸಿದ್ದಾರೆ.

'ಹುಡುಗ ಸೇರಿದಂತೆ ಒಟ್ಟು ಎಂಟು ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಹಿಂದೆ ಮಹಿಳೆಯ ಪತಿಯೂ ಆರೋಪಿಗಳ ಪೈಕಿ ಒಬ್ಬನಾಗಿದ್ದಾನೆ ಎಂದು ಹೇಳಲಾಗಿತ್ತು. ಆದರೆ, ಆಕೆಯ ಪತಿ ಪ್ರಕರಣದಲ್ಲಿ ಷಾಮೀಲಾಗಿಲ್ಲ' ಎಂದೂ ಮಿಶ್ರಾ ಸ್ಪಷ್ಟಪಡಿಸಿದ್ದಾರೆ.

ಫೆ. 9ರಂದು ಈ ಘಟನೆ ನಡೆದಿದ್ದು, ಘಟನೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ, ಆನ್‌ಲೈನ್‌ನಲ್ಲಿ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ. 20 ವರ್ಷದ ಬುಡಕಟ್ಟು ಮಹಿಳೆಯೊಬ್ಬರು ತಮ್ಮ ಹೆಗಲ ಮೇಲೆ ಅಪ್ರಾಪ್ತ ವಯಸ್ಕನೊಬ್ಬನನ್ನು ಹೊತ್ತುಕೊಂಡು ಬರಿಗಾಲಲ್ಲಿ ನಡೆಯುತ್ತಿದ್ದು, ಅವರ ನಡಿಗೆ ನಿಧಾನವಾಗುತ್ತಿದ್ದಂತೆ ಕೆಲವರು ಕೋಲು ಮತ್ತು ಕ್ರಿಕೆಟ್ ಬ್ಯಾಟುಗಳಿಂದ ಮಹಿಳೆಯ ಕಾಲಿಗೆ ಹೊಡೆಯುತ್ತಿರುವ ದೃಶ್ಯಗಳು ವಿಡಿಯೊದಲ್ಲಿವೆ.

ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಹುದ್ದೆಯಿಂದ ಕಿರಣ್ ಬೇಡಿ ವಜಾ

ನವದೆಹಲಿ: ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಹುದ್ದೆಯಿಂದ ಕಿರಣ್ ಬೇಡಿ ಅವರನ್ನು ಮಂಗಳವಾರ ತೆಗೆದುಹಾಕಲಾಗಿದೆ. ತೆಲಂಗಾಣದ ರಾಜ್ಯಪಾಲೆ ತಮಿಳ್‌ಸಾಯಿ ಸೌಂದರ್‌ರಾಜನ್ ಅವರಿಗೆ ಪುದುಚೇರಿಯ ಹೆಚ್ಚುವರಿ ಹೊಣೆ ವಹಿಸಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಆದೇಶಿಸಿದ್ದಾರೆ.

ರಾಷ್ಟ್ರಪತಿ ಭವನದ ಮಾಹಿತಿ ಪ್ರಕಾರ, ಲೆಫ್ಟಿನೆಂಟ್ ಹುದ್ದೆಯಲ್ಲಿ ಮುಂದುವರಿಯದಂತೆ ಬೇಡಿ ಅವರಿಗೆ ಸೂಚನೆ ಹೋಗಿದೆ. ಜೊತೆಗೆ ಮುಂದಿನ ವ್ಯವಸ್ಥೆ ಆಗುವವರೆಗೆ ಪುದುಚೇರಿಯ ಉಸ್ತುವಾರಿ ನೋಡಿಕೊಳ್ಳುವಂತೆ ಸೌಂದರ್‌ರಾಜನ್ ಅವರಿಗೆ ಸೂಚಿಸಲಾಗಿದೆ.

ದೇಶದ ಮೊದಲ ಐಪಿಎಸ್ ಅಧಿಕಾರಿಯಾಗಿದ್ದ ಬೇಡಿ ಅವರು 2015ರಲ್ಲಿ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿಯಾಗಿದ್ದರು. ಇವರನ್ನು 2016ರ ಮೇ 28ರಂದು ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಿಸಲಾಗಿತ್ತು.

ಪುದುಚೇರಿಯ ವಿ.ನಾರಾಯಣಸ್ವಾಮಿ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಲ್ಪಮತಕ್ಕೆ ಕುಸಿದ ದಿನವೇ ಬೇಡಿ ಅವರನ್ನು ತೆಗೆಯಲಾಗಿದೆ. ಬೇಡಿ ಮತ್ತು ನಾರಾಯಣಸ್ವಾಮಿ ಅವರಿಬ್ಬರೂ 2016ರಲ್ಲಿ ಅಧಿಕಾರ ಸ್ವೀಕರಿಸಿದ್ದರು. ಅಂದಿನಿಂದಲೇ ಈ ಇಬ್ಬರ ನಡುವೆ ತಿಕ್ಕಾಟ ಇತ್ತು.

ಸರ್ಕಾರದ ದೈನಂದಿನ ಚಟುವಟಿಕೆಗಳಲ್ಲಿಯೂ ಬೇಡಿ ಅವರು ಹಸ್ತಕ್ಷೇಪನಡೆಸುತ್ತಿದ್ದಾರೆಎಂದುನಾರಾಯಣಸ್ವಾಮಿ ಅವರು ಆರೋಪಿಸಿದ್ದರು. ಬೇಡಿ ಅವರ ವಜಾಕ್ಕೆ ಕಾರಣ ಏನು ಎಂಬುದು ತಕ್ಷಣಕ್ಕೆ ತಿಳಿದು ಬಂದಿಲ್ಲ. ಆದರೆ, ಅವರ ಕಾರ್ಯಶೈಲಿಯ ಬಗ್ಗೆ ಹಲವು ದೂರುಗಳಿದ್ದವು.

ಪುದುಚೇರಿಯಲ್ಲಿ ಮತ್ತೊಬ್ಬ ಶಾಸಕ ರಾಜೀನಾಮೆ



ಜಾನ್‌ಕುಮಾರ್

ಪುದುಚೇರಿ (ಪಿಟಿಐ): ಆಡಳಿತರೂಢ ಕಾಂಗ್ರೆಸ್‌ನ ಮತ್ತೊಬ್ಬ ಶಾಸಕ ಮಂಗಳವಾರ ರಾಜೀನಾಮೆ ನೀಡಿದ್ದು, ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ಸರ್ಕಾರ ಬಹುಮತ ಕಳೆದುಕೊಂಡಂತಾಗಿದೆ. ಮುಖ್ಯಮಂತ್ರಿ ವಿ.ನಾರಾಯಣಸ್ವಾಮಿ ಅವರಿಗೆ ರಾಜೀನಾಮೆ ಸಲ್ಲಿಸುವಂತೆ ವಿರೋಧ ಪಕ್ಷಗಳು ಆಗ್ರಹಿಸಿವೆ.

33 ಶಾಸಕರಿರುವ ವಿಧಾನಸಭೆಯಲ್ಲಿ ಸದ್ಯ 28 ಶಾಸಕರಿದ್ದು, ಈಗ ಆಡಳಿತರೂಢ ಮೈತ್ರಿಕೂಟದ ಸಂಖ್ಯಾಬಲ 14ಕ್ಕೆ ಇಳಿದಿದೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಶಾಸಕರ ರಾಜೀನಾಮೆ ಸರಣಿ ಮುಂದುವರಿದಿದ್ದು, ಮುಖ್ಯಮಂತ್ರಿ ವಿ.ನಾರಾಯಣ ಸ್ವಾಮಿ ಅವರ ಆಪ್ತರಲ್ಲೊಬ್ಬರಾದ ಎ. ಜಾನ್‌ಕುಮಾರ್ ರಾಜೀನಾಮೆ ಸಲ್ಲಿಸಿದ್ದಾರೆ.

ಎಂ.ಎಸ್.ಧೋನಿ ಸಿನಿಮಾದ ನಟ ಸಂದೀಪ್ ನಾಹರ್ ಆತ್ಮಹತ್ಯೆ

ಮುಂಬೈ: 'ನಟ ಸುಶಾಂತ್ ಸಿಂಗ್ ರಜಪೂತ್ ಅಭಿನಯದ 'ಎಂ.ಎಸ್. ಧೋನಿ: ದಿ ಅನ್‌ಟೋಲ್ಡ್ ಸ್ಟೋರಿ' ಚಿತ್ರದಲ್ಲಿ ನಟಿಸಿದ್ದ ಸಂದೀಪ್ ನಾಹರ್ (30) ಸೋಮವಾರ ಮುಂಬೈನ ತಮ್ಮ ಫ್ಲ್ಯಾಟ್‌ನ ಮಲಗುವ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಆತ್ಮಹತ್ಯೆಗೂ ಮುನ್ನ ಸಂದೀಪ್ ನಾಹರ್ ಫೇಸ್‌ಬುಕ್‌ನಲ್ಲಿ ಸುದೀರ್ಘ ಬರಹದ ಪೋಸ್ಟ್ ಮತ್ತು ವಿಡಿಯೊ ಹಂಚಿಕೊಂಡಿದ್ದರು. ಪೋಸ್ಟ್ ಪ್ರಕಾರ, ಅವರು ವೈಯಕ್ತಿಕ ಮತ್ತು ವೃತ್ತಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಎದುರಿಸುತ್ತಿದ್ದರು.

ಮುಂಬೈನಲ್ಲಿ ವಾಸ್ತವಿದ್ದ ಚಂಡೀಗಢ ಮೂಲದ ನಾಹರ್, ಸ್ಯಾಂಡಿ ಎಂದೇ ಪರಿಚಿತ. ಆತ್ಮಹತ್ಯೆಗೆ ಸುಮಾರು ಮೂರು ಗಂಟೆಗೂ ಮುನ್ನ ವಿಡಿಯೊ ಪೋಸ್ಟ್ ಮಾಡಿರಬಹುದೆಂದು ಪೊಲೀಸರು ತಿಳಿಸಿರುವುದಾಗಿ ಪಿಟಿಐ ವರದಿ ಮಾಡಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರುರವರ ಕಛೇರಿ, ಕೆರೆಗಳು–2&3 ವಿಭಾಗ, ಕೋಠಡಿ ಸಂ.309, 3ನೇ ಮಹಡಿ, ಹೊಸ ಕಟ್ಟಡ, ಬಿಬಿಎಂಪಿ, ಎನ್. ಆರ್. ವೃತ್ತ, ಬೆಂಗಳೂರು–560 002.

ಸಂ: ಕಾಪಾಅ–2&3(ಕೆರೆಗಳು)/ತಿದ್ದುಪಡಿ–1//2020–21 ದಿನಾಂಕ: 16.02.2021

ತಿದ್ದುಪಡಿ

ದಿನಾಂಕ 31.01.2021ರಂದು ಈ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಟೆಂಡರ್ ಪ್ರಕಟಣೆ ಸಂಖ್ಯೆ : **EE-2&3(LAKES)/TN-14/2020-21 dated 30.01.2021** ರ ಕಾಲಾವಧಿಯನ್ನು ತಾಂತ್ರಿಕ ಕಾರಣಗಳಿಂದಾಗಿ ವಿಸ್ತರಿಸಲಾಗಿದೆ ಮತ್ತು ಮರುನಿಗದಿಪಡಿಸಿದ ದಿನಾಂಕಗಳು ಈ ಕೆಳಗಿನಂತಿವೆ.

1) ಪ್ರಿ–ಬಿಡ್ ಮೀಟಿಂಗ್ : **25.02.2021ರ ಸಂಜೆ 3.00ಗಂಟೆಗೆ** 2) ಟೆಂಡರ್ ದಸ್ತಾವೇಜುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **05.03.2021 ರ ಸಂಜೆ 4.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **08.03.2021ರ ಬೆಳಗ್ಗೆ 11.00 ಗಂಟೆಗೆ.** ಮೇಲಿನ ತಿದ್ದುಪಡಿಗಳನ್ನು ಬಿಟ್ಟು ಪ್ರಕಟಣೆಯ ಉಳಿದ ನಿಯಮ ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು ಕೆರೆಗಳು–2&3 ವಿಭಾಗ

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ–580 005

Fax : +91-836-2441188 Phone: +91-836-2214214

E mail: estateofficer@rediffmail.com Epabx:+91-836-2214332/216,444,214

No.EO/DB/TN/e-Proc.T-50/2020-21 Date : 16-02-2021

ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಕೃಷಿ ವಿಶ್ವವಿದ್ಯಾಲಯ ಧಾರವಾಡದ ಬೈಲಹೊಂಗಲದ ಆವರಣದಲ್ಲಿ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರಗಳನ್ನು e-procurement portal ಪದ್ಧತಿಯಂತೆ **http://eproc.karnataka.gov.in online** ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ 0836–2214214/332 ಸಂಪರ್ಕಿಸಬಹುದು.

e-procurement ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ **080–23010900.**

ಟೆಂಡರ್ ವೇಳಾಪಟ್ಟಿ

1	ವಿಚಾರಣೆಗಳಿಗಾಗಿ ಕೊನೆಯ ದಿನಾಂಕ ಹಾಗೂ ವೇಳೆ	20.02.2021	Up to	16.00 Hrs
2	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ	23.02.2021	Up to	16.00 Hrs
3	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ	24.02.2021	At	16.00 Hrs

ಸೂಚನೆ: ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.

ಸಹಿ/– ಆಸ್ತಿ ಅಧಿಕಾರಿಗಳು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.

ಸಂ: ಕಾನಿಅ/ಗ್ರಾಕುನೀ&ನೈ/ವಿ/ಬ/ಜಿಇ/JJM-Package/2020-21/1736 ದಿನಾಂಕ :15.02.2021

ಇ–ಟೆಂಡರು ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ – 2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗದ **ಬಳ್ಳಾರಿ, ಹೊಸಪೇಟೆ ಮತ್ತು ಸಿರುಗುಪ್ಪ ತಾಲ್ಲೂಕಿನ ಜಲ್ ಜೀವನ್ ಮಿಷನ್ ಯೋಜನೆ ಅಡಿಯಲ್ಲಿ ಕೆರೆಗಳ ಪುನಃಶ್ಚೇತನ (Augmentation & Retrofitting) ಮತ್ತು ಕಾರ್ಯಾತ್ಮಕ ನಳ ಸಂಪರ್ಕ ಒದಗಿಸುವ ಕಾಮಗಾರಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ** ಇ–ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (www.eproc.karnataka.gov.in) ವೆಬ್ ಸೈಟ್‌ನ್ನು ಸಂಪರ್ಕಿಸಲು ಕೋರಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:**03–03–2021** ರಂದು ಸಂಜೆ 4.00 ವರೆಗೆ ನಿಗಧಿಪಡಿಸಲಾಗಿದೆ ಹಾಗೂ ದಿನಾಂಕ **22.02.2021** ರಂದು ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ಸಂಪನ್ಮೂಲ ಕೇಂದ್ರ ಕಟ್ಟಡ, 1ನೇ ಮಹಡಿ, ಜಿಲ್ಲಾ ಪಂಚಾಯತ್ ಆವರಣ, ಬಳ್ಳಾರಿಯಲ್ಲಿ ಕರೆಯಲಾಗಿದೆ, ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/379/ಎಂಸಿಎ/2020–21

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,

ಲಸಿಕೆ ಸಂಸ್ಥೆ ಆವರಣ, 2ನೇ ರೇಲ್ವೆಗೇಟ್ ಹತ್ತಿರ, ಟಿಳಕವಾಡಿ, ಬೆಳಗಾವಿ–590006

ಸಂ:ಡಿ.ಪಿ.ಎಂ.ಯು/ಎನ್.ಹೆಚ್.ಎಂ/ಬೆ/166/2020–21 ದಿನಾಂಕ:15/02/2021

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಷರುತ್ತಗಳನ್ವಯ ನೋಂದಾಯಿತ ಅರ್ಹ ಸಂಸ್ಥೆಗಳಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ, ಬೆಳಗಾವಿ ಜಿಲ್ಲೆಯ 10 ತಾಲೂಕು ಆರೋಗ್ಯಧಿಕಾರಿಗಳು, ಜಿಲ್ಲಾ/ತಾಲೂಕು ಆಸ್ಪತ್ರೆ, ಡಿ.ಪಿ.ಎಂ.ಯು, ಸಿ.ಪಿ.ಎಂ.ಯು, ಆರ್.ಸಿ.ಹೆಚ್ ಹಾಗೂ ಡಿ.ಬಿ.ಸಿ.ಎಸ್ ಕಛೇರಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಲೆಕ್ಕಪತ್ರ ಸಹಾಯಕರು, ಕಾರ್ಯಕ್ರಮ ಸಹಾಯಕರು, ಡಾಟಾ ಎಂಟ್ರಿ ಆಪರೇಟರ, ಗ್ರೂಪ್ 'ಡಿ', ಕೆಳ ದರ್ಜೆಯ ಸಹಾಯಕರು(ಎಲ್.ಡಿ.ಸಿ), ವಾಹನ ಚಾಲಕರು ಹಾಗೂ ಕುಕ್ ಸೇವೆಯನ್ನು ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಒದಗಿಸಲು ಇ–ಟೆಂಡರ್ ಸಂಖ್ಯೆ:ಡಿ.ಪಿ.ಎಂ.ಯು/ಎನ್.ಹೆಚ್.ಎಂ/ಬೆ/167/2020–21 ದ್ವಿ ಲಕೋಟೆ ಪದ್ದತಿಯಲ್ಲಿ ಆಹ್ವಾನಿಸಲಾಗಿದೆ. ದಿನಾಂಕ:16/02/2021 ರಿಂದ 15/03/2021 ರವೆರೆಗೆ ಮದ್ಯಾಹ್ನ 03.00 ಗಂಟೆಯೊಳಗಾಗಿ ಟೆಂಡರ್ ಅಪಲೋಡ ಮಾಡಬಹುದಾಗಿದೆ. ದಿನಾಂಕ:16/03/2021 ಸಾಯಾಂಕಾಲ 5.00 ಘಂಟೆಗೆ ತಾಂತ್ರಿಕ ಬಿಡ್ ತೆರೆಯಲಾಗುವುದು. ಟೆಂಡರಗೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.eproc.karnataka.gov.in ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0831–2421911 ಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು ಬೆಳಗಾವಿ

DIPR/BGM/RO-NO-1362/MCA/2020-21

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು–560070.

ಸಂ:ಕಾಅ/ಗ್ರಾ.ಕುನೀ&ನೈವಿ/ಬೆಂ.ನ/TND/28/2020-21 ದಿನಾಂಕ: 15.02.2021

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ನೋಟೀಸ್

2020–21 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ **01.03.2021** ರ ಸಂಜೆ **4.00** ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರ ಪರವಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಬೆಂಗಳೂರು

ವಾಸಸಂಇ/ಬೆಂ.ನ/ಶಿರಡಿ ಸಾಯಿ/2830/2020–21

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಯೋಜನೆ–ದಕ್ಷಿಣ ವಿಭಾಗ, ದಕ್ಷಿಣ ವಲಯ ಕಛೇರಿ ಸಂಕೀರ್ಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–11

ಸಂ: ಕಾಪಾಅಯೋ(ದ)/ಇ–ಪ್ರೊಕ್/50/2020–21 ದಿನಾಂಕ: 16.02.2021

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಯೋಜನೆ–ದಕ್ಷಿಣ ವಿಭಾಗ ಇವರು ಬೃಬೆಂಮಪಾ ಆಯುಕ್ತರ ಪರವಾಗಿ, ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ವಾರ್ಡ್ ಸಂಖ್ಯೆ 169ರ ಬೈರಸಂದ್ರದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಮೈದಾನದಲ್ಲಿ ಸಿಂಥೆಟಿಕ್ ಟ್ರ್ಯಾಕ್ ಒದಗಿಸುವುದು ಹಾಗೂ ಉಳಿದ ಇತರೆ ಅಭಿವೃದ್ಧಿ ಕಾಮಾಗಾರಿಗಳು. (ಕೆಡಬ್ಲ್ಯೂ–3 ರಂತೆ).	299.00	4,48,500/-

1)ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2)ಪ್ರಿ–ಬಿಡ್ ಮೀಟಿಂಗ್: **22.02.2021ರ 3.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **24.02.2021 ರ ಸಂಜೆ 4.00 ಗಂಟೆಯವರೆಗೆ** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **25.02.2021ರ 4.30 ಗಂಟೆಗೆ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **26.02.2021ರ 4.00 ಗಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ–ದಕ್ಷಿಣ ವಿಭಾಗ.

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, (ಗ್ರಾ.ಪಂ.ರಾ.ಇ) ಯೋಜನಾ ವಿಭಾಗ, ಹಳೆ ಪಿಡಬ್ಲೂಡಿ ಕಂಪೌಂಡ, ಬಾಗಲಕೋಟ–587101.

E-Mail-ID-kn-bgk@pmgsy.nic.in Office Land Line No:- 08354-223126

ಕ್ರಸಂ:–ಕಾನಿಅ/ಯೋ.ವಿ/ತಾಂ.ಶಾ/ಅ.ಟೆಂ.ಪ್ರ/ಬಾಕೋ/2020–21/789 ದಿನಾಂಕ:15–02–2021.

"ಅಲ್ಪಾವಧಿ ಇ–ಪ್ರೋಕ್ಯೂರಮೆಂಟ್–ಟೆಂಡರ ತಿದ್ದುಪಡಿ ಅಧಿಸೂಚನೆ"

ಉಲ್ಲೇಖ: ಈ ಕಛೇರಿಯ ಅಲ್ಪಾವಧಿ ಇ–ಪ್ರೋಕ್ಯೂರಮೆಂಟ್–ಟೆಂಡರ ಪ್ರಕಟಣೆ ಸಂ.578, ದಿನಾಂಕ: 26–11–2020.

ಉಲ್ಲೇಖದಡಿಯಲ್ಲಿ ಕರೆದ ಟೆಂಡರಗೆ ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

1.ಇ–ಪ್ರೋಕ್ಯೂರಮೆಂಟನಲ್ಲಿ ಆನಲೈನ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:–23–02–2021 ಸಾಯಂಕಾಲ 5.30 ಗಂಟೆವರೆಗೆ, 2.ತಾಂತ್ರಿಕ ಬಿಡ ತೆರೆಯುವ ದಿನಾಂಕ 25–02–2021 ರಂದು ಬೆಳಿಗ್ಗೆ 11.00 ಗಂಟೆಗೆ. 3.ಆರ್ಥಿಕ ಬಿಡ ತೆರೆಯುವ ದಿನಾಂಕ 01–03–2021 ರಂದು ಬೆಳಿಗ್ಗೆ 11.00 ಗಂಟೆಗೆ.

ಸೂಚನೆ:–ಸದರಿ ಟೆಂಡರ ಪ್ರಕಟಣೆಯಲ್ಲಿ ಉಳಿದಂತೆ ಯಾವ ಬದಲಾವಣೆಯು ಇರುವುದಿಲ್ಲ. ಟೆಂಡರ್‌ನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪ್ಲಾಟ್ ಫಾರಂನಲ್ಲಿ http://www.eproc.karnataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, (ಗ್ರಾ.ಪಂ.ರಾ.ಇ) ಯೋಜನಾ ವಿಭಾಗ,ಬಾಗಲಕೋಟೆ.

DIPR/BGK/RO-NO-511/MCA/2020-21

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಅಧಿಕಾರಿರವರ ಕಛೇರಿ, ರಾಮನಗರ ಜಿಲ್ಲೆ, ರಾಮನಗರ–562159,

ದೂ.ಸಂಖ್ಯೆ: 080–29576058, ಮೊ: 9449843061, ಇ–ಮೇಲ್: dhoramanagaram@gmail.com

ಸಂಖ್ಯೆ:ಜಿಆಕುಕರಾ/ಸರಬ/ಹೊಗುಸೇ/ಗ್ರೂಪ್ ಡಿ/15/2020–21 ದಿನಾಂಕ: 15–02–2021

ಟೆಂಡರ್ ಪ್ರಕಟಣೆ (ಇ–ಟೆಂಡರ್)

2021–22 ರ ಸಾಲಿನ ಒಂದು ವರ್ಷದ ಅವಧಿಗೆ ರಾಮನಗರ ಜಿಲ್ಲೆಯಲ್ಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯ ಆಧೀನದಲ್ಲಿ ಬರುವ ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಗ್ರೂಪ್ 'ಡಿ' ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮಾನವ ಸಂಪನ್ಮೂಲದಿಂದ e-Procurement ಮೂಲಕ ಪಡೆಯುವ ಬಗ್ಗೆ

(1) ಟೆಂಡರ್ ಪ್ರಕಟಣೆಯ ದಿನಾಂಕ: **09–02–2021** (2) ಇ.ಎಂ.ಡಿ ಮೊತ್ತ: **ರೂ. 4,60,000/–** + ಇ–ಪ್ರೊಕ್ಯೂರ್‌ಮೆಂಟ್ ಶುಲ್ಕ (3) ಟೆಂಡರ್ ಪ್ರಾರಂಭದ ದಿನಾಂಕ (Web Portal): **09–02–2021** (4) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: **10–03–2021 ರಂದು ಸಂಜೆ: 5.00 ಗಂಟೆಗೆ** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **12–03–2021 ಬೆಳಿಗ್ಗೆ 11.00 ಗಂಟೆಗೆ** (6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **15–03–2021 ಬೆಳಿಗ್ಗೆ 11.00 ಗಂಟೆಗೆ.**

ಸಹಿ/– ಸದಸ್ಯ ಕಾರ್ಯದರ್ಶಿಗಳು, ಟೆಂಡರ್ ಸಮಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ರಾಮನಗರ

ವಾಸಾಸಂಇ/ರಾಮನಗರ/ಶಿರಡಿಸಾಯಿ/445/2020–21

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ

ಕ–ರೈಡ್ K RIDE

(ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)

ನೋಂದಾಯಿತ ಕಚೇರಿ: 1ನೇ ಮಹಡಿ, "ಸಂಪರ್ಕ ಸೌಧ", ಓರಿಯನ್ ಮಾಲ್ ಎದುರು, ಸರ್ವೆ ಸಂ. 8 ಬಿಇಪಿ ಆವರಣ, ಡಾ. ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು – 560 010. ಟೆಲಿ: +91 63648 90810, +91 63648 90811.

CIN: U60100KA2000PLC028171 ಇ–ಮೇಲ್: md@kride.in

Tender Notice No.: K-RIDE/DL/07/2021. **Date:** 17.02.2021.

ಟೆಂಡರ್ ಸೂಚನೆ

ಯಶವಂತಪುರ – ಚನ್ನಸಂದ್ರ ಮತ್ತು ಬೈಯಪ್ಪನಹಳ್ಳಿ – ಹೊಸೂರು ವಿಭಾಗಗಳ ದ್ವಿಪಥೀಕರಣದ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ಅನುಭವಿ ಏಜೆನ್ಸಿಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕ್ರ. ಸಂ.	ಕಾಮಗಾರಿಯ ಹೆಸರು	ಮೊತ್ತ (ಕೋಟಿ ರೂ.ಗಳಲ್ಲಿ)
1	**ಯಶವಂತಪುರ – ಚನ್ನಸಂದ್ರ ಮತ್ತು ಬೈಯಪ್ಪನಹಳ್ಳಿ – ಹೊಸೂರು ವಿಭಾಗಗಳ ದ್ವಿಪಥೀಕರಣ ಯೋಜನೆಗಳು** – ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ, ಯಶವಂತಪುರ – ಚನ್ನಸಂದ್ರ ಮತ್ತು ಬೈಯಪ್ಪನಹಳ್ಳಿ – ಹೊಸೂರು ದ್ವಿಪಥೀಕರಣ ಯೋಜನೆಗಳ ಸೆಕ್ಷನ್‌ನ ಚಾಲನೆ ಸೇರಿದಂತೆ ಕಾಮಗಾರಿಯ ಎಲ್ಲ ಭಾಗಗಳಿಗೆ ಗುಣಮಟ್ಟ ಹಾಗೂ ಸುರಕ್ಷತೆ ಲೆಕ್ಕ ಪರಿಶೋಧನೆ ಸಲಹೆ (ಕ್ಯೂಎಸ್‌ಎಸಿ)ಯನ್ನು ಒದಗಿಸುವುದು – ಸಿವಿಲ್, ಎಲೆಕ್ಟ್ರಿಕಲ್, ಓಎಚ್‌ಇ, ಎಸ್&ಟಿ, ಎನ್.ಐ. ಕಾಮಗಾರಿಗಳು, ಪಿ ವೇ, ಇತರ ಕಾಮಗಾರಿಗಳು ಇತ್ಯಾದಿ.	2.52

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **19–03–2021.**

ವಿವರಗಳಿಗಾಗಿ www.kride.in ಗೆ ಭೇಟಿ ನೀಡಿ 'Tenders' ಮೇಲೆ ಕ್ಲಿಕ್ ಮಾಡಿ

ಸಹಿ/– ಜನರಲ್ ಮ್ಯಾನೇಜರ್/ಸಿವಿಲ್/ಪ್ರೊಜೆಕ್ಟ್ಸ್ ಕ–ರೈಡ್/ಬೆಂಗಳೂರು

DIPR/DDU/2824/SPAN/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು–572103, ದೂರವಾಣಿ: 0816–2254546

ಸಂಖ್ಯೆ:ತುವಿ/ತಾವಿ/ಟೆಂ.ಪ್ರ/2020–21/142 ದಿನಾಂಕ:12.02.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ತುಮಕೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗದಿಂದ ಈ ಕೆಳಕಂಡ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ.

ಕ್ರ. ಸಂ	ಹೊರಗುತ್ತಿಗೆ ಸೇವೆಗಳ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ	ಸೇವೆಯ ಗುತ್ತಿಗೆ ಅವಧಿ
1	ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಬಗ್ಗೆ.	156.68	2.36	15.03.2021 3.00 PM	12 ತಿಂಗಳು
2	ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಸ್ವಚ್ಛತಾ ಕಾರ್ಯ ಸೇವೆಯನ್ನು ಒದಗಿಸುವ ಬಗ್ಗೆ.	60.28	1.21	15.03.2021 3.00 PM	12 ತಿಂಗಳು
3	ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಭದ್ರತಾ ಸೇವೆಯನ್ನು ಒದಗಿಸುವ ಬಗ್ಗೆ.	73.32	1.47	15.03.2021 3.00 PM	12 ತಿಂಗಳು

ನಿಯಮಾನುಸಾರ ಅರ್ಹ ಗುತ್ತಿಗೆದಾರರಿಂದ ಮೇಲ್ಕಾಣಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಟೆಂಡರ್‌ನ್ನು ಸ್ವೀಕರಿಸಲಾಗುವುದು. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್. www.eproc.karnataka.gov.in ನಲ್ಲಿ ಸಂಪರ್ಕಿಸಬಹುದು ಅಥವಾ ಈ ಕೆಳಕಂಡ ಅಧಿಕಾರಿಯ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರು (ಕಾವೇರಿ)ರವರ ಕಛೇರಿ, 5ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು – 560 009.

ಟೆಂಡರ್‌ಗಾಗಿ ಆಹ್ವಾನ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಕಾಮಗಾರಿ ವಿವರ	ಕಾಮಗಾರಿಗಿಟ್ಟ ಮೊತ್ತ (ರೂ.ಗಳಲ್ಲಿ)
	ಐಎಫ್‌ಟಿ ಸಂಖ್ಯೆ : ಬೆಂಜಮಂ/ಸಿಇಕೆಟಿಇ/ತಾಂಸ10/78/2020/3789/2020–21	ದಿನಾಂಕ:15.02.2021
1.	ಹಾರೋಹಳ್ಳಿಯಲ್ಲಿರುವ ಬೆಂಗಳೂರು ಜಲ ಮಂಡಳಿಯ 2ನೇ ಮತ್ತು 3ನೇ ಹಂತದ ಎಮ್‌ಯುಎಸ್‌ಎಸ್ ಯಾರ್ಡ್‌ಗೆ ಸಂಬಂಧಿತ ಕಾಮಗಾರಿಗಳೊಂದಿಗೆ 2x12.5 MVA, 66KV / 6.6KV ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಬರಾಜು ಮಾಡುವ, ಸ್ಥಾಪಿಸುವ ಮತ್ತು ಕಾರ್ಯಾಚರಣೆಗೊಳಿಸುವ ಕಾಮಗಾರಿ.	7,32,66,000/-
	ಐಎಫ್‌ಟಿ ಸಂಖ್ಯೆ : ಬೆಂಜಮಂ/ಸಿಇಕೆಟಿಇ/ತಾಂಸ10/79/2020/3791/2020–21	ದಿನಾಂಕ:15.02.2021
2	ತಾತಗುಣಿಯಲ್ಲಿರುವ ಬೆಂಗಳೂರು ಜಲ ಮಂಡಳಿಯ 2ನೇ ಮತ್ತು 3ನೇ ಹಂತದ ಎಮ್‌ಯುಎಸ್‌ಎಸ್ ಯಾರ್ಡ್‌ಗೆ ಸಂಬಂಧಿತ ಕಾಮಗಾರಿಗಳೊಂದಿಗೆ 2x12.5 MVA, 66KV / 6.6 KV ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಬರಾಜು ಮಾಡುವ, ಸ್ಥಾಪಿಸುವ ಮತ್ತು ಕಾರ್ಯಾಚರಣೆಗೊಳಿಸುವ ಕಾಮಗಾರಿ.	5,36,94,000/-

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **19.03.2021 ರ ಮಧ್ಯಾಹ್ನ 3.00 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.03.2021 ರ ಸಂಜೆ 4.00 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ ದಿನಾಂಕ: **25.03.2021 ರ ಸಂಜೆ 4.00 ಗಂಟೆಗೆ.**

ಸರ್ಕಾರದ ಆದೇಶ ಸಂಖ್ಯೆ FD 675 EXP-12/2020, ಬೆಂಗಳೂರು ದಿನಾಂಕ: 22.12.2020 ರ ಅನ್ವಯ ಟೆಂಡರ್‌ದಾರರು ಇಎಂಡಿ ಡಿಕ್ಲರೇಷನ್ ಫಾರಂ ಅನ್ನು ಸಲ್ಲಿಸಬೇಕು.

ಟೆಂಡರ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು **https://eproc.karnataka.gov.in** ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು(ಕಾವೇರಿ)

ವಾಸಾಸಂಇ/ಬೆಂನ./ಜಿಎ/2819/2020–21

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಡೆತನದ್ದು)

ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಮುಏನೀ ವಿಭಾಗ ನಂ–1, ಮಟ್ಟಿಹಾಳ.

ತಾ:ಬ.ಬಾಗೇವಾಡಿ, ಜಿ:ವಿಜಯಪುರ. ದೂರವಾಣಿ ಸಂ: 08426–286126, ಇ–ಮೇಲ್: kbjnleemli@gmail.com

ಸಂ:ಕೃಭಾಜನಿನಿ/ಮುಏನೀ/ವಿ–1ಮ/ಯೋ.ಶಾ/ಟೆಂಡರ್/2020–21/1567 ದಿನಾಂಕ:15.02.2021

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ಆಧಾರದ ಮೇಲೆ 2 ಕಾಮಗಾರಿಗಳ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು ಕಾಮಗಾರಿಗಳ ವಿವರಗಳು ಈ ಕೆಳಗಿನಂತೆ ಇರುತ್ತವೆ.

1) **ಕಾಮಗಾರಿ ಹೆಸರು:**– Filling up of Hunisyal Mi Tank From 0.00 To 1.00 Km By Connecting Canal by off taking at Ch.169.760 Km of Bijapur Main Canal. (Including 3.09Km MS pipe line) (Indent No 18513)/Call-2. **ಕಾಮಗಾರಿ ಟೆಂಡರಿಗಿಟ್ಟ ಮೊತ್ತ ರೂ.444.08 ಲಕ್ಷಗಳು.**

2) **ಕಾಮಗಾರಿ ಹೆಸರು:**– Filling Up of Kudergond Tank (MI) from Bijapur Main Canal off taking at Ch.153.180 under MLI Stage- III. (Indent No 18490)- Call-2. **ಕಾಮಗಾರಿ ಟೆಂಡರಿಗಿಟ್ಟ ಮೊತ್ತ ರೂ.368.04 ಲಕ್ಷಗಳು.**

ಸದರಿ ಮೇಲಿನ ಎರಡು ಕಾಮಗಾರಿಗಳಿಗೆ ಗುತ್ತಿಗೆದಾರರ ದರ್ಜೆ: ಕೆ.ಬಿ.ಜೆ.ಎನ್.ಎಲ್ ಕೆಟೆಗರಿ–II ಮೇಲ್ಪಟ್ಟು ಇರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ–12/2020, ಬೆಂಗಳೂರು ದಿನಾಂಕ:– 22–12–2020 ರನ್ವಯ ಗುತ್ತಿಗೆದಾರರು ಮುಂಗಡ ಠೇವಣಿ ಮೊತ್ತಕ್ಕೆ ಬದಲಾಗಿ ಇ.ಎಮ್.ಡಿ ಘೋಷಣೆ (EMD Declaration) ಯನ್ನು ನಿಗದಿತ ಅನುಬಂಧದಲ್ಲಿ ಭರ್ತಿ ಮಾಡಿ ಟೆಂಡರ್ ದಾಖಲೆಗಳಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕು. ಗುತ್ತಿಗೆದಾರರು ನಿಗದಿಪಡಿಸಿದ ಇ.ಎಮ್.ಡಿ ಘೋಷಣಾ ಅನುಬಂಧ/ಗುತ್ತಿಗೆದಾರರ ದರ್ಜೆ/ಟೆಂಡರ್ ನಿಯಮ/ಟೆಂಡರ್ ಪ್ರೊಸೆಸಿಂಗ ಶುಲ್ಕ, ಇತ್ಯಾದಿ ವಿವರಗಳನ್ನು https://eproc.karnataka.gov.in/ ಅಥವಾ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ಸಮಯದಲ್ಲಿ **ದಿನಾಂಕ: 25.02.2021** ಸಮಯ 17.00 ಗಂಟೆವರೆಗೆ ಸಂಪರ್ಕಿಸಬಹುದು. ದೂರವಾಣಿ 08426–286126. ಸದರಿ ಟೆಂಡರುದಾರರು ದ್ವಿ–ಪ್ರತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಅಪಲೋಡ್ ಮಾಡುವುದು.

ಟೆಂಡರ್ ಅಧಿಸೂಚನೆಯ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.

1) ಇ–ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆ ದೊರೆಯುವ ದಿನಾಂಕ ಹಾಗೂ ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು ದಿನಾಂಕ: **15.02.2021 ರಿಂದ ದಿನಾಂಕ: 25.02.2021** ರವರೆಗೆ ಸಮಯ ಸಾಯಂಕಾಲ **5.00** ಘಂಟೆಯವರೆಗೆ ಸಲ್ಲಿಸುವುದು.

2) ಪೂರ್ವಭಾವಿ ಸಭೆಯನ್ನು **ದಿನಾಂಕ: 22.02.2021** ರಂದು ಬೆಳಿಗ್ಗೆ 11:00 ಘಂಟೆಗೆ ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ ಕಛೇರಿಯಲ್ಲಿ ನಿಗದಿಪಡಿಸಲಾಗಿದೆ.

3) ಲಕೋಟೆ–1 (ತಾಂತ್ರಿಕ ಬಿಡ್)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ, ಬಸವನ ಬಾಗೇವಾಡಿ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ **ದಿನಾಂಕ : 01.03.2021** ಸಮಯ ಬೆಳಿಗ್ಗೆ **11:00** ಘಂಟೆಗೆ ತೆರೆಯಲಾಗುವುದು.

4) ಲಕೋಟೆ–2 (ಆರ್ಥಿಕ ಬಿಡ್)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ, ವಿಭಾಗ ಸಂಖ್ಯೆ–1 ಮಟ್ಟಿಹಾಳ, ಬಸವನ ಬಾಗೇವಾಡಿ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು **ದಿನಾಂಕ: 04.03.2021** ಸಮಯ ಬೆಳಿಗ್ಗೆ **11.00** ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ ನಂ.1, ಮಟ್ಟಿಹಾಳ

ವಾಸಾಸಂಇ/ವಿಜಯಪುರ/543/ಎಂಸಿಎ/2020–21

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಎಲ್ಲಿ ನಗುವಿನಿಂದ ಕೂಡಿದ ವಾತಾವರಣ ಇರುವುದಿಲ್ಲವೋ ಅಲ್ಲಿ ಯಶಸ್ಸು ಸಿಗುವುದು ಸಾಧ್ಯವಿಲ್ಲ.

-ಆಂಡ್ರ್ಯೂ ಕಾರ್ನೆಗಿ

ಜಿಎಸ್‌ಟಿ ನೋಂದಣಿ ಅಮಾನತು ಉದ್ದೇಶ ಒಳ್ಳೆಯದು, ಪರಿಣಾಮ ಕೆಟ್ಟದ್ದು

ಸರಕುಗಳ ಪೂರೈಕೆದಾರ ಸಲ್ಲಿಸಿದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿವರ ಹಾಗೂ ಆ ಸರಕುಗಳನ್ನು ಖರೀದಿ ಮಾಡಿದ ವರ್ತಕ ಸಲ್ಲಿಸಿದ ಜಿಎಸ್‌ಟಿ ವಿವರಗಳಲ್ಲಿ ಗಣನೀಯ ವ್ಯತ್ಯಾಸಗಳು ಕಂಡುಬಂದಲ್ಲಿ, ಅಂತಹ ವರ್ತಕನ ಜಿಎಸ್‌ಟಿ ಪರವಾನಗಿಯನ್ನು ತಕ್ಷಣವೇ ಅಮಾನತು ಮಾಡಲಾಗುವುದು ಎಂದು ಜಿಎಸ್‌ಟಿ ಅಧಿಕಾರಿಗಳು ಹೇಳಿದ್ದಾರೆ. ಜಿಎಸ್‌ಟಿ ವ್ಯವಸ್ಥೆಯಲ್ಲಿ ತೆರಿಗೆ ವಂಚನೆ ತಡೆಯುವ ಉದ್ದೇಶದಿಂದ ಈ ಕ್ರಮಕ್ಕೆ ಮುಂದಾಗಿರುವುದಾಗಿಯೂ ಅವರು ಹೇಳಿಕೊಂಡಿದ್ದಾರೆ. ತೆರಿಗೆ ವಂಚನೆ ತಡೆಯುವುದು ಅಂದರೆ ಸರ್ಕಾರಕ್ಕೆ ಕಾನೂನಿನ ಪ್ರಕಾರ ಬರಬೇಕಿರುವ ವರಮಾನ ಸೋರಿಕೆಯಾಗದಂತೆ ನೋಡಿಕೊಳ್ಳುವುದು ಎಂದು ಅರ್ಥ.

ಮೇಲ್ನೋಟಕ್ಕೆ ಇದು ಬಹಳ ಒಳ್ಳೆಯ, ಅಗತ್ಯವಾಗಿದ್ದ ಕಠಿಣ ಕ್ರಮ ಎಂದು ಅನ್ನಿಸಬಹುದು. ಆದರೆ, ಈ ಕ್ರಮವು ಒಳ್ಳೆಯ ಉದ್ದೇಶ ಹೊಂದಿದ್ದರೂ ಪರಿಣಾಮವು ಕೆಟ್ಟದ್ದಾಗುವ ಸಾಧ್ಯತೆ ಇದೆ. ವರದಿಗಳ ಅನ್ವಯ, ಜಿಎಸ್‌ಟಿ ವಿವರಗಳಲ್ಲಿ ಗಣನೀಯ ವ್ಯತ್ಯಾಸ ಕಂಡುಬಂದಾಗ ಜಿಎಸ್‌ಟಿ ಅಧಿಕಾರಿಗಳು, ಸಂಬಂಧಪಟ್ಟ ತೆರಿಗೆದಾರರ ಜಿಎಸ್‌ಟಿ ನೋಂದಣಿಯನ್ನು ಅಮಾನತಿನಲ್ಲಿ ಇರಿಸುತ್ತಾರೆ. ನಂತರ, ಅಮಾನತಿನ ವಿಚಾರವನ್ನು ತೆರಿಗೆದಾರರಿಗೆ ತಿಳಿಸಲಾಗುತ್ತದೆ. ಅಮಾನತಿಗೆ ಕಾರಣ ವಿವರಿಸಿ ಹಾಗೂ ನೋಂದಣಿಯನ್ನು ಏಕೆ ರದ್ದು ಮಾಡಬಾರದು ಎಂಬುದಕ್ಕೆ ಕಾರಣ ಕೇಳಿ ನೋಟಿಸ್ ಅನ್ನು ತೆರಿಗೆದಾರರಿಗೆ ಕಳುಹಿಸಲಾಗುತ್ತದೆ. ನೋಟಿಸ್ ಜಾರಿಯಾಗುವುದು ನೋಂದಣಿ ಅಮಾನತು ಆದ ನಂತರ ಎಂಬುದನ್ನು ಗಮನಿಸಬೇಕು. ಜನವರಿ ತಿಂಗಳಲ್ಲಿ ದೇಶವು ಸಾರ್ವಕಾಲಿಕ ದಾಖಲೆಯಾದ ₹ 1.2 ಲಕ್ಷ ಕೋಟಿ ವರಮಾನವನ್ನು ಜಿಎಸ್‌ಟಿ ಮೂಲಕ ಸಂಗ್ರಹಿಸಿದೆ ಎಂಬುದನ್ನು ಇಲ್ಲಿ ನೆನಪಿನಲ್ಲಿ ಇರಿಸಿಕೊಳ್ಳಬೇಕು. ಕೋವಿಡ್–19ರಿಂದ ಬಸವಳಿದಿದ್ದ ಅರ್ಥವ್ಯವಸ್ಥೆ ಹಾಗೂ ಅದರ ಅವಿಭಾಜ್ಯ ಭಾಗವಾಗಿರುವ ವಾಣಿಜ್ಯ ವಹಿವಾಟುಗಳು ಈಗಷ್ಟೇ ಚೇತರಿಕೆಯ ಹಾದಿಗೆ ಮರಳುತ್ತಿವೆ. ವರಮಾನ ಸಂಗ್ರಹವೂ ಏರುಗತಿಯಲ್ಲಿ ಸಾಗಿದೆ. ಇಂತಹ ಸಂದರ್ಭದಲ್ಲಿ, ವಾಣಿಜ್ಯ ವಹಿವಾಟಿಗೆ ತೊಡಕು ಉಂಟುಮಾಡುವ ಇಂತಹ ಕ್ರಮ ಅಗತ್ಯವಿದೆಯೇ ಎಂಬುದರ ಬಗ್ಗೆ ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು.

ನೋಂದಣಿಯನ್ನು ತಕ್ಷಣ ಅಮಾನತು ಮಾಡುವ ಬದಲು, ಮೊದಲು ನೋಟಿಸ್ ಜಾರಿಗೊಳಿಸಿ, ವರ್ತಕರಿಂದ ವಿವರಣೆ ಪಡೆದು, ಆನಂತರ ಮುಂದಿನ ಕ್ರಮ ಜರುಗಿಸುವುದು ಹೆಚ್ಚು ನ್ಯಾಯಸಮ್ಮತ

ನೋಂದಣಿ ಅಮಾನತು ಮಾಡಿದ ಕ್ಷಣದಿಂದ ವರ್ತಕರಿಗೆ ವಹಿವಾಟು ನಡೆಸಲು ಆಗುವುದಿಲ್ಲ. ಇದು ಅವರ ವಹಿವಾಟುಗಳಿಗೆ ಭಾರಿ ಏಟು ನೀಡುತ್ತದೆ. ವ್ಯಕ್ತಿ ತಪ್ಪು ಮಾಡಿದ್ದಾನೆ ಎಂದು ಕಾನೂನು ಜಾರಿ ಸಂಸ್ಥೆಗಳಿಗೆ ಅನಿಸಿದರೆ, ಆ ವ್ಯಕ್ತಿಗೆ ನೋಟಿಸ್ ನೀಡಿ, ತಪ್ಪಿನ ಬಗ್ಗೆ ವಿವರಣೆ ಕೇಳಿದ ನಂತರ ಮುಂದಿನ ಕ್ರಮ ಜರುಗಿಸುವುದು ಸಹಜ ನ್ಯಾಯ ಪ್ರಕ್ರಿಯೆ. ಆದರೆ, ತಪ್ಪು ಮಾಡಿದ್ದಾರೆ ಎಂದು ಭಾವಿಸಲಾದ ವರ್ತಕರ ಜಿಎಸ್‌ಟಿ ನೋಂದಣಿ ಅಮಾನತು ಮಾಡಿದ ನಂತರ ಅವರಿಗೆ ಅದಕ್ಕೆ ಸಂಬಂಧಿಸಿದ ನೋಟಿಸ್– ಮಾಹಿತಿ ನೀಡುವುದು ಸಹಜ ನ್ಯಾಯ ತತ್ವದ ಉಲ್ಲಂಘನೆಯಂತೆ ಮೇಲ್ನೋಟಕ್ಕೆ ಕಾಣುತ್ತಿದೆ. ನೋಂದಣಿಯನ್ನು ತಕ್ಷಣಕ್ಕೆ ಅಮಾನತು ಮಾಡುವ ಬದಲು, ಮೊದಲು ನೋಟಿಸ್ ಜಾರಿಗೊಳಿಸಿ, ವರ್ತಕರಿಗೆ ಸೂಕ್ತ ಕಾಲಾವಕಾಶ ನೀಡಿ, ಅವರಿಂದ ವಿವರಣೆಗಳನ್ನು ಪಡೆದು, ಆ ನಂತರ ಮುಂದಿನ ಕ್ರಮ ಜರುಗಿಸುವುದು ಹೆಚ್ಚು ನ್ಯಾಯಸಮ್ಮತ ಆಗಬಹುದು. ವರ್ತಕರು ತೆರಿಗೆ ವಂಚಿಸಬಾರದು ಎಂಬುದರಲ್ಲಿ ಎರಡು ಮಾತಿಲ್ಲವಾದರೂ, ತೆರಿಗೆ ವಂಚನೆಯನ್ನು ತಡೆಯುವ ಉದ್ದೇಶದಿಂದ ವರ್ತಕರ ಜೊತೆ ತೀರಾ ಕಠಿಣವಾಗಿ ವರ್ತಿಸುವುದರಿಂದ ಯಾರಿಗೂ ಒಳಿತಾಗುವುದಿಲ್ಲ. ತಪ್ಪುಗಳಲ್ಲಿ ಎರಡು ವಿಧ– ಉದ್ದೇಶಪೂರ್ವಕ ಹಾಗೂ ಉದ್ದೇಶರಹಿತ. ಎರಡನೆಯ ಬಗೆಯ ತಪ್ಪುಗಳ ವಿಚಾರದಲ್ಲಿ 'ವಜ್ರಾದಪಿ ಕಠೋರಾಣಿ' ಎಂಬಂತೆ ವರ್ತಿಸಬೇಕಾಗಿಲ್ಲ. ತೆರಿಗೆ ವಿವರ ಸಲ್ಲಿಕೆಯ ಸಂದರ್ಭದಲ್ಲಿ ಮನುಷ್ಯಸಹಜವಾದ ಕೆಲವು ತಪ್ಪುಗಳು ಆಗಬಹುದು. ಯಾವ ಕೆಟ್ಟ ಉದ್ದೇಶವೂ ಇಲ್ಲದೆ ಆಗುವ ತಪ್ಪಿಗೆ ನೋಂದಣಿ ಅಮಾನತಿನ ಶಿಕ್ಷೆ ವಿಧಿಸುವುದು ವಾಣಿಜ್ಯ ವಹಿವಾಟುಗಳಿಗೆ ಪ್ರೋತ್ಸಾಹ ನೀಡಬೇಕಾದವರು ಮಾಡುವ ಕೆಲಸ ಅಲ್ಲ. ವರ್ತಕರಿಗೆ ಮುಕ್ತವಾಗಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವ ವಾತಾವರಣವನ್ನು ಸರ್ಕಾರ ಸೃಷ್ಟಿಸಿಕೊಡಬೇಕು. ತೆರಿಗೆ ವಂಚನೆಯ ಉದ್ದೇಶವಿಲ್ಲದೆ ತಪ್ಪುಗಳಾದರೆ ಅವನ್ನು ತಿದ್ದಿಕೊಳ್ಳಲು ಅವಕಾಶವನ್ನೂ ನೀಡಬೇಕು. ಆಗ ವರ್ತಕರು ಹೆಚ್ಚು ವಿಶ್ವಾಸದಿಂದ ವಹಿವಾಟಿನಲ್ಲಿ ತೊಡಗಿಕೊಳ್ಳುತ್ತಾರೆ. ವಹಿವಾಟು ಹೆಚ್ಚೆಚ್ಚು ನಡೆದಂತೆಲ್ಲ ಸಂಪತ್ತು ವೃದ್ಧಿಯಾಗುತ್ತದೆ. ನಿರ್ಭೀತಿಯಿಂದ, ಮುಕ್ತವಾಗಿ ವಾಣಿಜ್ಯ ವಹಿವಾಟು ನಡೆಸುವಂತಹ ಸಂದರ್ಭ ಇರಬೇಕಿರುವುದು ಮಾರುಕಟ್ಟೆ ಅರ್ಥವ್ಯವಸ್ಥೆಯ ಮೂಲಭೂತ ಅಗತ್ಯಗಳಲ್ಲಿ ಒಂದು.

ದಿನದ ಟ್ವೀಟ್

ಯಾವುದಕ್ಕೆ ಕಾಯಲಿ?

ಪ್ರತೀ ಲೀಟರ್ ಪೆಟ್ರೋಲ್ ಆಟ ಹೀಗಿದೆ: ಮೂಲ ವೆಚ್ಚ ಸುಮಾರು ₹ 32.50, ಕೇಂದ್ರ ತೆರಿಗೆ ಸುಮಾರು ₹ 33, ಸರಾಸರಿ ರಾಜ್ಯ ತೆರಿಗೆ ಸುಮಾರು ₹ 21.50, ಡೀಲರ್ ಕಮಿಷನ್ ₹ 3.35. ನಾನು, ಆರ್.ಅಶ್ವಿನ್ ಅವರು ಸೆಂಚುರಿ ಹೊಡೆದದ್ದಕ್ಕಾಗಿ ಸಂಭ್ರಮಿಸಬೇಕೋ ಅಥವಾ ಪೆಟ್ರೋಲ್ ಬೆಲೆಯು ಶತಕ ಬಾರಿಸುವವರೆಗೂ ಸಂಭ್ರಮಾಚರಣೆಗಾಗಿ ಕಾಯಬೇಕೋ?

ಕಿಶೋರ್ ಬೆಹೆರಾ, ಎಂಜಿನಿಯರ್, ಮಧ್ಯಪ್ರದೇಶ

25 ವರ್ಷಗಳ ಹಿಂದೆ

ಶನಿವಾರ, 17-2-1996

- **ಚಿತ್ರೋದ್ಯಮ: ಮುಂದುವರಿದ ಬಿಕ್ಕಟ್ಟು, ತೀವ್ರ ವಿರೋಧ**

ಬೆಂಗಳೂರು, ಫೆ. 16– ಪರಭಾಷಾ ಚಿತ್ರಗಳನ್ನು ಆಯಾ ರಾಜ್ಯಗಳಲ್ಲಿ ಬಿಡುಗಡೆಯಾದ ಏಳು ವಾರಗಳ ನಂತರವಷ್ಟೇ ಕರ್ನಾಟಕದಲ್ಲಿ ಬಿಡುಗಡೆ ಮಾಡಬೇಕು ಎಂಬ ಸರ್ಕಾರದ ತೀರ್ಮಾನಕ್ಕೆ ಚಿತ್ರ ಪ್ರದರ್ಶಕರು ಮತ್ತು ವಿತರಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

- **'ರಾಜ್ಯಕ್ಕೆ ಒಂದೇ ಸಾಹಿತ್ಯ ಅಕಾಡೆಮಿ'**

ಬೆಂಗಳೂರು, ಫೆ. 16– ಪ್ರತೀ ಭಾಷೆಗೂ ಒಂದೊಂದು ಪ್ರತ್ಯೇಕ ಅಕಾಡೆಮಿಯ ಬದಲು, ಎಲ್ಲ ಭಾಷೆಗಳಿಗೂ ಒಂದೇ 'ಕರ್ನಾಟಕ ಅಕಾಡೆಮಿ'ಯ ಸ್ಥಾಪನೆ ಸೂಕ್ತ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ, ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಡಾ. ಯು.ಆರ್.ಅನಂತಮೂರ್ತಿ ಇಂದು ಇಲ್ಲಿ ಅಭಿಪ್ರಾಯಪಟ್ಟರು.

'ಪ್ರತೀ ಭಾಷೆಗೆ ಬೇರೆ ಬೇರೆ ಅಕಾಡೆಮಿ ಇರುವುದೆಂದರೆ, ಎಲ್ಲ ಭಾಷೆಗಳೂ ನಮ್ಮವು ಎಂದು ಒಪ್ಪಿಕೊಂಡಂತೆ ಆಗುವುದಿಲ್ಲ' ಎಂದ ಅವರು, 'ಎಲ್ಲ ಭಾಷೆಗಳ ಸಾಹಿತ್ಯದ ಅಭಿವೃದ್ಧಿಗೆ ಕಾರ್ಯ ನಿರ್ವಹಿಸುವ ಕೇಂದ್ರ ಸಾಹಿತ್ಯ ಅಕಾಡೆಮಿಯ ಮಾದರಿಯಲ್ಲಿ ಕರ್ನಾಟಕ ಅಕಾಡೆಮಿ ಕೆಲಸ ಮಾಡಬಹುದು' ಎಂದರು.

ನಗರದಲ್ಲಿ ಫೆ. 22ರಿಂದ 28ರವರೆಗೆ ನಡೆಯುವ 'ಸಾಹಿತ್ಯೋತ್ಸವ'ದ ಹಿನ್ನೆಲೆಯಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಅವರು ಹೀಗೆ ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 17-2-1971

- **ವಿರೋಧಿ ಸಭೆ ಚದುರಿಸುವ ಚಮತ್ಕಾರ ಯಂತ್ರ**

ಇಂದೋರ್, ಫೆ. 16– ಮಧ್ಯಪ್ರದೇಶದ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿಸ್ಪರ್ಧಿ ಮಾತನಾಡುತ್ತಿರುವ ಚುನಾವಣೆ ಸಭೆಯಿಂದ ಜನರ ಗಮನ ಪರಿಣಾಮಕಾರಿಯಾಗಿ ಬೇರೆ ಕಡೆಗೆ ತಿರುಗಿಸಲು ಅತ್ಯುತ್ತಮ ಸಾಧನ ಯಾವುದು?

ಆ ಪ್ರದೇಶದಲ್ಲೇ ಹೆಲಿಕಾಪ್ಟರನ್ನು ಇಳಿಸಿದರೆ, ಚುನಾವಣೆ ಸಭೆ ನಿರ್ಜನವಾಗುತ್ತದೆ. ಹಳ್ಳಿಗಾಡಿನ ಮುಗ್ಧ ಜನ ಹೆಲಿಕಾಪ್ಟರನ್ನು ನೋಡಲು ಓಡಿ ಬರುತ್ತಾರೆ.

ಕಳೆದ ಮಹಾ ಚುನಾವಣೆಗಳಲ್ಲಿ ಗ್ವಾಲಿಯರ್‌ನ ರಾಜಮಾತೆ ಈ ತಂತ್ರವನ್ನು ಅನುಸರಿಸಿದವರಲ್ಲಿ ಮೊದಲನೆಯವರು. ಆಡಳಿತ ಕಾಂಗ್ರೆಸ್ಸಿನ ಅಭ್ಯರ್ಥಿ ಗ್ವಾಲಿಯರ್‌ನಲ್ಲಿ ಸೋತರು. ತಮ್ಮ ಪ್ರತಿಸ್ಪರ್ಧಿ ಹೆಲಿಕಾಪ್ಟರನ್ನು ಬಳಸಿದ್ದು ತಮ್ಮ ಸೋಲಿಗೆ ಕಾರಣಗಳಲ್ಲೊಂದು ಎಂದು ಅವರು ಒಪ್ಪಿಕೊಂಡಿದ್ದಾರೆ. ಈ ಸಲ ಆಡಳಿತ ಕಾಂಗ್ರೆಸ್ ಪಕ್ಷವೂ ಸವಾಲನ್ನೆದುರಿಸಲು ಎರಡು ಹೆಲಿಕಾಪ್ಟರುಗಳನ್ನು ಹೊಂದಿದೆ.

- **ಪಾಕಿಸ್ತಾನದಲ್ಲಿನ ಭಾರತ ರಾಯಭಾರಿಗೆ ದೆಹಲಿಗೆ ಬರಲು ಕರೆ**

ನವದೆಹಲಿ, ಫೆ. 16–ಇಂಡಿಯನ್ ಏರ್‌ಲೈನ್ಸ್‌ನ ವಿಮಾನವನ್ನು ಅಪಹರಿಸಿ, ಅದನ್ನು ಸುಟ್ಟನಂತರ ಕಂಡುಬಂದ ಪಾಕಿಸ್ತಾನದ ಹಗೆತನದ ಮನೋಭಾವ ಕುರಿತು ತುರ್ತು ಸಮಾಲೋಚನೆಗಳನ್ನು ನಡೆಸಲು ದೆಹಲಿಗೆ ಬರುವಂತೆ, ಪಾಕಿಸ್ತಾನದಲ್ಲಿನ ತನ್ನ ಹೈಕಮಿಷನರರಿಗೆ ಭಾರತ ತಿಳಿಸಿದೆ.

ಜನಹೋರಾಟದ ದಿಕ್ಕು ತಪ್ಪಿಸುವ 'ಆಂದೋಲನಜೀವಿ'ಗಳು ಯಾರು ಎಂಬುದು ಚರ್ಚಾಸ್ಪದ

'ವಿಶ್ವಗುರು' ಹೇಳಿದ್ದು ಯಾರಿಗೆ?



ಗತಿಬಿಂಬ

ವೈ.ಗ.ಜಗದೀಶ್

ಅಣೆಕಟ್ಟೆಯಲ್ಲಿ ನೀರಿದ್ದರೆ ಎಡದಂಡೆ, ಬಲದಂಡೆಯವರು ನೀರಿನ ಪಾಲು ಕೇಳಬಹುದು. ನಾಲೆ ಕೊನೆಯ ತುದಿಯಲ್ಲಿದ್ದವರಿಗೆ ನೀರು ಸಿಗುತ್ತದೆಯೋ ಇಲ್ಲವೋ ಅಣೆಕಟ್ಟೆ ಆಜುಬಾಜಿನಲ್ಲಿರುವವರಿಗೆ ನೀರಿನ ತೊಂದರೆಯೇನೂ ಇಲ್ಲ. ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡುತ್ತಿದ್ದ ತಳಹಂತದ ಭದ್ರತಾ ಸಿಬ್ಬಂದಿ, ಸಹಾಯಕರು, ಡಿಟಿಪಿ ಆಪರೇಟರ್ ಹುದ್ದೆಗಳನ್ನೆಲ್ಲ ಹೊರ ಗುತ್ತಿಗೆ ಕೊಟ್ಟಾಗಿದೆ. ಖಾಸಗೀಕರಣ ಹೆಚ್ಚಿದಂತೆ ಸರ್ಕಾರಿ ಉದ್ಯೋಗ ಮರೆಯಾಗುತ್ತಿದೆ; ಖಾಲಿ ಉಳಿದಿರುವ ಸರ್ಕಾರಿ ಹುದ್ದೆಗಳಿಗೂ ನೇಮಕಾತಿ ನಡೆಯುತ್ತಿಲ್ಲ. ಇಂತಹ ಹೊತ್ತಿನಲ್ಲಿ ಮೀಸಲಾತಿಯ ಹುಯಿಲು ಕರ್ನಾಟಕದಲ್ಲಿ ಎದ್ದಿದೆ.

ಮೀಸಲಾತಿ ಕೇಳುವುದು ತಪ್ಪಲ್ಲ; ಕುರುಬರು, ಲಿಂಗಾಯತ ಪಂಚಮಸಾಲಿ, ದೇವಾಂಗ, ಉಪ್ಪಾರ, ಮಾದಿಗರು ಹೀಗೆ ದುಡಿವ ಸಮುದಾಯದವರ ಮೀಸಲಾತಿ ಬೇಡಿಕೆ ನ್ಯಾಯಯುತ ಹಕ್ಕು. ಉದ್ಯೋಗ ಸೃಷ್ಟಿಗೆ ದಿಡ್ಡಿ ಬಾಗಿಲು ಹಾಕಿದ ಮೇಲೆ ಮೀಸಲಾತಿ ಕೇಳುವುದು ಯಾವುದಕ್ಕೆ? ಇದು ಇಲ್ಲದ ನೀರಿಗೆ ಪಾಲು ಕೇಳಿದಂತಲ್ಲವೇ?

ರಾಜಕೀಯವಾಗಿ ಪ್ರಬಲವಾಗಿರುವ ಲಿಂಗಾಯತ ಪಂಚಮಸಾಲಿ ಹಾಗೂ ಕುರುಬ ಸಮುದಾಯದವರು ಈಗ ಬೀದಿಗೆ ಇಳಿದಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಸಚಿವರು, ಶಾಸಕರು ಆಗಿರುವವರದ್ದೇ ಇದಕ್ಕೆ ನೇತೃತ್ವ. ಸರ್ಕಾರದ ಭಾಗಿದಾರರು ನಡೆಸುತ್ತಿರುವ ಹೋರಾಟ ಯಾರ ವಿರುದ್ಧ? ಈ ಎರಡು ಹೋರಾಟಗಳ ಬಗ್ಗೆ ಮತ್ತೊಂದು ಆಯಾಮದ ಚರ್ಚೆಯೂ ಶುರುವಿಟ್ಟಿದೆ. ಇಬ್ಬರು 'ಪ್ರಭಾವಿ'ಗಳ ಬಲ ಕುಗ್ಗಿಸಲು, ಆರ್‌ಎಸ್‌ಎಸ್ ಮೂಲದಿಂದ ಬಂದು ಬಿಜೆಪಿಯಲ್ಲಿ ಆಯಕಟ್ಟಿನ ಜಾಗದಲ್ಲಿರುವ ಕೆಲ ಪ್ರಮುಖರು ಈ ಹೋರಾಟವನ್ನು ಹಚ್ಚಿಕೊಟ್ಟಿದ್ದಾರೆ ಎಂಬ ಟೀಕೆಯೂ ಇದೆ. 'ಲಿಂಗಾಯತರ ಪ್ರಶ್ನಾತೀತ ನಾಯಕ ಎಂಬ ಬಿ.ಎಸ್.ಯಡಿಯೂರಪ್ಪನವರ ಹೆಗ್ಗಳಿಕೆಯನ್ನು ಮಸುಕುಗೊಳಿಸಿ, ಪರ್ಯಾಯ ನಾಯಕತ್ವ ಇದೆ ಎಂದು ತೋರಿಸುವುದು ಪಂಚಮಸಾಲಿ ಹೋರಾಟದ ಹಿಂದಿನ ಮರ್ಮ. ಯಡಿಯೂರಪ್ಪ ತಮ್ಮ ನಾಯಕತ್ವವನ್ನು ಪುತ್ರ ವಿಜಯೇಂದ್ರ ಅವರಿಗೆ ಹಸ್ತಾಂತರಿಸುವ 'ರಾಜಶಾಹಿ' ಪದ್ಧತಿಯ ವಿರುದ್ಧದ ಹೋರಾಟ ಇದು' ಎಂಬ ವಿಮರ್ಶೆಯೂ ಇದೆ. ಯಡಿಯೂರಪ್ಪ ಜತೆ ಗುರುತಿಸಿಕೊಂಡಿರುವ ಪಂಚಮಸಾಲಿ ಅಲ್ಲದ ಲಿಂಗಾಯತ ನಾಯಕರು ಇದನ್ನು ಹೇಳಿಯೂ ಇದ್ದಾರೆ.

ಕಾಂಗ್ರೆಸ್ ನಾಯಕ ಸಿದ್ದರಾಮಯ್ಯನವರ ಬಗ್ಗೆ ಕುರುಬ ಸಮುದಾಯದಲ್ಲಿರುವ ವಿಶ್ವಾಸವನ್ನು ಕುಗ್ಗಿಸಿ, ಅದನ್ನು ಬಿಜೆಪಿ ಮತಬ್ಯಾಂಕ್ ಆಗಿ ಪರಿವರ್ತಿಸುವುದು ಕುರುಬ ಸಮುದಾಯದವರ ಮೀಸಲಾತಿಯ ಹೋರಾಟದ ಹಿಂದಿನ ತರ್ಕ ಎಂಬ ಚರ್ಚೆಯೂ ಇದೆ.

'ನಮ್ಮ ಮೀಸಲಾತಿ ಬೇಡಿಕೆ ಈಡೇರಿದರೆ 60 ಲಕ್ಷ ಕುರುಬರು ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕುತ್ತಾರೆ ಎಂಬ ಭೀತಿ ಸಿದ್ದರಾಮಯ್ಯ ಅವರನ್ನು ಕಾಡುತ್ತಿದೆ' ಎಂಬ ಸಚಿವ ಕೆ.ಎಸ್.ಈಶ್ವರಪ್ಪನವರ ಮಾತುಗಳು ಏನನ್ನು ಧ್ವನಿಸುತ್ತಿವೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ.

ಈ ಹೋರಾಟಗಳು ಬಿರುಸುಗೊಳ್ಳುತ್ತಿರುವುದರ ಮಧ್ಯೆಯೇ 'ವಿಶ್ವಗುರು' ಎಂದು ಭಜಿಸಿಕೊಳ್ಳುವ ಪ್ರಧಾನಿ ನರೇಂದ್ರ ಮೋದಿ ಉರುಳಿಸಿದ 'ಆಂದೋಲನಜೀವಿ' ಎಂಬ ಪದ ಸಾಕಷ್ಟು ವಾಗ್ವಾದಕ್ಕೆ ಗುರಿಯಾಗಿದೆ. ರಾಜ್ಯಸಭೆಯಲ್ಲಿ ಮಾತನಾಡಿದ ಮೋದಿ, 'ದೇಶದಲ್ಲಿ ಆಂದೋಲನಜೀವಿಗಳೆಂಬ ಹೊಸತಳಿ ಸೃಷ್ಟಿಯಾಗಿದೆ. ವೃತ್ತಿಪರ ಪ್ರತಿಭಟನಕಾರರಾಗಿರುವ ಇಂಥವರನ್ನು ಎಲ್ಲ ಪ್ರತಿಭಟನೆಗಳಲ್ಲೂ ಕಾಣಬಹುದಾಗಿದೆ. ಇಂಥ ಪರಾವಲಂಬಿ ಜೀವಿಗಳಿಗೆ ಪ್ರತಿಭಟನೆ ಎಂಬುದು ಹಬ್ಬವಿದ್ದಂತೆ' ಎಂದು ಹಂಗಿಸಿದ್ದರು.

ದೇಶಕ್ಕೆ ಅನ್ನ ನೀಡುವ ರೈತರು ಮೂರು ತಿಂಗಳುಗಳಿಂದ ವಯಸ್ಸು, ಚಳಿ, ಬಿಸಿಲು; ಅದೆಲ್ಲಕ್ಕಿಂತ ಇಡೀ ವರ್ಷ ಗಂಟೆ ಬಾರಿಸುತ್ತಾ ಮನೆಯಲ್ಲೇ ಎಲ್ಲರೂ ಕೂರುವಂತೆ ಮಾಡಿದ ಕೋವಿಡ್ ಅನ್ನೂ ಲೆಕ್ಕಿಸದೆ ಹೋರಾಟಕ್ಕೆ ಕಾವು ಕೊಟ್ಟಿದ್ದಾರೆ. ರೈತರ ಸಮಸ್ಯೆ ಪರಿಹರಿಸುವ ಹೊಣೆ ಇರುವ 'ಚೌಕಿದಾರ', ದೇಶವಾಸಿಗಳನ್ನು ಹೀಗೆ ಒಂದೇ ಪದದಲ್ಲಿ ಹೊಡೆದುಹಾಕಲು ನೋಡಿದ್ದು ಐತಿಹಾಸಿಕ ಕ್ರೌರ್ಯ. ತಮ್ಮ ಸಹಚರ ಎಂಬಂತೆ ಮೋದಿ ಈವರೆಗೂ ಭಾವಿಸಿದ್ದ ಟ್ರಂಪ್ ಬೆಂಬಲಿಗರು ದುಂಡಾವರ್ತಿ ಮಾಡಿದಾಗ ಅವರನ್ನೇನೂ ವಿಶ್ವಗುರುಗಳು ಹೀಗಳೆಯಲಿಲ್ಲ; ಕಟುವಾಗಿ ಟೀಕಿಸಿದ್ದೂ ಕಾಣಿಸಲಿಲ್ಲ.

'ಪಿತೂರಿ' ಪ್ರಕರಣವೊಂದನ್ನು ಆರೋಪಿಸಿ ಜೈಲಿಗೆ ತಳ್ಳಲಾಗಿರುವ ತೆಲುಗಿನ ಕವಿ ವರವರರಾವ್, 'ಅಪರಾಧವೇ ಅಧಿಕಾರವಾಗಿ ಜನರನ್ನು ಅಪರಾಧಿಗಳನ್ನಾಗಿಸಿ ಬೇಟೆಯಾಡುತ್ತಿದ್ದಾಗ ಬಾಯಿದ್ದೂ ಸುಮ್ಮನೆ ಕೂರುವವನೂ ಅಪರಾಧಿಯೇ' ಎಂದು ಬರೆದಿದ್ದನ್ನು ನೆನಪಿಸಿದರೆ ಅದು ಅಪರಾಧವಾಗಲಿಕ್ಕಿಲ್ಲ.

ಪ್ರಧಾನಿಯಂಥ ಉನ್ನತ ಹುದ್ದೆಯಲ್ಲಿ ಇರುವವರು 'ಆಂದೋಲನಜೀವಿ' ಎಂದು ಯಾರನ್ನು ಉದ್ದೇಶಿಸಿ ಹೇಳಿದ್ದು ಎಂಬುದು ಚರ್ಚಾಸ್ಪದ. ಮಂಡಲ್ ವರದಿ ಜಾರಿಗೆ ಕೇಂದ್ರ ಸರ್ಕಾರ ಮುಂದಾದಾಗ ಮೇಲ್ವರ್ಗದವರನ್ನು ಎತ್ತಿಕಟ್ಟಿದ್ದು ಯಾರ ಪರ ಆಂದೋಲನ ಎಂದು ಈಗ ಮೀಸಲಾತಿಗಾಗಿ ಜನರನ್ನು ಹುರಿದುಂಬಿಸಿರುವವರೇ ಹೇಳಬೇಕು.



ಬಿಜೆಪಿ ನಾಯಕರಾದ ಎಲ್.ಕೆ.ಅಡ್ವಾಣಿ ಹಾಗೂ ಬಿ.ಎಸ್.ಯಡಿಯೂರಪ್ಪ ಜೀವನದುದ್ದಕ್ಕೂ ಹೋರಾಟವನ್ನೇ ನಡೆಸಿದವರು. ರಾಮಜನ್ಮಭೂಮಿಗಾಗಿ ಇಟ್ಟಿಗೆ, ದೀಪ, ಪಾದುಕೆ ಹೀಗೆ ಅನೇಕ ಯಾತ್ರೆಗಳನ್ನು ಎರಡು ದಶಕ ನಡೆಸಿದ ಅಡ್ವಾಣಿ, ಬಿಜೆಪಿಗೆ ರಾಷ್ಟ್ರವ್ಯಾಪಿ ಬುನಾದಿ ಹಾಕಿಕೊಟ್ಟರು. ರೈತರಿಗಾಗಿ ಹತ್ತಾರು ರೀತಿಯ ಪಾದಯಾತ್ರೆ ನಡೆಸಿ ಇಳಿವಯಸ್ಸಿನಲ್ಲಿ ಅಧಿಕಾರಕ್ಕೆ ಏರಿದವರು ಯಡಿಯೂರಪ್ಪ.

ಕರ್ನಾಟಕದ ವಿಷಯಕ್ಕೆ ಬಂದರೆ, ಬಿಜೆಪಿಗೆ ನೆಲೆಯೇ ಇರಲಿಲ್ಲ. ಹುಬ್ಬಳ್ಳಿಯ ಈದ್ಗಾ ಮೈದಾನ, ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿ ವಿವಾದಗಳನ್ನೇ ಮುಂದಿಟ್ಟು ಅದು ತಳವೂರಿತು. ಗೋಹತ್ಯೆ ವಿಷಯ ಕೆದಕಿ, ಕೋಮು ವೈಷಮ್ಯ ಬಿತ್ತಿ ಕರಾವಳಿಯಲ್ಲಿ ಬೇರೂರಿತು.

ಅಡ್ವಾಣಿ ರಥಯಾತ್ರೆ, ಈದ್ಗಾ ವಿವಾದಕ್ಕೆ ಸಂಬಂಧಿಸಿದ ಪ್ರಲ್ಹಾದ ಜೋಶಿ, ಅನಂತಕುಮಾರ ಹೆಗಡೆಯವರ ಹೋರಾಟ, ಬಾಬಾಬುಡನ್‌ಗಿರಿ ವಿವಾದಕ್ಕೆ ಸಂಬಂಧಿಸಿ ಸಿ.ಟಿ.ರವಿಯವರ ಚಳವಳಿ, ನಳಿನ್ ಕುಮಾರ್ ಕಟೀಲ್ ಅವರ ಕೋಮು ಆಧಾರಿತ ರಾಜಕಾರಣಗಳು ಜನರ ಕಷ್ಟಗಳನ್ನು ಮುಂದಿಟ್ಟು ನಡೆಸಿದ ಹೋರಾಟಗಳಲ್ಲ. ತಮ್ಮ ಸಂಕಟಗಳನ್ನು ಒಡಲುರಿಯಾಗಿಸಿ ಹೋರಾಟಕ್ಕೆ ಧುಮುಕಬಹುದಾದ ಜನರನ್ನು ಕೋಮು–ಧರ್ಮದ ಅಮಲಿನಲ್ಲಿ ಮುಳುಗಿಸಿ ದಿಕ್ಕುತಪ್ಪಿಸುವ ಹೋರಾಟಗಳೇ ಆಗಿದ್ದವು. ಅರ್ಥಾತ್; ಅಧಿಕಾರ ಹಿಡಿಯುವ ಏಕೈಕ ಅಪೇಕ್ಷೆಯಿಂದ ಜನರ ಭಾವನೆಗಳನ್ನೇ ಬಂಡವಾಳವಾಗಿಸಿಕೊಂಡ ಆಂದೋಲನ ಜೀವಿಗಳ ಪರಂಪರೆ ಇದು. ಕಾಂಗ್ರೆಸ್, ಬಿಜೆಪಿ, ಕಮ್ಯುನಿಸ್ಟ್ ಹೀಗೆ ಯಾವುದೇ ಪಕ್ಷದ ಪ್ರಭುತ್ವ ಇರಲಿ, ಜನರು ಹೋರಾಟಕ್ಕೆ ಇಳಿಯುವುದನ್ನು ಸಹಿಸದು. ಆರ್ಥಿಕ ಸಂಕಷ್ಟ, ನಿರುದ್ಯೋಗ, ಕೃಷಿ ಉತ್ಪನ್ನಗಳಿಗೆ ಬೆಲೆ ಇಲ್ಲದೇ ಇರುವುದು, ನಿತ್ಯ ಜೀವನವೇ ನರಕವಾಗಿರುವುದನ್ನು ಸಹಿಸದ ಜನಸಮುದಾಯದೊಳಗೆ ಹೋರಾಟದ ಜ್ವಾಲೆಯೊಂದು ತನ್ನಿಂತಾನೇ ಸ್ಫೋಟಗೊಳ್ಳುತ್ತದೆ. ಅದನ್ನು ದಿಕ್ಕುತಪ್ಪಿಸಲು ಧರ್ಮ, ಜಾತಿಯ ಸಂಗತಿಗಳನ್ನು ಮುಂಚೂಣಿಗೆ ತಂದು ಮೈ ಮರೆಯುವಂತೆ ಮಾಡುವುದು ಎಲ್ಲ ಕಾಲದ ಪ್ರಭುತ್ವಗಳು ಬಳಸಿಕೊಂಡ ಅಸ್ತ್ರಗಳು.

ರೈತರ ಹೋರಾಟ ಕೆಲ ದಿನದ ಆಟ ಎಂದು ಮೋದಿ ಅಂದುಕೊಂಡಿದ್ದಿರಬೇಕು. ಯಾವುದಕ್ಕೂ ಜಗ್ಗದ ರೈತರು ವಿಶ್ವದ ಗಮನ ಸೆಳೆಯುವಷ್ಟು ಬಲಿಷ್ಠಗೊಂಡಾಗ, ಹೀಗಳೆಯುವ ದಾರಿಯನ್ನು ಮೋದಿ ಹುಡುಕಿದರೇ?

'ಕೃಷಿಮೊದಲು ಸರ್ವಕ್ಕೆ ಕೃಷಿಯಿಂ/ಪಸರಿಸುವುದಾ ಕೃಷಿಯನುದ್ಯೋ/ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ/ವಸು ತೆರಳುವುದು ವಸುವಿನಿಂ ಸಾ/ಧಿಸುವಡಾವುದಸಾಧ್ಯವದರಿಂ/ ಕೃಷಿ ವಿಹೀನನ ದೇಶವದು ದುರ್ದೇಶ ಕೇಳೆಂದ' ಎಂದು ಕವಿ ಕುಮಾರವ್ಯಾಸ 'ಸಭಾಪರ್ವ'ದಲ್ಲಿ ನಾರದನಿಂದ ಯುಧಿಷ್ಠಿರನಿಗೆ ಹೇಳಿಸುತ್ತಾನೆ. 'ದೇಶಕ್ಕೆ ಕೃಷಿಯೇ ಮುಖ್ಯವಾಗಿದ್ದು ದೇಶವು ಕೃಷಿಕರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಕೃಷಿಯು ಇಲ್ಲದ ದೇಶ ದುರ್ದೇಶ'ವಾಗುತ್ತದೆ ಎಂಬುದು ಇದರ ತಾತ್ಪರ್ಯ.

ಇವತ್ತು ದೇಶ ಆಳುತ್ತಿರುವ 'ಧರ್ಮ'ರಾಯರಿಗೆ ಹೀಗೆ ತಿಳಿ ಹೇಳಬೇಕಾದವರು ಯಾರು?

ಚುರುಮುರಿ

ಎಣ್ಣೆ ಏಟು

• ಮಣ್ಣೆರಾಜು

'ಎಣ್ಣೆ ರೇಟು ದುಬಾರಿಯಾಗಿದೆ...' ಚಿತ್ರಾನ್ನದ ಒಗ್ಗರಣೆ ಸಿಡಿಸಿದಳು ಸುಮಿ.

'ಹೌದು, ಎಣ್ಣೆ ಏಟಿಗೆ ಅಬಕಾರಿ ಆರಾಧಕರು ಭಿಕಾರಿಗಳಾಗ್ತಿದ್ದಾರೆ...' ಅಂದ ಶಂಕ್ರಿ.

'ನಾನು ಹೇಳಿದ್ದು ಅಡುಗೆ ಎಣ್ಣೆ ಬೆಲೆರೀ...'

'ಎಣ್ಣೆಯಲ್ಲಿ ವಡೆ, ಬೋಂಡ ತೇಲಿಸಬೇಡ, ನಾವು ಮುಳುಗ್ತೀವಿ...'

'ಇನ್ಮೇಲೆ ಆಯಿಲ್‌ಲೆಸ್ ಅಡುಗೆ, ತಿಂಡಿನೇ ತಿನ್ನಬೇಕು' ತಿಂಡಿ ತಂದು ಬಡಿಸಿದಳು.

'ಆಯಿಲ್‌ಲೆಸ್ ಅಡುಗೆ ಓಕೆ, ಬೈಕ್ ಆಯಿಲ್‌ಲೆಸ್ ಅಲ್ಲವಲ್ಲ, ಪೆಟ್ರೋಲ್ ತುಂಬಿಸಲೇಬೇಕು' ಅಂದಳು ಮಗಳು ಪಮ್ಮಿ.

'ಬೈಕ್ ಬಿಟ್ಟು ಸೈಕಲ್‌ನಲ್ಲಿ ಆಫೀಸ್‌ಗೆ ಹೋಗ್ತೀನಿ'.

'ಬೆಳಿಗ್ಗೆ ಸೈಕಲ್ ಹತ್ತಿದರೆ ಲಂಚ್ ಟೈಮ್‌ಗೆ ಆಫೀಸ್ ತಲುಪುತ್ತಾರೆ ಅಷ್ಟೇ. ಸೈಕಲ್ ಬದಲು ಪೆಟ್ರೋಲ್‌ಲೆಸ್ ಕತ್ತೆನೋ ಕುದುರೆನೋ ಹತ್ತಿಕೊಂಡು ಹೋಗ್ರೀ' ಅಂದಳು ಸುಮಿ.

'ಮೇಂಟೆನೆನ್ಸ್ ಕಮ್ಮಿ ಇದ್ದರೂ ಕತ್ತೆ ಮೈಲೇಜ್ ಕೊಡೋದಿಲ್ಲ. ಕುದುರೆ ಕೊಂಡುಕೊಳ್ಳಿ ಡ್ಯಾಡಿ' ಅಂದಳು ಪಮ್ಮಿ.

'ಹೌದು, ಕೊಂಡುಕೊಳ್ಳಿ. ಹುರುಳಿ ತಿನ್ನಿಸಿ, ಮಾಲೀಶ್ ಮಾಡಿದರೆ ಕುದುರೆ ಒಳ್ಳೆ ಮೈಲೇಜ್ ಕೊಡುತ್ತೆ. ಕಾರು ಶೆಡ್ಡನ್ನು ಲಾಯ ಮಾಡಿಕೊಳ್ಳೋಣ' ಅಂದ ಶಂಕ್ರಿ.

'ನಾನೂ ಹಾರ್ಸ್ ರೈಡಿಂಗ್ ಟ್ರೈನಿಂಗ್ ಸ್ಕೂಲ್ ಸೇರಿ ಕುದುರೆ ಸವಾರಿ ಕಲಿತುಕೊಳ್ತೀನಿ. ಕುದುರೆಗೆ ಡಿ.ಎಲ್, ಇನ್ಶೂರೆನ್ಸ್, ಹೆಲ್ಮೆಟ್ ಬೇಕಾಗೋದಿಲ್ಲ' ಪಮ್ಮಿ ಆಸೆಪಟ್ಟಳು.

'ಹಿಂದೆ ರಾಜ-ಮಹಾರಾಜರೆಲ್ಲಾ ಕುದುರೆ ಸವಾರಿ ಮಾಡಿಕೊಂಡು ರಾಜ್ಯಭಾರ ಮಾಡ್ತಿದ್ರು. ಕಾಡಿಗೆ ಹೋಗಿ ಬೇಟೆಯಾಡುತ್ತಿದ್ರು'.

'ನಾವು ಹಿಂದಕ್ಕೆ ಹೋಗ್ತಾ ಇದ್ದೀವಾ...? ಆಧುನಿಕತೆಯಿಂದ ಆದಿಮಾನವರಾಗುವತ್ತ ಸಾಗ್ತಾ ಇದ್ದೀವಾ?!'

'ದಿನಬಳಕೆ ಪದಾರ್ಥಗಳ ಬೆಲೆ ಹೀಗೇ ಏರುತ್ತಿದ್ದರೆ, ನಾವೂ ಆದಿಮಾನವರಂತೆ ಕಾಡಿನಲ್ಲಿ ಗೆಡ್ಡೆಗೆಣಸು ತಂದು ತಿಂದು ಬದುಕಬೇಕಾಗುತ್ತದೆ' ಅಂದ ಶಂಕ್ರಿ.

'ಹಾಗೆ ಬದುಕಲೂ ಈಗ ಕಾಡೂ ಇಲ್ಲ, ಗೆಡ್ಡೆಗೆಣಸೂ ಇಲ್ಲವಲ್ಲಾರೀ...' ಸುಮಿ ಆತಂಕಗೊಂಡಳು.

ಸಂಗತ

ನದಿ ನೀರು ತಿರುವು: ದಿಕ್ಕು, ದೆಸೆ

ಪಶ್ಚಿಮ ಘಟ್ಟಗಳ ನದಿಗಳ ನೀರು ವ್ಯರ್ಥವಾಗಿ ಸಮುದ್ರ ಸೇರುತ್ತಿದೆ ಎಂಬುದು ತಪ್ಪು ಕಲ್ಪನೆ

• ಡಾ. ಜಿ.ವಿ.ಹೆಗಡೆ

ಕಾಳಿ ನದಿ ನೀರನ್ನು ಪೂರ್ವಾಭಿಮುಖವಾಗಿ ತಿರುಗಿಸಿ ಮಲಪ್ರಭಾ ನದಿಗೆ ಹರಿಸಿ, ರಾಜ್ಯದ ಬಯಲುಸೀಮೆಯ ಐದಾರು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆಯ ಪ್ರಸ್ತಾಪ ಕೇಳಿಬರುತ್ತಿದೆ. ರಾಜ್ಯದ ಸಮಗ್ರ ಕೃಷಿ ಉಳಿವಿಗೆ ನದಿಗಳ ಜೋಡಣೆಯೇ ಸರಳ ಪರಿಹಾರ ಎಂದು, ಉತ್ತರ ಕರ್ನಾಟಕ ಸಮಗ್ರ ನೀರಾವರಿ ಹೋರಾಟ ಸಮಿತಿಯ ಅಧ್ಯಕ್ಷ ಸಂಗಮೇಶ ಆರ್. ನಿರಾಣಿ ವಿಚಾರ ಮಂಡಿಸಿದ್ದಾರೆ (ಸಂಗತ, ಫೆ. 3). ಈ ಕುರಿತು ದಾಂಡೇಲಿ-ಹಳಿಯಾಳ ಭಾಗದ ಕಾಳಿ ನದಿ ಜಲಾನಯನ ಪ್ರದೇಶದ ಫಲಾನುಭವಿಗಳು ಹಾಗೂ ಕೆಲವು ಸಂಘಗಳಿಂದ ವಿರೋಧ ವ್ಯಕ್ತವಾಗಿದೆ.

ಪಶ್ಚಿಮ ಘಟ್ಟಗಳ ಸೂಕ್ಷ್ಮ ಪರಿಸರದ ಬಗ್ಗೆ ಅರಿವಿಲ್ಲದವರು, ಇಲ್ಲಿನ ದಟ್ಟ ನಿತ್ಯಹರಿದ್ವರ್ಣ ಅರಣ್ಯದ ಬೆಳವಣಿಗೆಗಾಗಿಯೇ ಪ್ರಕೃತಿ ನೀಡಿದ ನೀರಿನಲ್ಲೂ ಪಾಲು ಕೇಳುವುದು ಕಳವಳಕಾರಿ ಸಂಗತಿ. ನದಿ ಜೋಡಣೆ ಯೋಜನೆಗಳು ದಟ್ಟಾರಣ್ಯ ಇಲ್ಲದೇ ಇರುವ ಸೂಕ್ತವಾದ ಪ್ರದೇಶಗಳಲ್ಲಿ ಅಷ್ಟೊಂದು ದುಷ್ಪರಿಣಾಮ ಬೀರದೇ ಇರಬಹುದು. ಆದರೆ ಪಶ್ಚಿಮ ಘಟ್ಟಗಳಂತಹ ಸೂಕ್ಷ್ಮಾತಿಸೂಕ್ಷ್ಮ ಪ್ರದೇಶಗಳಲ್ಲಿ ಭೂಸ್ವರೂಪ ಬದಲಾಯಿಸುವುದು, ಅರಣ್ಯ ನಾಶ, ನೈಸರ್ಗಿಕವಾಗಿ ಹರಿಯುವ ನದಿಗಳ ದಿಕ್ಕನ್ನೇ ಬದಲಾಯಿಸುವುದು, ಅಲ್ಲಿನ ವನ್ಯಜೀವಿಗಳು, ಜಲವಾಸಿಗಳು ಹಾಗೂ ಮನುಕುಲದ ಅವಶ್ಯಕತೆಗಳನ್ನೂ ಪರಿಗಣನೆಗೆ ತೆಗೆದುಕೊಳ್ಳದೆ ನಡೆಸುವ ಕ್ರಮಬದ್ಧವಲ್ಲದ ಚಟುವಟಿಕೆಗಳಿಂದ ತತ್‌ಕ್ಷಣದಲ್ಲಿ ಮತ್ತು ದೀರ್ಘ ಕಾಲದಲ್ಲಿ ಉಂಟಾಗಬಹುದಾದ ಗಂಭೀರ ಸ್ವರೂಪದ ಹಾನಿಗಳು ಅಪಾರ.

ಅರಬ್ಬಿ ಸಮುದ್ರ ಸೇರುವವರೆಗಿನ ಇಲ್ಲಿನ ನದಿಗಳ ಕೊಡುಗೆ ಅಪಾರ. ಇವುಗಳ ನೀರು ಮಳೆಯಾಧಾರಿತವಾಗಿದ್ದು, ಜೂನ್‌ನಿಂದ ಆಗಸ್ಟ್‌ವರೆಗೆ ಮಾತ್ರ ಕ್ರಿಯಾಶೀಲವಾಗಿ, ಸೆಪ್ಟೆಂಬರ್‌ನಲ್ಲಿ ಕ್ಷೀಣಿಸುತ್ತ ಮಳೆಗಾಲ ನಂತರದ ಅವಧಿಯಲ್ಲಿ ಅಂತರ್ಜಲ ಮೂಲಗಳಿಂದ ದೊರೆಯಬಹುದಾದ ತಳಮಟ್ಟದ ಹರಿವು ಮಾತ್ರ ಇರುವುದು ಸಾಮಾನ್ಯ. ಬೇಸಿಗೆಯ ದಿನಗಳಲ್ಲಿ ಕೆಲವೊಮ್ಮೆ ಈ ಹರಿವು ನಿಂತುಹೋಗಿ, ಈ ನದಿಗಳ ನೀರನ್ನು ಆಧರಿಸಿದ ಕುಡಿಯುವ ನೀರು ಸರಬರಾಜು ಯೋಜನೆಗಳಿಗೂ ಸಂಕಷ್ಟ ಎದುರಾದ ನಿದರ್ಶನಗಳಿವೆ.

ಇತ್ತೀಚಿನ ಅಧ್ಯಯನಗಳಿಂದ ತಿಳಿದುಬರುವ ಆಘಾತಕಾರಿ ಅಂಶವೆಂದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ 1973ರಲ್ಲಿ ಇದ್ದ ಶೇ 74ರಷ್ಟು ಅರಣ್ಯ ಪ್ರದೇಶ 2018ರ ವೇಳೆಗೆ ಶೇ 48ಕ್ಕೆ ಇಳಿಕೆಯಾಗಿರುವುದು ಮತ್ತು ನಿತ್ಯಹರಿದ್ವರ್ಣ ಕಾಡು ಪ್ರದೇಶ ಶೇ 56ರಷ್ಟು ಇದ್ದದ್ದು ಕೇವಲ ಶೇ 25ಕ್ಕೆ ಕುಸಿದಿರುವುದು.

ಪಶ್ಚಿಮ ಘಟ್ಟಗಳ ನದಿಗಳಲ್ಲಿನ ನೀರಿನ ಹರಿವಿನ ಪ್ರಮಾಣವನ್ನು ಕಡಿಮೆ ಮಾಡಿದಲ್ಲಿ, ಕರಾವಳಿ ಪ್ರದೇಶದಲ್ಲಿ ಸಿಹಿ ನೀರಿನ ಪ್ರದೇಶಕ್ಕೆ ಸಮುದ್ರದ ಉಪ್ಪು ನೀರು ನುಗ್ಗಿ, ಲಭ್ಯವಿರುವ ಅಲ್ಪಪ್ರಮಾಣದ ಸಿಹಿ ನೀರಿನ ಸಂಪನ್ಮೂಲಗಳು ಮಲಿನಗೊಂಡು, ಕುಡಿಯಲು ಹಾಗೂ ದಿನಬಳಕೆಗೂ ಲಭ್ಯವಾಗದಂತೆ ಆಗುತ್ತದೆ.

ಇಲ್ಲಿನ ನೈಸರ್ಗಿಕ ವ್ಯವಸ್ಥೆಯಲ್ಲಿ ಏನಾದರೂ ವ್ಯತ್ಯಾಸವಾದಲ್ಲಿ ಪ್ರಕೃತಿಯೇ ಇಂದೋ ನಾಳೆಯೋ ಮುನಿಸಿಕೊಂಡು ಯಾರ ಊಹೆಗೂ ನಿಲುಕದಂತಹ ವಿಕೋಪಗಳು ಸಂಭವಿಸಬಹುದು. ಪಶ್ಚಿಮ ಘಟ್ಟಗಳ ನದಿಗಳ ನೀರು ವ್ಯರ್ಥವಾಗಿ ಸಮುದ್ರ ಸೇರುತ್ತಿದೆ ಎಂಬ ತಪ್ಪು ಕಲ್ಪನೆಯಿಂದ, ಇಲ್ಲಿನ ನದಿಗಳನ್ನು ತಿರುಗಿಸುವ ಯೋಜನೆಗಳನ್ನು ಪ್ರಸ್ತಾಪ ಮಾಡುವುದು ಸಮಾಜ ಮತ್ತು ನಿಸರ್ಗದ ಸ್ವಾಸ್ಥ್ಯ ಹಾಳುಮಾಡುವ ಕಾರ್ಯ.

ಹಾಗಿದ್ದರೆ, ನದಿ ನೀರು ತಿರುವಿನಂತಹ ಪ್ರಸ್ತಾಪಗಳಿಗೆ ಪರ್ಯಾಯ ಪರಿಹಾರಗಳಿಲ್ಲವೇ? ನೀರಿನ ಸಮರ್ಥ ಸದ್ಬಳಕೆಯ ಉದಾಹರಣೆಯಾಗಿ ಪುಟ್ಟ ದೇಶ ಇಸ್ರೇಲ್ ಅನ್ನು ಗಮನಿಸಬಹುದು. ಅಲ್ಲಿನ ವಾರ್ಷಿಕ ಮಳೆಯ ಪ್ರಮಾಣ ಕೇವಲ 400- 500 ಮಿ.ಮೀ. ಆದರೂ ಅಲ್ಲಿ ಸಾಧಿಸಿರುವ ಜಲ ಸ್ವಾವಲಂಬನೆ ಬಗ್ಗೆ ಕೇಳುತ್ತಲೇ ಬಂದಿದ್ದೇವೆ. ಆದರೂ ಅದು ನಮಗಿನ್ನೂ ಮಾದರಿಯಾಗಿಲ್ಲ. ಉತ್ತರ ಕರ್ನಾಟಕದ ಬಯಲುಸೀಮೆ ಜಿಲ್ಲೆಗಳಲ್ಲಿ ವಾರ್ಷಿಕ ವಾಡಿಕೆ ಮಳೆಯ ಪ್ರಮಾಣ 550- 850 ಮಿ.ಮೀ. ಇದೆ. ಇದನ್ನು ಸಂಪನ್ಮೂಲವನ್ನಾಗಿ ಪರಿವರ್ತಿಸಿಕೊಳ್ಳಬಹುದಾದ ಸಾಧ್ಯತೆಗಳು ಹೇಗೆ?



ಮೇಲ್ಛಾವಣಿ ಹಾಗೂ ಜಮೀನಿನ ಮೇಲೆ ಬೀಳುವ ಮಳೆ ನೀರನ್ನು ಲಭ್ಯವಿರುವ ವೈಜ್ಞಾನಿಕ, ಸುಲಭ ತಾಂತ್ರಿಕತೆ ಮೂಲಕ ಸೂಕ್ತವಾಗಿ ಸಂಗ್ರಹಿಸಿ, ಸಂರಕ್ಷಿಸಿ, ಅವಶ್ಯಕತೆ ಬಂದಾಗ ನ್ಯಾಯೋಚಿತವಾಗಿ ಬಳಕೆ ಮಾಡಬೇಕು. ಹನಿ ನೀರೂ ದುರ್ಬಳಕೆಯಾಗದಂತೆ ಸುಧಾರಿತ ನೀರಾವರಿ ಪದ್ಧತಿ ಅಳವಡಿಸಿಕೊಂಡು ಜಲಸ್ವಾವಲಂಬಿಗಳಾಗುವ ದಿಸೆಯಲ್ಲಿ ಯಶಸ್ಸನ್ನು ಕಾಣಬಹುದು.

ಬಹುತೇಕ ಕೆರೆಗಳಲ್ಲಿ ಹೂಳು ತುಂಬಿದ್ದು, ಅವುಗಳ ಮೂಲ ಸಾಮರ್ಥ್ಯಕ್ಕನುಗುಣವಾಗಿ ಮಳೆ ನೀರು ಸಂಗ್ರಹವಾಗುವಂತೆ ಪುನಶ್ಚೇತನಗೊಳಿಸಬೇಕು. ಈಗಾಗಲೇ ನಿರ್ಮಾಣಗೊಂಡಿರುವ ನೀರಾವರಿ ಸೌಲಭ್ಯಗಳನ್ನು ಸಮರ್ಪಕವಾಗಿ ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಬೇಕು. ಲಭ್ಯವಿರುವ ಜಲಸಂಪನ್ಮೂಲಗಳು ಮಲಿನಗೊಳ್ಳದಂತೆ ಕಾಪಾಡಿಕೊಳ್ಳುವುದೂ ಅತ್ಯಗತ್ಯ.

ಇವೆಲ್ಲ ಅಸಾಧ್ಯದ ಕಾರ್ಯಗಳಲ್ಲ. ಇಚ್ಛಾಶಕ್ತಿ ಕೊರತೆಯಿಂದ ಹೊರಬಂದು ಸಾಧಿಸಬೇಕಾಗಿದ್ದನ್ನು ಸಾಧಿಸಬೇಕು. ಅಂದಾಗ ಕೋಟಿ-ಕೋಟಿ ಅನುದಾನದ, ಪರಿಸರ ನಾಶಕ್ಕೆ ಕಾರಣವಾಗುವ ನದಿ ನೀರು ತಿರುವಿನಂತಹ ಅವೈಜ್ಞಾನಿಕ ಬೃಹತ್ ಯೋಜನೆಗಳಿಗೆ ವಿದಾಯ ಹೇಳಬಹುದು. ನಾವು ನಿಸರ್ಗದ ವಿರುದ್ಧ ಪ್ರಯಾಣಿಸಲಾಗದು.

ಅಭಿವೃದ್ಧಿಯ ಹೆಸರಿನಲ್ಲಿ ನಿಸರ್ಗದ ಮೇಲೆ ದಾಳಿ ಮಾಡಿ ನೈಸರ್ಗಿಕ ವ್ಯವಸ್ಥೆಯನ್ನು ಬದಲಿಸಲು, ಹಾಳು ಮಾಡಲು ನಮಗೆಲ್ಲಿದೆ ಅಂತಹ ಆಯ್ಕೆಯ ಹಕ್ಕು?

ವಾಚಕರ ವಾಣಿ

ಮೊದಲು ಉತ್ಪನ್ನ ಪೂರೈಸಿ

ರಾಜ್ಯದಲ್ಲಿ ನಂದಿನಿ ಉತ್ಪನ್ನಗಳ ಮಾರಾಟ ಹೆಚ್ಚಳಕ್ಕಾಗಿ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯು ಪತ್ರಿಕೆಗಳಲ್ಲಿ ಜಾಹೀರಾತು ನೀಡುತ್ತಿದೆ. ಅಚ್ಚರಿಯೆಂದರೆ, ತನ್ನ ಎಲ್ಲ ಉತ್ಪನ್ನಗಳನ್ನು ಮಾರಾಟ ಕೇಂದ್ರಗಳಿಗೆ ಪೂರೈಸಿ ನಂತರ ಜಾಹೀರಾತು ನೀಡಿದಲ್ಲಿ ಪ್ರಯೋಜನವಾಗುತ್ತದೆ. ಸಾರ್ವಜನಿಕರು ಈ ಜಾಹೀರಾತುಗಳನ್ನು ನೋಡಿ ಆಸಕ್ತಿಯಿಂದ ಮಾರಾಟ ಕೇಂದ್ರಗಳಿಗೆ ತೆರಳಿದಾಗ, ಅಲ್ಲಿ ಉತ್ಪನ್ನಗಳ ಲಭ್ಯತೆ ಇದ್ದಲ್ಲಿ ಜಾಹೀರಾತು ನೀಡಿದ್ದು ಸಾರ್ಥಕವಾಗುತ್ತದೆ.

ಆದರೆ ಇತ್ತೀಚೆಗೆ ಮಂಡಳಿ ನೀಡಿದ ಜಾಹೀರಾತು ನೋಡಿ ಶಿವಮೊಗ್ಗದ ನಂದಿನಿ ಕೇಂದ್ರಗಳಿಗೆ ತೆರಳಿದಾಗ, ಒಂದು ಕೊಂಡರೆ ಒಂದು ಉಚಿತ ಎಂಬ ಯೋಜನೆಯಡಿ ಸಿಗಬೇಕಾದ ಉತ್ಪನ್ನ ಎಲ್ಲಿಯೂ ದೊರೆಯಲಿಲ್ಲ. ಇನ್ನೂ ವಿಚಿತ್ರವೆಂದರೆ, ಜಾಹೀರಾತಿನಲ್ಲಿ ನೀಡಿದ್ದ ಹಲವು ಉತ್ಪನ್ನಗಳು ಸಹ ಲಭ್ಯವಿರಲಿಲ್ಲ. ಮೊದಲು ಎಲ್ಲ ಕಡೆಗೂ ಉತ್ಪನ್ನ ತಲುಪಿಸಲು ಸಂಬಂಧಪಟ್ಟವರು ಗಮನ ಹರಿಸಲಿ.

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಕನ್ನಡ ಫಲಕ: ಕೇಂದ್ರದ ತಾರತಮ್ಯ

ಪ್ರಧಾನಿ ನರೇಂದ್ರ ಮೋದಿ ಅವರು ಚೆನ್ನೈನಲ್ಲಿ ಇತ್ತೀಚೆಗೆ ಮೆಟ್ರೊ ಕಾಮಗಾರಿಗೆ ಚಾಲನೆ ನೀಡಿದ ಸುದ್ದಿಯನ್ನು ದೃಶ್ಯ ಮಾಧ್ಯಮದಲ್ಲಿ ನೋಡಿದೆ. ಅನಾವರಣಗೊಳಿಸಿದ ಶಿಲಾಫಲಕವು ಇಂಗ್ಲಿಷ್ ಹಾಗೂ ತಮಿಳು ಭಾಷೆಗಳಲ್ಲಿ ಇದ್ದಿತು. ಅಲ್ಲಿ ಹಿಂದಿ ಭಾಷೆಯ ಫಲಕ ಇರಲಿಲ್ಲ. ಆದರೆ ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ಕೇಂದ್ರ ಸರ್ಕಾರದ ಯೋಜನೆಯ ಕಾರ್ಯಕ್ರಮವೊಂದರ ಶಿಲಾಫಲಕದಲ್ಲಿ ಇಂಗ್ಲಿಷ್ ಮತ್ತು ಹಿಂದಿ ಭಾಷೆ ಮಾತ್ರ ರಾರಾಜಿಸಿದ್ದವು. ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೆ ಗೌರವ ಇಲ್ಲವೇಕೆ? ಕೇಂದ್ರದ ಈ ತಾರತಮ್ಯ ಧೋರಣೆ ತರವಲ್ಲ.

ಕನ್ನಡವು ರಾಜ್ಯದ ಆಡಳಿತ ಭಾಷೆ. ಕೇಂದ್ರ ಪ್ರಾಯೋಜಿತ ಯೋಜನೆಯಾದರೂ ಈ ನೆಲದಲ್ಲಿ ಅಳವಡಿಸುವ ಫಲಕಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಇರಲೇಬೇಕು. ಇನ್ನು ಮುಂದಾದರೂ ಕನ್ನಡ ಕಡೆಗಣನೆಗೆ ಒಳಗಾಗುವುದನ್ನು ರಾಜ್ಯ ಸರ್ಕಾರ ತಪ್ಪಿಸಲಿ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಮರಗಳ ಮಹತ್ವ ಅರಿವಾಗಲಿ

ಅಡಿಕೆಯಿಂದ ಬುಲೆಟ್‌ಪ್ರೂಫ್ ಜಾಕೆಟ್ ತಯಾರಿಸಬಹುದೆಂಬ ಸುದ್ದಿ (ಪ್ರ.ವಾ., ಫೆ. 16) ಓದಿ ಸಂತೋಷವಾಯಿತು. ನಮ್ಮ ಸಸ್ಯ ಹಾಗೂ ಮರಗಳಿಂದ ಇಂತಹ ಉಪಯೋಗಗಳು ಜಾಸ್ತಿ ಆಗಬೇಕು. ಆಗಲೇ ಮರದ ಮಹತ್ವ ಎಲ್ಲರಿಗೂ ಅರಿವಾಗುವುದು. ಬೆಳೆದ ದೊಡ್ಡ ದೊಡ್ಡ ಮರಗಳನ್ನು ಕ್ಷುಲ್ಲಕ ಕಾರಣಗಳಿಗಾಗಿ ಕತ್ತರಿಸುವುದು ನಿಲ್ಲಬಹುದು. ತೆಂಗಿನ ಮರದಿಂದ ನಾವು ಈಗಾಗಲೇ ಹಲವು ಹತ್ತು ಉಪಯೋಗಗಳನ್ನು ಪಡೆಯುತ್ತಿದ್ದೇವೆ. ಇನ್ನೂ ಹಲವು ಬಗೆಯ ಉಪಯೋಗಗಳನ್ನು ಪಡೆಯಲು ಪ್ರಯತ್ನಿಸಬೇಕು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಬೆಲೆಯೇರಿಕೆ ತಡೆಗೆ ಕ್ರಮ ಅಗತ್ಯ

ದೇಶದಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯೇರಿಕೆ ದಿನದಿಂದ ದಿನಕ್ಕೆ ಉಗ್ರ ಸ್ವರೂಪ ಪಡೆಯುತ್ತಿರುವುದರಿಂದ ಜನ ಕಂಗೆಟ್ಟು ಹೋಗುತ್ತಿದ್ದಾರೆ. ಕೋವಿಡ್ ಸಾಂಕ್ರಾಮಿಕವು ದೇಶದಲ್ಲಿ ನಿರುದ್ಯೋಗವನ್ನು ಹೆಚ್ಚಿಸಿದೆ. ಇಂಧನ ಬೆಲೆಯೇರಿಕೆ ಅಂತರರಾಷ್ಟ್ರೀಯ ವಿದ್ಯಮಾನಗಳಿಗೆ ಸಂಬಂಧಪಟ್ಟರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಸೀಮಿತವಾದ ಅಧಿಕಾರ ವ್ಯಾಪ್ತಿಯಲ್ಲಿ ಒಂದಷ್ಟು ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದು. ಇತರ ವಸ್ತುಗಳ ಬೆಲೆಯೇರಿಕೆ ತಡೆಗಟ್ಟಲು ಬಿಗಿ ಕ್ರಮಗಳನ್ನು ಕೈಗೊಂಡು, ಬೆಲೆಯೇರಿಕೆಯ ಬಿಸಿಯಿಂದ ಕಂಗೆಟ್ಟಿರುವ ಜನರ ನೆರವಿಗೆ ಮುಂದಾಗಬೇಕಾಗಿದೆ.

ಡಾ. ಕೆ.ವಿ.ವಾಸು, ಮೈಸೂರು

ಇದು ಮಾರ್ಕೆಟಿಂಗ್ ಜಗತ್ತಿನ ಚೋದ್ಯ!

ನಾನು ಮಾರ್ಕೆಟಿಂಗ್ ಬಗ್ಗೆ ಶೈಕ್ಷಣಿಕವಾಗಿ ಓದಿಲ್ಲ. ಆದರೂ ನಾನು ನೋಡಿದ ಒಂದು ಮಾರ್ಕೆಟಿಂಗ್ ಚೋದ್ಯವನ್ನು ಹೇಳಬಯಸುತ್ತೇನೆ. ಅಡಿಕೆ ಮರಗಳಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ಕಾಯಿ, ಹಣ್ಣುಗಳಲ್ಲೂ ವ್ಯತ್ಯಾಸ ಇರುವುದಿಲ್ಲ. ಆದರೂ ಮಾರುಕಟ್ಟೆಯಲ್ಲಿ ರಾಶಿ, ಬೆಟ್ಟೆ, ಆಪಿ ಇತ್ಯಾದಿ ಭಿನ್ನ ಭಿನ್ನ ಪದಗಳಲ್ಲಿ ಹಾಗೂ ದರಗಳಲ್ಲಿ, ಭಿನ್ನ ಭಿನ್ನವಾಗಿಯೇ ಬಳಕೆಯಲ್ಲಿ ಇದೆ. ಸಾಧಾರಣವಾಗಿ ಮಾರುಕಟ್ಟೆಗೆ ಬರದ, ನಿಕೃಷ್ಟ ಪ್ರಮಾಣದ ಹಾಗೂ ನಿಕೃಷ್ಟ ಬೆಲೆಯ ಕೋಕಾ ಎಂಬುದೂ ಇದೆ. ಸಾಮಾನ್ಯವಾಗಿ 'ಕೊಳೆ' ಬಂದ, ಮಳೆಯ ಹೊಡೆತಕ್ಕೆ ಸಿಕ್ಕಿ ಉದುರಿದ ಎಳೆಯ ಅಡಿಕೆ ಕೊನೆ ಇತ್ಯಾದಿಗಳ ಮೊತ್ತ ಇದು. ಇದಕ್ಕೆ ಮಾಡಿದ ಕೂಲಿಯೂ ಹುಟ್ಟುವುದಿಲ್ಲ ಎಂದು ಬಹಳಷ್ಟು ಜನ ನಂಬುತ್ತಾರೆ. ಇಂತಹವರು ಇದನ್ನು ಗೊಬ್ಬರದ ಗುಂಡಿಗೆ ಹಾಕಿ ಕೈ ತೊಳೆದುಕೊಳ್ಳುತ್ತಾರೆ.

ಕೂಡು ಕುಟುಂಬದಲ್ಲಿ ತಮ್ಮ ಕೈಯಲ್ಲಿ ಒಂದೆರಡು ಕಾಸು ಇರಲಿ ಎಂದು ಬಗೆದ ಕೆಲವರು, ಅತಿ ಕಡಿಮೆ ಪ್ರಮಾಣದ ತೋಟ ಇರುವವರು ಇಂತಹ ಅಡಿಕೆಗಳನ್ನು ಸುಲಿದು, ಬೇಯಿಸಿ, ಒಣಗಿಸಿ ಮಾರಾಟ ಮಾಡುತ್ತಾರೆ. ಮುರುಕು ಮೋಟರ್ ಸೈಕಲ್‌ನಲ್ಲಿ ಬರುವವನೇ ಇವರ ಗಿರಾಕಿ. ಅವನು ಹೇಳಿದಷ್ಟು ಇವರು ಕೊಟ್ಟಷ್ಟಕ್ಕೆ ಇಬ್ಬರಿಗೂ ಖುಷಿ. ಸಾಗಾಣಿಕೆ ವೆಚ್ಚ, ಜಿಎಸ್‌ಟಿ ಎಂದೇನೂ ಇದಕ್ಕೆ ಇರುವುದಿಲ್ಲ. ಮಟಕಾ ದಂಧೆಯಂತೆ ಅದನ್ನು ಕೊಂಡಾತ, ತನ್ನ ಮೇಲಿನವರಿಗೆ ಮಾರುತ್ತಾನೆ. ಹೀಗೆ ಎಷ್ಟೋ ಕೈ ಬದಲಾದಮೇಲೆ ಅದು ಉತ್ತರ ಕರ್ನಾಟಕದ ಚಿಲ್ಲರೆ ವ್ಯಾಪಾರಿಗಳಿಗೆ ತಲುಪುತ್ತದೆ. ಅಡಿಕೆ ತಿನ್ನುವ ಚಟ ಇಲ್ಲದ, ಚಿಲ್ಲರೆ ಕಾಸಿನಲ್ಲಿ ಚಿಲ್ಲರೆ ಅಡಿಕೆ ತೆಗೆದುಕೊಳ್ಳುವಾತ ಇದನ್ನೇ ಕೇಳಿ ಪಡೆಯುತ್ತಾನೆ. ಬಹಳ ಜನರೇನೂ ಇದರ ಗಿರಾಕಿಗಳಲ್ಲ. ಸ್ವಲ್ಪಮಟ್ಟಿಗೆ ಸುವಾಸನೆ ಬೀರುವ ಇದು ಮಸಾಲೆ ಅಡಿಕೆ ಪುಡಿ ಅಲ್ಲ. ಏನನ್ನೋ ಸೇರಿಸಿ ವಾಸನೆ ತರಿಸಿದ್ದಲ್ಲದ ಹೋಳಡಿಕೆ ಇದು. ಮಜಾ ಏನು ಅಂದರೆ, ಇದರ ಬೆಲೆಯು ಗರಿಷ್ಠ ಬೆಲೆಯ ಉತ್ಕೃಷ್ಟ ಅಡಿಕೆ ಬೆಲೆಗಿಂತ ಬಹಳ ದೂರವೇನೂ ಇರುವುದಿಲ್ಲ!

ಡಾ. ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ದೇಶದ್ರೋಹ’ದ ನಾಗಾಲೋಟ

ಕಳೆದ ಐದಾರು ವರ್ಷಗಳಿಂದ ಮಾನವ ಹಕ್ಕುಗಳ ಕಾರ್ಯಕರ್ತರು, ಕಲಾವಿದರು, ವಿಶ್ವವಿದ್ಯಾಲಯಗಳ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಪತ್ರಕರ್ತರ ವಿರುದ್ಧ ‘ದೇಶದ್ರೋಹ’ದ ಆರೋಪ ಹೊರಿಸುತ್ತಿರುವುದು ಹೆಚ್ಚಾಗಿದೆ. ಇದಕ್ಕೆ ಇತ್ತೀಚಿನ ಸೇರ್ಪಡೆ ಪರಿಸರ ಕಾರ್ಯಕರ್ತೆ ಬೆಂಗಳೂರಿನ ದಿಶಾ ರವಿ ಬಂಧನ ಪ್ರಕರಣ. ಈ ಹಿಂದೆ ಅರುಂಧತಿ ರಾಯ್, ಬಿನಾಯಕ್ ಸೇನ್, ವ್ಯಂಗ್ಯಚಿತ್ರಕಾರ ಅಸೀಮ್ ತ್ರಿವೇದಿ, ಅಸಾದುದ್ದೀನ್ ಒವೈಸಿ, ಪ್ರವೀಣ್ ತೊಗಾಡಿಯಾ ಮೊದಲಾದವರ ವಿರುದ್ಧ ಇದೇ ಅಸ್ತ್ರ ಪ್ರಯೋಗಿಸಲಾಗಿದೆ

ಪ್ರತಿವರ್ಷ ಹೊಸ ಪ್ರಕರಣಗಳ ಸಂಖ್ಯೆ ಏರಿಕೆ



- ಶೇ 65ರಷ್ಟು ಪ್ರಕರಣಗಳು 2014ರಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದ ನಂತರ ದಾಖಲಾಗಿವೆ
- ಎನ್‌ಡಿಎ ಅವಧಿಯಲ್ಲಿ ಪಾಟಿದಾರ್ ಮೀಸಲಾತಿ, ಜಾಟ್ ಮೀಸಲಾತಿ ಹೋರಾಟಗಾರರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. ಪೌರತ್ವ ತಿದ್ದುಪಡಿ ಕಾಯ್ದೆ ವಿರರೋಧಿ ಹೋರಾಟಗಾರರ ವಿರುದ್ಧವೂ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ
- ಯುಪಿಎ-2 ಅವಧಿಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಶೇ 32ರಷ್ಟು (2011 ಮತ್ತು 2012ರಲ್ಲಿ) ಪ್ರಕರಣಗಳು ಕೂಡುಕುಳಂ ಅಣುಸ್ಥಾವರ ವಿರೋಧಿ ಹೋರಾಟಗಾರರ ವಿರುದ್ಧ ದಾಖಲಾಗಿವೆ

ಪ್ರಜಾವಾಣಿ ಗ್ರಾಫಿಕ್ಸ್

ದಿಶಾ ರವಿ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯ ಸದಸ್ಯರು ದೆಹಲಿಯಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು

ಸೆಕ್ಷನ್ 124 ಎ

ಭಾರತೀಯ ದಂಡ ಸಂಹಿತೆಯ ‘ಸೆಕ್ಷನ್ 124 ಎ’ ದೇಶದ್ರೋಹ ಏನು ಎಂಬುದನ್ನು ವ್ಯಾಖ್ಯಾನಿಸುತ್ತದೆ. ಸರ್ಕಾರದ ವಿರುದ್ಧ ಅಸಮಾಧಾನವನ್ನು ಪ್ರಚೋದಿಸುವ ಪ್ರಯತ್ನಗಳು ದೇಶದ್ರೋಹ ಪ್ರಕರಣ ಎನಿಸಿಕೊಳ್ಳುತ್ತವೆ. ಅಂದರೆ ಯಾವುದೇ ವ್ಯಕ್ತಿಯು ಮಾತಿನಿಂದ, ಬರವಣಿಗೆಯ ಮೂಲಕ ಅಥವಾ ಚಿಹ್ನೆಗಳ ಮೂಲಕ ಸರ್ಕಾರದ ವಿರುದ್ಧ ದ್ವೇಷವನ್ನು ಅಥವಾ ತಿರಸ್ಕಾರವನ್ನು ಹುಟ್ಟಿಸಲು ಯತ್ನಿಸಿದರೆ ಅಥವಾ ಅದಕ್ಕೆ ಪ್ರಚೋದಿಸಿದರೆ ಅದು ದೇಶದ್ರೋಹ ಎನಿಸಿಕೊಳ್ಳುತ್ತದೆ. ಆದರೆ ದ್ವೇಷ, ತಿರಸ್ಕಾರ ಅಥವಾ ಅಸಮಾಧಾನವನ್ನು ಪ್ರಚೋದಿಸದ ಮತ್ತು ಉತ್ತೇಜಿಸದ ಹೇಳಿಕೆಗಳು ಈ ವಿಭಾಗದ ಅಡಿಯಲ್ಲಿ ಅಪರಾಧ ಎನಿಸುವುದಿಲ್ಲ.

ಶಿಕ್ಷೆ ಏನು?: ದೇಶದ್ರೋಹದಡಿ ದಾಖಲಾಗುವ ಪ್ರಕರಣವು ಜಾಮೀನುರಹಿತ ಅಪರಾಧವಾಗಿದೆ. ಸೆಕ್ಷನ್ 124 ಎ ಅಡಿ 3 ವರ್ಷದಿಂದ ಜೀವಾವಧಿವರೆಗೂ ಶಿಕ್ಷೆ ನೀಡಬಹುದು. ದಂಡವನ್ನೂ ಹಾಕಬಹುದು. ಈ ಕಾನೂನಿನಡಿಯಲ್ಲಿ ಆರೋಪ ಹೊರಿಸಲಾದ ವ್ಯಕ್ತಿಗೆ ಸರ್ಕಾರಿ ಉದ್ಯೋಗವನ್ನು ನಿರ್ಬಂಧಿಸಲಾಗಿದೆ. ಅಗತ್ಯವಿದ್ದಾಗ ನ್ಯಾಯಾಲಯಕ್ಕೆ ಹಾಜರಾಗಬೇಕು.

ಯುಪಿಎ-ಎನ್‌ಡಿಎ ಪಾಲು

ಹತ್ತು ವರ್ಷದಲ್ಲಿ 800ಕ್ಕೂ ಹೆಚ್ಚು ದೇಶದ್ರೋಹ ಪ್ರಕರಣಗಳು ದಾಖಲಾಗಿವೆ. ಯುಪಿಎ-2 ಆಡಳಿತವಿದ್ದ ಮೊದಲ ನಾಲ್ಕು ವರ್ಷಗಳಲ್ಲಿ 270ಕ್ಕೂ (ಪ್ರತಿ ವರ್ಷ ಸರಾಸರಿ 62 ಪ್ರಕರಣ) ಹೆಚ್ಚು ಪ್ರಕರಣಗಳು ದಾಖಲಾಗಿವೆ. ನಂತರದ ಎನ್‌ಡಿಎ ಆಡಳಿತದ ಆರು ವರ್ಷಗಳಲ್ಲಿ 500ಕ್ಕೂ (ಪ್ರತಿ ವರ್ಷ ಸರಾಸರಿ 79 ಪ್ರಕರಣ) ಹೆಚ್ಚು ಪ್ರಕರಣಗಳು ದಾಖಲಾಗಿವೆ. 800ರಷ್ಟು ಪ್ರಕರಣಗಳಲ್ಲಿ 10,800ಕ್ಕೂ ಹೆಚ್ಚು ಮಂದಿಯನ್ನು ಆರೋಪಿಗಳನ್ನಾಗಿ ಮಾಡಲಾಗಿದೆ





ಮೋದಿ-ಯೋಗಿ ಟೀಕೆಗೆ ದೇಶದ್ರೋಹ

2014ರಿಂದ ಈಚೆಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಟೀಕಿಸಿದ್ದಕ್ಕೆ, ತೆಗಳಿದ್ದಕ್ಕೆ ಸುಮಾರು 290ಕ್ಕೂ ಹೆಚ್ಚು ದೇಶದ್ರೋಹ ಪ್ರಕರಣಗಳನ್ನು ದಾಖಲಿಸಲಾಗಿದೆ.



ಆಧಾರ: ಆರ್ಟಿಕಲ್ 14 ಇಂಡಿಯಾ, ಭಾರತದಲ್ಲಿ ಅಪರಾಧ ವರದಿ 2014, 2015, 2016, 2017, 2018, 2019

ಬರಹಗಾರ ವರವರ ರಾವ್ ಅವರನ್ನು ಭೀಮಾ ಕೋರೆಗಾಂವ್ ಪ್ರಕರಣದಲ್ಲಿ 2018ರಲ್ಲಿ ಬಂಧಿಸಿ ಪುಣೆ ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು –ಸಂಗ್ರಹ ಚಿತ್

ಪ್ರಮುಖ ಪ್ರಕರಣಗಳು

ಪ್ರಧಾನಿಗೆ ಪತ್ರ ಬರೆದ ಅಪರಾಧ

2019ರ ಜುಲೈನಲ್ಲಿ ದೇಶದ ವಿವಿಧ ಕ್ಷೇತ್ರದ 49 ಗಣ್ಯರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಹಿರಂಗ ಪತ್ರ ಬರೆದಿದ್ದರು. ದೇಶದಲ್ಲಿ ಗುಂಪುಹಲ್ಲೆ ಮತ್ತು ಹತ್ಯೆಗಳ ಸಂಖ್ಯೆ ಏರಿಕೆಯದ ಸಂದರ್ಭದಲ್ಲಿ ಈ ಗಣ್ಯರು ಪ್ರಧಾನಿಗೆ ಪತ್ರ ಬರೆದಿದ್ದರು. ಇದೇ ಸಂದರ್ಭದಲ್ಲಿ ದೇಶದಾದ್ಯಂತ ‘ನಾಟ್ ಇನ್ ಮೈ ನೇಮ್’ ಹೆಸರಿನ ಚಳವಳಿಯೂ ನಡೆಯುತ್ತಿತ್ತು. ಪತ್ರ ಬರೆದಿದ್ದ ಗಣ್ಯರು ಈ ಚಳವಳಿಯ ಮುಂದಾಳತ್ವ ವಹಿಸಿದ್ದರು. ಇವರೆಲ್ಲರ ವಿರುದ್ಧ 2019ರ ಅಕ್ಟೋಬರ್‌ನಲ್ಲಿ ದೇಶದ್ರೋಹ ಪ್ರಕರಣ ದಾಖಲಿಸಲಾಗಿತ್ತು. ರಾಮಚಂದ್ರ ಗುಹಾ, ಅಡೂರು ಗೋಪಾಲಕೃಷ್ಣನ್, ಮಣಿರತ್ನಂ, ಅಪರ್ಣಾ ಸೇನ್ ಮತ್ತಿತರರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಭೀಮಾ ಕೋರೆಗಾಂವ್ ಹಿಂಸಾಚಾರ ಪ್ರಕರಣ

ಮರಾಠರ ವಿರುದ್ಧ ಪರಿಶಿಷ್ಟರು ಯುದ್ಧದಲ್ಲಿ ಜಯಗಳಿಸಿದ ಭೀಮಾ ಕೋರೆಗಾಂವ್ ವಿಜಯೋತ್ಸವದ 200ನೇ ವರ್ಷಾಚರಣೆ ಸಂದರ್ಭದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ದೇಶದ 19 ಗಣ್ಯರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿತ್ತು. ಇವರಲ್ಲಿ ತೆಲುಗು ಕವಿ ವರವರ ರಾವ್, ಮಾನವ ಹಕ್ಕುಗಳ ಹೋರಾಟಗಾರರಾದ ಗೌತಮ್ ನವಲಖಾ, ಸುಧಾ ಭಾರದ್ವಾಜ್, ಸ್ಟ್ಯಾನ್‌ಸ್ವಾಮಿ ಸೇರಿದಂತೆ 19 ಜನರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಹತ್ಯೆಗೆ ಸಂಚು, ಸರ್ಕಾರ ಉರುಳಿಸಲು ಸಂಚು ಆರೋಪದಲ್ಲಿ ದೇಶದ್ರೋಹದ ಪ್ರಕರಣವನ್ನು ದಾಖಲಿಸಲಾಗಿದೆ. ಈ ಪ್ರಕರಣದ ತನಿಖೆ ಮತ್ತು ವಿಚಾರಣೆ ಪ್ರಗತಿಯಲ್ಲಿ ಇದೆ.

ರೈತರ ಹೋರಾಟ ಬೆಂಬಲಕ್ಕೂ ಹಣೆಪಟ್ಟಿ

ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಹೋರಾಟದಲ್ಲಿ ಭಾಗಿಯಾಗಿರುವವರು ಮತ್ತು ಹೋರಾಟಕ್ಕೆ ಬೆಂಬಲ ನೀಡುತ್ತಿರುವವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಲಾಗಿದೆ. ಜನವರಿ 26ರಂದು ದೆಹಲಿಯ ಕೆಂಪುಕೋಟೆಯಲ್ಲಿ ನಡೆದ ಹಿಂಸಾಚಾರದ ಆರೋಪಿಗಳಲ್ಲಿ ಕೆಲವರ ವಿರುದ್ಧ ದೇಶದ್ರೋಹ ಮತ್ತು ಕಾನೂನುಬಾಹಿರ ಚಟುವಟಿಕೆ ನಡೆಸಿದ ಪ್ರಕರಣಗಳನ್ನು ದಾಖಲಿಸಲಾಗಿದೆ.

ಪ್ರತಿಭಟನೆಯ ‘ಟೂಲ್‌ಕಿಟ್’ ರೂಪಿಸಿದ ಆರೋಪದ ಮೇಲೆ ಮೂವರ ಮೇಲೆ ದೇಶದ್ರೋಹ ಪ್ರಕರಣ ದಾಖಲಾಗಿದೆ. ರೈತರ ಪ್ರತಿಭಟನೆಯನ್ನು ಹತ್ತಿಕ್ಕುವ ಯತ್ನದ ವಿರುದ್ಧ ಟ್ವೀಟ್ ಮಾಡಿದ ಸಂಸದ ಶಶಿ ತರೂರ್, ಹಿರಿಯ ಪತ್ರಕರ್ತ ರಾಜ್‌ದೀಪ್ ಸರ್ದೇಸಾಯಿ, ನ್ಯಾಷನಲ್ ಹೆರಾಲ್ಡ್‌ನ ಮೃಣಾಲ್ ಪಾಂಡೆ, ಕೌಮಿ ಆವಾಜ್‌ನ ಜಾಫರ್ ಆಘಾ, ದಿ ಕ್ಯಾರವನ್ ಸುದ್ದಿ ಸಮೂಹದ ಅನಂತ್ ನಾಥ್ ಮತ್ತು ವಿನೋದ್ ಜೋಶ್ ವಿರುದ್ಧ ಎಫ್‌ಐಆರ್ ದಾಖಲಾಗಿವೆ.

ಅತ್ಯಾಚಾರ ವಿರೋಧಿ ಹೋರಾಟ

2019ರ ಅಕ್ಟೋಬರ್‌ನಲ್ಲಿ ಉತ್ತರ ಪ್ರದೇಶದ ಹಾಥರಸ್‌ನಲ್ಲಿ ದಲಿತ ಯುವತಿಯ ಮೇಲೆ ಅತ್ಯಾಚಾರ ಮತ್ತು ಹತ್ಯೆ ವಿರುದ್ಧ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ಇದರ ವಿರುದ್ಧ ಉತ್ತರ ಪ್ರದೇಶದಲ್ಲಿ ಭಾರಿ ಪ್ರತಿಭಟನೆ ಮತ್ತು ಹಿಂಸಾಚಾರ ನಡೆದಿತ್ತು. ಸರ್ಕಾರವನ್ನು ಉರುಳಿಸಲು ಈ ಹೋರಾಟ ನಡೆಸಲಾಗುತ್ತಿದೆ ಎಂಬ ಆರೋಪದಲ್ಲಿ ಹಲವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. ಇದರಲ್ಲಿ ಕೇರಳ ಪತ್ರಕರ್ತ ಸಿದ್ದಿಕಿ ಕಪ್ಪನ್ ಮತ್ತು ಇನ್ನೂ ಮೂವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ.

ಪೌರತ್ವ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿ 2019 ಮತ್ತು 2020ರಲ್ಲಿ ದೇಶದ ಹಲವೆಡೆ ನಡೆದ ಪ್ರತಿಭಟನೆಯಲ್ಲಿ ಭಾಗಿಯಾದವರ ವಿರುದ್ಧ 200ಕ್ಕೂ ಹೆಚ್ಚು ದೇಶದ್ರೋಹದ ಪ್ರಕರಣಗಳು ದಾಖಲಾಗಿವೆ.

ಕನ್ಹಯ್ಯ ಕುಮಾರ್ ಮತ್ತು ಇತರರು

2016ರ ಫೆಬ್ರವರಿ 9ರಂದು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ಕ್ಯಾಂಪಸ್‌ನಲ್ಲಿ ಸಂಸತ್ ಮೇಲಿನ ದಾಳಿಯ ಅಪರಾಧಿ ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದ ದಿನವನ್ನು ಸ್ಮರಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಜೆಎನ್‌ಯು ವಿದ್ಯಾರ್ಥಿ ಸಂಘದ ಅಂದಿನ ಅಧ್ಯಕ್ಷ ಕನ್ಹಯ್ಯ ಕುಮಾರ್ ಮೆರವಣಿಗೆಯ ನೇತೃತ್ವ ವಹಿಸಿದ್ದರು ಎಂಬ ಆರೋಪದ ಮೇಲೆ ದೇಶದ್ರೋಹ ಪ್ರಕರಣ ದಾಖಲಾಗಿದೆ.

ಕನ್ಹಯ್ಯ ಕುಮಾರ್ ಮತ್ತು ಇತರ 9 ಜನರನ್ನು ಬರುವ ಮಾರ್ಚ್ 15ರಂದು ವಿಚಾರಣೆಗೆ ಹಾಜರಾಗುವಂತೆ ಕೋರ್ಟ್ ಸೂಚಿಸಿದೆ. ಸೈಯದ್ ಉಮರ್ ಖಾಲಿದ್, ಅನಿರ್ಬನ್ ಭಟ್ಟಾಚಾರ್ಯ, ಅಕ್ವಿಬ್ ಹುಸೇನ್, ಮುಜೀಬ್ ಹುಸೇನ್ ಗಟೂ, ಮುನೀಬ್ ಹುಸೇನ್ ಗಟೂ, ಉಮರ್ ಗುಲ್, ರಯೀದ್ ಬಶೀರ್ ಮೊದಲಾದವರು ವಿಚಾರಣೆಗೆ ಹಾಜರಾಗಬೇಕಿದೆ.

ಕೂಡಂಕುಳಂ ಪ್ರತಿಭಟನಕಾರರು

ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ 8,856 ಜನರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. 2012–13ರಲ್ಲಿ ಕೂಡಂಕುಳಂನಲ್ಲಿ ಅಣುಸ್ಥಾವರ ಸ್ಥಾಪನೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ ಆರೋಪ ಇವರ ಮೇಲಿದೆ. ಸೆಕ್ಷನ್ 124 ಎ, ಸೆಕ್ಷನ್ 121 ಸೇರಿದಂತೆ ಡಜನ್‌ಗಟ್ಟಲೆ ಪ್ರಕರಣಗಳನ್ನು ಇವರು ಎದುರಿಸುತ್ತಿದ್ದಾರೆ.

ಶರ್ಜೀಲ್ ಇಮಾಮ್ ಭಾಷಣ

ಪೌರತ್ವ (ತಿದ್ದುಪಡಿ) ಕಾಯ್ದೆ ಮತ್ತು ಎನ್‌ಆರ್‌ಸಿ ವಿರುದ್ಧ ಜಾಮಿಯಾ ಮಿಲಿಯಾ ಇಸ್ಲಾಮಿಯಾ ಮತ್ತು ಅಲಿಗಡ ವಿಶ್ವವಿದ್ಯಾಲಯಗಳಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇಲೆ ಜೆಎನ್‌ಯು ಪಿಎಚ್‌ಡಿ ವಿದ್ಯಾರ್ಥಿ ಶರ್ಜೀಲ್ ಇಮಾಮ್ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಾಗಿದೆ. ಈ ಪ್ರಕರಣದಲ್ಲಿ ಕಳೆದ ವರ್ಷ ಇಮಾಮ್ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. ‘ಶರ್ಜೀಲ್ ಮಾಡಿದ ಭಾಷಣ ದ್ವೇಷಕ್ಕೆ ಪ್ರಚೋದನೆ ನೀಡಿದ್ದು, ಇದರಿಂದಾಗಿಯೇ ಜಾಮಿಯಾ ಆವರಣದಲ್ಲಿ ಗಲಭೆ ನಡೆಯಿತು’ ಎಂದು ಪೊಲೀಸರು ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

ಹಾರ್ದಿಕ್ ಪಟೇಲ್ ಮೀಸಲು ಚಳವಳಿ

ಗುಜರಾತ್‌ನಲ್ಲಿ ಪಾಟೀದಾರ್ ಸಮುದಾಯಕ್ಕೆ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಹಾರ್ದಿಕ್ ಪಟೇಲ್ ಅವರು 2015ರಲ್ಲಿ ಬೃಹತ್ ಹೋರಾಟ ನಡೆಸಿದ್ದರು. ಈ ವೇಳೆ ಅವರ ವಿರುದ್ಧ ದೇಶದ್ರೋಹ ಆರೋಪ ಹೊರಿಸಿ ಜೈಲಿಗೆ ಕಳುಹಿಸಲಾಗಿತ್ತು. ಗಲಭೆ ಮತ್ತು ಪಿತೂರಿ ನಡೆಸಿದ ಆರೋಪ ಅವರ ಮೇಲಿದ್ದವು. ನಂತರದ ದಿನಗಳಲ್ಲಿ ಕಾಂಗ್ರೆಸ್ ಸೇರ್ಪಡೆಯಾದ ಅವರು ಈಗ ಪಕ್ಷದ ಗುಜರಾತ್ ಘಟಕದ ಕಾರ್ಯಾಧ್ಯಕ್ಷ ಆಗಿದ್ದಾರೆ.

ವೈಕೋಗೆ ಶಿಕ್ಷೆ

ತಮಿಳುನಾಡಿನ ಎಂಡಿಎಂಕೆ ಮುಖ್ಯಸ್ಥ ವಿ. ಗೋಪಾಲಸ್ವಾಮಿ (ವೈಕೋ) ಅವರಿಗೆ ದೇಶದ್ರೋಹ ಪ್ರಕರಣದಲ್ಲಿ ಹೈಕೋರ್ಟ್ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿ, ₹10,000 ದಂಡ ಪಾವತಿಸುವಂತೆ ಸೂಚಿಸಿತ್ತು. 2009ರಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಶ್ರೀಲಂಕಾದ ಎಲ್‌ಟಿಟಿಇ ಪರವಾದ ನಿಲುವು ವ್ಯಕ್ತಪಡಿಸಿ, ಭಾರತದ ವಿರುದ್ಧ ಮಾತನಾಡಿದ್ದರು ಎಂಬ ಆರೋಪ ಹೊರಿಸಲಾಗಿತ್ತು. ಈ ಕಾರಣಕ್ಕೆ ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಾಗಿತ್ತು.

ಅಸೀಮ್ ತ್ರಿವೇದಿ ವ್ಯಂಗ್ಯ ಚಿತ್ರ

ಕಾನ್ಪುರ ಮೂಲದ ಕಲಾವಿದ ಅಸೀಮ್ ತ್ರಿವೇದಿ ಅವರು ಆಕ್ಷೇಪಾರ್ಹ ವ್ಯಂಗ್ಯಚಿತ್ರ ರಚಿಸಿದ್ದಾರೆ ಎಂಬ ಆರೋಪದ ಮೇಲೆ ದೇಶದ್ರೋಹ ಮೊಕದ್ದಮೆ ಹೂಡಲಾಗಿತ್ತು. ಭ್ರಷ್ಟಾಚಾರದ ವಿರುದ್ಧ ವ್ಯಂಗ್ಯಚಿತ್ರ ಅಭಿಯಾನ ನಡೆಸಿದ್ದ ಅವರನ್ನು 2012ರಲ್ಲಿ ಬಂಧಿಸಲಾಗಿತ್ತು.

ಕರ್ನಾಟಕದಲ್ಲೂ ಹಲವು ಪ್ರಕರಣ

ಐಪಿಸಿ 124ಎ ಅಡಿ, ದೇಶದ್ರೋಹದ ಅತಿ ಹೆಚ್ಚು ಪ್ರಕರಣಗಳನ್ನು ದಾಖಲಿಸಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಕಳೆದ ಒಂದು ದಶಕದಲ್ಲಿ ರಾಜ್ಯದಲ್ಲಿ ದೇಶದ್ರೋಹದ ಸುಮಾರು 50 ಪ್ರಕರಣಗಳು ದಾಖಲಾಗಿವೆ. 2019ರಲ್ಲಿ ಇಂಥ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿವೆ. 2018ರಲ್ಲಿ ಎರಡು ಪ್ರಕರಣಗಳು ದಾಖಲಾಗಿದ್ದರೆ, 2019ರಲ್ಲಿ 22 ಪ್ರಕರಣಗಳು ದಾಖಲಾಗಿದ್ದವು.

ಜಮ್ಮು ಕಾಶ್ಮೀರಕ್ಕೆ ವಿಶೇಷಾಧಿಕಾರ ನೀಡಿದ್ದ 370ನೇ ವಿಧಿಯನ್ನು ರದ್ದುಪಡಿಸಿದ ಸಂದರ್ಭದಲ್ಲಿ ದೇಶದ ಕೆಲವು ಕಡೆಗಳಲ್ಲಿ ಪ್ರತಿಭಟನೆಗಳು ನಡೆದಿದ್ದವು. ಅಂಥ ಪ್ರತಿಭಟನೆಯೊಂದರಲ್ಲಿ ಮೈಸೂರಿನ ನಳಿನಿ ಎಂಬುವವರು ‘ಫ್ರೀ ಕಾಶ್ಮೀರ್’ ಎಂದು ಬರೆದಿದ್ದ ಫಲಕವನ್ನು ಹಿಡಿದಿದ್ದರು. ಇದಾಗಿ ಸ್ವಲ್ಪ ದಿನಗಳಲ್ಲೇ ಬೆಂಗಳೂರಿನ ಟೌನ್‌ಹಾಲ್ ಬಳಿ ನಡೆದ ಪ್ರತಿಭಟನೆಯಲ್ಲಿ ಆರ್ದ್ರಾ ಎಂಬ ಯುವತಿಯೂ ಅಂಥದ್ದೇ ಫಲಕವನ್ನು ಹಿಡಿದಿದ್ದರು. ಈ ಇಬ್ಬರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಲಾಗಿತ್ತು.

ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ನಡೆದ ಹೋರಾಟಗಳ ಸಂದರ್ಭದಲ್ಲಿ ಇಂಥ ಹಲವು ಪ್ರಕರಣಗಳು ದಾಖಲಾದವು. ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ರ್‍ಯಾಲಿಯೊಂದರಲ್ಲಿ ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಅವರ ಸಮ್ಮುಖದಲ್ಲಿ ಅಮೂಲ್ಯಾ ಲಿಯೊನಾ ಎಂಬ ಯುವತಿ ‘ಪಾಕಿಸ್ತಾನ್ ಜಿಂದಾಬಾದ್’ ಎಂದು ಘೋಷಣೆ ಕೂಗಿದ್ದಾರೆ ಎಂದು ಆರೋಪಿಸಲಾಯಿತು. ಅವರನ್ನು ವೇದಿಕೆಯಿಂದಲೇ ಪೊಲೀಸರು ಎಳೆದೊಯ್ದಿದ್ದರು. ದೇಶದ್ರೋಹಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಹೆಚ್ಚು ಸುದ್ದಿ ಮಾಡಿದ್ದ ಘಟನೆ ಇದಾಗಿತ್ತು.

ಇನ್ನೂ ಕೆಲವು ಪ್ರಕರಣಗಳಲ್ಲಿ ಸರ್ಕಾರವೇ ಮುಜುಗರಕ್ಕೆ ಒಳಗಾಗಿದ್ದಿದೆ. ಬೀದರ್‌ನ ಶಾಲೆಯೊಂದರಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿಸಿ ಮಕ್ಕಳಿಂದ ನಾಟಕ ಮಾಡಿಸಲಾಗಿತ್ತು. ಅಲ್ಲಿ ಸರ್ಕಾರದ ವಿರುದ್ಧದ ಹೋರಾಟಕ್ಕೆ ಶಾಲಾ ಮಕ್ಕಳನ್ನು ಬಳಸಲಾಗಿದೆ ಎಂದು ಶಾಲೆಯ ಆಡಳಿತ ಮಂಡಳಿಯ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಲಾಗಿತ್ತು. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಸಣ್ಣ ಮಕ್ಕಳನ್ನು ಸಹ ವಿಚಾರಣೆಗೆ ಒಳಪಡಿಸಿದ್ದು ವಿವಾದಕ್ಕೆ ಕಾರಣವಾಗಿತ್ತು.

ಆನೆಗೊಂದಿ ಉತ್ಸವದಲ್ಲಿ ಕವಿ ಸಿರಾಜ್ ಬಿಸರಹಳ್ಳಿ ಎಂಬುವರು ಸಿಎಎ ವಿರೋಧಿಸಿ ‘ನಿಮ್ಮ ದಾಖಲೆ ಯಾವಾಗ ನೀಡುತ್ತೀರಿ’ ಎಂಬ ಕವನ ಓದಿದ್ದರು. ಇವರ ವಿರುದ್ಧವೂ ಪೊಲೀಸರು ಪ್ರಕರಣ ದಾಖಲಿಸಿದ್ದರು. ನಂತರದ ದಿನಗಳಲ್ಲಿ ಇದು ಸರ್ಕಾರಕ್ಕೆ ಸಾಕಷ್ಟು ಮುಜುಗರ ಉಂಟುಮಾಡಿತು. ಸರ್ಕಾರದ ಕ್ರಮವನ್ನು ಖಂಡಿಸಿ ಮಾಜಿ ಮುಖ್ಯಮಂತ್ರಿ ಎಚ್‌. ಡಿ. ಕುಮಾರಸ್ವಾಮಿ ಅವರು ವಿಧಾನಸಭೆಯಲ್ಲೇ ಆ ಕವನವನ್ನು ಓದಿದ್ದರು.

ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಸುದ್ದಿ ಮಾಡಿದ್ದ ಪ್ರಕರಣಗಳು ಇವು. ಇದಾದ ನಂತರ ಈಗ ದಿಶಾ ರವಿ ಅವರ ಪ್ರಕರಣ ಹೆಚ್ಚು ಸದ್ದು ಮಾಡುತ್ತಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಟೂಲ್‌ಕಿಟ್** ಪ್ರಕರಣದ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿರುವ ನಿಕಿತಾ ಜೇಕಬ್ ಅವರು ಎಎಪಿ ಕಾರ್ಯಕರ್ತರೇ? ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಜೊತೆ ನಿಕಿತಾ ಇರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡುತ್ತಿದೆ. ನೂರಾರು ಜನರು ಈ ಚಿತ್ರವನ್ನು ಶೇರ್ ಮಾಡಿದ್ದಾರೆ. ‘ಈ ಸಂಬಂಧಕ್ಕೆ ಏನು ಹೇಳುತ್ತೀರಿ’ ಎಂದು ದೆಹಲಿ ಬಿಜೆಪಿ ಘಟಕದ ಮಾಧ್ಯಮ ವಿಭಾಗದ ಮುಖ್ಯಸ್ಥ ನವೀನ್ ಕುಮಾರ್ ಪ್ರಶ್ನಿಸಿದ್ದಾರೆ.

✓ **ಚಿತ್ರದಲ್ಲಿ ಅರವಿಂದ** ಕೇಜ್ರಿವಾಲ್ ಅವರ ಜೊತೆ ಇರುವುದು ನಿಕಿತಾ ಜೇಕಬ್ ಅಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಯು ತಿಳಿಸಿದೆ. ಚಿತ್ರದಲ್ಲಿರುವುದು ಎಎಪಿ ಮಾಧ್ಯಮ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಅಂಕಿತಾ ಶಾ. ಈ ಚಿತ್ರವನ್ನು ಅವರು ಸ್ವತಃ ತಮ್ಮ ಟ್ವಿಟರ್ ಖಾತೆಯಲ್ಲಿ 2019ರಲ್ಲಿ ಹಂಚಿಕೊಂಡಿದ್ದರು. ನಿಕಿತಾ ಮತ್ತು ಅಂಕಿತಾ ಅವರ ಮುಖದ ಹೋಲಿಕೆಯಲ್ಲೂ ಸಾಮ್ಯತೆ ಕಂಡುಬಂದಿಲ್ಲ. ನಿಕಿತಾ ಹೆಸರಲ್ಲಿ ಹರಿದಾಡುತ್ತಿರುವ ಚಿತ್ರ ಅವರದ್ದಲ್ಲ ಎಂದು ಸ್ಪಷ್ಟನೆ ನೀಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮತ್ತೊಂದು ಪರೀಕ್ಷೆ

ಮಿಥಿಲೆಯ ರಾಜ ವಿದೇಹನ ನಾಲ್ಕು ಜನ ಅಮಾತ್ಯರಿಗೆ ಮಹೋಷಧಕುಮಾರನನ್ನು ಎಷ್ಟು ಪರೀಕ್ಷಿಸಿದರೂ ತೃಪ್ತಿ ಇರಲಿಲ್ಲ. ಯಾಕೆಂದರೆ ಆತ ರಾಜನ ಬಳಿಗೆ ಬಂದುಬಿಟ್ಟರೆ ತಮ್ಮ ಸ್ಥಾನಕ್ಕೆ ಚ್ಯುತಿ ಬರುತ್ತದೆಂಬ ಭಯವಿತ್ತು. ಮತ್ತೆ ಪರೀಕ್ಷೆಗಳನ್ನು ಮಾಡುತ್ತಲೇ ಇದ್ದರು.

ಒಂದು ಬಾರಿ ಅವರು ಇಂದ್ರ ಬಳಿ ಮಹೋಷಧಕುಮಾರನನ್ನು ಹೇಗಾದರೂ ಸೋಲಿಸಬೇಕೆಂದು ಬೇಡಿಕೊಂಡರು. ಇಂದ್ರನಿಗೂ ಈ ಮಹೋಷಧಕುಮಾರನ ಬಗ್ಗೆ ಬಹಳ ಕುತೂಹಲವಿತ್ತು. ಅವನ ಬುದ್ಧಿಮತ್ತೆಯ ಬಗ್ಗೆ ತುಂಬ ಕೇಳಿದ್ದ. ಅವನನ್ನು ಸರಿಯಾಗಿ ಪರೀಕ್ಷೆ ಮಾಡಬೇಕೆಂದು ಭೂಮಿಗೆ ಬಂದ. ಅಲ್ಲಿ ಒಂದು ರಥ ಹೋಗುತ್ತಿರುವುದನ್ನು ನೋಡಿದ. ತಕ್ಷಣವೇ ಓಡುತ್ತ ರಥದ ಹಿಂಭಾಗವನ್ನು ಹಿಡಿದುಕೊಂಡ. ಅದನ್ನು ಗಮನಿಸಿ ರಥದ ಮಾಲಿಕ ಕೇಳಿದ, ‘ಯಾರು ನೀನು? ಯಾಕೆ ರಥವನ್ನು ಹಿಡಿದುಕೊಂಡೆ?’. ಇಂದ್ರ ಹೇಳಿದ, ‘ನಾನೊಬ್ಬ ಅನಾಥ. ನಿಮ್ಮ ಸೇವೆ ಮಾಡಿಕೊಂಡಿರುತ್ತೇನೆ’. ಮಾಲಿಕ, ‘ನನಗೆ ಸೇವಕ ಬೇಕಾಗಿಲ್ಲ’ ಎಂದ. ರಥದ ಹಿಂದೆ ಓಡುತ್ತಲೇ ಇಂದ್ರ ಹೇಳಿದ, ‘ಸ್ವಾಮಿ, ನನಗೆ ನೀವೇ ದಾತರು. ದಯವಿಟ್ಟು ಸೇವೆಯ ಅವಕಾಶ ಮಾಡಿಕೊಡಿ’. ಮಾಲಿಕನ ಮನಸ್ಸು ಕರಗಿ, ‘ಆಯ್ತು, ರಥದ ಹಿಂದೆಯೇ ಓಡುತ್ತ ಬಾ’ ಎಂದ. ರಥ ಸಾಗಿತು.

ಕೊಂಚ ಮುಂದೆ ಹೋದ ಮೇಲೆ ರಥದ ಮಾಲಿಕನಿಗೆ ದೇಹಬಾಧೆಯಾಯಿತು. ಅದಕ್ಕೆ ಆತ ರಥವನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿ, ದೇಹಬಾಧೆ ತೀರಿಸಿಕೊಳ್ಳಲು ಕೆಳಗಿಳಿದು, ಹೊಸ ಸೇವಕನಿಗೆ ರಥವನ್ನು ಗಮನಿಸುವಂತೆ ಹೇಳಿ ಹೋದ. ಮಾಲಿಕ ಮರೆಯಾದೊಡನೆ ಇಂದ್ರ ರಥವನ್ನೇರಿ ಕುದುರೆಗಳನ್ನು ಓಡಿಸಿಕೊಂಡು ಹೊರಟುಬಿಟ್ಟ. ಅದನ್ನು ಕಂಡು ಮಾಲಿಕ, ‘ಅಯ್ಯೋ ಕಳ್ಳ, ಕಳ್ಳ, ನನ್ನ ರಥವನ್ನು ತೆಗೆದುಕೊಂಡು ಹೋಗುತ್ತಿದ್ದಾನೆ’ ಎಂದು ಅರಚುತ್ತ ರಥದ ಹಿಂದೆಯೇ ಜೋರಾಗಿ ಓಡುತ್ತ ಬಂದ. ಇವನ ಕೂಗನ್ನು ಕೇಳಿ ದಾರಿಯಲ್ಲಿ ಹೋಗುತ್ತಿದ್ದ ಜನ ರಥವನ್ನು ತಡೆದು ನಿಲ್ಲಿಸಿದರು. ಮಾಲಿಕ ಬಂದು ಇಂದ್ರನನ್ನು ಹೀಗೇಕೆ ಮಾಡಿದೆ ಎಂದು ಕೇಳಿದ. ಇಂದ್ರ ಹೇಳಿದ, ‘ಇದು ನನ್ನದೇ ರಥ. ನಿನಗೇನು ಸಂಬಂಧ?’ ಮಾಲಿಕ ಗಾಬರಿಯಾದ, ಗದ್ದಲ ಮಾಡಿ ರಥ ತನ್ನದೇ ಎಂದ. ಇಂದ್ರನೂ ತನ್ನದೇ ಎಂದು ವಾದಿಸಿದ. ಸುತ್ತಲೂ ನೆರೆದ ಜನರಿಗೆ ಇಬ್ಬರ ವಾದವೂ ಸರಿಯೇ ಎನ್ನಿಸಿತು. ರಥ ನಿಜವಾಗಿಯೂ ಯಾರದು ಎಂಬುದು ತಿಳಿಯದಂತಾಯಿತು.

ಜನ ಇಬ್ಬರನ್ನು ಕರೆದುಕೊಂಡು ಮಹೋಷಧಕುಮಾರನ ಬಳಿಗೆ ಬಂದರು. ಅವನ ತೀರ್ಮಾನವನ್ನು ಕೇಳಿದರು. ಆಗ ಕುಮಾರ ಕೇಳಿದ, ‘ನಾನು ನೀಡುವ ತೀರ್ಪಿಗೆ ನೀವಿಬ್ಬರೂ ಒಪ್ಪುತ್ತೀರಾ?’. ಇಬ್ಬರೂ ಒಪ್ಪಿದರು. ಮಹೋಷಧಕುಮಾರ ಒಂದು ಉಪಾಯವನ್ನು ಯೋಚಿಸಿ ಹೇಳಿದ, ‘ನಾನು ರಥವನ್ನು ತೆಗೆದುಕೊಂಡು, ಕುದುರೆಗಳನ್ನು ಜೋರಾಗಿ ಓಡಿಸುತ್ತ ಹೋಗುತ್ತೇನೆ. ನೀವಿಬ್ಬರೂ ರಥವನ್ನು ಹಿಂದಿನಿಂದ ಬಿಗಿಯಾಗಿ ಹಿಡಿದು ಓಡಬೇಕು. ಯಾರು ಹೆಚ್ಚು ಹೊತ್ತು ಓಡುತ್ತಾರೋ ಅವರದೇ ರಥ’. ಇಂದ್ರ ಸಂತೋಷದಿಂದ ಮತ್ತು ನಿಜವಾದ ಮಾಲಿಕ ಅನಿವಾರ್ಯವಾಗಿ ಒಪ್ಪಿದರು. ರಥ ಓಡತೊಡಗಿತು. ಸ್ವಲ್ಪ ದೂರ ಇಬ್ಬರೂ ರಥವನ್ನು ಹಿಡಿದು ಓಡಿದರು. ಯಾವಾಗ ರಥದ ವೇಗ ವಿಪರೀತವಾಯಿತೋ, ಮಾಲಿಕ ನಿಂತುಬಿಟ್ಟ ಆದರೆ ಇಂದ್ರ ಅನಾಯಾಸವಾಗಿ ಓಡುತ್ತಿದ್ದ. ಒಂದು ದೊಡ್ಡ ಸುತ್ತನ್ನು ಹಾಕಿ ಮರಳಿ ಜನರ ಮಧ್ಯೆ ರಥವನ್ನು ತಂದ ಮಹೋಷಧಕುಮಾರ. ತೀರ್ಮಾನಕ್ಕೆ ಕಾದಿದ್ದ ಜನರಿಗೆ ಹೇಳಿದ. ‘ಓಡುವುದನ್ನು ನಿಲ್ಲಿಸಿದವನು ನಿಜವಾದ ಯಜಮಾನ. ಆಯಾಸವಾಗದೆ ಓಡಿದವನು ಇಂದ್ರ. ಅವನ ಹಣೆಯ ಮೇಲೆ ಬೆವರು ಕೂಡ ಬಂದಿಲ್ಲ, ಕಣ್ಣು ಪಿಳುಕಿಸುವುದಿಲ್ಲ. ಅದು ಮನುಷ್ಯ ಲಕ್ಷಣವಲ್ಲ’ ಇಂದ್ರ ತೀರ್ಮಾನವನ್ನು ಒಪ್ಪಿದ. ಮಹೋಷಧಕುಮಾರ ಅವನಿಗೆ ಎಚ್ಚರಿಕೆ ನೀಡಿ, ಈ ರೀತಿ ಪರೀಕ್ಷೆ ಮಾಡಬಾರದೆಂದು ತಿಳಿಸಿ ಕಳುಹಿಸಿದ. ❖

ದಿನ ಭವಿಷ್ಯ

ಬುಧವಾರ 17 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಧನಿಷ್ಠ ಷಷ್ಠೀ ಗಂ. 59-18 (ಬೆ.ಘ್ಞಾ 6-31) ಬುಧವಾರ ನಿತ್ಯ ನಕ್ಷತ್ರ ಅಶ್ವಿನಿ ಗಂ 39-29 (ರಾ. 10-35) ಶುಕ್ಲ ನಾಮ ಯೋಗ ಗಂ 47-15 ಕೌಲವ ಕರಣ ಗಂ 26-44 ವಿಷ. ಗಂ. 28-39 ಅಮೃತ ಗಂ. 19-48: ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-45 ಸೂರ್ಯಾಸ್ತ: 6-22 ಅದೃಷ್ಟ ಸಂಖ್ಯೆ 6, 7

ಮೇಷ: ಸಮಸ್ಯೆಗಳ ಪರಿಹಾರಕ್ಕಾಗಿ ನಿಮ್ಮ ಹೊಸ ಜಾಣ್ಮೆಯನ್ನು ಬಳಬೇಕಾದ ಸಂದರ್ಭ ಬರಬಹುದು. ನಿಮ್ಮ ದಿಟ್ಟ ಮಾತುಗಳಿಂದಾಗಿ ಅನಾವಶ್ಯಕ ಹೊರೆ ಹೊರಬೇಕಾದೀತು. ಸಾಂಸಾರಿಕ ಸಂತೋಷ ಅನುಭವಿಸುವಿರಿ.

ವೃಷಭ: ಕಷ್ಟಗಳೆಲ್ಲವೂ ಕರಗಿ ಹೋಗಿ ಕಾರ್ಯ ಯೋಜನೆಗಳು ಸುಲಭವಾಗಿ ಸಾಕಾರಗೊಳ್ಳುವವು. ಕೆಲಸ-ಕಾರ್ಯಗಳಿಗೆ ಸ್ಫೂರ್ತಿ ದೊರಕುವುದು. ಬಂಧುವರ್ಗದವರಿಂದ ಸಕಾಲಿಕ ನೆರವು ದೊರೆಯುವ ಸಾಧ್ಯತೆ.

ಮಿಥುನ: ಬೇರೆಯವರ ಸಲಹೆಯಿಂದಾಗಿ ಅಪಾಯದಲ್ಲಿ ಸಿಲುಕಿಕೊಳ್ಳುವ ಸಾಧ್ಯತೆ. ಹಿರಿಯರ ಮಾತುಗಳನ್ನು ಗೌರವಿಸುವುದರಿಂದ ಆಪತ್ತಿನಿಂದ ಪಾರಾಗುವಿರಿ. ಛಲಕ್ಕೊಂದು ಬಲ ದೊರೆತು ಯಶಸ್ಸು ನಿಮ್ಮದಾಗಲಿದೆ.

ಕರ್ಕಾಟಕ: ಬಹುದಿನಗಳಿಂದ ಬಾಕಿ ಇರುವ ಕೆಲಸ-ಕಾರ್ಯಗಳು ಇಂದು ವಿಳಂಬವಿಲ್ಲದೇ ನೆರವೇರುವ ಸಾಧ್ಯತೆ. ಸಮಾಜದ ಗೌರವಾದರಗಳು ನಿಮ್ಮನ್ನರಸಿ ಬರುವವು. ಭರವಸೆಗಳ ಈಡೇರಿಕೆಗಾಗಿ ಅತ್ಯಂತ ಶ್ರಮ ವಹಿಸಿ.

ಸಿಂಹ: ಬಂಧುಗಳ ಸಲಹೆ ಮತ್ತು ಆಶ್ವಾಸನೆಗಳಲ್ಲಿ ವಿಶ್ವಾಸವಿಡಿ. ಹೊಸ ಕೆಲಸ-ಕಾರ್ಯಗಳಲ್ಲಿ ತೊಡಗಲು ಪ್ರಶಸ್ತವಾಗಿದೆ. ಷರತ್ತುಬದ್ಧ ಅವಕಾಶಗಳು ದೊರಕುವ ಸಾಧ್ಯತೆ. ಉದ್ಯೋಗರಂಗದಲ್ಲಿ ಬದಲಾವಣೆಯ ಸಾಧ್ಯತೆ.

ಕನ್ಯಾ: ನಂಬಿ ಬಂದವರಿಗೆ ಉತ್ತಮ ಆಸರೆ ನೀಡಿ ಹರ್ಷದಾಯಕ ಸಂದೇಶ ನೀಡುವ ಸಾಧ್ಯತೆ. ಚಮತ್ಕಾರಿಕವಾಗಿ ಸತ್ಕಾರ್ಯಗಳಲ್ಲಿ ತೊಡಗಿ ನಿರ್ವಹಿಸುವ ಅವಕಾಶ ನಿಮ್ಮದಾಗಲಿದೆ. ಪ್ರಶಂಸೆಗೆ ಪಾತ್ರರಾಗುವಿರಿ.

ತುಲಾ: ಅಭಿರುಚಿಗೆ ತಕ್ಕಂತೆ ಸ್ವಾವಲಂಬಿ ಕಾರ್ಯಗಳಲ್ಲಿ ತೊಡಗುವಿರಿ. ಆದರ್ಶ ಹೊಂದಿದ ಕೆಲಸ-ಕಾರ್ಯಗಳಿಗೆ ಸಹಾಯ ದೊರಕಿ ಕಾರ್ಯಸಾಧನೆ ಮಾಡಲಿದ್ದೀರಿ. ಘನತೆ ಗೌರವಗಳು ನಿಮ್ಮದಾಗಲಿವೆ.

ವೃಶ್ಚಿಕ: ಸದಾಚಾರ ಕಾರ್ಯಗಳಲ್ಲಿ ಸ್ವಸ್ಥ ಮನಸ್ಸಿನಿಂದ ತೊಡಗುವಿರಿ. ಇಷ್ಟಮಿತ್ರರ ಮಧ್ಯಸ್ಥಿಕೆಯಲ್ಲಿ ಗಂಭೀರ ಸಮಾಲೋಚನೆಗಳು ನಡೆಯುವ ಸಾಧ್ಯತೆಯಿದ್ದು ಶುಭದಾಯಕವಾಗಿ ಪರಿಣಮಿಸಲಿದೆ.

ಧನು: ನಿಮ್ಮ ವಿರುದ್ಧ ಪಿತೂರಿ ನಡೆಸುತ್ತಿರುವವರ ಬಣ್ಣ ಬಯಲಾಗಲಿದೆ. ಮೇಧಾವಿತನದಿಂದಾಗಿ ಹಿತಕರ ವಾತಾವರಣ ನಿಮ್ಮದಾಗುವುದು. ಗೊಂದಲ ನಿವಾರಣೆಗಾಗಿ ವೆಚ್ಚ ಮಾಡುವ ಸಾಧ್ಯತೆ ಇದೆ.

ಮಕರ: ಭರವಸೆಗಳ ಮಹಾಪೂರವೇ ಹರಿದುಬಂದು ಸಂತೋಷ ಮೂಡುವುದು. ಸೇವಾಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ. ಸವಾಲುಗಳು ಎದುರಾಗಲಿದ್ದು ಎದೆಗುಂದದೇ ಮುನ್ನುಗ್ಗಿ.

ಕುಂಭ: ಹೊಂದಿಕೊಳ್ಳುವ ಮನೋಭಾವದಿಂದಾಗಿ ಮಹತ್ವದ ವಿಷಯಗಳಲ್ಲಿ ಒಡಂಬಡಿಕೆಗೆ ಬರುವ ಸಾಧ್ಯತೆ. ವಿಪರೀತ ಸನ್ನಿವೇಶಗಳು ಎದುರಾಗಬಹುದು. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯ ಚರ್ಚೆ ನಡೆಯುವ ಸಾಧ್ಯತೆ.

ಮೀನ: ನಿಮ್ಮ ಬಹುದಿನಗಳ ಬಯಕೆ ಇಡೇರುವ ಸಾಧ್ಯತೆ. ವೃತ್ತಿಯಲ್ಲಿ ಬದಲಾವಣೆ ಮಾಡುವ ಸಾಧ್ಯತೆ. ಉತ್ತಮ ಕೆಲಸ ಕಾರ್ಯಗಳಿಂದಾಗಿ ಮನ್ನಣೆ ಗಳಿಸುವಿರಿ. ಮನೆಯವರ ಆರೋಗ್ಯದ ಬಗ್ಗೆ ನಿಗಾ ವಹಿಸಿ.

ನಿಮ್ಮ ಜನ್ಮದಿನ 17-ಫೆಬ್ರುವರಿ ಈ ದಿನ ಅತ್ಯಂತ ಶುಭಕರ. ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಸುಗಮತೆ. ಉದ್ಯೋಗದಲ್ಲಿ ಮುಂಬಡ್ತಿಯ ಸಾಧ್ಯತೆ. ಸಣ್ಣಪುಟ್ಟ ವಿಚಾರಗಳಿಗೂ ಎದುರಾಗುವ ವಿರೋಧಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಸಹನೆಯಿಂದ ವರ್ತಿಸುವುದು ಉತ್ತಮ. ನೇರ ನಡೆ ನುಡಿಯ ಪರಿಣಾಮ ಮಕ್ಕಳ ಮೇಲೆ ಉಂಟಾದೀತು.

ಪದಬಂಧ 4511

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಪ್ಪವಾಗಿ ಬಂದಿರುವ ತರ್ಜುಮೆಗಾರ (5)
3.ಉತ್ಪತ್ತಿ ಸ್ಥಾನವೂ ಆಗಿರುವ ಧಾನ್ಯದ ಕಾಳು (2)
5.ದಾವಣಿ ಧರಿಸಿ ಹೇಳಿದ ಜನಪದ ಹಾಡು (3)
6.ತಿರುಪತಿಯಲ್ಲಿರುವ ಗಂಡ (2)
8.ಇದು ಕನ್ನಡಿಗನ ಡಿಗ್ರಿ (3)
10.ತಕಲಿ ಹಿಡಿದಿರುವ ಬಂಟ (2)
11.ಬ್ರಹ್ಮನ ಬರಹವಿರುವ ನೊಸಲು (2)
12.ಮಗನಿಗೆ ಇದು ಸಲೀಸು ಬಿಡಿ! (3)
14.ಮನೋಹರವಾಗಿ ಕಾಣುವ ಪುಷ್ಪ (2)
16.ಮೊದಲು ಮತ್ತು ಕೊನೆ (3)
17.ಪೊಳ್ಳು ಆಡಂಬರ (2)
18.ಬೆಲೆಬಾಳುವ ಮಣಿಗಳ ಕುಂದಣಿಸಿದ್ದು (5)

ಮೇಲಿಂದ ಕೆಳಕ್ಕೆ

1.ಒಪ್ಪವಾಗಿ ಬಳಿಯುವುದು (4)
2.ಲಲಿತ ವಿದ್ಯೆಯನ್ನು ಬಲ್ಲವನು (4)
4.ಗೆಲುವನ್ನು ಪಡೆದವನೀತ (4)
7.ರಕ್ತ ಹೀರುವ ಒಂದು ಕೀಟ (3)
8.ಹೀಗೆ ವಾಚನ ಮಾಡು (3)
9.ಬಿಡುವು ಹೀಗೆ ದೊರೆತಿದೆ (3)
10.ಇನ್ನೂ ಕರು ಹಾಕದಿರುವ ಹಸು (3)
11.ಕಗ್ಗೊಲೆಯ ಘಟನೆ (4)
13.ಈ ತರ ಅನ್ಯಮಾರ್ಗ ಬಂದಿದೆ (4)
15.ಮತದಲ್ಲಿರುವ ಉದ್ದೇಶ! (4)



4510ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಂದೇಹ 3.ಕಚ 5.ವಿಷ 6.ಖಡ್ಗಧಾರೆ 7.ನದೀಮುಖಜಭೂಮಿ 10.ತಳವಾರ 11.ಬರ 13.ಮದೆ 14.ಗೆದ್ದಲು
ಮೇಲಿಂದ ಕೆಳಕ್ಕೆ: 1.ಸಂಜ್ಞೆ 2.ಹರುಷ 4.ಚತುರೆ 5.ವಿಧಾನ 6.ಖನಿಜ 8.ಮುಕುರ 9.ಮಿಹಿರ 10.ತರ್ಜುಮೆ 11.ಬಡಿಗೆ 12.ಪಾಲು

ಸುಡೊಕು 4897

7		4		5				3
			1		9	6		5
6		5		3			1	
2					4	1		9
	7	1		8				
4			9		2	3		7
	4		3		7		2	1
						7		
1	3			2			6	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4896 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ವಿರೋಧ ಪಕ್ಷದ ನಾಯಕರಾಗಿ ಖರ್ಗೆ: ಅಧಿಸೂಚನೆ

ನವದೆಹಲಿ: ಪಕ್ಷದ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರನ್ನು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರನ್ನಾಗಿ ನೇಮಿಸುವಂತೆ ಕಾಂಗ್ರೆಸ್ ಸಲ್ಲಿಸಿದ್ದ ಶಿಫಾರಸಿಗೆ ಸಭಾಪತಿ ಎಂ.ವೆಂಕಯ್ಯ ನಾಯ್ಡು ಅಂಕಿತ ಹಾಕಿದ್ದಾರೆ.

ಸಂಸದೀಯ ವ್ಯವಹಾರಗಳ ಸಚಿವಾಲಯ ಈ ಕುರಿತು ಅಧಿಸೂಚನೆ ಹೊರಡಿಸಿದೆ.

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

‘ದ್ವೇಷಮುಕ್ತ ಸನ್ಯಾಸಿಗಳಿಂದ ಸಮಾಜ ನಿರ್ಮಾಣ’

• ಎಸ್.ಸೂರ್ಯಪ್ರಕಾಶ ಪಂಡಿತ್

ಪ್ರಜಾವಾಣಿ ಸಂದರ್ಶನ

ಶಂಕರಭಾರತೀ ಸ್ವಾಮೀಜಿ



ಯಡತೊರೆ ಶ್ರೀಗಳು

ಮೈಸೂರು ಜಿಲ್ಲೆ ಕೃಷ್ಣರಾಜನಗರದಲ್ಲಿರುವ ಯಡತೊರೆ ಶ್ರೀಯೋಗಾನಂದೇಶ್ವರ ಸರಸ್ವತೀ ಮಠ ಸುಮಾರು ಎಂಟು ಶತಮಾನಗಳಷ್ಟು ಪ್ರಾಚೀನವಾದುದು; ಶಂಕರಾಚಾರ್ಯ ಪರಂಪರೆಗೆ ಸೇರಿರುವಂಥದ್ದು. ಪ್ರಸ್ತುತ ಪೀಠಾಧೀಶರಾಗಿರುವ ಶಂಕರಭಾರತೀ ಮಹಾಸ್ವಾಮಿಗಳ ಉತ್ತರಾಧಿಕಾರಿ ಶಿಷ್ಯಸ್ವೀಕಾರ ಮಹೋತ್ಸವ ಕೃಷ್ಣರಾಜನಗರ ತಾಲೂಕಿನ ಜಪದ ಕಟ್ಟೆಯಲ್ಲಿ ಇಂದು ನಡೆಯಲಿದೆ. ಈ ಸಂದರ್ಭದಲ್ಲಿ ಸ್ವಾಮಿಗಳು ಪ್ರಜಾವಾಣಿಗೆ ನೀಡಿರುವ ಸಂದರ್ಶನ ಇಲ್ಲಿದೆ...

1. ಪ್ರಸ್ತುತ ಸಮಾಜಕ್ಕೆ ಸನ್ಯಾಸಿಗಳ ಆವಶ್ಯಕತೆ ಹೇಗೆ?

ನಮ್ಮ ಸನಾತನ ಧರ್ಮಾವಲಂಬಿಗಳು ನಮ್ಮ ಆರ್ಷೇಯವಾದ ಗ್ರಂಥಗಳ ಬಗ್ಗೆ ಅಪಾರವಾದ ಶ್ರದ್ಧಾನಂಬಿಕೆಗಳನ್ನು ಇಟ್ಟುಕೊಂಡು ಬಂದಿದ್ದಾರೆ. ಹಾಗೆಯೇ ಭಗವದ್ಗೀತೆ ಮೊದಲಾದಂತಹ ಶ್ರೇಷ್ಠವಾದ ಉಪದೇಶಗಳ ಬಗ್ಗೆಯೂ ಅಪಾರವಾದ ಶ್ರದ್ಧಾಭಕ್ತಿಗಳನ್ನು ಹೊಂದಿದ್ದಾರೆ. ಭಗವದ್ಗೀತೆಯಲ್ಲಿ ಭಗವಂತನು ಧರ್ಮದ ಪುನರುದ್ಧಾರಕ್ಕಾಗಿ ಕಾಲಕಾಲಕ್ಕೆ ನಾನು ಅವತಾರವನ್ನು ಮಾಡುತ್ತೇನೆ ಎಂದು ತಿಳಿಸಿದಂತೆ ಭಗವಂತನು ಬೇರೆ ಬೇರೆ ಅವತಾರಗಳನ್ನು ತಾಳಿದ್ದನ್ನು ಕೂಡ ನಾವು ಕಾಣಬಹುದು. ಈ ವಿಷಯದಲ್ಲೂ ನಮಗೆಲ್ಲರಿಗೂ ನಂಬಿಕೆ ಇದೆ.

ಅದರಂತೆ ಸುಮಾರು ಸಾವಿರದ ಇನ್ನೂರ ಮೂವತ್ತು ವರ್ಷಗಳ ಹಿಂದೆ ಭಗವಂತನು ಶಂಕರಾಚಾರ್ಯರ ರೂಪದಲ್ಲಿ ಅವತಾರವನ್ನು ಮಾಡಿ, ಅದರಲ್ಲೂ ಪರಮಹಂಸ ಪರಿವ್ರಾಜಕರಾಗಿ ಸಮಾಜವನ್ನು ಉದ್ಧರಿಸಿರುವುದು ಐತಿಹಾಸಿಕ ಸತ್ಯ. ಅಷ್ಟೇ ಅಲ್ಲದೆ, ಮುಂದಿನ ದಿನಗಳಲ್ಲಿಯೂ ನಮ್ಮ ಸಮಾಜಕ್ಕೆ ಸನ್ಯಾಸಿಗಳು ಸದಾ ಮಾರ್ಗದರ್ಶನ ನೀಡಬೇಕು ಎನ್ನುವುದಕ್ಕಾಗಿ ಮಠ ಪರಂಪರೆಯನ್ನು ಆರಂಭಿಸಿದರು. ಪರಮಹಂಸ ಪರಿವ್ರಾಜಕರು ರಾಗದ್ವೇಷಾದಿಗಳಿಂದ ಮುಕ್ತರಾಗಿರುವುದರಿಂದ ಸಮಾಜದ ಪ್ರತಿಯೊಬ್ಬನ ಬಗ್ಗೆಯೂ ಮತ್ತು ಅವನ ಏಳಿಗೆಯ ಬಗ್ಗೆಯೂ ಯಾವುದೇ ಪೂರ್ವಗ್ರಹವಿಲ್ಲದೆ ಮಾರ್ಗದರ್ಶನವನ್ನು ಮಾಡಬಹುದಾಗಿದೆ. ಸ್ವತಃ ತನಗೆ ಯಾವ ಅಪೇಕ್ಷೆಯೂ ಇಲ್ಲದೇ ಇರುವುದರಿಂದಲೂ ಸಮಾಜಕ್ಕೆ ಎಲ್ಲ ವಿಧವಾದ ಮಾರ್ಗದರ್ಶನಗಳನ್ನು ಮಾಡಬಹುದಾಗಿದೆ. ಸಮಾಜದ ಪ್ರತಿಯೊಬ್ಬನಿಗೂ ತನ್ನ ಶ್ರೇಯಸ್ಸನ್ನು ಕಂಡುಕೊಳ್ಳುವುದಕ್ಕೆ ವ್ಯಕ್ತಿತ್ವವನ್ನು ವಿಕಾಸ ಮಾಡಿಕೊಳ್ಳುವುದಕ್ಕೆ ಇಂತಹ ಸನ್ಯಾಸಿಗಳ ಆವಶ್ಯಕತೆ ಸದಾಕಾಲವೂ ಇರುತ್ತದೆ.

2. ಶಂಕರಾಚಾರ್ಯರ ತತ್ತ್ವಗಳ ಆಧಾರದ ಮೇಲೆ ವ್ಯಕ್ತಿನಿರ್ಮಾಣ ಹಾಗೂ ಸಮಾಜದ ನಿರ್ಮಾಣ ಹೇಗೆ?

ಉಪನಿಷತ್ತುಗಳು ನೀಡಿರುವ ಉಪದೇಶಗಳ ಉದ್ದೇಶವೇ ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣ. ಶಂಕರಾಚಾರ್ಯರು ಇದನ್ನು ಮನಗಂಡು ವ್ಯಕ್ತಿತ್ವನಿರ್ಮಾಣ ಹಾಗೂ ಸಮಾಜನಿರ್ಮಾಣವನ್ನು ಮಾಡುವುದಕ್ಕೆ ಉಪನಿಷತ್ತುಗಳ ಹೇಳುವಂತಹ ಇಂತಹ ವಿಚಾರಗಳನ್ನು ಸಮಾಜದ ಪ್ರತಿಯೊಬ್ಬರಿಗೂ ತಲುಪಿಸುವುದಕ್ಕಾಗಿ ಭಾಷ್ಯಗ್ರಂಥಗಳು, ಪ್ರಕರಣಗ್ರಂಥಗಳು, ಸ್ತೋತ್ರಗ್ರಂಥಗಳನ್ನು ರಚಿಸಿದರು. ಇವುಗಳಲ್ಲಿ ವ್ಯಕ್ತಿದೃಷ್ಟಿಯಿಂದ ಹಾಗೂ ಸಮಾಜದ ದೃಷ್ಟಿಯಿಂದ ಉಪನಿಷತ್ತುಗಳು ಹೇಳಿದ ವಿಚಾರಗಳೇ ತುಂಬಿವೆ. ಶಂಕರಾಚಾರ್ಯರು ಹೊಸದಾಗಿ ಯಾವ ತತ್ತ್ವವನ್ನೂ ತಿಳಿಸುವುದಕ್ಕೆ ಹೋಗಲಿಲ್ಲ. ‘ಅದ್ವೈತ’ – ಈ ಒಂದು ತತ್ತ್ವದ ಪರಿಚಯವು ಪ್ರತಿಯೊಬ್ಬ ಪ್ರಜೆಗೂ ಆದಲ್ಲಿ ಆಗ ಸಹಜವಾಗಿಯೂ ವ್ಯಕ್ತಿಯಲ್ಲಿ ಬದಲಾವಣೆ ಬರುವುದನ್ನು ಇತಿಹಾಸದಲ್ಲೂ ಕಾಣುತ್ತೇವೆ, ಇವತ್ತೂ ಕಾಣುತ್ತೇವೆ. ಹೀಗಾಗಿ ಶಂಕರಾಚಾರ್ಯರು ಈ ತತ್ತ್ವದ ಆಧಾರದ ಮೇಲೆ ವ್ಯಕ್ತಿನಿರ್ಮಾಣ ಹಾಗೂ ಸಮಾಜದ ನಿರ್ಮಾಣವನ್ನು ಮಾಡುವುದರಲ್ಲಿ ಸಫಲರಾದರು ಎಂದು ಇತಿಹಾಸ ತಿಳಿಸುತ್ತದೆ. ಇದೇ ದಾರಿಯನ್ನು ನಾವು ಇಂದಿನ ಸಮಾಜಕ್ಕೆ ತಿಳಿಸುವುದು ಔಚಿತ್ಯಪೂರ್ಣವಾಗುತ್ತದೆ.

3. ಉತ್ತರಾಧಿಕಾರಿ ಆಯ್ಕೆಯು ಯಾವ ಆಧಾರದ ಮೇಲೆ ನಡೆಯಿತು?

ನಮ್ಮ ಆರಾಧ್ಯದೇವರ ಮತ್ತು ನಮ್ಮ ಗುರುಗಳ ಪ್ರೇರಣೆಯಂತೆ ನಡೆಯಿತು.

4. ಶ್ರೀಮಠದ ಮುಂದಿನ ಯೋಜನೆಗಳೇನು?

ಯೋಗಾನಂದೇಶ್ವರ ಸರಸ್ವತೀ ಮಠವು ತನ್ನ ಎಲ್ಲ ಧಾರ್ಮಿಕ ಚಟುವಟಿಕೆಗಳೊಂದಿಗೆ ವೇದಾಂತಭಾರತಿಯ ಆಶ್ರಯದಲ್ಲಿ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ಮಾಡುತ್ತ ಬರುತ್ತಿದೆ.

ಶಂಕರಾಚಾರ್ಯರು ತಮ್ಮ ಪ್ರಶ್ನೋತ್ತರ ರತ್ನಮಾಲಿಕಾದಲ್ಲಿ ಉಪದೇಶಿಸಿದಂತಹ ಉಪದೇಶಗಳ ಸಂಗ್ರಹವಾದ ವಿವೇಕದೀಪಿನಿಯಲ್ಲಿ ತಿಳಿಸಿದ ನೀತಿಗಳನ್ನು ವ್ಯಾಪಕವಾಗಿ ವಿದ್ಯಾರ್ಥಿಗಳಿಗೆ ತಿಳಿಸುವುದನ್ನು ದೇಶಾದ್ಯಂತ ನಡೆಸುವುದು ಹಾಗೂ ರಾಷ್ಟ್ರೀಯ ಭಾವೈಕ್ಯವನ್ನು ಉಂಟುಮಾಡುವಂತಹ ಶಂಕರಾಚಾರ್ಯರ ಸ್ತೋತ್ರಸಾಹಿತ್ಯದ ಪರಿಚಯವನ್ನು ವ್ಯಾಪಕವಾಗಿ ಮಾಡುವುದು. ❖

ಬಿಜೆಪಿ ವಿರುದ್ಧ ಒಗ್ಗಟ್ಟಿನ ಹೋರಾಟಕ್ಕೆ ರಾಹುಲ್ ಗಾಂಧಿ ಸೂಚನೆ

ಅಹಿಂದ ರ‍್ಯಾಲಿ ಕೈಬಿಟ್ಟ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದಾದ್ಯಂತ ಅಹಿಂದ ರ‍್ಯಾಲಿ ನಡೆಸಲು ಒಲವು ತೋರಿದ ಬೆನ್ನಲ್ಲೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ಬಿಜೆಪಿ ವಿರುದ್ಧ ಯಾರೂ ಪ್ರತ್ಯೇಕ ಸಾರ್ವಜನಿಕ ಸಭೆಗಳನ್ನು ನಡೆಸುವುದು ಬೇಡ, ಬಿಜೆಪಿ ವಿರುದ್ಧ ಎಲ್ಲರೂ ಒಗ್ಗಟ್ಟಿನ ಹೋರಾಟ ನಡೆಸಿ’ ಎಂದು ರಾಜ್ಯದ ನಾಯಕರಿಗೆ ಮಂಗಳವಾರ ಸೂಚನೆ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಅಹಿಂದ ರ‍್ಯಾಲಿ ಕೈಬಿಟ್ಟಿದ್ದಾರೆ ಎನ್ನಲಾಗಿದೆ.

ರಾಹುಲ್ ಗಾಂಧಿ

‘ಸಿದ್ದರಾಮಯ್ಯ ಅವರು ಪಕ್ಷದ ಸಾಮೂಹಿಕ ನಾಯಕತ್ವದ ಭಾಗವಾಗಬೇಕು. 2023ಕ್ಕೆ ರಾಜ್ಯದಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಗೆ ಎಲ್ಲ ನಾಯಕರು ಒಗ್ಗಟ್ಟಿನಿಂದ ತಯಾರಿ ನಡೆಸಬೇಕು’ ಎಂದು ರಾಹುಲ್ ಗಾಂಧಿ ರಾಜ್ಯ ನಾಯಕರಿಗೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಅವರು ಜಮೀರ್ ಅಹಮದ್ ಖಾನ್, ಐವಾನ್ ಡಿಸೋಜ, ಪ್ರಕಾಶ್ ರಾಥೋಡ್, ಅಶೋಕ್ ಪಟಾಣ್ ಅವರ ಜತೆಗೂಡಿ ರಾಹುಲ್ ಗಾಂಧಿಯವರನ್ನು ಇಲ್ಲಿ ಭೇಟಿ ಮಾಡಿದರು. ಅಲ್ಲದೇ, ಪಕ್ಷದ ಹಿರಿಯ ನಾಯಕ ಎ.ಕೆ. ಆಂಟನಿಯವರನ್ನು ಅವರು ಇದೇ ಸಂದರ್ಭದಲ್ಲಿ ಭೇಟಿ ಮಾಡಿದರು.

ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತಪ್ಪುಗಳನ್ನು ತೆರೆದಿಡಬೇಕು. ರಾಜ್ಯ ನಾಯಕರು ಯಾವುದೇ ಭಿನ್ನಾಭಿಪ್ರಾಯಗಳಿಗೆ ಆಸ್ಪದ ನೀಡದೆ, ಒಗ್ಗಟ್ಟು ಪ್ರದರ್ಶಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ರಾಜ್ಯದಾದ್ಯಂತ ರ‍್ಯಾಲಿ ನಡೆಸಿ, ಎಲ್ಲ ನಾಯಕರು ಸಾಮೂಹಿಕವಾಗಿ ಪಾಲ್ಗೊಳ್ಳಬೇಕು ಎಂದು ರಾಹುಲ್ ಎಲ್ಲರಿಗೂ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿದಾಗ ಏನೆಲ್ಲ ಚರ್ಚೆ ನಡೆಯಿತು ಎನ್ನುವುದನ್ನು ಬಹಿರಂಗಪಡಿಸಲು ನಿರಾಕರಿಸಿದ ಸಿದ್ದರಾಮಯ್ಯ ‘ಪಕ್ಷಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ರಾಜ್ಯದಲ್ಲಿನ ರಾಜಕೀಯ ಬೆಳವಣಿಗೆ ಬಗ್ಗೆ ಮಾತ್ರ ಚರ್ಚಿಸಲಾಯಿತು’ ಎಂದಿದ್ದಾರೆ.

‘ಯತ್ನಾಳ ಹೇಳಿಕೆ: ಉನ್ನತ ತನಿಖೆಯಾಗಲಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕುಟುಂಬ ಸದಸ್ಯರು ಮಾರಿಷಿಯಸ್‌ನಲ್ಲಿ ಅಕ್ರಮ ಹಣವನ್ನು ಇರಿಸಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯ ಹಿರಿಯ ಶಾಸಕರ ಈ ಆರೋಪ ಕುರಿತು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ನೇತೃತ್ವದ ತನಿಖೆಗೆ ಆದೇಶಿಸುವ ಮೂಲಕ, ‘ನ ಖಾವೂಂಗಾ ನ ಖಾನೇದೂಂಗಾ’ (ನಾನೂ ತಿನ್ನುವುದಿಲ್ಲ, ಬೇರೆಯವರಿಗೂ ತಿನ್ನಲು ಬಿಡುವುದಿಲ್ಲ) ಎಂಬ ತಮ್ಮ ಹೇಳಿಕೆಗೆ ಪ್ರಧಾನಿ ಬದ್ಧವಾಗಿರಬೇಕು ಎಂದರು.

ಯಡಿಯೂರಪ್ಪ ಅವರನ್ನು ಅವರ ಕುಟುಂಬದ ಸದಸ್ಯರೇ ಹಾವು, ಚೇಳುಗಳ ಹಾಗೆ ಕಾಡುತ್ತಿದ್ದಾರೆ- ಯೇ ವಿನಾ ಬೇರೆ ಯಾರೂ ಅಲ್ಲ ಎಂದೂ ಯತ್ನಾಳ ಹೇಳಿದ್ದಾರೆ. ಇಂಥ ಹೇಳಿಕೆ ಕುರಿತು ಬಿಜೆಪಿ ನಿರ್ಲಕ್ಷ್ಯ ವಹಿಸಬಾರದು’ ಎಂದು ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ

ರಾಜ್ಯದಲ್ಲಿ ವಿವಿಧ ಸಮುದಾಯಗಳು ಮೀಸಲಾತಿಗೆ ಆಗ್ರಹಿಸಿ ಹೋರಾಟ ನಡೆಸುತ್ತಿರುವುದು ಸೂಕ್ತವಾಗಿದೆ. ಆದರೆ, ಸಂಪುಟ ದರ್ಜೆ ಸಚಿವರಾಗಿರುವ ಕೆ.ಎಸ್. ಈಶ್ವರಪ್ಪ ಅವರು ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಹೋರಾಟ ನಡೆಸುತ್ತಿರುವುದು ಸೂಕ್ತವಲ್ಲ ಎಂದು ಪುನರುಚ್ಚರಿಸಿದರು.

ಯಾವುದೇ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರ್ಪಡೆ ಮಾಡುವ ಮುನ್ನ ಕುಲಶಾಸ್ತ್ರ ಅಧ್ಯಯನದ ಅಗತ್ಯವಿದೆ. ಹಿಂದುಳಿದ ವರ್ಗಗಳ ಆಯೋಗವು ಅಧ್ಯಯನ ನಡೆಸಿ ವರದಿ ಸಲ್ಲಿಸಿದ ನಂತರ ರಾಜ್ಯ ಸರ್ಕಾರವು ಈ ಸಂಬಂಧ ಕೇಂದ್ರಕ್ಕೆ ಶಿಫಾರಸು ಮಾಡಬಹುದು. ನಂತರ ಸಂವಿಧಾನಕ್ಕೆ ತಿದ್ದುಪಡಿ ತಂದು ಅರ್ಹ ಸಮುದಾಯಗಳಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದು ಅವರು ಹೇಳಿದರು.

ರಾಹುಲ್ ಜೊತೆ ಚರ್ಚೆ: ಸಿದ್ದರಾಮಯ್ಯ ಅವರು ಸಂಜೆ ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್ ಹಾಗೂ ಎ.ಕೆ. ಆಂಟಣಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

‘ರಾಹುಲ್ ಗಾಂಧಿ ಅವರೊಂದಿಗೆ ರಾಜ್ಯದ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚಿಸಿರುವೆ. ಆದರೆ, ಚರ್ಚಿತ ವಿಷಯವನ್ನು ಬಹಿರಂಗಪಡಿಸಲಾಗದು’ ಎಂದು ಭೇಟಿಯ ನಂತರ ಅವರು ಹೇಳಿದರು.

‘ಅಯೋಧ್ಯೆಯ ರಾಮನಿಗೆ ದೇಣಿಗೆ ಕೊಡೆನು’

ನವದೆಹಲಿ: ‘ಅಯೋಧ್ಯೆಯಲ್ಲಿನ ವಿವಾದಿತ ನಿವೇಶನದಲ್ಲಿ ನಿರ್ಮಾಣ ಆಗುವ ರಾಮ ಮಂದಿರಕ್ಕೆ ದೇಣಿಗೆ ನೀಡುವುದಿಲ್ಲ’ ಎಂದು ಸಿದ್ದರಾಮಯ್ಯ ತಿಳಿಸಿದರು.

‘ರಾಮಮಂದಿರ ನಿರ್ಮಾಣಕ್ಕೆ ದೇಣಿಗೆ ನೀಡದವರನ್ನು ಗುರುತಿಸಿ ಬೆದರಿಕೆ ಒಡ್ಡಲಾಗುತ್ತಿದೆ’ ಎಂದು ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಅವರು, ‘ವಿವಾದಿತ ಭೂಮಿಯ ಬದಲಿಗೆ, ಬೇರೆ ಕಡೆ ಅಥವಾ ನಮ್ಮೂರಲ್ಲಿ ನಿರ್ಮಿಸಲಾಗುವ ರಾಮ ಮಂದಿರಕ್ಕೆ ದೇಣಿಗೆ ನೀಡುವೆ’ ಎಂದು ಸ್ಪಷ್ಟಪಡಿಸಿದರು.

‘ರಾಮ ಜನ್ಮಭೂಮಿ ವಿವಾದವನ್ನು ಸುಪ್ರೀಂ ಕೋರ್ಟ್ ಇತ್ಯರ್ಥಪಡಿಸಿದ್ದು, ದೇಣಿಗೆ ನೀಡುವುದರಲ್ಲಿ ತಪ್ಪೇನಿದೆ’ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಬೇರೆ ಯಾವುದೇ ಸ್ಥಳದಲ್ಲಿ ಮಂದಿರ ನಿರ್ಮಿಸಿದರೂ ಹಣ ನೀಡಬಹುದು. ಆರ್‌ಎಸ್‌ಎಸ್ ಈಗ ಸಂಗ್ರಹಿಸುತ್ತಿರುವ ಹಣಕ್ಕೆ ರಸೀದಿ ಕೊಟ್ಟು, ಲೆಕ್ಕ ಕೊಡುವುದೇ’ ಎಂದು ಕೇಳಿದರು.

ನಾಲ್ವರಲ್ಲಿ ಕೋವಿಡ್ 19ರ ದಕ್ಷಿಣ ಆಫ್ರಿಕಾ ತಳಿ

ನವದೆಹಲಿ (ಪಿಟಿಐ): ವಿದೇಶಗಳಿಂದ ಹಿಂತಿರುಗಿದ ನಾಲ್ವರಿಗೆ ಕೋವಿಡ್-19ರ ದಕ್ಷಿಣ ಆಫ್ರಿಕಾ ತಳಿ ಮತ್ತು ಒಬ್ಬ ಪ್ರಯಾಣಿಕನಿಗೆ ಬ್ರೆಜಿಲ್‌ನ ತಳಿಯ ಸೋಂಕು ತಗುಲಿರುವುದು ಪತ್ತೆಯಾಗಿದೆ. ಈ ಐವರನ್ನೂ ತೀವ್ರ ಪರೀಕ್ಷೆಗೆ ಒಳಪಡಿಸಿದ್ದು, ಅವರ ಗಂಟಲ ದ್ರವದ ಮಾದರಿಯನ್ನು ಹೆಚ್ಚಿನ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಹೇಳಿದೆ.

ಅಂಗೋಲಾ, ತಾಂಜಾನಿಯಾದಿಂದ ಬಂದಿರುವ ತಲಾ ಒಬ್ಬರು ಮತ್ತು ದಕ್ಷಿಣ ಆಫ್ರಿಕಾದಿಂದ ಹಿಂತಿರುಗಿರುವ ಇಬ್ಬರಲ್ಲಿ ಕೋವಿಡ್-19ನ ದಕ್ಷಿಣ ಆಫ್ರಿಕಾ ತಳಿ ಪತ್ತೆಯಾಗಿದೆ. ಇವರೆಲ್ಲರೂ ಜನವರಿಯಲ್ಲಿ ಭಾರತಕ್ಕೆ ಹಿಂತಿರುಗಿದ್ದರು. ಬ್ರೆಜಿಲ್‌ನಿಂದ ಫೆಬ್ರುವರಿಯಲ್ಲಿ ಹಿಂತಿರುಗಿದ ಒಬ್ಬರಲ್ಲಿ ಬ್ರೆಜಿಲ್ ತಳಿಯ ಸೋಂಕು ಇರುವುದು ಪತ್ತೆಯಾಗಿದೆ. ಇವರ ಸಂಪರ್ಕಕ್ಕೆ ಬಂದ ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸಲಾಗಿದೆ. ಅಲ್ಲದೆ, ಎಲ್ಲರನ್ನೂ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ ಎಂದು ಐಸಿಎಂಆರ್ ಪ್ರಧಾನ ನಿರ್ದೇಶಕ ಬಲರಾಮ್ ಭಾರ್ಗವ್ ಅವರು ಮಾಹಿತಿ ನೀಡಿದ್ದಾರೆ.

ದೇಶದ ಶೇ 70ರಷ್ಟು ಜನರು ಈಗಲೂ ಕೊರೊನಾ ತಗಲುವ ಅಪಾಯದಲ್ಲಿ ಇದ್ದಾರೆ. ಹೀಗಾಗಿ ಕೋವಿಡ್ ತಡೆ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಎಲ್ಲರೂ ಪಾಲಿಸಬೇಕು

ಬಲರಾಮ್ ಭಾರ್ಗವ್, ಐಸಿಎಂಆರ್ ಪ್ರಧಾನ ನಿರ್ದೇಶಕ

ಇವರ ದೇಹಗಳಿಂದ ಸಂಗ್ರಹಿಸಿರುವ ಸೋಂಕಿನ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಈಗ ಬಳಸುತ್ತಿರುವ ಕೋವಿಡ್-19 ಲಸಿಕೆಗಳು ಈ ಎರಡೂ ತಳಿಗಳ ಮೇಲೆ ಪರಿಣಾಮ ಬೀರುತ್ತವೆಯೇ ಎಂದೂ ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೋವಿಡ್-19ರ ಬ್ರಿಟನ್ ತಳಿಯು ಭಾರತದಲ್ಲಿ ಹರಡುವುದನ್ನು ತಡೆಯಲು ಬ್ರಿಟನ್‌ಗೆ ವಿಮಾನ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಈಗ ದಕ್ಷಿಣ ಆಫ್ರಿಕಾ ಮತ್ತು ಬ್ರೆಜಿಲ್‌ನಿಂದ ಬರುವ ವಿಮಾನಗಳನ್ನೂ ಸ್ಥಗಿತಗೊಳಿಸುವ ಬಗ್ಗೆ ಚರ್ಚೆ ನಡೆದಿದೆ. ಈ ದೇಶಗಳಿಂದ ಬರುವವರನ್ನು ಕಡ್ಡಾಯ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸಲು ಚಿಂತನೆ ನಡೆಸಲಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ.

- ದಕ್ಷಿಣ ಆಫ್ರಿಕಾ ತಳಿಯು ಕ್ಷಿಪ್ರವಾಗಿ ಹರಡುವ ಗುಣ ಹೊಂದಿದೆ. ಈ ತಳಿಯು 44 ದೇಶಗಳಿಗೆ ಹರಡಿದೆ
- ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ಪ್ರಕರಣಗಳಲ್ಲಿ ಬಹುಪಾಲು ಜನರು ಈ ತಳಿಯ ಸೋಂಕಿಗೆ ತುತ್ತಾಗಿದ್ದಾರೆ
- ಬ್ರೆಜಿಲ್ ತಳಿ ಸಹ ಬಹಳ ಕ್ಷಿಪ್ರವಾಗಿ ಹರಡುವ ಸಾಮರ್ಥ್ಯ ಹೊಂದಿದೆ. 15 ದೇಶಗಳಿಗೆ ಇದು ಹರಡಿದೆ
- ಬ್ರೆಜಿಲ್‌ನಲ್ಲಿ ಕೋವಿಡ್-19ರ ಮೂರನೇ ಅಲೆ ತೀವ್ರಗೊಳ್ಳಲು ಬ್ರೆಜಿಲ್ ತಳಿಯೇ ಕಾರಣವಾಗಿದೆ
- ಭಾರತದಲ್ಲಿ ಕೋವಿಡ್-19ರ ಬ್ರಿಟನ್ ತಳಿಯ ಸೋಂಕಿಗೆ ತುತ್ತಾದವರ ಸಂಖ್ಯೆ ಈಗ 187
- ಈ ಮೂರು ತಳಿಗೆ ತುತ್ತಾದ ಭಾರತೀಯರಲ್ಲಿ ಸಾವು ಸಂಭವಿಸಿಲ್ಲ



ಮಹಿಳಾ ಆಯೋಗದ ನೋಟಿಸ್

ಒಂದನೇ ಪುಟದಿಂದ

ದಿಶಾ ಬಂಧನದಲ್ಲಿ ಯಾವುದೇ ನಿಯಮ ಉಲ್ಲಂಘನೆ ಆಗಿಲ್ಲ ಎಂದು ದೆಹಲಿ ಪೊಲೀಸ್ ಆಯುಕ್ತ ಎಸ್. ಎನ್. ಶ್ರೀವಾಸ್ತವ ಅವರು ಸಮರ್ಥನೆ ಮಾಡಿಕೊಂಡ ದಿನವೇ ಆಯೋಗವು ನೋಟಿಸ್ ನೀಡಿದೆ.

ಮಾಧ್ಯಮ ವರದಿಗಳ ಆಧಾರದಲ್ಲಿ ಸ್ವಯಂಪ್ರೇರಿತವಾಗಿ ಪೊಲೀಸರಿಗೆ ನೋಟಿಸ್ ನೀಡಲಾಗಿದೆ. ‘ಪ್ರಕರಣದ ಗಾಂಭೀರ್ಯವನ್ನು ಗಣನೆಗೆ ತೆಗೆದುಕೊಂಡು’ ಇದೇ ಶುಕ್ರವಾರದ ಒಳಗೆ ಪ್ರತಿಕ್ರಿಯೆ ನೀಡಬೇಕು ಎಂದು ಆಯೋಗದ ಅಧ್ಯಕ್ಷೆ ಸ್ವಾತಿ ಮಲಿವಾಲ್ ಸೂಚಿಸಿದ್ದಾರೆ.

ಆರೋಪಿಯನ್ನು ಬಂಧಿಸಿದ ಬಳಿಕ ಅತ್ಯಂತ ಹತ್ತಿರದಲ್ಲಿರುವ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಬೇಕು ಮತ್ತು ಬೇರೆಡೆಗೆ ಕರೆದೊಯ್ಯಬೇಕಿದ್ದರೆ ಪ್ರಯಾಣ ಅನುಮತಿ ಪಡೆಯಬೇಕು ಎಂದು ದೆಹಲಿ ಹೈಕೋರ್ಟ್ 2019ರಲ್ಲಿ ಆದೇಶ ನೀಡಿದೆ ಎಂಬುದನ್ನೂ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಬಂಧಿತ ವ್ಯಕ್ತಿಗೆ ತಮ್ಮನ್ನು ಸಮರ್ಥಿಸಿಕೊಳ್ಳಲು ತಮ್ಮ ಆಯ್ಕೆಯ ವಕೀಲರನ್ನು ಹೊಂದುವ ಹಕ್ಕು ಇದೆ ಎಂದು ಸಂವಿಧಾನದ 22 (1)ನೇ ವಿಧಿ ಹೇಳುತ್ತದೆ. ಹಾಗಿದ್ದರೂ ದಿಶಾ ಅವರಿಗೆ ವಕೀಲರ ನೆರವು ಏಕೆ ಸಿಕ್ಕಿಲ್ಲ ಎಂದು ನೋಟಿಸ್‌ನಲ್ಲಿ ಪ್ರಶ್ನಿಸಲಾಗಿದೆ. ದಿಶಾ ವಿರುದ್ಧದ ಎಫ್‌ಐಆರ್‌ನ ಪ್ರತಿಯನ್ನು ಸಲ್ಲಿಸುವಂತೆಯೂ ಸೂಚಿಸಲಾಗಿದೆ.

ದಿಶಾಗೆ ಎಫ್‌ಐಆರ್ ಪ್ರತಿ: ಎಫ್‌ಐಆರ್ ಪ್ರತಿ, ಬಂಧನ ವಾರಂಟ್, ಪೊಲೀಸ್ ವಶಕ್ಕೆ ಕೋರಿ ಸಲ್ಲಿಸಿದ್ದ ಅರ್ಜಿಯ ಪ್ರತಿಗಳನ್ನು ದಿಶಾ ಅವರಿಗೆ ನೀಡುವಂತೆ ದೆಹಲಿಯ ನ್ಯಾಯಾಲಯವು ಪೊಲೀಸರಿಗೆ ಸೂಚಿಸಿದೆ. ಬೆಚ್ಚನೆಯ ಉಡುಪು, ಮಾಸ್ಕ್ ಮತ್ತು ಪುಸ್ತಕಗಳನ್ನು ಪಡೆದುಕೊಳ್ಳುವುದಕ್ಕೂ ದಿಶಾ ಅವರಿಗೆ ಅವಕಾಶ ಕೊಟ್ಟಿದೆ.

ಪೊಲೀಸ್ ಕಸ್ಟಡಿಯಲ್ಲಿ ಇದ್ದಷ್ಟು ದಿನ ಮನೆಯವರೊಂದಿಗೆ 15 ನಿಮಿಷ ದೂರವಾಣಿಯಲ್ಲಿ ಮಾತನಾಡಲು ಮತ್ತು ತಮ್ಮ ವಕೀಲರನ್ನು 30 ನಿಮಿಷ ಭೇಟಿಯಾಗಲು ಕೂಡ ನ್ಯಾಯಾಲಯವು ಅನುಮತಿ ನೀಡಿದೆ. ದಿಶಾ ಅವರನ್ನು ಐದು ದಿನ ಪೊಲೀಸ್ ವಶಕ್ಕೆ ನೀಡಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

✓ TATA MOTORS, ಟಯೋಟಾ, ಬ್ರಿಟಾನಿಯಾ, TVS ಗಳಿಗೆ 7th,SSLC, PUC ಡಿಗ್ರಿಯವರುಗಳು, ITI ನವರುಗಳು,ನೇರನೇಮಕಾತಿಯಿದೆ. 16,500-52,000/- ವಸತಿಯೂಟವಿದೆ. 7795048129, 7795049766

✓ ಸುವರ್ಣಾವಕಾಶ ಪ್ರತಿಷ್ಠಿತ ಕಂಪನಿಗಳಿಗೆ ಹಾಗೂ ಖಾಸಗಿ ಆಫೀಸ್‌ಗಳ ಹುದ್ದೆಗಳಿಗೆ 7th, SSLC, PUC,ITI, Diploma Any Degree Pass/Fail ಆದ ಯುವಕಯುವತಿಯರು ಬೇಕಾಗಿದ್ದಾರೆ.ವಸತಿಯೂಟದೊಂದಿಗೆ ESI/PF +[OT-150/Hour] ಸಂಬಳ 15,600/- ರೂರಿಂದ 34,200/- ರೂವರೆಗೆ.7406000347, 7406000369

✓ VIDEOCON, TVS, ಟಯೋಟಾ, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿಯಿದೆ. 16,600 - 56,000/- ವಸತಿಯೂಟವಿದೆ. 9611715755

Marketing & Sales

SALES EXECUTIVE Bike & Smart PhoneMust Jain Bearings 09343381877, 09986781877

Part-Time Jobs

✓ ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611411598, 9900552003.

WORK FROM HOME: ಮನೆಯಿಂದಲೇ ಕುಳಿತು ಫಾರಂ ತುಂಬುವ ಕೆಲಸ, ಗಳಿಸಿ ತಿಂಗಳಿಗೆ 15000-22000/- ಕೊರಿಯರ್ ಸೌಲಭ್ಯವಿದೆ. 7338376317, 8749014431

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಟಾರ್ಗೆಟ್ಟಿಲ್ಲದ ಬರವಣಿಗೆ /Online work. ಮಹಿಳೆಯರಿಗೆ ಬಂಡವಾಳ ರಹಿತ ವ್ಯಾಪಾರ ಮಾಡಿ ತಿಂಗಳಿಗೆ ಸಾವಿರಾರು ರೂ ಗಳಿಸಬಹುದು. 8884826107

Wanted

✓ ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಕೆಲಸಕ್ಕೆ ಬೇಕಾಗಿದ್ದಾರೆ.ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ +OT 15,800 -86,000 8884054160, 9739544856

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ತಿಳಿಸುವುದೇನೆಂದರೆ, ಶ್ರೀ ಹೆರಾಲ್ಡ್ ಇಗ್ನೇಷಿಯಸ್ ಪೌಲೋಸ್ ಮಂಜೂರನ್ (Mr. Herald Ignatius Poulose Manjooran) ಹಾಗೂ ಶ್ರೀಮತಿ ಬ್ಲೆಸ್ಸಿ ಇಗ್ನೇಷಿಯಸ್ ಮಂಜೂರನ್ (Mrs. Blessy Ignatius Manjooran) ರವರು, (ವಿಳಾಸ : 155 ಬ್ರೇಮೋರ್ ಸಿಟ್, ಇನ್ವರ್ನೆಸ್, ಐ.ಎಲ್. 60010, ಯು.ಎಸ್.ಎ – presently residing at 155, Braymore Ct. Inverness, IL 60010, USA) ಈ ಕೆಳಕಂಡ ಆಸ್ತಿಗೆ ಮಾಲೀಕರಾಗಿರುತ್ತಾರೆ. ಇವರು ತಮ್ಮ ಜಿಪಿಎ ಹೋಲ್ಡರ್ ಮುಖಾಂತರ ಮುಖಾಂತರ ನಮ್ಮ ಕಕ್ಷಿಗಾರರಾದ ಶ್ರೀ ರಮೇಶ್ ಸತ್ಯನಾರಾಯಣ (Mr. Ramesh Sathyanarayana) ಹಾಗೂ ಶ್ರೀಮತಿ ಸುಚಿತ್ರ ರಮೇಶ್ (Mrs. Suchitra Ramesh) ರವರ ಜೊತೆ ಖರೀದಿ ಕರಾರು ಪತ್ರ ಮಾಡಿಕೊಂಡಿದ್ದಾರೆ.

ಈ ಸಾರ್ವಜನಿಕ ತಿಳುವಳಿಕೆ ಪತ್ರದ ಮೂಲಕ ತಿಳಿಸುವುದೇನೆಂದರೆ ಆಸ್ತಿಯ ಮಾಲೀಕತ್ವದ ಬಗ್ಗೆ ವ್ಯವಹಾರ ಕಾರಣಗಳಿಗಾಗಿ ಮಾಲೀಕತ್ವದ ಹಕ್ಕಿನ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ತತ್ಸಂಬಂಧವಾಗಿ ಆಸ್ತಿಯ ಮೇಲೆ ಯಾರಾದರೂ ಪ್ರತಿಪಾದಿಸುತ್ತಿದ್ದರೆ ಅಥವಾ ಹಕ್ಕು ಹೊಂದಿದ್ದಲ್ಲಿ ಅಧಿಕೃತ ದಾಖಲೆಗಳೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಇಂದಿನಿಂದ 15 ದಿನಗಳ ಒಳಗೆ ತಕರಾರನ್ನು ಸಲ್ಲಿಸತಕ್ಕದ್ದು.

ಆಸ್ತಿಯ ವಿವರ/ಚಕ್ಕುಬಂದಿ

ವಿಲ್ಲ ನಂ.339, ಆದರ್ಶ್ ಪಾಮ್ ರಿಟ್ರೀಟ್ (Villa No. 339 - Adarsh Palm Retreat) ಸರ್ವೆ ನಂ.17/3, ದೇವರಬೀಸನಹಳ್ಳಿ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, (ಮಾಜಿ ಬೆಂಗಳೂರು ದಕ್ಷಿಣ ತಾಲ್ಲೂಕು), ಚಕ್ಕುಬಂದಿ:

ಪೂರ್ವ : ವಿಲ್ಲ ನಂ.334 ಮತ್ತು 345
ಪಶ್ಚಿಮ : ದಾರಿ / ರಸ್ತೆ
ಉತ್ತರ : ವಿಲ್ಲ ನಂ.340
ದಕ್ಷಿಣ : ವಿಲ್ಲ ನಂ.338

ಸ್ಥಳ : ಬೆಂಗಳೂರು
ದಿನಾಂಕ : 17.02.2021

ಜಿ.ವಿ. ಚಂದ್ರಶೇಖರ್ ಮತ್ತು ಅಪೇಕ್ಷ. ಡಿ
ವಕೀಲರು
#16, 2ನೇ ಮಹಡಿ, ಸರ್ವಭೂಷಣ ಶಿವಯೋಗಿಗಳ ಮಠದ ಬಿಲ್ಡಿಂಗ್ ಟ್ಯಾಂಕ್ ಬಂಡ್ ರಸ್ತೆ ಕೆಂಪೇಗೌಡ ಸರ್ಕಲ್ ಮೆಜೆಸ್ಟಿಕ್ ಬೆಂಗಳೂರು 560 009
ಮೊಬೈಲ್ : 93124 39932 / 99166 02087
Email: gvcapkadvocates@gmail.com

ವ್ಯಾಪಾರ

Business to Business

Finance

BEST FINANCIAL Deals !!! MSME, Agriculture, Property, Business, Personal,Takeover, Purchase,Home Loans,5 Lakhs to 5 Cr, Farmers / NPA/ CIBIL Cases Welcome. 7814273476

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು/ ಎನ್.ಪಿ.ಎ/ ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 96257-68775.

Business Offers

Distributors

Global Lubricants & Marketing Services seeking for DISTRIBUTORS
We are looking for a distributor to market a well established Zoomer Brand Lubricants
Interested individual can contact us at 8296109156, 9844792040 080-23456641
Timings from 9.30 am to 5 pm

ಭವಿಷ್ಯ

Astrology

★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರಿಪುರುಷ ಪ್ರೇಮ,ಸಂತಾನ,ವಿವಾಹ, ಶತ್ರುದೋಷ,ಸಾಲಭಾದೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

★॥(ಉಚಿತ ಭವಿಷ್ಯ)॥★ ಶ್ರೀಬನಶಂಕರಿದೇವಿ ಜ್ಯೋತಿಷ್ಯಾಲಯ ರಾಘವೇಂದ್ರಭಟ್ ವ್ಯಾಪಾರ, ಹಣಕಾಸು,ಪ್ರೇಮ ವಿಚಾರ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಕ್ಷಣಮಾತ್ರದಲ್ಲಿ ಪರಿಹಾರ. 8105852273

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರಿಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷೀತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 9ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಸಮಾಜಸೇವೆ

Old Age Home

ಶುಭೋದಯ ವೃದ್ರಾಶ್ರಮದಲ್ಲಿ ಉಳಿದುಕೊಳ್ಳಲು ಇಚ್ಚಿಸುವವರಿಗೆ ಊಟ, ದಾದಿಯರಸೇವೆ, ಆರೋಗ್ಯ ತಪಾಸಣೆ, ಆಂಬುಲೆನ್ಸ್, ಮನರಂಜನೆ, ಇತ್ಯಾದಿಗಳಿಗೆ ತಿಂಗಳಿಗೆ 8000/. ಬೆಂಗಳೂರು. 9008954752/ 8296397475.

Others

ಪಾರಂಪರಿಕ ವೈದ್ಯ ಪದ್ಧತಿ ಹಾಗೂ ನಾಟಿ ಆಯುರ್ವೇದ ಅದ್ಭುತ ಪ್ರಾವೀಣ್ಯತೆ ಪಡೆದ ವೈದ್ಯರುಗಳ ಕಿರುಪುಸ್ತಕ ಪ್ರಕಟಿಸುತ್ತೇವೆ ನೊಂದಾಯಿಸುವವರು ಸಂಪರ್ಕಿಸಿ: 8892501007/ 9606701007

ವಾಹನ

Four Wheelers Selling

Others

ನಿಮ್ಮ ಕುಟುಂಬದ ಅಭಿವೃದ್ಧಿಗೆ ಟಾಟಾ V-30 ತಂದಿದೆ ಕೊಡುಗೆಗಳ ಮೆರಗು
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

52 kW ಇಂಜಿನ್
₹32,000/–* ದವರೆಗೆ ಗ್ರಾಹಕರ ಕೊಡುಗೆಗಳು
Intra V-30 A/C ಮಾದರಿಯಲ್ಲೂ ಲಭ್ಯ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95384 14448
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

ಪ್ರವಾಸ

Travel

ದೆಹಲಿ, ಅಮೃತಸರ್, ವೈಷ್ಣೋದೇವಿ, ಕುಲು,ಮನಾಲಿ 15.04.2021 ರಿಂದ 16 ದಿನಗಳು. ಅಷ್ಟ ಜ್ಯೋತಿರ್ಲಿಂಗಗಳು ಮಾತೃಗಯಾ, ಸೋಮನಾಥ್, ದ್ವಾರಕಾ 17.04.2021 ರಿಂದ 18 ದಿನಗಳು. ದೆಹಲಿ, ಕಾಶಿ,ಗಯಾ, ಆಗ್ರಾ,ಮಥುರ, ಹರಿದ್ವಾರ್ 22.04.2021 ರಿಂದ 16 ದಿನಗಳು. ದೆಹಲಿ, ಯುಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್, ಕಾಶಿ,ಗಯಾ 07.05.2021, 13.05.2021 ರಿಂದ 20/24 ದಿನಗಳು. ಸಂಪರ್ಕಿಸಿ: 26508925, 26674860 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ, ಬೆಂಗಳೂರು-18

27-02-2021 ಮೋಕ್ಷರಂಗ, ವಿದುರಾಶ್ವತ, ನಂದಿಬೆಟ್ಟ, 10-03-2021, ಶಿವರಾತ್ರಿ ಪ್ರಯುಕ್ತ ಕಾಶಿ, ಮಹಾಕಾಳೇಶ್ವರ.23-03-2021 ಕಾಶಿ, ಪ್ರಯಾಗ್ ರಾಜ್ 5500/-ಅನುಗ್ರಹಯಾತ್ರ. 9880079351

ಶ್ರೀ ರಾಜರಾಜೇಶ್ವರಿ ಟೂರ್ಸ್ ಅಂಡ್ ಯಾತ್ರಾ 9743895346, 9739618243, ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆ. 13.3.2021. 11ದಿನಗಳ ಪೂರಿ ಜಗನ್ನಾಥ್, ಭುವನೇಶ್ವರ್, ಗಯಾ, ವಾರಣಾಸಿ, ಕಾಶಿ, ತ್ರಿವೇಣಿಸಂಗಮ, ಅಯೋಧ್ಯಾ.02.04.2021, 7 ದಿನಗಳ ಕೇರಳ ಪ್ರವಾಸ. 21.05.2021, 14ದಿನಗಳ ಚಾರ್ ಧಾಮ್ ಪ್ರವಾಸ ತ್ರಿಯೋಗಿನಾರಾಯಣ ಶಿವಪಾರ್ವತಿ ಮದುವೆಯಾದ ಸ್ಥಳ, ಉಕ್ಕಿಮಠ, ಇಂಡಿಯಾ ಲಾಸ್ಟ್ -ವಿಲೇಜ್ ಮಾನ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರಜಾವಾಣಿ ಕ್ಲಾಸಿಫೈಡ್ಸ್

ರಿಯಲ್ ಎಸ್ಟೇಟ್
BOOK YOUR PROPERTY AD IN PRAJAVANI ALL KARNATAKA ON FRIDAY + SATURDAY + SUNDAY
@1800/-* FOR 15 WORDS
condition apply*
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9880856233 | 9731810277
9901641752 | 9845114560 | 9886213331
080- 45557163 | 45557164

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಶಂಕರನಾರಾಯಣ, ಜೆ.ಪಿ. ನಗರ, ಬೆಂಗಳೂರು

- **ಪ್ರಶ್ನೆ: ನಾನು ಬೆಂಗಳೂರಿನ ಬಾಷ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸದ್ಯ ನಮ್ಮ ಕಂಪನಿಯವರು ವಿಆರ್‌ಎಸ್ ಘೋಷಿಸಿದ್ದು, ಬಹಳಷ್ಟು ನೌಕರರು ವಿಆರ್‌ಎಸ್ ತೆಗೆದುಕೊಳ್ಳುತ್ತಿದ್ದಾರೆ. ನಾನು ಕೂಡ ಅರ್ಜಿ ಸಲ್ಲಿಸಿದ್ದೇನೆ. ನನಗೆ ₹ 60 ಲಕ್ಷ ಬರಬಹುದು. ತೆರಿಗೆ ಉಳಿಸಲು ಕಂಟಕರಹಿತ ಹೂಡಿಕೆ ವಿಚಾರದಲ್ಲಿ ಮಾರ್ಗದರ್ಶನ ಮಾಡಿ.**

ಉತ್ತರ: ನಿಮ್ಮ ವಯಸ್ಸು, ಕುಟುಂಬದ ವಿವರ, ಸ್ವಂತಮನೆ ಅಥವಾ ಬಾಡಿಗೆ ಮನೆ, ಮಕ್ಕಳು, ತುರ್ತಾಗಿ ಮಾಡಬೇಕಾದ ಖರ್ಚು ಹಾಗೂ ವಿಆರ್‌ಎಸ್ ಪಡೆಯುವ ಉದ್ದೇಶ ತಿಳಿಸಿಲ್ಲ. ಈ ಎಲ್ಲ ಮಾಹಿತಿ ಇಲ್ಲದೆ ತಮಗೆ ಸರಿಯಾದ ಮಾರ್ಗದರ್ಶನ ಮಾಡುವುದು ಕಷ್ಟ. ನೀವು ಪಡೆಯುವ ಈ ಮೊತ್ತಕ್ಕೆ ಸರಿಯಾದ ಭದ್ರತೆ ಹಾಗೂ ಖಚಿತವಾದ ವರಮಾನ ಇರುವ ಹೂಡಿಕೆ ಅವಶ್ಯವಿದೆ. ಬರುವ ಹಣದಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಹೀಗೆ ಮುರು ಹೂಡಿಕೆ ಮಾಡಬಹುದು. ಮುಖ್ಯವಾಗಿ ವಿಆರ್‌ಎಸ್ ಪಡೆಯುವ ಮುನ್ನ ನಿಮ್ಮ ಹೆಂಡತಿ, ಮಕ್ಕಳನ್ನು ವಿಚಾರಿಸಿಕೊಳ್ಳಿ. ಅವರ ಸಲಹೆ ಅಗತ್ಯ. ಮೇಲಿನಂತೆ ತಮಗೆ ಸಂಪೂರ್ಣ ಹೂಡಿಕೆ ವಿವರಣೆ ನೀಡಲು, ಎಲ್ಲಾ ಮಾಹಿತಿ ಕಳುಹಿಸಿರಿ ಅಥವಾ ನೇರವಾಗಿ ಸಂಪರ್ಕಿಸಿರಿ.

ರಾಮೇಗೌಡ, ಮಂಡ್ಯ

- **ಪ್ರಶ್ನೆ: ನನ್ನ ಪ್ರಶ್ನೆ ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನ ಕುರಿತಾಗಿದೆ. ನನ್ನ ವಯಸ್ಸು 79 ವರ್ಷ. ನನ್ನ ಪಿಂಚಣಿ ಹಾಗೂ ಬಡ್ಡಿ ಆದಾಯ ವಾರ್ಷಿಕ ₹ 8.20 ಲಕ್ಷ. ನಾನು ಆದಾಯ ತೆರಿಗೆ ವಿನಾಯಿತಿ ಪಡೆಯಬಹುದೇ? ಹಾಗೂ ಐ.ಟಿ. ರಿಟರ್ನ್ಸ್ ಸಲ್ಲಿಸುವ ಅವಶ್ಯವಿಲ್ಲವೇ? 75 ವರ್ಷ ದಾಟಿದವರಿಗೆ ಆದಾಯ ತೆರಿಗೆ ಬರುವುದಿಲ್ಲ ಹಾಗೂ ರಿಟರ್ನ್ಸ್ ತುಂಬುವ ಅವಶ್ಯವಿಲ್ಲ ಎಂದು ಕೇಳಿದ್ದೇನೆ. ನನ್ನ ಹಾಗೆ ಹಲವರಿಗೆ ಈ ವಿಚಾರದಲ್ಲಿ ಗೊಂದಲವಿದೆ.**

ಉತ್ತರ: ಇದೇ ವಿಚಾರದಲ್ಲಿ ನನಗೆ ಹಲವರು ದೂರವಾಣಿ ಕರೆ ಮಾಡುತ್ತಿದ್ದಾರೆ. 75 ವರ್ಷ ದಾಟಿದ, ಪಿಂಚಣಿ ಹಾಗೂ ಬಡ್ಡಿ ಪಡೆಯುವ ವ್ಯಕ್ತಿಗಳು ಆದಾಯ ತೆರಿಗೆಯಿಂದ ಮುಕ್ತರಾಗಿದ್ದಾರೆ ಎನ್ನುವ ಮಾತು ಸತ್ಯಕ್ಕೆ ದೂರ. ತಾ 1-2-2021ರಂದು ಮಂಡಿಸಿದ ಬಜೆಟ್‌ನಲ್ಲಿ ಯಾವ ವಯಸ್ಸಿನವರಿಗೂ ಆದಾಯ ತೆರಿಗೆಯಲ್ಲಿ ಸಂಪೂರ್ಣ ವಿನಾಯಿತಿ ಕೊಟ್ಟಿಲ್ಲ. ನೀವು ಆದಾಯ ತೆರಿಗೆಗೆ ಒಳಗಾಗುತ್ತೀರಿ. 75 ವರ್ಷ ದಾಟಿದ ನಿಮ್ಮಂತಹ ಹಿರಿಯ ನಾಗರಿಕರು ಪಿಂಚಣಿ ಹಾಗೂ ಬಡ್ಡಿ ಆದಾಯ, ಇವೆರಡೇ ಆದಾಯ ಪಡೆಯುತ್ತಿದ್ದಲ್ಲಿ ಆದಾಯ ತೆರಿಗೆ ಸಲ್ಲಿಸುವ ಅವಶ್ಯಕತೆ ಇಲ್ಲವಾದರೂ ಸರ್ಕಾರ ನಿಗದಿ ಪಡಿಸಿದ ಒಂದೇ ಬ್ಯಾಂಕ್‌ನಲ್ಲಿ ತಮ್ಮ ಖಾತೆ ಹೊಂದಬೇಕು ಹಾಗೂ ಎಲ್ಲಾ ಹಣದ ವ್ಯವಹಾರ ಅಲ್ಲಿಯೇ ಮಾಡಬೇಕು. ಹೀಗೆ ಖಾತೆ ಹೊಂದಿದ ಬ್ಯಾಂಕ್, ಖಾತೆದಾರರ ಆದಾಯಕ್ಕೆ ಲೆಕ್ಕ ಹಾಕಿ ಕಾನೂನಿನಂತೆ ತೆರಿಗೆ ಮುರಿದು (ಟಿಡಿಎಸ್) ಆದಾಯ ತೆರಿಗೆ ಇಲಾಖೆಗೆ ರವಾನಿಸಬೇಕು. ಸಾಮಾನ್ಯವಾಗಿ ಎಲ್ಲಾ ವ್ಯಕ್ತಿಗಳು ಒಂದಕ್ಕಿಂತ ಹೆಚ್ಚಿನ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುತ್ತಾರೆ. ನಿಮ್ಮ ಗೊಂದಲ ನಿವಾರಣೆ ಆಗಿದೆ ಎಂದು ಭಾವಿಸುತ್ತೇನೆ.

ರಾಚಪ್ಪ ಉದನೂರು, ವಿಜಯಪುರ

- **ಪ್ರಶ್ನೆ: ನಾನು ಮಾಜಿ ಸೈನಿಕ. ನನಗೆ ತಿಂಗಳಿಗೆ ₹ 26,590 ಪಿಂಚಣಿ ಬರುತ್ತದೆ. ನಿವೃತ್ತಿಯ ನಂತರ ಅಂಚೆ ಕಚೇರಿಯಲ್ಲಿ ಕೆಲಸ ಸಿಕ್ಕಿದೆ. ತಿಂಗಳಿಗೆ ₹ 41,380 ಸಂಬಳ ಬರುತ್ತಿದೆ. ಮಾಜಿ ಸೈನಿಕನಾಗಿ ನಾನು ಪಡೆಯುವ ಪಿಂಚಣಿಯನ್ನು ಈಗ ಅಂಚೆ ಕಚೇರಿಯಲ್ಲಿ ಪಡೆಯುವ ಸಂಬಳಕ್ಕೆ ಸೇರಿಸದೆ ತೆರಿಗೆ ಕೊಡಬಹುದೇ ತಿಳಿಸಿ.**

ಉತ್ತರ: ನೀವು ಮಾಜಿ ಸೈನಿಕರಾಗಿ ಹಾಗೂ ಅಂಚೆ ಕಚೇರಿ ನೌಕರರಾಗಿ ಪಿಂಚಣಿ ಸಂಬಳದಿಂದ ಒಟ್ಟಾರೆ ತಿಂಗಳಿಗೆ ₹ 67,970 ಸಂಭಾವನೆ ಪಡೆಯುತ್ತಿದ್ದೀರಿ. ಇದರಿಂದಾಗಿ ನಿಮ್ಮ ವಾರ್ಷಿಕ ಒಟ್ಟು ಆದಾಯ ₹ 8,15,640 ಆಗಿರುತ್ತದೆ.

ಈ ಸಂಪೂರ್ಣ ಆದಾಯಕ್ಕೆ ನೀವು ತೆರಿಗೆ ಕೊಡಬೇಕಾಗುತ್ತದೆ. ಇದೇ ವೇಳೆ ಸೆಕ್ಷನ್ 16 (I) ಸ್ಟ್ಯಾಂಡರ್ಡ್ ಡಿಡಕ್ಷನ್ ನಿಂದ ₹ 50 ಸಾವಿರ, ಸೆಕ್ಷನ್ 80ಸಿ ಅಡಿಯಲ್ಲಿ ಹಣ ತೊಡಗಿಸಿದ್ದರೆ ಗರಿಷ್ಠ ₹ 1.50 ಲಕ್ಷ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಮಾಜಿ ಸೈನಿಕರು ಪಡೆಯುವ ಪಿಂಚಣಿ ತೆರಿಗೆ ಮುಕ್ತವಾಗಿಲ್ಲ. ಆದರೆ ಮಾಜಿ ಸೈನಿಕರಲ್ಲಿ ಪರಮವೀರ ಚಕ್ರ, ಮಹಾವೀರ ಚಕ್ರ ಅಥವಾ ಪರಾಕ್ರಮದಿಂದ ಪಡೆದ ಪ್ರಶಸ್ತಿಗಳಿದ್ದಲ್ಲಿ ಸೆಕ್ಷನ್ 10 (18) ಆಧಾರದ ಮೇಲೆ ಅಂತಹ ವ್ಯಕ್ತಿಗಳು ಪಡೆಯುವ ಪಿಂಚಣಿಗೆ ತೆರಿಗೆ ವಿನಾಯಿತಿ ಇದೆ. ನಿಮ್ಮ ವಿಚಾರದಲ್ಲಿ ನೀವು ಪಡೆಯುವ ಪಿಂಚಣಿಗೆ ತೆರಿಗೆ ವಿನಾಯಿತಿ ಇರುವುದಿಲ್ಲ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-56001. ಇ-ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	10000-22500
ಹೊಸತು	23500-42500
ಹಳತು	42500-51000
ಬೆಳ್ತಂಗಡಿ	
ಕೋಕ	17000-30000
ಹೊಸತು	21900-41500
ಹಳತು	37840-50500
ಪುತ್ತೂರು	
ಕೋಕ	9500-24000
ಹೊಸತು	29000-42500
ಸಿದ್ದಾಪುರ	
ಬಿಳಿಗೋಟು	22899-31709
ಕೋಕ	21231-31599
ಹಳೆಚಾಲಿ	36899-41933
ಹೊಸಚಾಲಿ	35089-38599
ಕೆಂಪುಗೋಟು	24080-31299
ರಾಶಿ	41177-44209
ತಟ್ಟಿಬೆಟ್ಟೆ	31899-43319
ಶಿರಸಿ	
ಬೆಟ್ಟೆ	23899-42669
ಬಿಳಿಗೋಟು	18099-34109
ಚಾಲಿ	27899-41039
ರಾಶಿ	36919-45200
ಸುಳ್ಯ	
ಕೋಕ	10000-23000
ಹೊಸತು	23000-41500
ಯಲ್ಲಾಪುರ	
ಬಿಳಿಗೋಟು	23212-32379
ಚಾಲಿ	32612-41696
ಕೋಕ	22099-30061
ಕೆಂಪುಗೋಟು	27199-34899
ರಾಶಿ	39900-46811
ತಟ್ಟಿಬೆಟ್ಟೆ	35802-39800
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	345-426
ದ್ವಿತಳಿ (ಬಿ.ವಿ)	322-531

ಪಿ.ಎಫ್. ಬಡ್ಡಿ: ಮಾ. 4ರಂದು ಘೋಷಣೆ?

ನವದೆಹಲಿ (ಪಿಟಿಐ): ನೌಕರರ ಭವಿಷ್ಯನಿಧಿ ಸಂಘಟನೆಯು (ಇಪಿಎಫ್‌ಒ) ಪಿ.ಎಫ್. ಠೇವಣಿಗಳಿಗೆ 2020–21ನೇ ಸಾಲಿಗೆ ನೀಡುವ ಬಡ್ಡಿ ದರ ಎಷ್ಟಿರಬೇಕು ಎಂಬುದನ್ನು ಮಾರ್ಚ್ 4ರಂದು ಪ್ರಕಟಿಸುವ ಸಾಧ್ಯತೆ ಇದೆ.

ಸಂಘಟನೆಯ ಧರ್ಮದರ್ಶಿಗಳ ಸಭೆಯು ಮಾ. 4ರಂದು ಶ್ರೀನಗರದಲ್ಲಿ ನಡೆಯಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,315
ಇಂದಿನ ಅಂತ್ಯ	15,313
▼	2
ದಿನದ ಗರಿಷ್ಠ	15,242

ವಿನಿಮಯ ದರ

$ ಡಾಲರ್	72.69
£ ಪೌಂಡ್	101.26
€ ಯುರೊ	88.35
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹473

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1450 (1450)
ಸೋಯಾ (ರಿಫೈನ್ಡ್)	₹1145 (1140)
ಸೂರ್ಯಕಾಂತಿ (ರಿಫೈನ್ಡ್)	₹1390 (1395)
ಪಾಮೋಲಿನ್	₹1118 (1117)

ತಿದ್ದುಪಡಿ ಮಸೂದೆ ಈ ವರ್ಷವೇ ಮಂಡನೆ ಸಾಧ್ಯತೆ

ಬ್ಯಾಂಕ್ ಖಾಸಗೀಕರಣ: 2 ಕಾಯ್ದೆಗಳಿಗೆ ತಿದ್ದುಪಡಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಎರಡು ಕಾಯ್ದೆಗಳಿಗೆ ತಿದ್ದುಪಡಿ ತರುವ ಸಾಧ್ಯತೆ ಇದೆ. ತಿದ್ದುಪಡಿ ತರುವ ಪ್ರಕ್ರಿಯೆಯು ವರ್ಷದ ಕೊನೆಯಲ್ಲಿ ಆಗುವ ನಿರೀಕ್ಷೆ ಇದೆ.

ಬ್ಯಾಂಕಿಂಗ್ ಕಂಪನಿಗಳ ಕಾಯ್ದೆ 1970 ಹಾಗೂ ಬ್ಯಾಂಕಿಂಗ್ ಕಂಪನಿಗಳ ಕಾಯ್ದೆ 1980ಕ್ಕೆ ತಿದ್ದುಪಡಿ ತರುವ ಅಗತ್ಯ ಇದೆ ಎಂದು ಮೂಲಗಳು ತಿಳಿಸಿವೆ.

ಈ ಎರಡು ಕಾಯ್ದೆಗಳ ಮೂಲಕ ಬ್ಯಾಂಕ್‌ಗಳ ರಾಷ್ಟ್ರೀಕರಣವನ್ನು ಎರಡು ಹಂತಗಳಲ್ಲಿ ಜಾರಿಗೆ ತರಲಾಗಿತ್ತು. ಹೀಗಾಗಿ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ಈ ಕಾಯ್ದೆಗಳ ಕೆಲವು ಅಂಶಗಳಿಗೆ ತಿದ್ದುಪಡಿ ತರಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಿದ್ದುಪಡಿ ಮಸೂದೆಗಳನ್ನು ಕೇಂದ್ರ ಸರ್ಕಾರವು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಅಥವಾ ಅದರ ನಂತರದ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ.

ಫೆಬ್ರುವರಿ 1ರಂದು ಬಜೆಟ್ ಮಂಡಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಖಾಸಗೀಕರಣದ ಘೋಷಣೆ ಮಾಡಿದ್ದಾರೆ. ಸರ್ಕಾರದ ಕೆಲವು ಕಂಪನಿಗಳನ್ನು, ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರುವ ಮೂಲಕ ಒಟ್ಟು ₹ 1.75 ಲಕ್ಷ ಕೋಟಿ ಆದಾಯ ಸಂಗ್ರಹಿಸುವ ಗುರಿಯ ಭಾಗವಾಗಿ ಬ್ಯಾಂಕ್‌ಗಳ ಖಾಸಗೀಕರಣ ನಡೆಯಲಿದೆ.

ಚೇತರಿಕೆ ಹಾದಿಯಲ್ಲಿ ಆರ್ಥಿಕತೆ: ಎಸ್‌ಆ್ಯಂಡ್‌ಪಿ

ನವದೆಹಲಿ (ಪಿಟಿಐ): ಭಾರತದ ಆರ್ಥಿಕತೆಯು ಏಪ್ರಿಲ್ 1ರಿಂದ ಆರಂಭವಾಗಲಿರುವ ಹಣಕಾಸು ವರ್ಷದಲ್ಲಿ ಚೇತರಿಕೆಯ ಹಾದಿಗೆ ಬರಲಿದೆ ಎಂದು ಜಾಗತಿಕ ರೇಟಿಂಗ್ಸ್ ಸಂಸ್ಥೆ ಎಸ್‌ಆ್ಯಂಡ್‌ಪಿ ಮಂಗಳವಾರ ಹೇಳಿದೆ.

ಕೃಷಿ ವಲಯದ ಉತ್ತಮ ಬೆಳವಣಿಗೆ, ಕೋವಿಡ್–19 ಪ್ರಕರಣಗಳು ಕಡಿಮೆಯಾಗುತ್ತಿರುವುದು ಹಾಗೂ ಸರ್ಕಾರದ ವೆಚ್ಚಗಳಲ್ಲಿ ಏರಿಕೆ ಆಗುತ್ತಿರುವುದರಿಂದ ಆರ್ಥಿಕ ಚೇತರಿಕೆಗೆ ಬಲ ಸಿಗುತ್ತಿದೆ ಎಂದು ಅದು ವಿವರಿಸಿದೆ.

ಈ ಚೇತರಿಕೆಯು ಇದೇ ರೀತಿ ಮುಂದುವರಿಯಲು ಹಲವು ಅಂಶಗಳ ಬೆಂಬಲದ ಅಗತ್ಯವಿದೆ. ಅದರಲ್ಲಿಯೂ ಮುಖ್ಯವಾಗಿ 136 ಕೋಟಿ ಜನರಿಗೆ ಕೋವಿಡ್–19 ಲಸಿಕೆಯನ್ನು ತ್ವರಿತವಾಗಿ ನೀಡಬೇಕಿದೆ ಎಂದು ಹೇಳಿದೆ.

2021-22ನೇ ಹಣಕಾಸು ವರ್ಷದ ಬಜೆಟ್‌ನಲ್ಲಿ ನಿರೀಕ್ಷೆಗಿಂತಲೂ ಅಧಿಕ ವೆಚ್ಚ ಮಾಡುವುದಾಗಿ ಸರ್ಕಾರ ಘೋಷಿಸಿದೆ. ಇದು ಆರ್ಥಿಕ ಚೇತರಿಕೆಗೆ ಬಲ ನೀಡಲಿದೆ. ಭಾರತವು, ಸಾಂಕ್ರಾಮಿಕ ಪೂರ್ವದ ಸ್ಥಿತಿಗೆ ಹೋಲಿಸಿದರೆ, ಜಿಡಿಪಿಯ ಶೇ 10ಕ್ಕೆ ಸಮನಾದ ದೀರ್ಘಕಾಲೀನ ಉತ್ಪಾದನಾ ಕೊರತೆಯನ್ನು ಎದುರಿಸಲಿದೆ.

ಬ್ಯಾಂಕಿಂಗ್ ವಲಯದ ವಸೂಲಾಗದ ಸಾಲದ ಪ್ರಮಾಣವು ಒಟ್ಟಾರೆ ಸಾಲದ ಶೇ 12ರಷ್ಟಿದೆ. ಆರ್ಥಿಕತೆಯು ವೇಗವಾಗಿ ಚೇತರಿಕೆ ಕಾಣುತ್ತಿರುವುದು ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಭಾರತ ಸರ್ಕಾರ ಕೈಗೊಂಡ ಕ್ರಮಗಳಿಂದಾಗಿ ಬ್ಯಾಂಕ್‌ಗಳ ಹಣಕಾಸಿನ ಸ್ಥಿತಿಯ ಮೇಲಿನ ಒತ್ತಡ ಕಡಿಮೆ ಆಗಲಿದೆ.

2020ರ ಆರ್ಥಿಕ ವರ್ಷದಲ್ಲಿ ಜಿಡಿಪಿ ಶೇ 10ರಷ್ಟು ಚೇತರಿಕೆ ಕಾಣಲಿದ್ದು, ದೇಶದ ಬ್ಯಾಂಕಿಂಗ್ ವ್ಯವಸ್ಥೆಯು 2023ನೇ ಹಣಕಾಸು ವರ್ಷದಲ್ಲಿ ಸುಧಾರಣೆ ಕಂಡುಕೊಳ್ಳಲು ಆರಂಭಿಸುವ ಸಾಧ್ಯತೆ ಇದೆ ಎಂದು ಎಸ್‌ಆ್ಯಂಡ್‌ಪಿ ಹೇಳಿದೆ.

ಇಂಧನ ದರ ಏರಿಕೆ

ಬೆಂಗಳೂರು: ಪೆಟ್ರೋಲ್ ಬೆಲೆ ಮಂಗಳವಾರ 31 ಪೈಸೆ ಹೆಚ್ಚಾಗಿ, ಲೀಟರ್‌ಗೆ ₹ 92.28ರಂತೆ ಮಾರಾಟವಾಗಿದೆ. ಡೀಸೆಲ್ 37 ಪೈಸೆ ಹೆಚ್ಚಾಗಿ, ₹ 84.49ರಂತೆ ಮಾರಾಟವಾಗಿದೆ.

ಮುಂಬೈ ಧಾರಣೆ

ಶೇಂಗಾ 16-2-2021

ಜಾವಾ 70/80(ಹೊಸ)	10850-10900
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1460)
ಒಂದು ವಾರದ ಡೆಲಿವರಿ	1455 (1455)
ಸೋಯಾ ಕಚ್ಚಾ	1103 (1100)
ಪಾಮ್ ವಾರದ ಡೆಲಿವರಿ	1116 (1115)
ಸೂರ್ಯಕಾಂತಿ ಎಣ್ಣೆ ಕಚ್ಚಾ	1360 (1360)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,600 (47,050)
ಬೆಳ್ಳಿ ಕೆ.ಜಿ
69,000 (69,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಿಥುನ್ ಚಕ್ರವರ್ತಿ ಮುಂಬೈ ನಿವಾಸಕ್ಕೆ ಭಾಗವತ್ ಭೇಟಿ

ಪ್ರಜಾವಾಣಿ ವಾರ್ತೆ

ಮುಂಬೈ: ಪಶ್ಚಿಮ ಬಂಗಾಳ ಚುನಾವಣೆ ಸಮೀಪಿಸುತ್ತಿರುವ ಹೊತ್ತಿನಲ್ಲೇ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಖ್ಯಾತ ಬಾಲಿವುಡ್ ನಟ ಮಿಥುನ್ ಚಕ್ರವರ್ತಿ ಅವರ ನಿವಾಸಕ್ಕೆ ಭೇಟಿ ನೀಡಿದ್ದಾರೆ.

ಸುಮಾರು 2 ಗಂಟೆ ಕಾಲ ಭಾಗವತ್ ಅವರು ಮಿಥುನ್ ನಿವಾಸದಲ್ಲಿದ್ದು, ಮಾತುಕತೆ ನಡೆಸಿದ್ದಾರೆ. ಈ ವೇಳೆ ಮಿಥುನ್ ಅವರ ಕುಟುಂಬದವರೂ ಹಾಜರಿದ್ದರು.

ಮಿಥುನ್ ಅವರಿಗೆ ಪಶ್ಚಿಮ ಬಂಗಾಳದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಅನುಯಾಯಿಗಳಿದ್ದಾರೆ. ಅವರು 3 ವರ್ಷಗಳ ಹಿಂದೆ ಆರ್‌ಎಸ್‌ಎಸ್ ಮುಖ್ಯಸ್ಥರನ್ನು ಭೇಟಿಯಾಗಿದ್ದರು.

'ನನಗೆ ಮೋಹನ್ ಭಾಗವತ್ ಜತೆ ಆಧ್ಯಾತ್ಮಿಕ ಬಾಂಧವ್ಯವಿದೆ. ಲಖನೌನಲ್ಲಿ ಅವರನ್ನು ಭೇಟಿಯಾಗಿದ್ದೆ. ಮುಂಬೈಗೆ ಬಂದಾಗ ಮನೆಗೆ ಭೇಟಿ ನೀಡುವಂತೆ ಮನವಿ ಮಾಡಿದ್ದೆ' ಎಂದು ಭೇಟಿ ಕುರಿತು ಮಿಥುನ್ ಪ್ರತಿಕ್ರಿಯಿಸಿದ್ದಾರೆ.

'ಅವರು ನನ್ನ ಮನೆಗೆ ಬಂದಿದ್ದಾರೆ. ಆ ಬಗ್ಗೆ ಏನೇನೋ ಊಹಿಸಬೇಡಿ' ಎಂದೂ ಹೇಳಿದ್ದಾರೆ. ರಾಜ್ಯಸಭಾ ಸದಸ್ಯರೂ ಆಗಿದ್ದ ಮಿಥುನ್ ಅವರು ದೀರ್ಘ ಅವಧಿಯಿಂದ ಪಶ್ಚಿಮ ಬಂಗಾಳದ ಆಡಳಿತಾರೂಢ ತೃಣ ಮೂಲ ಕಾಂಗ್ರೆಸ್ ಜತೆ ನಿಕಟ ಬಾಂಧವ್ಯ ಹೊಂದಿದ್ದರು. 2016ರಲ್ಲಿ ಆರೋಗ್ಯ ಸಮಸ್ಯೆಯ ಕಾರಣ ನೀಡಿ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು.

ಸೂಕಿ ವಿರುದ್ಧ ಹೊಸ ಆರೋಪ

ಯಾಂಗೂನ್ (ಎಪಿ): 'ಮ್ಯಾನ್ಮಾರ್‌ನ ಉಚ್ಚಾಟಿತ ನಾಯಕಿ ಆಂಗ್ ಸಾನ್ ಸೂಕಿ ಅವರ ವಿರುದ್ಧ ಮ್ಯಾನ್ಮಾರ್‌ನ ಪೊಲೀಸರು ಹೊಸ ಆರೋಪವನ್ನು ಹೊರಿಸಿದ್ದು, ಇದು ಸೂಕಿ ಅವರನ್ನು ವಿಚಾರಣೆಯಿಲ್ಲದೆ ಅನಿರ್ದಿಷ್ಟಾವಧಿಯವರೆಗೆ ಬಂಧಿಸಲು ಅನುವು ಮಾಡಿಕೊಡುತ್ತದೆ' ಎಂದು ಸೂಕಿ ಪರ ವಕೀಲ ಮಂಗಳವಾರ ಹೇಳಿದ್ದಾರೆ.

'ಕೊರೊನಾ ವೈರಸ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಬಳಸಲಾಗುವ ನೈಸರ್ಗಿಕ ವಿಪತ್ತು ನಿರ್ವಹಣಾ ಕಾನೂನಿನ 25ನೇ ವಿಧಿಯನ್ನು ಉಲ್ಲಂಘಿಸಿದ ಆರೋಪ ಸೂಕಿ ವಿರುದ್ಧ ಹೊರಿಸಲಾಗಿದೆ' ಎಂದು ಸೂಕಿ ಪರ ವಕೀಲ ಖಿನ್ ಮಾಂಗ್ ಜಾವ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಇದಕ್ಕೂ ಮುನ್ನ ಅವರು ನಾಯ್ಪಿಟಾವ್‌ನಲ್ಲಿ ನ್ಯಾಯಾಧೀಶರನ್ನು ಭೇಟಿಯಾದರು.

ಸೂಕಿ

ನೈಸರ್ಗಿಕ ವಿಪತ್ತು ನಿರ್ವಹಣಾ ಕಾನೂನಿನ 25ನೇ ವಿಧಿಯ ಪ್ರಕಾರ ಸೂಕಿ ಅವರಿಗೆ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ಈ ಶಿಕ್ಷೆಯನ್ನು ಯಾವುದೇ ವಿಚಾರಣೆ ಇಲ್ಲದೆಯೇ ವಿಧಿಸಬಹುದಾಗಿದೆ. ಫೆ. 1ರಂದು ಸೂಕಿ ಅವರನ್ನು ಉಚ್ಚಾಟಿಸುವ ಮುನ್ನ ಅವರ ವಿರುದ್ಧ ನೋಂದಣಿ ಮಾಡದಿರುವ ವಾಕಿಟಾಕಿ ಬಳಸುತ್ತಿರುವ ಆರೋಪ ಹೊರಿಸಲಾಗಿತ್ತು.

ಮೇ.18ರಿಂದ ಬದರೀನಾಥನ ದರ್ಶನ

ಡೆಹ್ರಾಡೂನ್ (ಪಿಟಿಐ): ಚಳಿಗಾಲದ ವಿರಾಮದ ಬಳಿಕ ಬದರೀನಾಥ ದೇವಾಲಯದ ದ್ವಾರಗಳನ್ನು ಮೇ 18ರಂದು ಭಕ್ತಾದಿಗಳಿಗಾಗಿ ತೆರೆಯಲಾಗುವುದು.

'ಉತ್ತರಾಖಂಡ ಚಮೋಲಿ ಜಿಲ್ಲೆಯಲ್ಲಿರುವ ಬದರೀನಾಥ ದೇವಾಲಯವು ಚಳಿಗಾಲದ ಸಲುವಾಗಿ ಮುಚ್ಚಿದೆ. ಮೇ 18ರ ಬೆಳಿಗ್ಗೆ 4.15 ಕ್ಕೆ ದೇವಾಲಯದ ದ್ವಾರಗಳನ್ನು ತೆರೆಯಲಾಗುವುದು' ಎಂದು ಚಾರ್‌ಧಾಮ್ ದೇವಸ್ಥಾನಂ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಮಂಗಳವಾರ ತೆಹ್ರಿ ಮಹಾರಾಜರ ನರೇಂದ್ರ ಅರಮನೆಯಲ್ಲಿ ವಸಂತ ಪಂಚಮಿಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಈ ದಿನಾಂಕವನ್ನು ನಿಗದಿ ಮಾಡಲಾಗಿದೆ' ಎಂದು ಅವರು ಹೇಳಿದರು. ಕಳೆದ ವರ್ಷ ಕೊರೊನಾ ಸೋಂಕಿನ ಕಾರಣ ದೇವಸ್ಥಾನವನ್ನು ಪುನಃ ತೆರೆಯುವುದು ಇನ್ನಷ್ಟು ವಿಳಂಬವಾಗಿತ್ತು.

ಟೆನಿಸ್: ನಿಧಿ, ರಿಧಿಗೆ ಗೆಲುವು

ಬೆಂಗಳೂರು: ಸೋಲಿನ ಆತಂಕದಿಂದ ಹೊರಬಂದ ನಿಧಿ ಬುವಿಲಾ ಶ್ರೀನಿವಾಸ್ ಅವರು ಎಐಟಿಎ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ದಿಶಾ ಬೆಹರಾ ಎದುರು ಗೆಲುವಿನ ನಗೆ ಬೀರಿದರು. ಅಮೋಘ ಸ್ಪೋರ್ಟ್ಸ್ ಟೆನಿಸ್ ಅಕಾಡೆಮಿಯು ಇಲ್ಲಿಯ ಪ್ಯಾಲೇಸ್ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಮಂಗಳವಾರ 4–6, 7–6, 6–2ರಿಂದ ದಿಶಾ ಅವರಿಗೆ ಸೋಲುಣಿಸಿದರು.

ಬಾಲಕಿಯರ ವಿಭಾಗದ ಮೊದಲ ಸುತ್ತಿನ ಇತರ ಪಂದ್ಯಗಳಲ್ಲಿ ರಿಧಿ ಚೌಧರಿ 6–1, 6–3ರಿಂದ ನಿಕಾಂಶಿ ಚೌರಾಸಿಯಾ ಎದುರು, ಶ್ರೀ ತನ್ವಿ ದಾಸರಿ 6–3, 6–1ರಿಂದ ಏಕ್ಷಾ ರಾವ್ ವಿರುದ್ಧ, ವನ್ಯಾ ಶ್ರೀವಾಸ್ತವ್ 6-2, 6-1ರಿಂದ ಸಂಗೀತಾ ರಾಮನ್ ವಿರುದ್ಧ ಗೆಲುವು ಸಾಧಿಸಿದರು.

ಗಗನಾ ಮೋಹನ್ ಕುಮಾರ್ 6-0, 6-3ರಿಂದ ನಿಯಮಿಕಾ ಎದುರು, ಧರಣಿ ಧನ್ಯಂತ ಶ್ರೀನಿವಾಸ 7-5, 4-6, 6-2ರಿಂದ ಇಂಚರಾ ಹಿರೇಮಠ ವಿರುದ್ಧ, ಲಾವಣ್ಯ ತಿವಾರಿ 6-0, 6-3ರಿಂದ ಶ್ರೀಯಾ ಸಾಯಿ ಶ್ರೀನಿವಾಸ ಎದುರು, ಹರ್ಷಿಣಿ ನಾಗರಾಜ 6-1, 6-1 ಜಿನಾಹ್ ಅಂಬರ್ ಸಾಲಾರ್ ವಿರುದ್ಧ ಗೆಲುವಿನ ನಗೆ ಬೀರಿದರು.

ಬಾಲಕರ ಸಿಂಗಲ್ಸ್ ಹಣಾಹಣಿಗಳಲ್ಲಿ ಸೋಮ ಸುಹಾಸ್ 6-1, 6-7, 6-0ರಿಂದ ಅರಿಹಂತ್ ಕೌಲ್ಚ ಎದುರು, ರಕ್ಷಕ್ ತರುಣ್ 6-3, 6-3ರಿಂದ ರಾಮಧನುಷ್ ಆರ್ಯ ವಿರುದ್ಧ, ವಿಷ್ಣು ಬಾಲಚಂದ್ರ 6-1, 6-2ರಿಂದ ಕೇಸಿರೆಡ್ಡಿ ಮೋಹಿತ್ ಕೃಷ್ಣ ಎದುರು ಜಯ ಸಾಧಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ನಾಲ್ಕರ ಘಟ್ಟಕ್ಕೆ ನೊವಾಕ್ ಜೊಕೊವಿಚ್ ಲಗ್ಗೆ

ಸೆಮಿಯಲ್ಲಿ ಸೆರೆನಾ–ಒಸಾಕ ಪೈಪೋಟಿ

ಮೆಲ್ಬರ್ನ್ (ಎಪಿ/ರಾಯಿಟರ್ಸ್): ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಅಮೆರಿಕದ ಸೆರೆನಾ ವಿಲಿಯಮ್ಸ್ ಹಾಗೂ ಜಪಾನ್‌ನ ನವೊಮಿ ಒಸಾಕ ನಡುವಿನ ಹಣಾಹಣಿಗೆ ವೇದಿಕೆ ಸಜ್ಜುಗೊಂಡಿದೆ. ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಎದುರಾಳಿಗಳನ್ನು ಮಣಿಸಿದ ಇವರಿಬ್ಬರು ಮಂಗಳವಾರ ನಾಲ್ಕರ ಘಟ್ಟ ತಲುಪಿದ್ದಾರೆ.

ದಾಖಲೆಯ 24ನೇ ಗ್ರ್ಯಾನ್‌ಸ್ಲಾಮ್ ಮೇಲೆ ಕಣ್ಣಿಟ್ಟಿರುವ ಸೆರೆನಾ 6–3, 6–3ರಿಂದ ಎರಡನೇ ಶ್ರೇಯಾಂಕದ ಆಟಗಾರ್ತಿ ರುಮೇನಿಯಾದ ಸಿಮೊನಾ ಹಲೆಪ್ ಎದುರು ಜಯಭೇರಿ ಮೊಳಗಿಸಿದರು. 10ನೇ ಶ್ರೇಯಾಂಕದ ಸೆರೆನಾ, 2017ರಲ್ಲಿ ಕೊನೆಯ ಬಾರಿ ಇಲ್ಲಿ ಟ್ರೋಫಿಗೆ ಮುತ್ತಿಕ್ಕಿದ್ದರು.

ಸೆರೆನಾ ಹಾಗೂ ಒಸಾಕ ಒಟ್ಟು ನಾಲ್ಕನೇ ಬಾರಿ ಮುಖಾಮುಖಿಯಾಗುತ್ತಿದ್ದಾರೆ. ಇಬ್ಬರ ನಡುವೆ ಇದುವರೆಗೆ ನಡೆದಿರುವ ಈ ಹಿಂದಿನ ಮೂರು ಪಂದ್ಯಗಳ ಪೈಕಿ ಒಸಾಕ ಎರಡರಲ್ಲಿ ಗೆಲುವು ಸಾಧಿಸಿದ್ದರು. 2018ರ ಅಮೆರಿಕ ಓಪನ್ ಫೈನಲ್ ಅದರಲ್ಲಿ ಹೆಚ್ಚು ನೆನಪಿನಲ್ಲಿ ಉಳಿಯುವಂತಹದ್ದು. ಆ ಪಂದ್ಯದ ವೇಳೆ ಕೋಚ್, ಸೆರೆನಾ ಅವರಿಗೆ ಸೂಚನೆಗಳನ್ನು ನೀಡುತ್ತಿದ್ದುದನ್ನು ಅಂಪೈರ್ ತಡೆದಿದ್ದರು. ಇದರಿಂದ ಸಿಟ್ಟಿಗೆದ್ದ ಸೆರೆನಾ ಅಂಪೈರ್ ಜೊತೆಗೆ ವಾಗ್ವಾದಕ್ಕಿಳಿದಿದ್ದರು. ಇದು ವಿವಾದಕ್ಕೆ ಕಾರಣವಾಗಿತ್ತು. ಪಂದ್ಯದಲ್ಲಿ ಒಸಾಕ 6–2, 6–4ರಿಂದ ಗೆದ್ದು ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಕಿರೀಟ ಧರಿಸಿದ್ದರು.

ನವೊಮಿ ಒಸಾಕ ಆಟದ ವೈಖರಿ–ರಾಯಿಟರ್ಸ್ ಚಿತ್ರ

ಮಹಿಳಾ ಸಿಂಗಲ್ಸ್ ವಿಭಾಗದ ಮತ್ತೊಂದು ಎಂಟರಘಟ್ಟದ ಹಣಾಹಣಿಯಲ್ಲಿ ಒಸಾಕ 6–2, 6–2ರಿಂದ ತೈವಾನ್‌ನ ಹೇ ಸು ವೈ ಅವರನ್ನು ಪರಾಭವಗೊಳಿಸಿದರು.

ಜೊಕೊವಿಚ್‌ಗೆ ಜಯ: ಅಲೆಕ್ಸಾಂಡರ್ ಜ್ವೆರೆವ್ ಅವರ ಸವಾಲು ಮೀರಿದ ಹಾಲಿ ಚಾಂಪಿಯನ್, ಸರ್ಬಿಯಾದ ನೊವಾಕ್ ಜೊಕೊವಿಚ್ ಟೂರ್ನಿಯ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟರು. ರಾಡ್ ಲೇವರ್ ಅರೆನಾದಲ್ಲಿ ನಡೆದ ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಅವರು 6–7, 6–2, 6–4, 7–6ರಿಂದ ಜರ್ಮನಿ ಆಟಗಾರನಿಗೆ ಸೋಲುಣಿಸಿದರು.

ಸೆರೆನಾ ವಿಲಿಯಮ್ಸ್–ಎಎಫ್‌ಪಿ ಚಿತ್ರ

ಟೈಬ್ರೇಕ್‌ವರೆಗೆ ಸಾಗಿದ ಮೊದಲ ಸೆಟ್‌ನಲ್ಲಿ ನಿರಾಸೆ ಅನುಭವಿಸಿದ ವಿಶ್ವದ ಅಗ್ರ ಕ್ರಮಾಂಕದ ಆಟಗಾರ ಬಳಿಕ ಪುಟಿದೆದ್ದರು. ಆದರೂ ಅಲೆಕ್ಸಾಂಡರ್ ತೋರಿದ ಹೋರಾಟ ಗಮನಸೆಳೆಯಿತು.

ಜೊಕೊವಿಚ್ 39ನೇ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಸೆಮಿಫೈನಲ್ ತಲುಪಿದರು. ಮುಂದಿನ ಪಂದ್ಯದಲ್ಲಿ ಅವರು ರಷ್ಯಾದ ಅಸ್ಲಾನ್ ಕರಾತ್ಸೆವ್ ಅವರನ್ನು ಎದುರಿಸುವ ಸಾಧ್ಯತೆಯಿದೆ.

ಕರಾತ್ಸೆವ್ ಕರಾಮತ್ತು: ಪುರುಷರ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 114ನೇ ಶ್ರೇಯಾಂಕದ ಆಟಗಾರ ರಷ್ಯಾದ ಅಸ್ಲಾನ್ ಕರಾತ್ಸೆವ್ 2-6, 6-4, 6-1, 6-2ರಿಂದ 18ನೇ ಶ್ರೇಯಾಂಕದ ಆಟಗಾರ ಬಲ್ಗೇರಿಯಾದ ಗ್ರಿಗರ್ ಡಿಮಿಟ್ರೊವ್ ಅವರಿಗೆ ಆಘಾತ ನೀಡಿದರು. ಈ ಮೂಲಕ ಅವರು ಗ್ರ್ಯಾನ್‌ಸ್ಲಾಮ್ ಪದಾರ್ಪಣೆಯಲ್ಲಿಯೇ ಸೆಮಿಫೈನಲ್ ತಲುಪಿದ ಮೊದಲ ಆಟಗಾರ ಎನಿಸಿಕೊಂಡರು.

ಪ್ಲೇ ಆಫ್ ಮೇಲೆ ಎಫ್‌ಸಿ ಗೋವಾ ಕಣ್ಣು

ಮಡಗಾಂವ್ (ಪಿಟಿಐ): ಪ್ಲೇ ಆಫ್ ಹಂತಕ್ಕೆ ಪ್ರವೇಶಿಸುವ ತನ್ನ ಅವಕಾಶಗಳನ್ನು ಇನಷ್ಟು ವೃದ್ಧಿಸಿಕೊಳ್ಳುವ ಹಂಬಲದಲ್ಲಿರುವ ಎಫ್‌ಸಿ ಗೋವಾ ತಂಡವು ಬುಧವಾರ ಒಡಿಶಾ ಎಫ್‌ಸಿ ತಂಡವನ್ನು ಎದುರಿಸಲಿದೆ.

ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಈ ಪಂದ್ಯವು ಫಟೋರ್ಡ ಕ್ರೀಡಾಂಗಣದಲ್ಲಿ ನಡೆಯಲಿದೆ.

ಆತಿಥೇಯ ಗೋವಾ ಎಫ್‌ಸಿಯನ್ನು ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವ ಸಂಭಾವ್ಯ ತಂಡವೆಂದು ನಿರೀಕ್ಷಿಸಲಾಗಿತ್ತು. ಆದರೆ ಕಳೆದ ಆರು ಪಂದ್ಯಗಳಲ್ಲಿ ಡ್ರಾಕ್ಕೆ ತೃಪ್ತಿಪಟ್ಟಿರುವ ಆ ತಂಡದ ವಿಶ್ವಾಸ ಸ್ವಲ್ಪ ಕುಸಿದಿದೆ.

ಪಾಯಿಂಟ್ಸ್ ಪಟ್ಟಿಯಲ್ಲಿ ಗೋವಾ (24 ಪಾಯಿಂಟ್ಸ್) ಸದ್ಯ ಐದನೇ ಸ್ಥಾನದಲ್ಲಿದೆ. ಒಡಿಶಾ ತಂಡವು ಸತತ ಸೋಲುಗಳಿಂದ ಕಂಗೆಟ್ಟಿದೆ. ಕಳೆದ ಎಂಟು ಪಂದ್ಯಗಳಲ್ಲಿ ಆ ತಂಡಕ್ಕೆ ಜಯ ಒಲಿದಿಲ್ಲ. ಟೂರ್ನಿಯಲ್ಲಿಯೇ ಗರಿಷ್ಠ 10 ಪಂದ್ಯಗಳಲ್ಲಿ ಅದು ಕೈಚೆಲ್ಲಿದೆ. ಆದರೂ ತಂಡದ ಹಂಗಾಮಿ ಕೋಚ್ ಗೆರಾಲ್ಡ್ ಪೇಟನ್ ಅವರು ಗೋವಾ ಎದುರಿನ ಹಣಾಹಣಿಯಲ್ಲಿ ಗೆಲುವಿನ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಪಂದ್ಯ ಆರಂಭ: ಸಂಜೆ 7.30
ಸ್ಥಳ: ಫಟೋರ್ಡ ಕ್ರೀಡಾಂಗಣ, ಮಡಗಾಂವ್.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಎಚ್‌ಎಫ್‌ಸಿ ಜಯಭೇರಿ

ಗೋವಾ: ಫ್ರಾನ್ಸಿಸ್ಕೊ ಸಾಂಜಾ ಹೊಡೆದ ಎರಡು ಗೋಲುಗಳ ಬಲದಿಂದ ಹೈದರಾಬಾದ್ ಎಫ್‌ಸಿ (ಎಚ್‌ಎಫ್‌ಸಿ) ತಂಡವು ಮಂಗಳವಾರ ನಡೆದ ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ಜಯಿಸಿತು.

ತಿಲಕ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಹೈದರಾಬಾದ್ ತಂಡವು 4–0ಗೋಲುಗಳಿಂದ ಕೇರಳ ಬ್ಲಾಸ್ಟರ್ಸ್ ಎದುರು ಜಯಿಸಿತು.

ಫ್ರಾನ್ಸಿಸ್ಕೊ (58ನೇ ನಿ, 63ನೇ ನಿ), ಅರಿದಾನ್ ಸಂತಾನಾ (86ನಿ) ಮತ್ತು ಜೊಲಿಯೊ ವಿಕ್ಟರ್ (90 + 1ನಿ) ಗೋಲು ಹೊಡೆದರು.

ಈ ಪಂದ್ಯದ ಜಯದೊಂದಿಗೆ ಹೈದರಾಬಾದ್ ಎಫ್‌ಸಿ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು. ಸದ್ಯ ಆ ತಂಡವು 27 ಪಾಯಿಂಟ್ಸ್ ಕಲೆಹಾಕಿದೆ.

ಈ ಪಂದ್ಯದಲ್ಲಿ ಸೋಲು ಅನುಭವಿಸಿದ ಕೇರಳ ಬ್ಲಾಸ್ಟರ್ಸ್ ಎಫ್‌ಸಿ 10ನೇ ಸ್ಥಾನದಲ್ಲಿದೆ. ಆ ತಂಡದ ಬಳಿ 16 ಪಾಯಿಂಟ್ಸ್ ಇದ್ದು, ಪ್ಲೇ ಆಫ್ ಸ್ಪರ್ಧೆಯಿಂದ ಬಹುತೇಕ ಹೊರಬಿದ್ದಂತಾಗಿದೆ.

ನಾಗೇಶ್ ಟ್ರೋಫಿ ರಾಷ್ಟ್ರೀಯ ಅಂಧರ ಟಿ20 ಕ್ರಿಕೆಟ್ ಟೂರ್ನಿ

ಪ್ರಶಸ್ತಿ ಉಳಿಸಿಕೊಂಡ ಆಂಧ್ರ ಪ್ರದೇಶ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ವೆಂಕಟೇಶ್ವರ ರಾವ್ (ಔಟಾಗದೆ 132) ಅವರ ಭರ್ಜರಿ ಶತಕದ ಬಲದಿಂದ ಆಂಧ್ರಪ್ರದೇಶ ತಂಡವು ನಾಗೇಶ್ ಟ್ರೋಫಿ ರಾಷ್ಟ್ರೀಯ ಅಂಧರ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಮಂಗಳವಾರ ನಡೆದ ಫೈನಲ್ ಪಂದ್ಯದಲ್ಲಿ ಆ ತಂಡವು 80 ರನ್‌ಗಳಿಂದ ಒಡಿಶಾ ತಂಡವನ್ನು ಮಣಿಸಿತು.

ನಗರದ ಹೊರವಲಯದಲ್ಲಿರುವ ಅಲ್ಪಾಯರ್ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಟಾಸ್ ಗೆದ್ದ ಆಂಧ್ರಪ್ರದೇಶ ಬ್ಯಾಟಿಂಗ್ ಆಯ್ದುಕೊಂಡಿತು. ಪ್ರಮುಖ ಆಟಗಾರ ಅಜಯಕುಮಾರ್ ರೆಡ್ಡಿ ಬೇಗ ನಿರ್ಗಮಿಸಿದರೂ, ವೆಂಕಟೇಶ್ವರ ರಾವ್ ತಂಡವನ್ನು ಆಧರಿಸಿದರು. ಕೇವಲ 65 ಎಸೆತಗಳಲ್ಲಿ 23 ಬೌಂಡರಿಗಳನ್ನು ಬಾರಿಸಿದ ಅವರು, ಮೂರನೇ ವಿಕೆಟ್‌ಗೆ ಟಿ. ದುರ್ಗಾರಾವ್ (47) ಅವರೊಂದಿಗೆ ಸೇರಿ ತಂಡದ ಮೊತ್ತ 200ರ ಗಡಿ ದಾಟುವಂತೆ ಮಾಡಿದರು. ನಿಗದಿತ ಓವರ್‌ಗಳಲ್ಲಿ ಆಂಧ್ರಪ್ರದೇಶ ಮೂರು ವಿಕೆಟ್ ಕಳೆದುಕೊಂಡು 246 ರನ್ ಪೇರಿಸಿತು. ಒಡಿಶಾ ಯಾವ ಹಂತದಲ್ಲಿಯೂ ಪೈಪೋಟಿ ನೀಡಲಿಲ್ಲ. ಆಂಧ್ರದ ಕರಾರುವಾಕ್ ದಾಳಿಯ ಎದುರು ನಲುಗಿತು. ನಿಗದಿತ ಓವರುಗಳಲ್ಲಿ ಐದು ವಿಕೆಟ್‌ಗೆ 166 ರನ್‌ಗಳನ್ನಷ್ಟೇ ಗಳಿಸಲು ಶಕ್ತವಾಯಿತು. ಸುಖರಾಮ್ ಮಾಜಿ (52, 33 ಎಸೆತ, 8 ಬೌಂಡರಿ) ಅವರು ಅರ್ಧಶತಕ ಗಳಿಸಿದರು.

ಪ್ರಶಸ್ತಿ ವಿಜೇತ ಆಂಧ್ರಪ್ರದೇಶ ತಂಡ

ಸಂಕ್ಷಿಪ್ತ ಸ್ಕೋರು: ಆಂಧ್ರಪ್ರದೇಶ: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 246 (ವೆಂಕಟೇಶ್ವರ ರಾವ್ ಔಟಾಗದೆ 132, ಟಿ. ದುರ್ಗಾ ರಾವ್ 47). ಒಡಿಶಾ: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 166 (ಸುಖರಾಮ್ ಮಾಜಿ 52). ಫಲಿತಾಂಶ: ಆಂಧ್ರಪ್ರದೇಶ ತಂಡಕ್ಕೆ 80 ರನ್‌ಗಳ ಗೆಲುವು ಮತ್ತು ಪ್ರಶಸ್ತಿ.

ಸ್ಟೂಡೆಂಟ್ಸ್ ಯೂನಿಯನ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಜಯ ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ 2–0ಯಿಂದ ಇನ್‌ಕಮ್ ಟ್ಯಾಕ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ವಿಜೇತ ತಂಡದ ಪರ ಮುರಳಿ ಶ್ರೀನಿವಾಸ್ (70ನೇ ನಿಮಿಷ) ಹಾಗೂ ರಾಮು ಶ್ರೀಕಾಂತ್ (79ನೇ ನಿ.) ಗೋಲು ದಾಖಲಿಸಿದರು.

ಮತ್ತೊಂದು ಹಣಾಹಣಿಯಲ್ಲಿ ಎಂಇಜಿ ಸೆಂಟರ್ ಎಫ್‌ಸಿ ತಂಡವು 1–1ರಿಂದ ಎಎಸ್‌ಸಿ ಸೆಂಟರ್ ತಂಡದೊಂದಿಗೆ ಡ್ರಾ ಸಾಧಿಸಿತು.

ಎಂಇಜಿ ಪರ ಲಾಲ್ತೋಲೆನ್ ಖೊಂಗ್‌ಸಾಯ್ (6ನೇ ನಿಮಿಷ) ಹಾಗೂ ಎಎಸ್‌ಸಿ ಪರ ದೀಪ್ ಮಜುಂದಾರ್ (42ನೇ ನಿಮಿಷ) ಗೋಲು ಗಳಿಸಿದರು.

ಎಎಸ್‌ಸಿ ಎಫ್‌ಸಿಯ ದೀಪ್ ಮಜುಂದಾರ್ ಮತ್ತು ಎಂಇಜಿಯ ಇಮ್ನಾಕುಮ್ (ನೀಲಿ ಜೆರ್ಸಿ) ಮಧ್ಯೆ ಚೆಂಡಿಗಾಗಿ ಪೈಪೋಟಿ ನಡೆಯಿತು.

ಟಿಟಿ: ಮಣಿಕಾ, ಅರ್ಚನಾಗೆ ಮುನ್ನಡೆ

ಪಂಚಕುಲಾ (ಪಿಟಿಐ): ಅಂತರರಾಷ್ಟ್ರೀಯ ಆಟಗಾರ್ತಿ ಮಣಿಕಾ ಬಾತ್ರಾ ಮತ್ತು ಕರ್ನಾಟಕದ ಅರ್ಚನಾ ಕಾಮತ್ ಇಲ್ಲಿ ನಡೆಯುತ್ತಿರುವ 82ನೇ ರಾಷ್ಟ್ರೀಯ ಸೀನಿಯರ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಮುನ್ನಡೆ ಸಾಧಿಸಿದರು.

ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಮಣಿಕಾ 13-11, 11-9, 11-5, 7-11, 11-3 ರಿಂದ ಕಾಜೋಲ್ ರಾಮಜಾಲಿ ವಿರುದ್ಧ ಜಯಿಸಿದರು. ಇದರೊಂದಿಗೆ 32ರ ಸುತ್ತಿಗೆ ಪ್ರವೇಶಿಸಿದರು.

ಕರ್ನಾಟಕದ ಅರ್ಚನಾ 13-15, 12-10, 11-9, 4-11, 13-11, 11-5 ರಿಂದ ಸ್ವಸ್ತಿಕಾ ಘೋಷ್ ವಿರುದ್ಧ ಗೆದ್ದರು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಹಾದಿಯಲ್ಲಿ ಮೊದಲ ಮೆಟ್ಟಿಲೇರಿದ ವಿರಾಟ್ ಬಳಗ; ಅಕ್ಷರ್‌ಗೆ ಐದು ವಿಕೆಟ್

ಬಿದ್ದ ಅಂಗಳದಲ್ಲೇ ಪುಟಿದೆದ್ದ ಭಾರತ

ಚೆನ್ನೈ (ಪಿಟಿಐ): ಪದಾರ್ಪಣೆಯ ಟೆಸ್ಟ್‌ನಲ್ಲಿಯೇ ವಿಕೆಟ್‌ಗಳ ಪಂಚಗುಚ್ಛ ಗಳಿಸಿದ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಬೌಲಿಂಗ್ ಮುಂದೆ ಇಂಗ್ಲೆಂಡ್ ತಂಡ ಮಂಡಿಯೂರಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ 2ನೇ ಟೆಸ್ಟ್‌ನ ನಾಲ್ಕನೇ ದಿನವೇ ಆತಿಥೇಯ ಬಳಗವು ಜೋ ರೂಟ್ ಪಡೆಯ ವಿರುದ್ಧ 317 ರನ್‌ಗಳಿಂದ ಜಯಿಸಿತು. ನಾಲ್ಕು ಪಂದ್ಯಗಳ ಸರಣಿಯಲ್ಲಿ 1–1ರಿಂದ ಸಮಬಲ ಸಾಧಿಸಿತು. ಇದೇ ಅಂಗಳದಲ್ಲಿ ಹೋದ ವಾರ 227 ರನ್‌ಗಳಿಂದ ಸೋತಿದ್ದ ವಿರಾಟ್ ಕೊಹ್ಲಿ ಬಳಗವು ಮುಯ್ಯಿ ತೀರಿಸಿಕೊಂಡಿತು.

ಸ್ಪಿನ್ನರ್ ಸ್ನೇಹಿ ಪಿಚ್‌ನಲ್ಲಿ 482 ರನ್‌ಗಳ ಬೃಹತ್ ಗೆಲುವಿನ ಗುರಿಯನ್ನು ಬೆನ್ನಟ್ಟಿದ ರೂಟ್ ಪಡೆಯು 54.2 ಓವರ್‌ಗಳಲ್ಲಿ 164 ರನ್ ಗಳಿಸಿ ಸರ್ವಪತನವಾಯಿತು. ಇಂಗ್ಲೆಂಡ್ ಎದುರು ಇದು ದೊಡ್ಡ ಅಂತರದ ಜಯ. 1986ರಲ್ಲಿ ಲೀಡ್ಸ್‌ನಲ್ಲಿ ಭಾರತ ತಂಡವು 279 ರನ್‌ಗಳಿಂದ ಗೆದ್ದಿತ್ತು. ಸೋಮವಾರ ದಿನದಾಟದ ಮುಕ್ತಾಯಕ್ಕೆ ಇಂಗ್ಲೆಂಡ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ 3 ವಿಕೆಟ್‌ಗಳಿಗೆ 53 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಡೇನಿಲ್ ಲಾರೆನ್ಸ್ ಮತ್ತು ನಾಯಕ ಜೋ ರೂಟ್ ಮಂಗಳವಾರ ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಪ್ರಯತ್ನ ಮಾಡಿದರು.

ಆದರೆ, ಈ ಜೊತೆಯಾಟವನ್ನು ಮುರಿಯುವಲ್ಲಿ ಅಶ್ವಿನ್ ಯಶಸ್ವಿಯಾದರು. ಅಶ್ವಿನ್ ಎಸೆತದಲ್ಲಿ ಬೀಟ್ ಆದ ಲಾರೆನ್ಸ್ (26; 53ಎ, 2ಬೌಂ, 1ಸಿ) ಅವರನ್ನು ವಿಕೆಟ್‌ಕೀಪರ್ ರಿಷಭ್ ಪಂತ್ ಸ್ಟಂಪಿಂಗ್ ಮಾಡಿದರು. ಕ್ರೀಸ್‌ಗೆ ಬಂದ ಬೆನ್ ಸ್ಟೋಕ್ಸ್ ಅವರು ರೂಟ್ ಜೊತೆಗೂಡಿ ತಾಳ್ಮೆಯ ಆಟ ವಾಡಿದರು. ಸ್ಟೋಕ್ಸ್ ಕೇವಲ 8 ರನ್ ಗಳಿಸಲು 51 ಎಸೆತಗಳನ್ನು ಆಡಿದರು. ಈ ಜೊತೆಯಾಟಕ್ಕೂ ಅಶ್ವಿನ್ ತಡೆಯೊಡ್ಡಿದರು. ಸ್ಟೋಕ್ಸ್ ವಿಕೆಟ್ ಅನ್ನು ಗಳಿಸಿದರು.

ಇಲ್ಲಿಂದ ಅಕ್ಷರ್ ಆಟ ಶುರುವಾಯಿತು. ಒಲಿ ಪೋಪ್ (12 ರನ್) ವಿಕೆಟ್ ಪಡೆದ ಅಕ್ಷರ್, 50ನೇ ಓವರ್‌ನಲ್ಲಿ ಜೋ ರೂಟ್ (33; 92ಎ) ವಿಕೆಟ್ ಕೂಡ ಕಬಳಿಸಿದರು. ಮೊದಲ ಇನಿಂಗ್ಸ್‌ನಲ್ಲಿಯೂ ರೂಟ್ ವಿಕೆಟ್ ಪಡೆದಿದ್ದರು ಈ ಎಡಗೈ ಸ್ಪಿನ್ನರ್.

ಇನಿಂಗ್ಸ್‌ನ ಕೊನೆಯ ವಿಕೆಟ್ ಒಲಿ ಸ್ಟೋನ್ ಕೂಡ ಅಕ್ಷರ್ ಬೀಸಿದ ಎಲ್‌ಬಿಡಬ್ಲು ಬಲೆಯಲ್ಲಿ ಬಿದ್ದರು. ಇಂಗ್ಲೆಂಡ್ ಎದುರು ಪದಾರ್ಪಣೆ ಪಂದ್ಯದಲ್ಲಿ 5 ವಿಕೆಟ್ ಗಳಿಸಿದ ಭಾರತದ ಎರಡನೇ ಬೌಲರ್ ಆದರು. 89 ವರ್ಷಗಳ ಹಿಂದೆ ಮೊಹಮ್ಮದ್ ನಿಸಾರ್ ಈ ಸಾಧನೆ ಮಾಡಿದ್ದರು. ಇದಕ್ಕೂ ಮುನ್ನ ಮಿಂಚಿನ ಬ್ಯಾಟಿಂಗ್ ಮಾಡಿದ ಮೋಯಿನ್ ಅಲಿ (43; 18ಎ, 3ಬೌಂ, 5ಸಿ) ಮತ್ತು ಬೆನ್ ಫೋಕ್ಸ್ ಅವರ ವಿಕೆಟ್‌ಗಳನ್ನು ಕುಲದೀಪ್ ಕಬಳಿಸಿದರು.

ವಿಕೆಟ್ ಗಳಿಸಿದ ಅಶ್ವಿನ್ ಅವರನ್ನು ಅಕ್ಷರ್ ಪಟೇಲ್ ಅಭಿನಂದಿಸಿದರು–ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಭಾರತ ಮೊದಲ ಇನಿಂಗ್ಸ್ **329** (95.5 ಓವರ್‌ಗಳಲ್ಲಿ)
ಇಂಗ್ಲೆಂಡ್ ಮೊದಲ ಇನಿಂಗ್ಸ್ **134** (59.5 ಓವರ್‌ಗಳಲ್ಲಿ)
ಭಾರತ ಎರಡನೇ ಇನಿಂಗ್ಸ್ **286** (85.5 ಓವರ್‌ಗಳಲ್ಲಿ)
ಇಂಗ್ಲೆಂಡ್ ಎರಡನೇ ಇನಿಂಗ್ಸ್ **164** (54.2 ಓವರ್‌ಗಳಲ್ಲಿ)
(ಸೋಮವಾರ 19 ಓವರ್‌ಗಳಲ್ಲಿ 3 ವಿಕೆಟ್‌ಗೆ 53)

ಡ್ಯಾನ್ ಲಾರೆನ್ಸ್ ಸ್ಟಂಪ್ಡ್ ರಿಷಭ್ ಪಂತ್ ಬಿ ರವಿಚಂದ್ರನ್ ಅಶ್ವಿನ್	26
ಜೋ ರೂಟ್ ಸಿ ಅಜಿಂಕ್ಯ ರಹಾನೆ ಬಿ ಅಕ್ಷರ್ ಪಟೇಲ್	33
ಬೆನ್ ಸ್ಟೋಕ್ಸ್ ಸಿ ವಿರಾಟ್ ಕೊಹ್ಲಿ ಬಿ ರವಿಚಂದ್ರನ್ ಅಶ್ವಿನ್	8
ಒಲಿ ಪೋಪ್ ಸಿ ಇಶಾಂತ್ ಶರ್ಮಾ ಬಿ ಅಕ್ಷರ್ ಪಟೇಲ್	12
ಬೆನ್ ಫೋಕ್ಸ್ ಸಿ ಅಕ್ಷರ್ ಪಟೇಲ್ ಬಿ ಕುಲದೀಪ್ ಯಾದವ್	2
ಮೋಯಿನ್ ಅಲಿ ಸ್ಟಂಪ್ಡ್ ರಿಷಭ್ ಪಂತ್ ಬಿ ಕುಲದೀಪ್ ಯಾದವ್	43
ಒಲಿ ಸ್ಟೋನ್ ಎಲ್‌ಬಿಡಬ್ಲ್ಯು ಬಿ ಅಕ್ಷರ್ ಪಟೇಲ್	0
ಸ್ಟುವರ್ಟ್ ಬ್ರಾಡ್ ಔಟಾಗದೆ	5
ಇತರೆ (ಬೈ 6, ಲೆಗ್‌ಬೈ 1)	7

ವಿಕೆಟ್ ಪತನ: 4–66 (ಡ್ಯಾನ್ ಲಾರೆನ್ಸ್, 25.1), 5–90 (ಬೆನ್ ಸ್ಟೋಕ್ಸ್, 37.6), 6–110 (ಒಲಿ ಪೋಪ್, 43.5), 7–116 (ಬೆನ್ ಫೋಕ್ಸ್, 48.3), 8–116 (ಜೋ ರೂಟ್, 49.2), 9–126 (ಒಲಿ ಸ್ಟೋನ್, 51.1), 10–164 (ಮೋಯಿನ್ ಅಲಿ, 54.2).

ಬೌಲಿಂಗ್: ಇಶಾಂತ್ ಶರ್ಮಾ 6–3–13–0, ಅಕ್ಷರ್ ಪಟೇಲ್ 21–5–60–5, ರವಿಚಂದ್ರನ್ ಅಶ್ವಿನ್ 18–5–53–3, ಮೊಹಮ್ಮದ್ ಸಿರಾಜ್ 3–1–6–0, ಕುಲದೀಪ್ ಯಾದವ್ 6.2–1–25–2

ಫಲಿತಾಂಶ: ಭಾರತ ತಂಡಕ್ಕೆ 317 ರನ್‌ಗಳ ಗೆಲುವು. ನಾಲ್ಕು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ

ಪಂದ್ಯಶ್ರೇಷ್ಠ: ರವಿಚಂದ್ರನ್ ಅಶ್ವಿನ್

ಮುಂದಿನ ಪಂದ್ಯ: ಫೆಬ್ರುವರಿ 24ರಿಂದ ಅಹ್ಮದಾಬಾದ್‌ನಲ್ಲಿ

ಮೂರನೇ ಟೆಸ್ಟ್ ಟಿಕೆಟ್ ಮಾರಾಟ: ಭಾರತ –ಇಂಗ್ಲೆಂಡ್ ನಡುವಣ ಮೂರನೇ ಟೆಸ್ಟ್ ಪಂದ್ಯದ ಎಲ್ಲ ಟಿಕೆಟ್‌ಗಳು ಮಾರಾಟವಾಗಿವೆ ಎಂದು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಕೋಲ್ಕತ್ತದಲ್ಲಿ ತಿಳಿಸಿದ್ದಾರೆ.

ಗಿಲ್‌ಗೆ ಗಾಯ


ಶುಭಮನ್ ಗಿಲ್

ಚೆನ್ನೈ : ಭಾರತ ತಂಡದ ಯುವ ಆಟಗಾರ ಶುಭಮನ್ ಗಿಲ್ ಅವರ ಮುಂಗೈಗೆ ಪೆಟ್ಟಾಗಿದ್ದು ಸ್ಕ್ಯಾನಿಂಗ್ ಮಾಡಿಸಲಾಗಿದೆ ಎಂದು ತಂಡದ ಮೂಲಗಳು ತಿಳಿಸಿವೆ. ಸೋಮವಾರ ಅವರು ಫೀಲ್ಡಿಂಗ್ ಮಾಡುವ ಸಂದರ್ಭದಲ್ಲಿ ಚೆಂಡು ಎಡಗೈಗೆ ಬಡಿದು ಪೆಟ್ಟಾಗಿತ್ತು. ಆದ್ದರಿಂದ ಮೂಳೆಗೆ ಪೆಟ್ಟುಬಿದ್ದಿರುವ ಸಾಧ್ಯತೆ ಇರುವುದರಿಂದ ಸ್ಕ್ಯಾನಿಂಗ್ ಮಾಡಿಸಲಾಗಿದೆ ಎಂದು ಮೂಲಗಳು ಹೇಳಿವೆ.

ನಿಯಮ ಉಲ್ಲಂಘನೆ: ಚೆಪಾಕ್ ಕ್ರೀಡಾಂಗಣದಲ್ಲಿ ಪ್ರೇಕ್ಷಕರೊಬ್ಬರು ಬಯೋಬಬಲ್ ನಿಯಮ ಉಲ್ಲಂಘಿಸಿದ ಘಟನೆ ಸೋಮವಾರ ನಡೆದಿದೆ. ಭಾರತ ಮತ್ತು ಇಂಗ್ಲೆಂಡ್ ತಂಡಗಳ ಆಟಗಾರರು ಅಭ್ಯಾಸ ಮಾಡುವ ಸ್ಥಳಕ್ಕೆ ಪ್ರವೇಶಿಸಿದ ವ್ಯಕ್ತಿಯೊಬ್ಬರಿಗೆ ಭದ್ರತಾ ಸಿಬ್ಬಂದಿಯು ಎಚ್ಚರಿಕೆ ನೀಡಿ ಕಳಿಸಿದೆ ಎಂದು ತಿಳಿದು ಬಂದಿದೆ.

ಪಿಂಕ್ ಬಾಲ್ ಟೆಸ್ಟ್‌ಗೆ ಬೆಸ್ಟೊ

ಜಾನಿ ಬೆಸ್ಟೊ

ಚೆನ್ನೈ (ಪಿಟಿಐ): ಅಹಮದಾಬಾದಿನಲ್ಲಿ ಫೆ. 24ರಿಂದ ಆರಂಭವಾಗಲಿರುವ ಹಗಲು–ರಾತ್ರಿ ಟೆಸ್ಟ್ ಪಂದ್ಯದಲ್ಲಿ ಆಡುವ ಇಂಗ್ಲೆಂಡ್ ತಂಡದಲ್ಲಿ ವಿಕೆಟ್‌ಕೀಪರ್ ಜಾನಿ ಬೆಸ್ಟೊ ಮತ್ತು ಬೌಲರ್ ಮಾರ್ಕ್ ವುಡ್ ಆಡಲಿದ್ದಾರೆ.

ಮಂಗಳವಾರ ಎರಡನೇ ಟೆಸ್ಟ್‌ನಲ್ಲಿ ಸೋತ ನಂತರ, ಸರಣಿಯ ಮೂರನೇ ಪಂದ್ಯದಲ್ಲಿ ಆಡುವ ಇಂಗ್ಲೆಂಡ್ ತಂಡವನ್ನು ಪ್ರಕಟಿಸಲಾಯಿತು.

ತಂಡ: ಜೋ ರೂಟ್ (ನಾಯಕ), ಜೇಮ್ಸ್ ಆ್ಯಂಡರ್ಸನ್, ಜೋಫ್ರಾ ಆರ್ಚರ್, ಜಾನಿ ಬೆಸ್ಟೊ, ಡಾಮ್ನಿಕ್ ಬೆಸ್, ಸ್ಟುವರ್ಟ್ ಬ್ರಾಡ್, ರೋರಿ ಬರ್ನ್ಸ್, ಜ್ಯಾಕ್ ಕ್ರಾಲಿ, ಬೆನ್ ಫೋಕ್ಸ್, ಡ್ಯಾನ್ ಲಾರೆನ್ಸ್, ಜ್ಯಾಕ್ ಲೀಚ್, ಒಲಿ ಪೋಪ್, ಡಾಮ್ ಸಿಬ್ಲಿ, ಬೆನ್ ಸ್ಟೋಕ್ಸ್, ಒಲಿ ಸ್ಟೋನ್, ಕ್ರಿಸ್ ವೋಕ್ಸ್, ಮಾರ್ಕ್ ವುಡ್.

ಟೀಕೆಗಳಿಗೆ ಕೊಹ್ಲಿ ತಿರುಗೇಟು

ಚೆನ್ನೈ (ಪಿಟಿಐ): ಚೆಪಾಕ್ ಪಿಚ್‌ನಲ್ಲಿ ಚೆಂಡು ತಿರುಗುತ್ತಿದ್ದ ರೀತಿಗೆ ಆತಂಕಪಡದೇ ಆಡಿದ್ದು ತಮ್ಮ ತಂಡದ ಯಶಸ್ಸಿಗೆ ಕಾರಣ. ಇದೇ ಪಿಚ್‌ನಲ್ಲಿ ತಂಡವು 600ಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿತು ಎಂದು ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದರು.

ಇಂಗ್ಲೆಂಡ್ ತಂಡದ ಮಾಜಿ ನಾಯಕ ಮೈಕಲ್ ವಾನ್ ಸೇರಿದಂತೆ ಕೆಲವರು, 'ದೂಳಿನ ಬಟ್ಟಲು' ಎಂದು ಪಿಚ್ ಬಗ್ಗೆ ಮಾಡಿದ್ದ ಟೀಕೆಗೆ ಕೊಹ್ಲಿ ತಿರುಗೇಟು ಕೊಟ್ಟರು. ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಟಾಸ್ ಜಯಿಸಿದ್ದು ಮಾತ್ರ ಪಂದ್ಯದಲ್ಲಿ ಮೇಲುಗೈ ಸಾಧಿಸಲು ಕಾರಣವಲ್ಲ. ಪಂದ್ಯದ ಪ್ರತಿಯೊಂದು ಹಂತದಲ್ಲಿ ಉತ್ತಮ ಆಟದಿಂದ ಸಾಧಿಸಿದ ಹಿಡಿತವು ಕಾರಣವಾಯಿತು' ಎಂದರು.

ಮೊದಲ ಪಂದ್ಯದಲ್ಲಿ ಭಾರತ ಸೋತಾಗ ಯಾಕೆ ದೂರಲಿಲ್ಲ. ಈಗ ಇಂಗ್ಲೆಂಡ್ ಸೋತಿದ್ದಕ್ಕೆ ಪಿಚ್ ಕಾರಣವೆಂದು ಹೇಳುವುದು ಎಷ್ಟು ಸರಿ ಎಂದು ಆಸ್ಟ್ರೇಲಿಯಾದ ಮಾಜಿ ಆಟಗಾರ ಶೇನ್ ವಾರ್ನ್ ಪ್ರಶ್ನಿಸಿದ್ದಾರೆ.

ಪದಾರ್ಪಣೆ ಟೆಸ್ಟ್‌ನಲ್ಲಿ ಐದು ವಿಕೆಟ್ ಗೊಂಚಲು ಸಾಧನೆ ಮಾಡಿದ ಭಾರತದ ಬೌಲರ್‌ಗಳು

ಆಟಗಾರ	ವಿಕೆಟ್	ಇನಿಂಗ್ಸ್	ಎದುರಾಳಿ	ತಾಣ	ವರ್ಷ
ಮೊಹಮ್ಮದ್ ನಿಸಾರ್	93ಕ್ಕೆ5	1	ಇಂಗ್ಲೆಂಡ್	ಲಾರ್ಡ್ಸ್	1932
ವಾಮನ ಕುಮಾರ್	64ಕ್ಕೆ5	2	ಪಾಕಿಸ್ತಾನ	ದೆಹಲಿ	1961
ಎಸ್. ಅಬೀದ್ ಅಲಿ	55ಕ್ಕೆ6	1	ಆಸ್ಟ್ರೇಲಿಯಾ	ಅಡಿಲೇಡ್	1967
ದಿಲೀಪ್ ದೋಶಿ	103ಕ್ಕೆ6	1	ಆಸ್ಟ್ರೇಲಿಯಾ	ಚೆನ್ನೈ	1979
ನರೇಂದ್ರ ಹಿರ್ವಾನಿ	61ಕ್ಕೆ8	2	ವೆಸ್ಟ್ ಇಂಡೀಸ್	ಚೆನ್ನೈ	1988
ನರೇಂದ್ರ ಹಿರ್ವಾನಿ	75ಕ್ಕೆ8	4	ವೆಸ್ಟ್ ಇಂಡೀಸ್	ಚೆನ್ನೈ	1988
ಅಮಿತ್ ಮಿಶ್ರಾ	71ಕ್ಕೆ5	2	ಆಸ್ಟ್ರೇಲಿಯಾ	ಮೊಹಾಲಿ	2008
ಆರ್.ಅಶ್ವಿನ್	47ಕ್ಕೆ6	3	ವೆಸ್ಟ್ ಇಂಡೀಸ್	ದೆಹಲಿ	2011
ಮೊಹಮ್ಮದ್ ಶಮಿ	47ಕ್ಕೆ5	3	ವೆಸ್ಟ್ ಇಂಡೀಸ್	ಕೋಲ್ಕತ್ತ	2013
ಅಕ್ಷರ್ ಪಟೇಲ್	60ಕ್ಕೆ5	4	ಇಂಗ್ಲೆಂಡ್	ಚೆನ್ನೈ	2021

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್: ಎರಡನೇ ಸ್ಥಾನಕ್ಕೆ ಭಾರತ

ಚೆನ್ನೈ (ಪಿಟಿಐ): ಭಾರತ ಕ್ರಿಕೆಟ್ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಜಿಗಿದಿದೆ.

ಮಂಗಳವಾರ ಇಂಗ್ಲೆಂಡ್ ಎದುರು ಜಯಿಸಿದ ನಂತರ ವಿರಾಟ್ ಕೊಹ್ಲಿ ಬಳಗವು ಡಬ್ಲುಟಿಸಿ ಫೈನಲ್‌ಗೆ ಮತ್ತಷ್ಟು ಸನಿಹ ಸಾಗಿದೆ. ಶೇಕಡಾವಾರು ಪಾಯಿಂಟ್ಸ್ (ಪಿಸಿಟಿ)ನಲ್ಲಿ ಭಾರತವು 69.7 ಅಂಕ ಗಳಿಸಿದೆ. ಒಟ್ಟು 460 ಅಂಕಗಳು ಖಾತೆಯಲ್ಲಿವೆ.

ಶೇ 70 ಪಿಸಿಟಿ ಇರುವ ನ್ಯೂಜಿಲೆಂಡ್ ಈಗಾಗಲೇ ಫೈನಲ್ ಅರ್ಹತೆ ಗಿಟ್ಟಿಸಿದೆ. ಇನ್ನುಳಿದಿರುವ ಎರಡು ಪಂದ್ಯಗಳಲ್ಲಿ ಕನಿಷ್ಠ ಒಂದರಲ್ಲಿ ಜಯಿಸಬೇಕು. ಯಾವ ಪಂದ್ಯವನ್ನೂ ಸೋಲಬಾರದು. ಆಗ ಫೈನಲ್ ದಾರಿಯು ಸುಗಮವಾಗುತ್ತದೆ.

ಚೆನ್ನೈನಲ್ಲಿ ನಡೆದಿದ್ದ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ಸೋತಿತ್ತು. ಆಗ ಎರಡನೇ ಸ್ಥಾನಕ್ಕೆ ಜಿಗಿದಿದ್ದ ಇಂಗ್ಲೆಂಡ್ (ಶೇ 67.0) ಮತ್ತೆ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಆಸ್ಟ್ರೇಲಿಯಾ (69.2) ಮೂರನೇ ಸ್ಥಾನದಲ್ಲಿದೆ.

Hero MotoCorp Ltd. Regd. Office: The Grand Plaza, Plot No.2, Nelson Mandela Road,Vasant Kunj - Phase -II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or call our toll-free no.: 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. For more details, please visit your nearest authorized Hero MotoCorp outlet for more details. *Offer amount & combination of offers may vary by model/ / variant & State. Offer valid for limited period or till stock lasts. Please visit your nearest authorized Hero MotoCorp outlet for more details. Hero MotoCorp reserves the right to change / modify / withdraw the offer without any prior intimation. ^Finance scheme is at the sole discretion of Financier & subject to its respective terms & conditions. **Upto Rs. 12,000/- cashback on ICICI Bank / Bank of Baroda / Federal Bank / SBI cards. Terms & conditions apply. ^^For central government employees. Central Government employees shall be eligible for reimbursement in terms of the Office Memorandum No. F. No. 12(2)/2020-EII(A) dated 12 October 2020.

AUTHORISED DEALERS - BENGALURU - Banaswadi: Bhagath Hero - Ph: 9513353807. Banashankari: Sai Hero - Ph: 9513353864. Yesthwanthpur: Sai Hero - Ph: 9513353853. Lalbagh Road: Prakash Hero - Ph: 9513353827. Rajaji Nagar: Max Hero - Ph: 9513353808. Sahakar Nagar: Bimal Hero - Ph: 9513353838. K R Puram: Bhagath Hero - Ph: 9513353807. Hoskote: Bhagath Hero – Ph: 8884600051 Hosur Road: RT Krishna Hero – Ph: 7428893265 TUMKUR: Sai Hero - Ph: 9513353908, Tiptur: Sai Hero Ph. 9164840456, Kunigal : Sai Hero - 7022752858 , KOLAR: Sri Sai Hero - Ph: 9513353824.HUBLI: Chadha Hero - Ph: 9513353842. Bellad Hero - Ph: 9513353841. Gadag : Chadha Hero :8050041033, Dharwad: Bellad Hero - Ph: 9686204480. HAVERI: Bahaddur Desai Hero - Ph: 9513353869. SIRSI: Shakti Hero - Ph: 9513353903. BALLARI: Annapoorna Hero - Ph: 9513353843. HOSPET: Annapoorna Automotives Ph: 9606214399 KOPPAL: Vijaya Hero - Ph: 9513353855. SINDHANOOR: Anand Hero - 9513353907. RAICHUR: Sri Venkkateshwara Hero - Ph: 9513353896. MYSORE: Dyuthi Hero Ph: 9513353875. Shah Hero - Ph: 9513353904. Bannimantap: Dyuthi Hero: Ph: 9916993000 MANDYA: Dayanand Hero - Ph: 9513353874. CHAMARAJNAGAR: Yepiyes Hero - Ph: 9513353868. HASSAN: Sree Venkateshwara Hero Ph: 9513353901. CHIKMAGALUR: Nayana Hero, Ph: 9513353804. KALABURAGI: Sri Venkatesh Hero - Ph: 9513353872, Jewargi Road : Venkatesh Hero: 9900997558. BIDAR: Kailash Hero - Ph: 9513353863. YADGIR: Sri Venkatesh Hero - Ph: 9513353828. CHITRADURGA: Mahesh Hero - Ph: 9513353805. DAVANAGERE: Rutvi Hero - Ph: 9513353837, Prakasha Hero - Ph: 9513353836. . SHIVAMOGGA: Sree Karthik Hero - Ph: 9513353806. Mythri Hero - Ph: 9513353866. SAGAR: Prajwal Hero - Ph: 9513353889. MANGALURU: West Coast Hero - Ph: 9513353898. Tribhuvan Hero – Ph: 9513353862, BELAGAVI : Nagshanti Hero - Ph: 9513353821, Nagshanti - 2 Unit – Ph. 9741888201. CHIKODI: Shree Renuka Hero - Ph: 9513353812. GOKAK: Chinmay Hero - Ph: 9513353848. BAGALKOTE: Chinmay Hero - Ph: 9513353829. VIJAYAPUR: Vijay Hero - Ph: 9513353886. SINDAGI: Jogur Hero- Ph: 9513353883. MUDHOL: Kumar Hero - Ph: 9513353876.

WT.5521.2021KAN